ಸಂಪುಟ : ೧೩
ಸಂಚಿಕೆ : ೩-೪

ಕರ್ನಾಟಕ ಭಾರತಿ

ಸಂಕ್ರಮಣ-ಅಕ್ಷಯತೃತೀಯಾ
ಸಂಯುಕ್ತ ಸಂಚಿಕೆ

ಜನೇವರಿ-ಮೇ ೧೯೮೧

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತ ಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು,"ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**–೫೮೦ ೦೦೩ ಇವರಿಗೆ ಬರೆಯಬೇಕು,

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೨೩ ಸಂಚಿಕೆ : ೩–೪

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೩ ಸಂಚಿಕೆ : ೩-೪

ಜನೇವರಿ-ಮೇ ೧೯೯೧

ಸಂಕ್ರಮಣ-ಅಕ್ಷಯತೃತೀಯಾ ಸಂಯುಕ್ತ ಸಂಚಿಕೆ

ಪ್ರಕಾಶಕರು :

ಶ್ರೀ ಸದಾನಂದ ಕನವಳ್ಳಿ
ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ., ಧಾರವಾಡ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ್ ಪ್ರೆಸ್,
ತಡಕೋಡಗಲ್ಲಿ, ಧಾರವಾಡ

ಪರಿವಿಡಿ

ಸಿದ್ಧಾಂತ ಶಿಖಾಮಣಿಯ ಸಾಹಿತ್ಯಿಕ ಮಹತ್ವ*

● ಡಾ. ಮಲ್ಲಿಕಾರ್ಜುನ ಪರಡ್ಡಿ

ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ ।
ಸಚ್ಚಿದಾನಂದ ರೂಪಾಯ ಶಿವಾಯ ಬ್ರಹ್ಮಣೇ ನಮಃ॥[೧]

ಸಾಹಿತ್ಯ (Literature) ಎಂಬ ಪದಪ್ರಯೋಗ ವಿಶಾಲಾರ್ಥದಲ್ಲಿ ಯಾವುದೇ ರಚನೆಯ ನಿರ್ದೇಶ ಮಾಡಬಹುದು. ಆದರೆ ಅಲಂಕಾರಶಾಸ್ತ್ರದಲ್ಲಿ ಕಾವ್ಯಪರ್ಯಾಯವಾಗಿ ಈ ಪದವನ್ನು ಬಳಸಲಾಗಿದೆಯೆನ್ನಬಹುದು. (ಶಬ್ದಾರ್ಥ) ಸಾಹಿತ್ಯ ಸ್ವರೂಪವನ್ನು ದೀರ್ಘವಾಗಿ ವಿವೇಚಿಸಿದ ಕುಂತಕ ಕಾವ್ಯ ಮತ್ತು ಶಾಸ್ತ್ರಗಳ ವ್ಯತ್ಯಾಸವನ್ನು ಬಹು ಸುಂದರವಾಗಿ ವಿವರಿಸಿದ್ದಾನೆ:

ಕಟುಕೌಷಧವತ್ ಶಾಸ್ತ್ರಮವಿದ್ಯಾವ್ಯಾಧಿನಾಶನಮ್ ।
ಆಹ್ಲಾದಾಮೃತವತ್ ಕಾವ್ಯಮವಿವೇಕ ಗದಾಪಹಮ್॥[೨]

ಇದರಿಂದ ಸ್ಪಷ್ಟವಾಗುವುದಿಷ್ಟು: ಕಾವ್ಯ ಹಾಗೂ ಶಾಸ್ತ್ರಗಳ ಅಂತಿಮ ಗುರಿ ಅವಿವೇಕನಾಶ(ಉಪದೇಶ)ವಾಗಿದೆ. ಆದರೆ ಮಾಧ್ಯಮ ಭಿನ್ನ ಭಿನ್ನವಾಗಿವೆ. ಈ ಮತವನ್ನೊಪ್ಪದ ಕೆಲ ಪಂಡಿತರು ಕಾವ್ಯಾಭ್ಯಾಸಕ್ಕೆ ಬಹಿಷ್ಕಾರ[೩] ಹಾಕಿರುವುದನ್ನು ಕಾಣುತ್ತೇವೆ. ಈ ಆಕ್ಷೇಪಕ್ಕೆ ರಾಜಶೇಖರನು ತನ್ನ ಕಾವ್ಯಮೀಮಾಂಸೆಯ ಆರನೆಯ ಅಧ್ಯಾಯದಲ್ಲಿ ಸಮರ್ಪಕವಾದ ಉತ್ತರ ಕೊಟ್ಟಿದ್ದಾನೆ. 'ಅಸತ್ಯಾರ್ಥಾಭಿಧಾನ್ನೋಪದೇಷ್ಟವ್ಯಂ ಕಾವ್ಯಂ'[೪] ಎಂಬ ಮಾತನ್ನು ಖಂಡಿಸುತ್ತ ಅವೇ ದೋಷ

* ಕಾಶೀ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಪ್ರಕಟನ ಪೂರ್ವದಲ್ಲಿಯೇ ಈ ಲೇಖನದ ಪೂರ್ಣ ಪ್ರಯೋಜನವನ್ನು ಮರಾಠಿ ಅನುವಾದ ಸಹಿತ ಸಿದ್ಧಾಂತ ಶಿಖಾಮಣಿಗೆ ಬರೆದ ತಮ್ಮ ಮುನ್ನುಡಿಯ ಸಾಹಿತ್ಯ ಸೌಂದರ್ಯ ಎಂಬ ಭಾಗದಲ್ಲಿ ಮಾಡಿಕೊಟ್ಟಿರುವುದು ಅಭಿಮಾನದ ಸಂಗತಿ.

೧. ವಕ್ರೋಕ್ತಿ ಜೀವಿತ: ಪ್ರಥಮೋಪದೇಶದ ಪ್ರಾರಂಭದಲ್ಲಿ.

೨. ಅದೇ ೧-೭

೩. ಕಾವ್ಯಾಲಾಪಾಂಶ್ಚ ವರ್ಜಯೇತ್

೪. ಕಾವ್ಯ ಮೀಮಾಂಸೆ:ಆರನೆಯ ಅಧ್ಯಾಯ

ಗಳ ಇರುವಿಕೆಯನ್ನು ಶಾಸ್ತ್ರಗ್ರಂಥಗಳಲ್ಲಿ ತೋರಿಸುತ್ತಾನೆ. [ಅಸಾಧು, ಅಶ್ಲೀಲ ವರ್ಣನೆಗಳಿಂದಾಗಿ ಕಾವ್ಯಾಭ್ಯಾಸ ತ್ಯಾಜ್ಯವೆನ್ನುವವರು ಕಾವ್ಯಪ್ರಯೋಜನಗಳನ್ನು ಸರಿಯಾಗಿ ಅರಿತಿಲ್ಲವೆಂದೇ ಹೇಳಬಹುದು. 'ಸದ್ಯಃ ಪರನಿರ್ವೃತಿ'[೫] (ಕಾಲವಿಲಂಬ ವಿಲ್ಲದೆ ಆಗುವ ಆನಂದ) ಸಕಲ ಕಾವ್ಯಪ್ರಯೋಜನ ಮೂಲಭೂತವಾಗಿದ್ದರೂ, ಪ್ರಾಸಂಗಿಕವಾಗಿಯಾದರೂ ಕಾಂತಾಸಮ್ಮಿತಿಯಂತೆ ಉಪದೇಶ ಮಾಡುವುದು ಕಾವ್ಯದ ಗುರಿಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಪ್ರಭುಸಮ್ಮಿತವಾದ ವೇದಾದಿಗಳೂ, ಮಿತ್ರಸಮ್ಮಿತವಾದ ಪುರಾಣಾದಿಗಳೂ ಇವೆಲ್ಲಕ್ಕಿಂತ ಕಾಂತಾಸಮ್ಮಿತವಾದ ಕಾವ್ಯ ಹೆಚ್ಚು ಪ್ರಯೋಜಕವಾಗಿದೆ. ಅದರಲ್ಲೂ ಸುಕುಮಾರಮತಿಗಳ ಉಪದೇಶಕ್ಕಂತೂ ಕಾವ್ಯವೇ ಸರಿಯಾದ ಮಾಧ್ಯಮವಾಗಬಲ್ಲುದೆಂಬುದನ್ನು ಕುಂತಕನು ತನ್ನ 'ಧರ್ಮಾದಿ ಸಾಧನೋಪಾಯಃ ಸುಕುಮಾರ ಕ್ರಮೋದಿತಃ।'[೬] ಎಂಬ ಕಾರಿಕೆಯಲ್ಲಿಸ್ಪಷ್ಟಗೊಳಿಸಿದ್ದಾನೆ. ಪಂಚತಂತ್ರಾದಿ ಹಿತೋಪದೇಶಪರವಾದ ಗ್ರಂಥಗಳ ರಚನೆಯ ಉದ್ದೇಶವೂ ಇದೇ ಆಗಿರುವುದನ್ನು ಅವಲೋಕಿಸಬಹುದು. ಇಡೀ ರಾಮಾಯಣದಲ್ಲಿ ಎಲ್ಲಿಯೂ 'ರಾಮವತ್ ವರ್ತಿತವ್ಯಂ ನ ರಾವಣಾದಿವತ್' ಎಂದು ಪ್ರತ್ಯಕ್ಷವಾಗಿ ಹೇಳದಿದ್ದರೂ ರಾಮಾಯಣದ ಪಠಣಮಾಡಿದ ಪ್ರತಿಯೊಬ್ಬನೂ ತಾತ್ಕಾಲಿಕವಾಗಿಯಾದರೂ ರಾಮನಂತೆ ವರ್ತಿಸಬೇಕೆಂಬ ತೀರ್ಮಾನ ಮಾಡದೇ ಇರನು. ಒಟ್ಟಾರೆ ಕಾವ್ಯದ ಗುರಿಯೂ ಶಾಸ್ತ್ರದಂತೆ ನೀತಿಬೋಧನೆಯಾಗಿದ್ದು, ಮಾಧ್ಯಮವಿಲ್ಲಿ ಹೆಚ್ಚು ಸುಕುಮಾರವಾಗಿರುವುದರಿಂದ ಉಪದೇಶವು ಭಾರವಾಗುವು ದಿಲ್ಲ. ಕವಿಸಮಯ ಪ್ರಯೋಗದಲ್ಲಂತೂ ನೀತ್ಯುಪದೇಶ ಹೆಚ್ಚು ಪರಿಣಾಮಕಾರಿ ಯಾಗಿರುತ್ತದೆ.

'ಕಾವ್ಯಂ ಗ್ರಾಹ್ಯಂ ಅಲಂಕಾರಾತ್'[೭] ಎಂಬ ಸೂತ್ರದಲ್ಲಿ ವಾಮನನು ಅಲಂಕಾರ ಪದವನ್ನು ಸೌಂದರ್ಯಪರ್ಯಾಯವಾಗಿ ಬಳಸಿರುವುದನ್ನು ಕಾಣುತ್ತೇವೆ. ಅದನ್ನ-ವನು ಮುಂದಿನ ಸೂತ್ರದಲ್ಲಿ ವಿವರಿಸುತ್ತಾನೆ. ವಿಶಾಲಾರ್ಥದಲ್ಲಿ ಪ್ರಯುಕ್ತವಾದ (ಸೌಂದರ್ಯಾಲಂಕಾರ) ಅಲಂಕಾರ ದೋಷಹಾನಿ ಹಾಗೂ ಗುಣಾಲಂಕಾರ ಪ್ರಯೋಗದಿಂದ ಸಾಧ್ಯವೆಂಬುದನ್ನು ಯುಕ್ತಿಯುಕ್ತವಾಗಿ ವಿವರಿಸಿದ್ದಾನೆ. ತಾತ್ಪರ್ಯವಿಷ್ಟೇ, ಕಾವ್ಯವನ್ನು ಆಸ್ವಾದಿಸುವಾಗ ಗುಣ, ಅಲಂಕಾರ, ರೀತಿ, ರಸ, ಭಾವ ಮುಂತಾದ ಕಾವ್ಯಾಂಗಗಳ ಪರಿಚಯವಿರುವುದು ಅಗತ್ಯ. ಏಕೆಂದರೆ

---

೫. ಮಮ್ಮಟಃ ಕಾವ್ಯಪ್ರಕಾಶ ೧-೨

೬. ವಕ್ರೋಕ್ತಿ ಜೀವಿತ ೧-೩

೭. ವಾಮನಃ ಕಾವ್ಯಾಲಂಕಾರ ಸೂತ್ರವೃತ್ತಿ ೧-೧

ಅವುಗಳಿಂದಾಗಿಯೇ ನೀತ್ಯುಪದೇಶವು ಸುಲಭವೂ ಸರಸವೂ ಆಗುತ್ತದೆಂಬ ವಿಷಯವು ಸಕಲವಿದಿತವಾಗಿದೆ.

ಇನ್ನು ಶಾಸ್ತ್ರಗ್ರಂಥಗಳ ರಚನೆಗೆ ಕೈ ಹಾಕಿದ ಅನೇಕ ಪಂಡಿತರು, ಪ್ರಸಂಗ ವಶಾತ್ ತಮ್ಮ ಕಾವ್ಯ ಪ್ರೌಢಿಮೆಯನ್ನು ಮೆರೆದಿರುವ ವಿಷಯಕ್ಕೆ ಅನೇಕ ನಿದರ್ಶನ ಗಳುಂಟು. ಇದಕ್ಕೊಂದೇ ಉದಾಹರಣೆ ಸಾಕು. ರಾಜಯೋಗ ಮತ್ತು ಹಠಯೋಗ ಗಳಲ್ಲಿಯ ಸುಂದರ ಸಮನ್ವಯುವನ್ನು ಸ್ವಾತ್ಮಾರಾಮನು ಆಲಂಕಾರಿಕವಾಗಿ ಕೆಳಗಿನ ಪದ್ಯದಲ್ಲಿ ವಿವರಿಸಿದ್ದಾನೆ :

"ಶ್ರೀ ಆದಿನಾಥಾಯ ತಮೋಽಸ್ತು ತಸ್ಮೈ,
ಯೇನೋಪದಿಷ್ಟಾ ಹಠಯೋಗ ವಿದ್ಯಾ
ವಿಭ್ರಾಜತೇ ಪ್ರೋನ್ನತ ರಾಜಯೋಗ-
ಮಾರೋಢು ಮಿಚ್ಛೋರಧಿರೋಹಿಣೀವ॥"[೮]

ಕೆಲ ಸೂರಿಗಳಂತೂ ತಾವು ಶಾಸ್ತ್ರರಚನೆಯಲ್ಲಿ ಕಠೋರಮತಿಗಳಾಗಿರುವಂತೆ (ತರ್ಕೇಷು ಕರ್ಕಶ ಧಿಯೋ ವಯಮೇವ ನಾನ್ಯೇ) ಕಾವ್ಯರಚನೆಯಲ್ಲಿ ಕೋಮಲ ಮತಿಗಳಾಗಿರುವುದನ್ನು (ಕಾವ್ಯೇತು ಕೋಮಲಧಿಯೋ ವಯಮೇವ ನಾನ್ಯೇ) ಅಭಿಮಾನದಿಂದ ಹೇಳಿಕೊಂಡಿರುವುದನ್ನು ನೋಡುತ್ತೇವೆ. ಆದರೆ ಸಿದ್ಧಾಂತ ಶಿಖಾ ಮಣಿಯ ಕರ್ತೃಗಳಾದ ಶಿವಯೋಗಿ ಶಿವಾಚಾರ್ಯರು ಈ ರೀತಿಯ ಪ್ರತಿಜ್ಞೆಯನ್ನು ಮಾಡದಿದ್ದರೂ ಮತ್ತು ಅದಕ್ಕನುಗುಣವಾಗಿ ಶಾಸ್ತ್ರ ಹಾಗೂ ಕಾವ್ಯಗ್ರಂಥಗಳೆರಡರ ರಚನೆಗೆ ಕೈ ಹಾಕದಿದ್ದರೂ, ತಮ್ಮ ಶಾಸ್ತ್ರಗ್ರಂಥದಲ್ಲಿ ಪ್ರಸಂಗವಶಾತ್ ತಮ್ಮ ಕವಿ ಪ್ರತಿಭೆಯನ್ನು ವ್ಯಕ್ತಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಶ್ರೀ ರೇಣುಕ ಹಾಗೂ ಅಗಸ್ತ್ಯರ ನಡುವೆ ನಡೆದ ಸಂವಾದರೂಪದಲ್ಲಿ ವೀರಶೈವ ಸಿದ್ಧಾಂತವನ್ನು ಶಿವಯೋಗಿಯು ಗೂಢಾರ್ಥ ವಿವರಣಾ ಸಹಿತವಾಗಿ ಸಂಗ್ರಹಿಸಿದ ಪ್ರಸಂಗ ಕೃಷ್ಣಾರ್ಜುನ ಸಂವಾದ ರೂಪದಲ್ಲಿಯ ಭಗವದ್ಗೀತೆಯನ್ನು ವಿಸ್ತರಿಸಿ ಮಹಾಭಾರತದ ಒಂದು ಅಧ್ಯಾಯ ರಚಿಸಿ ಲೋಕೋಪಕಾರ ಮಾಡಿದ ವ್ಯಾಸರನ್ನು ಸ್ಮರಣೆಗೆ ತರುತ್ತದೆ. ಗ್ರಂಥದ ಪ್ರಾರಂಭದಲ್ಲಿ ಬಂದಿರುವ ಈ ಶ್ಲೋಕವು ಬಹು ಸಮಂಜಸವಾಗಿದೆ.

"ರೇಣುಕಾಗಸ್ತ್ಯ ಸಂವಾದ ನಿಗಮಾಗಮ ವಿಶ್ರುತಮ್ ।
ಪ್ರದೀಪಯತಿ ಗುಪ್ತಾರ್ಥಮುದ್ಧೃತ್ಯ ಶಿವಯೋಗಿರಾಟ್ ॥[೯]"

---

೮. ಹಠಪ್ರದೀಪಿಕಾ ೧-೧

೯. ಸಿದ್ಧಾಂತ ಶಿಖಾಮಣಿ ೧-೩೧

ರೇಣುಕರೆಂಬ ಶಿವನ ಪ್ರಮಥರಲ್ಲಿ ಶ್ರೇಷ್ಠರಾದ ಒಬ್ಬರು ಸೋಮನಾಥಲಿಂಗದಿಂದ ಉದಯಿಸಿ ಪ್ರಥಮ ಶಿಷ್ಯರಾದ ಅಗಸ್ತ್ಯರಿಗೆ ವೀರಶೈವ ಧರ್ಮರಹಸ್ಯವನ್ನು ಅರುಹಿ ಹಾಗೂ ವಿಭೀಷಣನೆಂಬ ದ್ವಿತೀಯ ಶಿಷ್ಯನಿಗೆ ಅನುಗ್ರಹಿಸಿದ ವಿಷಯುವನ್ನು ಕುರಿತಾದ ವಾದ ವಿವಾದ ಇಲ್ಲಿ ಅಪ್ರಸ್ತುತ. ಗ್ರಂಥ ರಚನೆಯು ಕಾಲದ ಪ್ರಶ್ನೆಯು ಗೌಣ. ಇಲ್ಲಿ ಪ್ರಸ್ತುತವಿರುವ ವಿಷಯ ಸಿದ್ಧಾಂತ ಶಿಖಾಮಣಿಯಲ್ಲಿ ಕಂಡು ಬರುವ ಕಾವ್ಯಗುಣವಿವೇಚನೆ. ಈ ವಿಷಯವಾಗಿ ಚರ್ಚಿಸುವಾಗ ನಾವು ಸಾಮಾನ್ಯವಾಗಿ ಗಮನಿಸಬೇಕಾದ ಅಂಶಗಳಿವು:

೧. ಅಲಂಕಾರಯೋಜನೆ ೨. ಗುಣರೀತಿ ಪ್ರಯೋಗ ೩. ವರ್ಣನಾ ಚಾತುರೀ ೪. ಕವಿಸಮಯ ಸಮೀಕ್ಷೆ ಹಾಗೂ ೫. ರಸಾದಿಗಳ ಅಭಿವ್ಯಕ್ತಿ.

೧. **ಅಲಂಕಾರಯೋಜನೆ :** ಸೌಂದರ್ಯ ಪರ್ಯಾಯವಾದ ಅಲಂಕಾರಕ್ಕೆ ಕಾರಣೀಭೂತವಾದ ಉಪಮಾದಿ ಅಲಂಕಾರಗಳ ವಿವೇಚನೆಯನ್ನು ಅಲಂಕಾರ ಶಾಸ್ತ್ರ ಗ್ರಂಥಗಳಲ್ಲಿ ನಿರ್ದಿಷ್ಟವಾಗಿಯೂ, ನಿರ್ದುಷ್ಟವಾಗಿಯೂ ಮಾಡಿರುವುದನ್ನು ಕಾಣುತ್ತೇವೆ. ಅಲಂಕಾರಗಳಲ್ಲೆಲ್ಲಾ ಉಪಮೆಯು ಅತ್ಯಂತ ಜನಪ್ರಿಯವೂ ಶ್ರೇಷ್ಠವೂ ಆಗಿದೆಯೆಂಬುದು ಸರ್ವಸಾಮಾನ್ಯವಾದ ಅಭಿಪ್ರಾಯ. ನಾನಾ ವೇಷ ಭೂಷಣಗಳಿಂದ ವಿವಿಧ ಪಾತ್ರಧಾರಿಣಿಯಾದ ನಟಿಗೆ ಉಪಮೆಯನ್ನು ಅಪ್ಪಯ್ಯ ದೀಕ್ಷಿತರು ಹೋಲಿಸಿದ್ದುಂಟು:

> ಉಪಮೈಕಾ ಶೈಲೂಷೀ ಸಂಪ್ರಾಪ್ತಾ ಚಿತ್ರಭೂಮಿಕಾಭೇದಾನ್ ।
> ರಂಜಯತಿ ಕಾವ್ಯರಂಗೇ ನೃತ್ಯಂತೀ ತದ್ವಿದಾಂ ಚೇತಃ ॥[೧೦]

'ಸಾಧರ್ಮ್ಯಮುಪಮಾ ಭೇದೇ'[೧೧] ಎಂಬ ವ್ಯಾಖ್ಯೆಯನ್ನು ನಾವು ಸಮುಚಿತವೆಂದು ಒಪ್ಪಿದ್ದಾದರೆ, ಎರಡು ವಸ್ತುಗಳ ನಡುವಿನ ಸುಂದರವಾದ ಹೊಲಿಕೆಯೇ 'ಉಪಮೆ' ಎನ್ನಬಹುದು. ಯಾವುದೇ ಜಟಿಲವಾದ ವಿಷಯುವನ್ನು ಸುಂದರವಾಗಿಯೂ ಮತ್ತು ಸುಲಭವಾಗಿಯೂ ತಿಳಿಸಲು ಉಪಮಾ ಪ್ರಯೋಗ ಪ್ರಯೋಜನಕಾರಿಯೆಂಬುದು ಸಾಮಾನ್ಯ ಅನಿಸಿಕೆ. ಇಂಥ ಉಪಮಾಲಂಕಾರ ಪ್ರಯೋಗವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಯಾವರೀತಿ ಮಾಡಲಾಗಿದೆಯೆಂದೀಗ ನೋಡೋಣ.

---

೧೦. ಚಿತ್ರ ಮೀಮಾಂಸಾ ಪುಟ-೬

೧೧. ಕಾವ್ಯ ಪ್ರಕಾಶ ೧-೩೦

ಶಿವಯೋಗಿ ಎಂದು ಪ್ರಸಿದ್ಧಿ ಪಡೆದ ಪುತ್ರರತ್ನವು, ಸಿದ್ಧನಾಥಾಚಾರ್ಯನಿಗೆ ಜನಿಸಿದ್ದನ್ನು (ಕ್ಷೀರ)ಸಾಗರದಿಂದ ಉದಯಿಸಿದ ಚಂದ್ರನಿಗೆ ಹೋಲಿಸಿದ್ದು ಔಚಿತ್ಯಪೂರ್ಣವಾಗಿದೆ.

ತಸ್ಯ ವೀರಶಿವಾಚಾರ್ಯ ಶಿಖಾರತ್ನಸ್ಯ ನಂದನಃ।
ಅಭವತ್ ಶಿವಯೋಗೀತಿ ಸಿಂಧೋರಿವ ಸುಧಾಕರಃ॥[೧೨]

ವೈವಸ್ವತ ಮನು ಜನಿಸಿದ ಸೂರ್ಯವಂಶದಲ್ಲಿ ದಿಲೀಪ ಮಹಾರಾಜನು ಜನಿಸಿದ್ದನ್ನು ಸಮುದ್ರದಿಂದ ಚಂದ್ರ ಹುಟ್ಟಿದ್ದಕ್ಕೆ ಕವಿಕುಲಗುರು ಕಾಳಿದಾಸ ಹೋಲಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದು.

"ತದನ್ವಯೇ ಶುದ್ಧಮತಿ ಪ್ರಸೂತಃ ಶುದ್ಧಿಮತ್ತರಃ।
ದಿಲೀಪ ಇತಿ ರಾಜೇಂದುರಿಂದುಃ ಕ್ಷೀರನಿಧಾವಿವ ॥[೧೩]

ನಾಭಿ ಪ್ರದೇಶದವರೆಗೆ ಇಳಿಬಿದ್ದಿರುವ ಹೊಸ ಮುತ್ತಿನ ಮಾಲೆಯಿಂದ ಅಲಂಕೃತನಾದ ಶಿವನು ಜಟೆಯಿಂದ ನಾಭಿಯ ಕಡೆಗೆ ಹರಿಯುತ್ತಿರುವ ಗಂಗೆಯಿಂದ ವಿಭೂಷಿತನಾಗಿರುವಂತೆ ತೋರಿರುವುದನ್ನು ಬಹು ಸುಂದರವಾಗಿ ವರ್ಣಿಸಲಾಗಿದೆ.

ನಾಭಿಸ್ಥಾನಾವಲಂಬಿನ್ಯಾ ನವಮೌಕ್ತಿಕಮಾಲಯಾ।
ಗಂಗಾಯೇವ ಕೃತಾಶ್ಲೇಷ ಮೌಲಿಭಾಗಾವತೀರ್ಣಯಾ॥[೧೪]

ಈ ಎರಡು ಉದಾಹರಣೆಗಳಲ್ಲಿ ಉಪಮಾ ದೋಷಗಳು[೧೫] ಇಲ್ಲದಿರುವುದನ್ನು ಗಮನಿಸಬೇಕು. ಲಿಂಗಭೇದ, ವಚನಭೇದವೆಂಬೆರಡು ಸಾಮಾನ್ಯ ದೋಷಗಳ ಅಭಾವವನ್ನು ಅವಲೋಕಿಸಿದಾಗ ಗ್ರಂಥಕರ್ತೃವಿನ ಉಪಮಾಪ್ರಯೋಗ ನೈಪುಣ್ಯ ಹಾಗೂ ಔಚಿತ್ಯ ವ್ಯಕ್ತವಾಗುತ್ತವೆ. ಅಲಂಕಾರ ಪ್ರಯೋಗ ಬಹು ಆಹ್ಲಾದಕರವಾಗಿದೆ ಎಂಬುದು ಸ್ವಯಂ ವೇದ್ಯ. ಮೊದಲನೆಯ ಉದಾಹರಣೆಯಲ್ಲಿ ಉಪಮೇಯವಾದ ವೀರ ಶಿವಾಚಾರ ಶಿಖಾರತ್ನವಾದ ಸಿದ್ಧನಾಥಾಚಾರ್ಯ ಹಾಗೂ ಆತನ ಕುಮಾರನಾದ

---

೧೨. ಸಿದ್ಧಾಂತ ಶಿಖಾಮಣಿ ೧-೨೦

೧೩. ರಘುವಂಶ ೧-೧೨

೧೪. ಸಿದ್ಧಾಂತ ಶಿಖಾಮಣಿ ೩-೨೨

೧೫. ಹೀನತ್ವಾಧಿಕತ್ವ ಲಿಂಗ ವಚನ ಭೇದಾಸಾದೃಶ್ಯಾ ಸಂಭವಾಸ್ತದ್ ದೋಷಾಃ॥
ಕಾವ್ಯಾಲಂಕಾರ ಸೂತ್ರವೃತ್ತಿ ೬-೧೧

ಶಿವಯೋಗಿ ಇಬ್ಬರೂ ಪುಲ್ಲಿಂಗ ಏಕವಚನದಲ್ಲಿದ್ದು ಅವರ ಉಪಮಾನಗಳಾದ (ಅನುಕ್ರಮವಾಗಿ) ಸಿಂಧು ಹಾಗೂ ಸುಧಾಕರರು ಸಹ ಪುಲ್ಲಿಂಗ ಏಕವಚನದಲ್ಲಿರು-ವುದು ಔಚಿತ್ಯಪೂರ್ಣವಾಗಿದೆ. ಅದೇ ರೀತಿ ದ್ವಿತೀಯ ಉದಾಹರಣೆಯಲ್ಲಿ ಉಪಮೇಯವಾದ ಮುತ್ತಿನ ಮಾಲೆ ಹಾಗೂ ಉಪಮಾನವಾದ ಗಂಗೆ ಎರಡೂ ಸ್ತ್ರೀಲಿಂಗ ಏಕವಚನದಲ್ಲಿದ್ದುದು ಸಮಂಜಸವಾಗಿದೆ.

ವಲ್ಕಲಧಾರಿಗಳೂ ನಾನಾ ನಿಯಮ ಪಾಲಕರೂ ಆದ ಮುನಿಗಳಿಂದ ಸುತ್ತುವರಿಯಲ್ಪಟ್ಟ ಅಗಸ್ತ್ಯ ಮಹರ್ಷಿಯನ್ನು ಪ್ರಮಥರಿಂದ ಕೂಡಿದ ಶಂಕರನಿಗೆ ಸಮುಚಿತವಾಗಿ ಹೋಲಿಸಲಾಗಿದೆ.

ನವವಲ್ಕಲವಾಸೋಭಿಃ ನಾನಾನಿಯಮಧಾರಿಭಿಃ ।
ಪರಿವೀತಂ ಮುನಿಗಣೈಃ ಪ್ರಮಥೈರಿವ ಶಂಕರಮ್ ॥[೧೬]

ಶಿವಜ್ಞಾನದಿಂದ ದೊರೆತ ಸ್ಥಿರವೈರಾಗ್ಯದಿಂದ ಕೂಡಿದ ಶಿವಭಕ್ತನು ತನ್ನ ತನ್ನ ಕರ್ಮದ ಲೇಪನ ಹೊಂದದೆ ಇರುವ ಸ್ಥಿತಿಯನ್ನು ಪದ್ಮಪತ್ರವು ನೀರಿನಿಂದ ತೋಯದಿರುವುದಕ್ಕೆ ಹೋಲಿಸಿದ್ದು ಅತ್ಯಂತ ಸಮಂಜಸವೆನಿಸುತ್ತದೆ :

ಶಿವಜ್ಞಾನ ಸಮಾಪನ್ನ ಸ್ಥಿರವೈರಾಗ್ಯ ಲಕ್ಷಣಃ ।
ಸ್ವಕರ್ಮಣಾ ನ ಲಿಪ್ಯೇತ ಪದ್ಮಪತ್ರಮಿವಾಂಭಸಾ ॥[೧೭]

ಕಮಲದೆಲೆಯು ನೀರಿಗೆ ಅಂಟುವುದಿಲ್ಲವೆನ್ನುವಂತೆ ಬೇರೆಡೆ ನೀರೇ ಕಮಲಪತ್ರಕ್ಕೆ ಅಂಟುವುದಿಲ್ಲವೆಂದು ಹೇಳಲಾಗುತ್ತದೆ: 'ಪದ್ಮ ಪತ್ರ ಸ್ಥಿತಂ ಜಲಮ್'.

(ಭಕ್ತಿ) ಭಾವಹೀನವಾದ ಕ್ರಿಯೆಯು ಅರ್ಥಹೀನವಾದ ವಾಣಿಯಂತೆಯೂ ಪತಿಹೀನಳಾದ ಸತಿಯಂತೆಯೂ, ಶ್ರುತಿ(ವೇದ ವಿದ್ಯಾ) ಹೀನವಾದ ಬುದ್ಧಿ-ಯಂತೆಯೂ ನಿಷ್ಫಲವೆಂಬುದನ್ನು ಮಾಲೋಪಮೆಯ ಸಹಾಯದಿಂದ ಬಹು ಸುಂದರವಾಗಿ ವಿವರಿಸಲಾಗಿದೆ:

ಅರ್ಥಹೀನಾ ಯಥಾ ವಾಣೀ ಪತಿಹೀನಾ ಯಥಾ ಸತೀ ।
ಶ್ರುತಿಹೀನಾ ಯಥಾ ಬುದ್ಧಿಃ ಭಾವಹೀನಾ ತಥಾ ಕ್ರಿಯಾ ॥[೧೮]

---

೧೬. ಸಿದ್ಧಾಂತ ಶಿಖಾಮಣಿ ೧೪-೬
೧೭. ಅದೇ ೧೪-೨೨
೧೮. ಅದೇ. ೧೬-೧೯

ರೂಪಕ: "ಉಪಮೈವ ತಿರೋಭೂತಭೇದಾ ರೂಪಕಮುಚ್ಯತೇ।" ಎಂಬಂತೆ ಸಾಧರ್ಮ್ಯದ ಅತಿಶಯದಿಂದಾಗಿ ಭೇದವಳಿದ ಉಪಮೆಯೇ ರೂಪಕವೆನ್ನಬಹುದು. ಈ ಅಲಂಕಾರದ ಭೇದೋಪಭೇದಗಳ ವಿವೇಚನೆಗೆ ಕೈ ಹಾಕದೆ ರೂಪಕದ ಕೆಲ ಉದಾಹರಣೆಗಳ ಔಚಿತ್ಯವನ್ನೀಗ ಪರೀಕ್ಷಿಸೋಣ:

ತ್ರೈಲೋಕ್ಯದ ಸಂಪತ್ತೆಂಬ ಸುಂದರವಾದ ಚಿತ್ರವನ್ನು ಬಿಡಿಸಲು ಅನುಕೂಲವಾದ ಭಿತ್ತಿ (ಗೋಡೆ=Canvas) ಎಂದು ಶಿವನನ್ನು ಸ್ತುತಿಸಿದ್ದು; ಗ್ರಂಥ ಪ್ರಾರಂಭದಲ್ಲಿಯೇ ರೂಪಕಾಲಂಕಾರದ ಸುಂದರ ಉದಾಹರಣೆಯನ್ನು ಕೊಟ್ಟಿದ್ದಾನೆ. ಆ ಪರಮಾದ್ಭುತವಾದ ದೃಶ್ಯವನ್ನು ನಮ್ಮ ಮನಃಚಕ್ಷುವಿನ ಎದುರು ನಿಲ್ಲಿಸಲು ಇದರಿಂದ ಸಾಧ್ಯವಾಗಿದೆ.

ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ ।
ಸಚ್ಚಿದಾನಂದ ರೂಪಾಯ ಶಿವಾಯ ಬ್ರಹ್ಮಣೇ ನಮಃ ॥[೧೯]

ಇದೇ ಅಭಿಪ್ರಾಯದ ಬಾಣನ ಶ್ಲೋಕವೊಂದು ಸಾಹಿತ್ಯ ಜಗತ್ತಿನಲ್ಲೆಲ್ಲಾ ಪ್ರಸಿದ್ಧ ವಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ।
ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ॥[೨೦]

ಬಾಣನು ತ್ರೈಲೋಕ್ಯದಲ್ಲಿ ನಗರಾರೋಪವನ್ನು (ಅಭೇದವನ್ನು) ಶಂಭುವಿನಲ್ಲಿ ಮೂಲಸ್ತಂಭದ ಅಭೇದವನ್ನು ಮಾಡಿರುವಂತೆ ಶಿವಯೋಗಿ ಶಿವಾಚಾರ್ಯರು ತ್ರೈಲೋಕ್ಯ ಸಂಪದದಲ್ಲಿ ಸಮುಲ್ಲೇಖನ ಚಿತ್ರದ ಅಭೇದವನ್ನು ಶಿವನಲ್ಲಿ ಭಿತ್ತಿಯ ಅಭೇದವನ್ನು ಮಾಡಿರುವ ಔಚಿತ್ಯವನ್ನು ನಾವು ಪ್ರಶಂಸಿಸಲೇಬೇಕು. ಪ್ರಣವ ಸಹಿತವಾದ ಪಂಚಾಕ್ಷರೀ ಮಂತ್ರದ ಜಪದಿಂದ ಮೋಕ್ಷಲಕ್ಷ್ಮಿಯ ಪ್ರಾಪ್ತಿ ಸುಲಭ ಸಾಧ್ಯವೆಂಬುದನ್ನು ರೂಪಕಾಲಂಕಾರದ ಸಹಾಯದಿಂದ ಬಹು ಸುಂದರವಾಗಿ ವಿವರಿಸಲಾಗಿದೆ:

ಕಿಮಿಹ ಬಹುಭಿರುಕ್ತೈಃ ಮಂತ್ರಮೇವಂ ಮಹಾತ್ಮಾ
ಪ್ರಣವ ಸಹಿತಮಾಪಾ ಯಸ್ತು ಪಂಚಾಕ್ಷರಾಖ್ಯಮ್ ।

---

೧೯. ಅದೇ ೧-೧
೨೦. ಹರ್ಷ ಚರಿತ ೧-೧

ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಂ
ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ ॥[೨೧]

ಶಿವೈಕ್ಯವೆಂಬ ವಡವಾನಲದಲ್ಲಿ ಮಾಯಾಸಿಂಧು ಲಯವಾಗುವುದನ್ನು ಬಹು ಮಾರ್ಮಿಕವಾಗಿ ವರ್ಣಿಸಿದ ಪದ್ಯ ಈ ರೀತಿ ಇದೆ:

ಬ್ರಹ್ಮಾಂಡ ಬುದ್ಬುದೋದ್ಭೇದ ವಿಜೃಂಭೀ ತತ್ತ್ವವೀಚಿವಾನ್ ।
ಮಾಯಾಸಿಂಧುರ್ಲಯಂ ಯಾತಿ ಶಿವೈಕ್ಯ ವಡವಾನಲೇ ॥[೨೨]

ಮುಕ್ತಿಯೆಂಬ ರಾತ್ರಿ ಚಿದ್ರೂಪಾಕಾಶದಲ್ಲಿ ಜ್ಞಾನಚಂದ್ರನಿಂದ ಹೊರಬೀಳುವ ಪರಮಾನಂದ ಚಂದ್ರಿಕೆಯನ್ನು ಮಹಾಜ್ಞಾನಿಗಳು ಕಾಣುತ್ತಾರೆಂಬ ವಿಷಯವನ್ನು ಬಹು ಮನೋಹರವಾಗಿ ಉಲ್ಲೇಖಿಸಲಾಗಿದೆ.

ಜ್ಞಾನಚಂದ್ರ ಸಮುದ್ಭೂತಾಂ ಪರಮಾನಂದ ಚಂದ್ರಿಕಾಮ್ ।
ಪಶ್ಯಂತಿ ಪರಮಾಕಾರೇ ಮುಕ್ತಿರಾತ್ರೌ ಮಹಾಧಿಯಃ ॥[೨೩]

ಶಿವಭಕ್ತಿಯೆಂಬ ಮಹಾಸಾಗರದಲ್ಲಿ ಭರತಿಯನ್ನುಂಟು ಮಾಡುವ ಚಂದ್ರಿಕೆಯಾದ (ಶಿವಯೋಗಿಯ)ಭಾರತಿಯು ಕುವಲಯ (ಭೂಮಿ, ನೀಲಕಮಲ) ಕ್ಕೆ ಉತ್ಸವವನ್ನುಂಟು ಮಾಡುತ್ತಿದ್ದಿತೆಂಬಲ್ಲಿಯ ಶ್ಲೇಷಸಹಿತವಾದ ರೂಪಕ ಅತ್ಯಂತ ರಮ್ಯವಾಗಿದೆ.

ಶಿವಭಕ್ತಿ ಸುಧಾಸಿಂಧು ಜೃಂಭಣಾಮಲ ಚಂದ್ರಿಕಾ।
ಭಾರತೀ ಯಸ್ಯ ವಿದಧೇ ಪ್ರಾಯಃ ಕುವಲಯೋತ್ಸವಮ್॥[೨೪]

ಪರಿಕರಾಲಂಕಾರ : "ಸಾಭಿಪ್ರಾಯೇ ವಿಶೇಷಣೇ" (ಕುವಲಯಾನಂದ ೯೩) ಎಂಬಂತೆ ಅರ್ಥಗರ್ಭಿತವಾದ ವಿಶೇಷಣಗಳಿಂದ ಕೂಡಿಕೊಂಡಿದ್ದರೆ ಅದು ಪರಿಕರಾಲಂಕಾರವಾಗುತ್ತದೆ. ಪಂಡಿತನು ರಮಿಸದೇ ಇರುವ ಶರೀರದ ಕ್ಷಣಭಂಗುರತ್ವ ಮತ್ತು ಮಲಾಧಿಕ್ಯವನ್ನು ಕೆಳಗಿನ ಶ್ಲೋಕದಲ್ಲಿ ಬಹು ಪರಿಣಾಮಕಾರಿಯಾಗಿ ವಿವರಿಸಲಾಗಿದೆ:

---

೨೧. ಸಿದ್ಧಾಂತ ಶಿಖಾಮಣಿ ೮-೪೯
೨೨. ಅದೇ ೧೪-೭
೨೩. ಅದೇ ೧೯-೧೪
೨೪. ಸಿದ್ಧಾಂತ ಶಿಖಾಮಣಿ ೧-೨೪

ಮಲಕೋಶೇ ಶರೀರೇಽಸ್ಮಿನ್ ಮಹಾದುಃಖವಿವರ್ಧನೇ।
ತಡಿದಂಕುರ ಸಂಕಾಶೇ ಕೋ ಹಾ ಮೋದೇತ ಪಂಡಿತಃ॥[೨೫]

ಇದೇ ಅಭಿಪ್ರಾಯದ ಒಂದು ಪದ್ಯ ಶ್ರೀಹರ್ಷನ 'ನಾಗಾನಂದ' ನಾಟಕದಲ್ಲಿ ಕಂಡು ಬರುತ್ತದೆ:

ಸರ್ವಾಶುಚಿ ನಿಧಾನಸ್ಯ ಕೃತಘ್ನಸ್ಯ ವಿನಾಶಿನಃ।
ಶರೀರಸ್ಯಾಪಿ ಕೃತೇ ಮೂಢಾಃ ಪಾಪಾನಿ ಕುರ್ವತೇ॥[೨೬]

ಪ್ರತಿವಸ್ತೂಪಮಾ: 'ವಾಕ್ಯಯೋರೇಕ ಸಾಮಾನ್ಯೇ' (ಕುವಲಯಾನಂದ ಪುಟ ೬೩) ಎಂಬ ವ್ಯಾಖ್ಯೆಯಂತೆ ಉಪಮಾನೋಪಮೇಯ ವಾಕ್ಯಗಳಲ್ಲಿಯ ಸಾಮಾನ್ಯ ಧರ್ಮ ಭಿನ್ನ ಪದಗಳಿಂದ ಎರಡು ಬೇರೆ ಬೇರೆ ವಾಕ್ಯಗಳಲ್ಲಿ ನಿರ್ದೇಶಿಸಲ್ಪಡುತ್ತದೆ.

ಶ್ರುತ್ಯಾದಿ ಪ್ರಮಾಣಗಳಿಂದ ಸಾಕ್ಷಾತ್ ಶಿವನೇ ನಮ್ಮ ಅನುಭವಕ್ಕೆ ಬರುತ್ತಿರುವಾಗ ಅನ್ಯ ದೇವತೆಯನ್ನು ಯಾರು ತಾನೇ ಬಯಸುತ್ತಾರೆ ? ಮಹತ್ತರವಾದ ಸಂಪತ್ತು ಹಸ್ತಗತವಾಗಿರಲು ಕಾಚನ್ನು ಯಾರು ಯಾಚಿಸುತ್ತಾರೆ ? ಎಂಬಲ್ಲಿ ಈ ಅಲಂಕಾರದ ಸುಂದರವಾದ ಉದಾಹರಣೆಯನ್ನು ಕಾಣಬಹುದು.

ಪರಿಜ್ಞಾತೇ ಶಿವೇ ಸಾಕ್ಷಾತ್ ಕೋ ವಾನ್ಯಮಧಿಕಾಂಕ್ಷತಿ।
ನಿಧಾನೇ ಮಹತಿ ಪ್ರಾಪ್ತೇ ಕಃ ಕಾಚಂ ಯಾಚತೇಽನ್ಯತಃ॥[೨೭]

ಶಿವಯೋಗಿ ಶಿವಾಚಾರ್ಯರು ಮುಂದುವರೆದು ಹೀಗೆ ಹೇಳುತ್ತಾರೆ: ಶಿವಾನಂದವನ್ನು ಹೊಂದಿರುವ ವ್ಯಕ್ತಿಯು ಬೇರೊಂದನ್ನು ಬಯಸುತ್ತಾನೆಯೇ ? ಗಂಗಾಮೃತವು ಲಭ್ಯವಾಗಿರಲು ಮೃಗಜಲವನ್ನು ಬಯಸುವ ವ್ಯಕ್ತಿ ಇದ್ದಾನೆಯೋ ? ಎಂದು ಪ್ರಶ್ನಿಸುವಲ್ಲಿಯ ಈ ಅಲಂಕಾರದ ಔಚಿತ್ಯಪೂರ್ಣವಾದ ಪ್ರಯೋಗವನ್ನು ಕಾಣುತ್ತೇವೆ:

ಶಿವಾನಂದಂ ಸಮಾಸಾದ್ಯ ಕೋ ವಾನ್ಯಮುಪತಿಷ್ಠತೇ।
ಗಂಗಾಮೃತಂ ಪರಿತ್ಯಜ್ಯ ಕಃ ಕಾಂಕ್ಷೇತ್ ಮೃಗ ತೃಷ್ಣಿಕಾಮ್॥[೨೮]

---

೨೫. ಅದೇ ೮೪-೬೮
೨೬. ನಾಗಾನಂದ ೧೪-೭
೨೭. ಸಿದ್ಧಾಂತ ಶಿಖಾಮಣಿ ೧೩-೬
೨೮. ಸಿದ್ಧಾಂತ ಶಿಖಾಮಣಿ ೧೩-೭

ವೈಧರ್ಮ್ಯದಿಂದಲೂ ಪ್ರತಿವಸ್ತೂಪಮೆ ಸಾಧ್ಯವಾಗುತ್ತಿದ್ದು ಕೆಳಗಿನ ಶ್ಲೋಕ ಇದರ ಒಂದು ಸುಂದರ ಉದಾಹರಣೆಯಾಗಿದೆ:

ಗುರುದೇವಃ ಪರಂ ತತ್ತ್ವಂ ಪ್ರಕಾಶಯತಿ ದೇಹಿನಾಮ್।
ಕೋ ವಾ ಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತತೇ॥[೨೯]

ಗುರುದೇವನೊಬ್ಬನೇ ಪರಮತತ್ತ್ವವನ್ನು ಜನರಿಗೆ ತಿಳಿಸಲು ಸಮರ್ಥನಾಗುತ್ತಾನೆ. ಸೂರ್ಯನನ್ನುಳಿದು ಬೇರೆ ಯಾರು ತಾನೆ ಕತ್ತಲೆ ಹೋಗಲಾಡಿಸಲು ಸಮರ್ಥರಾದಾರು ?

ಶಬ್ದಾಲಂಕಾರಗಳ ಉಪಯೋಗವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಅನಾಯಾಸವಾಗಿ ಔಚಿತ್ಯಪೂರ್ಣವಾಗಿ ಅಲ್ಲಲ್ಲಿ ಕಾಣುತ್ತೇವೆ. ಧ್ವನಿ ಕಾವ್ಯದಲ್ಲಿ ಅಲಂಕಾರ ಪ್ರಯೋಗಕ್ಕಾಗಿ ಆನಂದವರ್ಧನನು ಹೇಳಿರುವ ನಿಯಮಗಳನ್ನು ಅನುಸರಿಸಿಯೇ ಅಲಂಕಾರಗಳ ಪ್ರಯೋಗವು ನಡೆದಿರುವಂತೆ ತೋರುತ್ತದೆ. ಉದಾಹರಣೆಗೆ ಆನಂದ ವರ್ಧನ ಹೇಳುವಂತೆ–

"ಅಪೃಥಗ್‌ಯತ್ನ ನಿರ್ವೃತ್ಯಃ"[೩೦] ಹೆಚ್ಚಿನ ಪರಿಶ್ರಮವಿಲ್ಲದೆ ಉಪಯುಕ್ತವಾಗುವ ಅಲಂಕಾರವೇ ನಿಜವಾದ ಅಲಂಕಾರವೆನ್ನುತ್ತಾನೆ.

ಸಿದ್ಧಾಂತ ಶಿಖಾಮಣಿಯಲ್ಲಿಯೂ ಅರ್ಥಾಲಂಕಾರಗಳಂತೆಯೆ ಶಬ್ದಾಲಂಕಾರಗಳು ಸಹ ಸಹಜ ಸುಂದರವಾಗಿ ಬಳಸಲ್ಪಟ್ಟಿರುವುದನ್ನು ಕಾಣುತ್ತೇವೆ.

'ಕಾಲಿಮ್ನಾ ಕಾಲಕೂಟಸ್ಯ ಕಂಠನಾಲೇ ಕಲಂಕಿತಮ್'[೩೧] ಎಂಬ ಶ್ಲೋಕಾರ್ಥದಲ್ಲಿ 'ಕ' ವರ್ಣದ (ಸ್ವಲ್ಪಾಂತರದಿಂದ ಕೂಡಿದ) ಆವೃತ್ತಿ ಶ್ರುತಿ ಪೇಶಲವಾಗಿದೆ. ಅಷ್ಟೇ ಅಲ್ಲ ಮನೋಹರವೂ ಆಗಿದೆ ಎಂಬುದನ್ನು ನಾವು ಕಾಣದೇ ಇರೆವು.

"ಜ್ಯೋತಿರ್ಲಿಂಗಾನುಸಂಧಾನ ಮಾಂತರಂ ಲಿಂಗಧಾರಣಮ್"[೩೨] ಎಂಬಲ್ಲಿ ಪ್ರಯುಕ್ತವಾದ ಅನುಸ್ವಾರದ ಆವೃತ್ತಿ ಹೃದಯಾಹ್ಲಾದಕರವಾಗಿದೆ ಎಂಬುದು

೨೯. ಅದೇ ೧೩-೨೩
೩೦. ಧ್ವನ್ಯಾಲೋಕ ೨-೧೬
೩೧. ಸಿದ್ಧಾಂತ ಶಿಖಾಮಣಿ ೩-೧೯
೩೨. ಅದೇ ೬-೩೮

ಸಹೃದಯ ಹೃದಯ ಸುವೇದ್ಯವಾಗಿದೆ. ಈ ರೀತಿ ಅರ್ಥಾಲಂಕಾರಗಳಂತೆಯೇ ಶಬ್ದಾಲಂಕಾರಗಳೂ ಸಹ ಸಿದ್ಧಾಂತ ಶಿಖಾಮಣಿಯಲ್ಲಿ ಹೆಚ್ಚಿನ ಪ್ರಯಾಸವಿಲ್ಲದೆ ಸಹಜ ಸುಂದರವಾಗಿ ಉಪಯೋಗಿಸಲ್ಪಟ್ಟಿರುವುದನ್ನು ಕಾಣುತ್ತೇವೆ.

ಗುಣಗಳು ಮತ್ತು ರೀತಿ : 'ವಿಶಿಷ್ಟ ಪದರಚನಾ ರೀತಿಃ ವಿಶೇಷೋ ಗುಣಾತ್ಮಾ'[೩೩] ಎಂಬಂತೆ ಶಬ್ದಗಳ ವಿಶಿಷ್ಟವಾದ ರಚನೆಯನ್ನು ರೀತಿಯೆಂದು ಕರೆಯಲಾಗಿದ್ದು, ರೀತಿ ನಿರ್ಣಯಕ್ಕೆ ಗುಣಗಳೇ ಕಾರಣೀಭೂತವಾಗಿವೆ. ವಾಮನನ ಈ ಉಕ್ತಿಯನ್ನು ಒಪ್ಪಿದ್ದಾದರೆ ಸಿದ್ಧಾಂತ ಶಿಖಾಮಣಿಯಲ್ಲಿ ಅತಿ ಸರಳವೂ ಮತ್ತು ಸುಂದರವೂ ಆದ ವೈದರ್ಭೀ ಅಥವಾ ಸುಕುಮಾರ ಮಾರ್ಗವನ್ನು ಕಾಣಬಹುದು. ಶಾಸ್ತ್ರಗ್ರಂಥದ ವಿಷಯ ನಿರ್ದಿಷ್ಟ ಹಾಗೂ ನಿರ್ದುಷ್ಟವಾಗಿರುವುದರ ಜೊತೆಗೆ ನಿಸ್ಸಂದಿಗ್ಧತೆ, ಸ್ಫುಟತೆ ಇರಬೇಕಾದುದು ಅನಿವಾರ್ಯ. ವರ್ಣನಾದಿಗಳ ಪ್ರಸಂಗಗಳಲ್ಲಿ ಮಾತ್ರ ಶಬ್ದಾಡಂಬರ ಅಲಂಕಾರಗಳ ವೈಭವಗಳನ್ನು ಕಾಣಬಹುದೇ ಹೊರತು ಶಾಸ್ತ್ರಚರ್ಚೆಯ ಸಂದರ್ಭದಲ್ಲಿ ನೇರ ನುಡಿ ಗ್ರಂಥಕಾರನು ಅನುಸರಿಸಬೇಕಾದ ಮಾರ್ಗವಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಗುಣವಿವೇಚನೆಯು ಗೌಣವೆನಿಸುತ್ತದೆಯಲ್ಲವೆ ?

ಸಂಸಾರ ವಿಷವೃಕ್ಷಸ್ಯ ಪಂಚಕ್ಲೇಶ ಪಲಾಶಿನಃ ।
ಛೇದನೇ ಕರ್ಮಮೂಲಸ್ಯ ಪರಶುಃ ಶಿವಭಾವನಾ ॥[೩೪]

ಸುಲಭವಾಗಿ ಅರ್ಥವಾಗುವ ಮತ್ತು ಅಷ್ಟೇ ಸುಂದರವಾದ ಈ ಶ್ಲೋಕದಲ್ಲಿಯ ಸುಲಭ ಶೈಲಿ (ನೇರ ನುಡಿಯಿಂದಾಗಿ) ಬಹು ಔಚಿತ್ಯಪೂರ್ಣವಾಗಿದೆ. ರಚನೆಯಲ್ಲಿಯ ಶಿಥಿಲತಾಭಾವ ಅಥವಾ ಗಾಢಬಂಧುತ್ವ, ಓಜೋ ಗುಣ, ಕ್ವಚಿತ್ ಶಿಥಿಲತೆ (ಪ್ರಸಾದ ಗುಣ), ಮಾರ್ಗಾಭೇದ (ಸಮತೆ) ಮತ್ತು ಪೃಥಕ್ಪದಗಳ ಜೋಡಣೆ (ಮಾಧುರ್ಯ) ಇವೇ ಮೊದಲಾದ ಗುಣಗಳ ಇರುವಿಕೆಯನ್ನು ಕಾಣಬಹುದಾಗಿದ್ದು ಅವುಗಳ ಉದಾಹರಣೆಗಳು ಭೂಯಿಷ್ಠವಾಗಿವೆ. ಅವುಗಳ ಉಲ್ಲೇಖ ಅವಶ್ಯವಿಲ್ಲ.

ಭಾವಧ್ವನಿ : ಶಾಸ್ತ್ರಗ್ರಂಥವಾದ್ದರಿಂದ ಇದರಲ್ಲಿ ರಸಾದಿ ಪರಿಪೋಷಣೆಗೆ ಅವಕಾಶವಿಲ್ಲದಿದ್ದರೂ ಅಲ್ಲಲ್ಲಿ ಭಕ್ತಿ ಮುಂತಾದ ಭಾವಗಳ ದ್ಯೋತನ ಸಮಂಜಸವಾಗಿ ಬಂದಿದೆ. ಕೆಲ ಉದಾಹರಣೆಗಳು ಈ ಮಾತನ್ನು ಪುಷ್ಟೀಕರಿಸಬಲ್ಲವು.

---

೩೩. ಕಾವ್ಯಾಲಂಕಾರ ಸೂತ್ರವೃತ್ತಿ I. ii. ೭ ಮತ್ತು ೮
೩೪. ಸಿದ್ಧಾಂತ ಶಿಖಾಮಣಿ ೧೨-೨೫

ಸ್ವೇಚ್ಛಾ ವಿಗ್ರಹಧಾರಿಯೂ, ಸ್ವೇಚ್ಛೆಯಿಂದ ತ್ರಿಲೋಕ ನಿರ್ಮಾತೃವೂ ಆದ ಸಾಂಬನಿಗೆ ಸಲ್ಲಿಸುವ ನಮಸ್ಕಾರದಲ್ಲಿ ಲೇಖಕನ ಮನಸ್ಸಿನಲ್ಲಿನ ಶಿವಭಕ್ತಿಯು ಧ್ವನಿತವಾಗುತ್ತಿದ್ದು, ಭಾವಧ್ವನಿಯ ಒಂದು ಸುಂದರ ಉದಾಹರಣೆಯನ್ನು ಕಾಣಬಹುದು.

ಸ್ವೇಚ್ಛಾ ವಿಗ್ರಹ ಯುಕ್ತಾಯ ಸ್ವೇಚ್ಛಾವರ್ತನ ವರ್ತಿನೇ ।
ಸ್ವೇಚ್ಛಾಕೃತ ತ್ರಿಲೋಕಾಯ ನಮಃ ಸಾಂಬಾಯ ಶಂಭವೇ ॥[೩೫]

ಮುಕ್ತಿಗಾಗಿ ಶರಣಾಗತರಾದ ಭಕ್ತರಿಗೆ ತತ್ತ್ವಜ್ಞಾನ (ಸಂಬಂಧಿಯಾದ) ವಿದ್ಯೆಯನ್ನು ದಯಪಾಲಿಸುವ ಹಾಗೂ ಶಿವವಲ್ಲಭೆಯಾದ ಶಕ್ತಿಗೆ ನಮಸ್ಕರಿಸುವಲ್ಲಿಯೂ ಇದೇ ರೀತಿಯ ಭಕ್ತಿಭಾವವು ವ್ಯಕ್ತವಾಗುತ್ತದೆ.

ಅಮೃತಾರ್ಥಂ ಪ್ರಪನ್ನಾನಾಂ ಯಾ ಸುವಿದ್ಯಾ ಪ್ರದಾಯಿನೀ ।
ಅಹರ್ನಿಶಮಹಂ ವಂದೇ ತಾಮೀಶಾನ ಮನೋರಮಾಮ್ ॥[೩೬]

ಶಿವನ ಜೊತೆ ಸುಖಾಸೀನಳಾದ ಆವನ ಅರ್ಧಾಂಗಿ ಪಾರ್ವತಿದೇವಿಯ ವರ್ಣನೆಯಲ್ಲಿ ಶೃಂಗಾರ ರಸದ ಛಾಯೆಯು ಅಸ್ಫುಟವಾಗಿಯಾದರೂ ಕಂಡುಬರುತ್ತಿದ್ದು, ಕ್ಷಣಕಾಲ ಕಾಳಿದಾಸನ ಕುಮಾರಸಂಭವದಲ್ಲಿಯ ಪಾರ್ವತಿಯ ವರ್ಣನೆಯ ಸ್ಮರಣೆಯನ್ನುಂಟು ಮಾಡದೇ ಇರದು.

ಸ್ಥಿರಯೌವನ ಲಾವಣ್ಯ ಶೃಂಗಾರಿತ ಶರೀರಯಾ ।
ಅತ್ಯಂತ ಕಠಿಣೋತ್ತುಂಗ ಪೀವರ ಸ್ತನಭಾರಯಾ ॥[೩೭]

ಇದೇ ಅಭಿಪ್ರಾಯದ ನುಡಿಯನ್ನು ಕುಮಾರಸಂಭವದ ಇನ್ನೊಂದೆಡೆಯಲ್ಲಿ ಕಾಣಬಹುದು:

ಅನ್ಯೋನ್ಯ ಮುತ್ಪೀಡಯದುತ್ಪಲಾಕ್ಷ್ಯಾಃ
ಸ್ತನದ್ವಯಂ ಪಾಂಡು ತಥಾ ಪ್ರಬುದ್ಧಮ್ ।
ಮೃಣಾಲ ಪತ್ರಾಂತರಮಪ್ಯಲಭ್ಯಮ್ ॥[೩೮]

---

೩೫. ಅದೇ ೧-೬
೩೬. ಸಿದ್ಧಾಂತ ಶಿಖಾಮಣಿ ೧-೧೩
೩೭. ಕುಮಾರ ಸಂಭವ ೩-೩೧
೩೮. ಅದೇ,, ೧-೪೦

ವರ್ಣನಾ ವೈಖರೀ : 'ವರ್ಣನಾ ನಿಪುಣಃ ಕವಿಃ' ಎಂಬಂತೆ ಸುಂದರ ವರ್ಣನಾ ಕೌಶಲವಿಲ್ಲದವನು ಕವಿಯಲ್ಲವೆಂಬುದು ಸಾಮಾನ್ಯ ನಿಯಮ. ಸುದೈವದಿಂದ ವರ್ಣನಾ ಪ್ರಸಂಗಗಳನ್ನು ಶಿವಯೋಗಿ ಶಿವಾಚಾರ್ಯರು ವ್ಯರ್ಥಗೊಳಿಸಿಲ್ಲ. ತಮ್ಮ ವರ್ಣನಾ ಪ್ರೌಢಿಮೆಯನ್ನು ಮೆರೆಯುವಲ್ಲಿ ಹಿಂದೆಬಿದ್ದಿಲ್ಲವೆಂಬುದು ಅವರ ಗ್ರಂಥದ ಅವಲೋಕನದಿಂದ ಸ್ಫುಟವಾಗುತ್ತದೆ. ಒಂದೆರಡು ಉದಾಹರಣೆಗಳು ಈ ಮಾತಿಗೆ ಸಾಕ್ಷಿಯಾಗಿವೆ. ತೃತೀಯ ಪರಿಚ್ಛೇದದಲ್ಲಿ ಬರುವ ಕೈಲಾಸ ಪರ್ವತ ವರ್ಣನೆ ಶಿವವರ್ಣನೆ ಹಾಗೂ ಪಾರ್ವತೀದೇವಿ ಮುಂತಾದ ಶಿವಕುಟುಂಬದ ಸದಸ್ಯರ ವರ್ಣನೆ, ವಿವಿಧ ದೇವತಾಕೃತ ಶಿವಸೇವಾ ವರ್ಣನೆ–ಹೀಗೆ ಹತ್ತಾರು ಪ್ರಸಂಗಗಳಲ್ಲಿ ವರ್ಣನಾ ವೈಭವವನ್ನು ಕಾಣಬಹುದಾಗಿದೆ. ಪ್ರಮಥರ ಕಾಲುಗಳಲ್ಲಿದ್ದ ನೂಪುರಗಳಲ್ಲಿ ಮಧುರ ಧ್ವನಿಯಿಂದ ತುಂಬಿ ಹೋದ ಕೈಲಾಸವು ನಯನಮನೋಹರವಾಗಿತ್ತು.

ಸಂಚರತ್ ಪ್ರಮಥಶ್ರೇಣೀ ಪದವಾಚಾಲ ನೂಪುರೇ ।
ಪ್ರವಾಲ ವಲಭೀಶೃಂಗ ಶೃಂಗಾರಮಣಿಮಂಟಪೇ ॥[೩೯]

ಸಂಸಾರವೆಂಬ ವಿಷದಿಂದ ಮೂರ್ಛಿತರಾದವರನ್ನು ಬದುಕಿಸುವ ಸಂಜೀವಿನಿಯಂತೆಯೂ, ನಿತ್ಯಪ್ರಕಾಶದಿಂದ ನಿರ್ಮಲವೂ ಮತ್ತು ಮುಕ್ತಿಕಲ್ಪದ್ರುಮವೂ ಆದ ಶಿವನ ವರ್ಣನೆಯಂತೂ ಅತಿ ಮನೋಹರವಾಗಿದೆ.

ಸಂಸಾರ ವಿಷ ಮೂರ್ಛಾಲು ಜೀವ ಸಂಜೀವನೌಷಧಮ್।
ನಿತ್ಯ ಪ್ರಕಾಶ ನೈರ್ಮಲ್ಯಂ ಕೈವಲ್ಯಸುರಪಾದಪಮ್॥[೪೦]

ವಾಮಭಾಗಸ್ಥೆಯೂ (ಅಕ್ಷರಶಃ ಅರ್ಧಾಂಗಿಯೂ) ಮಂಗಲ ಪ್ರಿಯವೇಷಧಾರಿಣಿಯೂ ಮತ್ತು ಸಪ್ತಲೋಕ ನಿರ್ಮಾಣಕ್ಕೆ ಸಮವಾಯ ಕಾರಣಳೂ ಆದ ಶಿವೆಯ ಸೌಂದರ್ಯ ವರ್ಣನೆಯು ಕವಿಕಲ್ಪನೆಗೆ ಹಿಡಿದ ಒಂದು ಉಜ್ವಲ ದರ್ಪಣವೆನ್ನಬಹುದು.

ವಾಮಪಾರ್ಶ್ವ ನಿವಾಸಿನ್ಯಾ ಮಂಗಲಪ್ರಿಯವೇಷಯಾ।
ಸಮಸ್ತಲೋಕನಿರ್ಮಾಣ ಸಮವಾಯ ಸ್ವರೂಪಯಾ॥[೪೧]

---

೩೯. ಸಿದ್ಧಾಂತ ಶಿಖಾಮಣಿ ೩-೮

೪೦. ಸಿದ್ಧಾಂತ ಶಿಖಾಮಣಿ ೩-೧೨

೪೧. ಅದೇ ೩-೨೪

ಉಪನಿಷದ್‌ವಧು ತನ್ನ ಕೈ ಬಳೆನಾದದಿಂದ ಮನೋಹರವಾದ ಕೈಗಳಿಂದ ಓಂಕಾರ (ಪ್ರಣವ) ವೆಂಬ ಬೀಸಣಿಕೆಯಿಂದ ಶಂಕರನಿಗೆ ಗಾಳಿ ಹಾಕುವ ದೃಶ್ಯ ಅನ್ಯಾದೃಶ, ಅನುಪಮ.

ಝಣತ್ ಕಂಕಣಜಾಲೇನ ಹಸ್ತೇನೋಪನಿಷದ್ವಧೂಃ।
ಓಂಕಾರ ತಾಲವೃಂತೇನ ವೀಜಯಾಮಾಸ ಶಂಕರಮ್॥ ೪೨

ಅತ್ತಿತ್ತ ಸಂಚರಿಸುತ್ತಿರುವ ಶುಭ್ರವಾದ ಚಾಮರಗಳ ಮಧ್ಯದ ದಿವ್ಯ ಕನ್ಯೆಯರ ಮುಖಮಂಡಲವು ರಾಜಹಂಸಗಳ ಮಧ್ಯದಲ್ಲಿರುವ ಕಮಲದಂತೆ ಕಂಗೊಳಿಸುವ ದೃಶ್ಯದ ವರ್ಣನೆ ಕಲ್ಪನಾ ಶಕ್ತಿಗಂಗೆ ಹರಿದುದಕ್ಕೆ ಸಾಕ್ಷಿಯಾಗಿದೆ.

ಚಾಮರಾಣಾಂ ವಿಲೋಲಾನಾಂ ಮಧ್ಯೇ ತನ್ಮುಖಮಂಡಲಮ್।
ರರಾಜ ರಾಜಹಂಸಾನಾಂ ಭ್ರಮತಾಮಿವ ಪಂಕಜಮ್॥ ೪೩

ಇಲ್ಲಿ ಉಪಯುಕ್ತವಾದ ಅನುಪ್ರಾಸಾದಿ ಶಬ್ದಾಲಂಕಾರಗಳು ಸಹ ಔಚಿತ್ಯ ಪೂರ್ಣವೂ ಸಹಜಸುಂದರವೂ ಆಗಿವೆಯೆನ್ನಬಹುದು.

ವಿಭೀಷಣಾನುಗ್ರಹ (ಅಭೀಷ್ಟದಾನ) ನಿರೂಪಣೆಯಲ್ಲಿ ವರ್ಣನಾ ವೈಖರಿ ಸ್ಫುಟವಾಗಿ ಕಂಗೊಳಿಸುತ್ತದೆ, ತಾನಾಗಿಯೇ ಅನುಗ್ರಹಿಸಲು ಬಂದ ರೇಣುಕ ಭಗವತ್ಪಾದರನ್ನು ಕಂಡು ವಿಭೀಷಣನ ಹರ್ಷದ ಮೇರೆ ಮೀರುತ್ತದೆಯೆಂಬ ವಿಷಯವನ್ನು ವಿಶದವಾಗಿ ವರ್ಣಿಸುತ್ತಿದ್ದು ಅವನ ಈ ಮಾತು ಅದೆಲ್ಲವನ್ನು ಸೂತ್ರರೂಪದಲ್ಲಿ ಹೇಳುತ್ತದೆ.

ಮತ್ಸಮೋ ನಾಸ್ತಿ ಲೋಕೇಷು ಭಾಗ್ಯಾತಿಶಯವತ್ತಯಾ।
ಯಸ್ಯ ಗೇಹಂ ಸ್ವಯಂ ಪ್ರಾಪ್ತೋ ಭವಾನ್ ಸಾಕ್ಷಾನ್ ಮಹೇಶ್ವರಃ॥ ೪೪

ಶ್ರೀ ಸೋಮಲಿಂಗದಿಂದ ಉದ್ಭವಿಸಿದ ರೇಣುಕ ಗಣೇಶ್ವರರ ವರ್ಣನೆ ಅದ್ಭುತ ರಮ್ಯವಾಗಿದೆ, ಹೃದಯಂಗಮವಾಗಿದೆ.

ಭಸ್ಮೋದ್ಧೂಳಿತ ಸರ್ವಾಂಗಂ ಸಾರ ರುದ್ರಾಕ್ಷ ಭೂಷಣಮ್ ।
ಜಟಾ ಮಕುಟ ಸಂಯುಕ್ತಂ ತ್ರಿಪುಂಡ್ರಾಂಕಿತ ಮಸ್ತಕಮ್ ॥ ೪೫

---

೪೨. ಅದೇ ೩-೩೯
೪೩. ಅದೇ ೩-೪೧
೪೪. ಅದೇ ೨೧-೮
೪೫. ಸಿದ್ಧಾಂತ ಶಿಖಾಮಣಿ ೪-೩

ಆ ಅದ್ಭುತ ದೃಶ್ಯವನ್ನು ಕಣ್ಣಾರೆ ಕಂಡ ತೆಲಂಗಣ ಜನರು ಧನ್ಯರೂ ಮತ್ತು ಮೂಕ ವಿಸ್ಮಿತರೂ ಆದಂತೆ, ಆ ವರ್ಣನೆಯನ್ನೋದಿ ನಾವೂ ಸಹ ಮೂಕವಿಸ್ಮಿತರಾಗುತ್ತೇವೆ.

ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ ತ್ರಿಲಿಂಗಜಾಃ ।
ವಿಸ್ಮಿತಾಃ ಪ್ರಾಣಿನಃ ಸರ್ವೇ ಬಭೂವುರತಿತೇಜಸಮ್ ॥[೪೬]

ಅಗಸ್ತ್ಯಮುನಿಯ ಆಶ್ರಮದ ವರ್ಣನೆಯಂತೂ ಅಸಾಮಾನ್ಯವಾಗಿದ್ದು ಕುಮಾರ ಸಂಭವದ ಪಾರ್ವತೀ ಆಶ್ರಮದ ವರ್ಣನೆಯನ್ನೋ ಬಾಣನ ಜಾಬಾಲ್ಯಾಶ್ರಮ ವರ್ಣನೆಯನ್ನೋ ಸ್ಮರಣೆಗೆ ತಾರದಿರದು.

ತ್ರಿಪುಂಡ್ರ ರೇಖಾಂಕಿತನಾದ ಅಗಸ್ತ್ಯಮುನಿಯು ಮೂರು ಪ್ರವಾಹವಾಗಿ ಹರಿಯುತ್ತಿರುವ ಗಂಗೆಯಿಂದ ಕೂಡಿದ ಹಿಮಾಲಯದಂತೆ ಕಂಗೊಳಿಸುವ ವರ್ಣನೆ ಉತ್ಪ್ರೇಕ್ಷೆಯಿಂದ ಕೂಡಿದ್ದರೂ ಸತ್ಯದೂರವಲ್ಲವೆಂಬುದನ್ನು ಹೃದಯಂಗಮ ರೀತ್ಯಾ ವಿವರಿಸಲಾಗಿದೆ:

ವಿಶುದ್ಧಭಸ್ಮಕೃತಯಾ ತ್ರಿಪುಂಡ್ರಾಂಕಿತರೇಖಯಾ ।
ತ್ರಿಸ್ರೋತಸೇವ ಸಂಬದ್ಧ ಶಿಲಾಭಾಗಂ ಹಿಮಾಲಯಮ್ ॥[೪೭]

ಇದು ಬಾಣನ ಕೆಳಗಿನ ವಾಕ್ಯಾಂಶದ ಸ್ಮರಣೆಯನ್ನುಂಟು ಮಾಡದೇ ಇರದು.

ಉಪಚರಿತ ಭಸ್ಮ ತ್ರಿಪುಂಡ್ರೇಣ ತಿರ್ಯಕ್ ಪ್ರವೃತ್ತ ತ್ರಿಪಥಗಾ
ಸ್ರೋತಸ್ತ್ರಯೇಣೇವ ಹಿಮಗಿರಿ ಶಿಲಾತಲೇನ ಲಲಾಟ
ಫಲಕೇನೋಪೇತಮ್ ॥[೪೮]

ಸರ್ವ ಋತುಗಳಲ್ಲಿಯೂ ಫಲಪುಷ್ಪ ಕೊಡುವ ವೃಕ್ಷಗಳಿಂದ ಕೂಡಿದ ಆ ಆಶ್ರಮದ ದಿವ್ಯತೆ, ಪಾವಿತ್ರ್ಯವನ್ನು ಬಹು ಸೂಕ್ಷ್ಮವಾಗಿ ವರ್ಣಿಸಲಾಗಿದೆ.

ತತ್ರ ಕುತ್ರ ಚಿದಾಭೋಗೇ ಸರ್ವರ್ತು ಕುಸುಮದ್ರುಮೇ ।
ಅಪಶ್ಯದಾಶ್ರಮಂ ದಿವ್ಯಮಗಸ್ತ್ಯಸ್ಯ ಮಹಾಮುನೇಃ ॥[೪೯]

---

೪೬. ಅದೇ ೪-೨
೪೭. ಅದೇ ೪-೨೫
೪೮. ಕಾದಂಬರಿ ಪುಟ ೪೨
೪೯. ಸಿದ್ಧಾಂತ ಶಿಖಾಮಣಿ ೪-೧೭

ಈ ಶ್ಲೋಕಕ್ಕೆ ಸಂವಾದಿಯಾಗಿ ಗದ್ಯಭಾಗದಲ್ಲಿ ಬಾಣನಲ್ಲಿ ಈ ವಾಕ್ಯವನ್ನು ಕಾಣುತ್ತೇವೆ.

"ಅನತಿದೂರಮಿವ ಗತ್ವಾ ದಿಶಿದಿಶಿ ಸದಾ ಸಂನಿಹಿತ ಕುಸುಮ ಫಟೈಃ ಸ್ಥಲ ತಿಲಕ ಹಿಂತಾಲ......ಸಂಸಕ್ತಪಾದಪೈಃ ಕಾನನೈರುಪಗೂಢಮ್।"[೫೦]

ಸ್ವಚ್ಛ ತಿಳಿನೀರಿನಿಂದ ತುಂಬಿಕೊಂಡು ಮಣಿಸೋಪಾನಗಳಿಂದ ಶೋಭಿಸುವ ಸರೋವರಗಳಿಂದ ಕೂಡಿದ್ದ ತಮ್ಮ ನಿಸರ್ಗ ಸಹಜವಾದ ವೈರವನ್ನು ಬಿಟ್ಟು ಒಂದೆಡೆ ವಾಸ(ಸಹವಸತಿ)ಮಾಡುವ ಪ್ರಾಣಿಗಳಿಂದ ಕೂಡಿದ್ದ ಆ ಆಶ್ರಮವು ದ್ವಿತೀಯ ಬ್ರಹ್ಮಲೋಕದಂತೆ ಕಂಗೊಳಿಸುತ್ತಿತ್ತೆಂದು ಹೇಳಿದ್ದು ಬಹು ಮನೋಹರ ವಾಗಿದೆ.

ಪ್ರಕೃಷ್ಟ ಮಣಿಸೋಪಾನೈಃ ಪರಿವೀತಂ ಸರೋವರೈಃ।
ವಿಮುಕ್ತ ಸತ್ತ್ವವೈರಸ್ಯಂ ಬ್ರಹ್ಮಲೋಕಮಿವಾಪರಮ್॥[೫೧]

ಈ ಸಂದರ್ಭದಲ್ಲಿ ಪಾರ್ವತ್ಯಾಶ್ರಮದ ವರ್ಣನೆಯ ಕೆಳಗಿನ ಶ್ಲೋಕವನ್ನು ಸ್ಮರಿಸಬಹುದು.

ವಿರೋಧಿಸತ್ತ್ವೋಜ್ಝಿತ ಪೂರ್ವಮತ್ಸರಂ,
ದ್ರುಮೈರಭೀಷ್ಟ ಪ್ರಸವಾರ್ಚಿತಾತಿಥಿ।
ನವೋಟಜಾಭ್ಯಂತರ ಸಂಭೃತಾನಲಮ್
ತಪೋವನಂ ತಚ್ಚ ಬಭೂವ ಪಾವನಮ್॥[೫೨]

ಕವಿಸಮಯಗಳು : ಕವಿಸಮಯಗಳ ಸ್ವರೂಪವೇನೇ ಇರಲಿ ಅವುಗಳ ಪ್ರಯೋಜನ, ಆದರ್ಶಪ್ರತಿಪಾದನೆ ಮತ್ತು ನೀತ್ಯುಪದೇಶವೇ ಆಗಿದೆ ಎಂಬ ವಿಷಯದಲ್ಲಿ ಮತಭೇದವಿಲ್ಲ. ಅಲೌಕಿಕವೂ, ಅಶಾಸ್ತ್ರೀಯವೂ ಆಗಿದ್ದರೂ ಕವಿಗಳು ಅವುಗಳ ಔಚಿತ್ಯಪೂರ್ಣ ಪ್ರಯೋಜನವನ್ನರಿತು ಅವುಗಳ ಪ್ರಯೋಗದಲ್ಲಿ ತಮ್ಮ ಪ್ರತಿಭೆಯನ್ನು ಧಾರಾಳವಾಗಿ ವ್ಯಕ್ತಮಾಡಿದ್ದಾರೆ. ಅವುಗಳ ಮಿಥ್ಯಾತ್ವ ಕಲ್ಪನೆಯೇ ಭಾರತೀಯರ ಮನಸ್ಸಿನಲ್ಲಿ ಸುಳಿಯುವುದಲ್ಲವೆನ್ನುವ ಮಟ್ಟಿಗೆ ಅವು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಕೇವಲ ಮೋಡದ ನೀರು ಕುಡಿದು ಬದುಕುವ ಚಾತಕ ಕಲ್ಪನಾ ಪಕ್ಷಿಯಾಗಿರದೆ ನಿಜ ಜೀವನದಲ್ಲಿ ಇರುವ ಪಕ್ಷಿಯೆಂಬ

---

೫೦. ಕಾದಂಬರಿ ಪುಟ ೩೮

೫೧. ಸಿದ್ಧಾಂತ ಶಿಖಾಮಣಿ ೪-೨೨

೫೨. ಕುಮಾರ ಸಂಭವ ೫-೧೬

ಭಾವನೆ ನಮ್ಮಲ್ಲಿದೆಯೆನ್ನಬಹುದು. ಕವಿಗಳಂತೆಯೇ ದಾರ್ಶನಿಕರೂ ಸಹ ತಮ್ಮ ಶಾಸ್ತ್ರ ಗ್ರಂಥಗಳಲ್ಲಿ ಅಲ್ಲಲ್ಲಿ ಕವಿಸಮಯಗಳ ಯಥಾರ್ಥ ಉಪಯೋಗವನ್ನು ಮಾಡಿಕೊಂಡಿರುವುದನ್ನು ಕಾಣುತ್ತೇವೆ. 'ಕವಿಸಮಯ ಸಮೀಕ್ಷೆ' ಎಂಬ ನನ್ನದೊಂದು ಲೇಖನದಲ್ಲಿ (ಸಂಸ್ಕೃತ) ಕವಿಸಮಯ ಪ್ರಯೋಜನದ ಸಾರವನ್ನು ಈ ರೀತಿ ಹೇಳಲಾಗಿದೆ.

> ಬಹುವಿಧೋಪಕಾರಿತ್ವಾತ್ ಸಮಯಾ ಕವಿಕರ್ಮಣಿ ।
> ಹೇಯಾಸ್ತೇನ ಭವಂತ್ಯೇವ ತದುದ್ದೇಶ ವಿಚಾರಣಾತ್ ॥[೫೩]

'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಎಂಬಲ್ಲಿ ಚಕೋರ ಚಂದ್ರಪಾನದ ಕವಿಸಮಯವನ್ನು ಬಸವಣ್ಣನವರು ಸಮರ್ಥ ರೀತಿಯಿಂದ ಮಾಡಿಕೊಂಡಿದ್ದು ಚಕೋರಪಕ್ಷಿ ಚಂದ್ರಿಕೆಯನ್ನುಳಿದು ಬೇರೊಂದನ್ನು ನೆನೆಯದಂತೆ, ತಾವು ಭಗವಂತನನ್ನುಳಿದು ಬೇರೊಂದನ್ನು ನೆನೆಯದಿರುವ ದೃಢವ್ರತ ವೀರಸಂಕಲ್ಪವನ್ನು ಮಾಡಿದ್ದಾರೆ. ಇದೇ ರೀತಿ ಕವಿಸಮಯಗಳ ಸದುಪಯೋಗವನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಯಾವ ರೀತಿ ಮಾಡಲಾಗಿದೆಯೆಂಬುದನ್ನು ಪರೀಕ್ಷಿಸೋಣ.

ಚಂದ್ರೋದಯ, ಸಮುದ್ರದ ಭರತಿಗೆ ಕಾರಣೀಭೂತವಾಗುವುದು ಭೌಗೋಲಿಕ ಸತ್ಯವಾಗಿದ್ದರೂ ಚಂದ್ರನು ಕ್ಷೀರಸಾಗರದಿಂದ ಜನಿಸಿರುವುದೇ ಈ ತತ್ತ್ವಕ್ಕೆ ಕಾರಣವೆಂದು ಕವಿಗಳು ನಂಬುತ್ತಾರೆ. ಆದುದರಿಂದಲೇ ಚಂದ್ರೋದಯವಾಗುತ್ತಲೇ ಸಮುದ್ರ ಅಪತ್ಯ(ಪ್ರೀತಿ) ಪ್ರೇಮದಿಂದಾಗಿ ಹರ್ಷಾತಿರೇಕದಿಂದ ಉಬ್ಬುವುದೇ ಉಕ್ಕೇರುವುದೇ ಭರತಿಯೆಂದು ತಿಳಿಯಬಹುದು. 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವದು' ಎಂಬ ಬಸವಣ್ಣನವರ ವಚನವನ್ನಿಲ್ಲಿ ಸ್ಮರಿಸಬಹುದು. ಆ ಚಂದ್ರನೇ ಕುಮುದಿನೀಪ್ರಿಯನೆಂದು ಕವಿಸಮಯದಲ್ಲಿ ಪ್ರಸಿದ್ಧವಾಗಿದೆ.

> ನಲಿನೀಸೂರ್ಯಯೋಃ ಪ್ರೀತಿಃ ಕುಮುದಿನೀಂದುಯುಗಸ್ಯ ಚ ।
> ಸಮಾನರಾಗ ದಾಂಪತ್ಯಂ ಸೂಚಯೇತ್ ಕವಿಕಲ್ಪಿತಾ ॥[೫೪]

ಈ ಕವಿಸಮಯವನ್ನು ಉಪಯೋಗಿಸಿ ಶಿವಯೋಗಿ ಶಿವಾಚಾರ್ಯರು ಶಿವಯೋಗಿಯೆಂದು ಪ್ರಸಿದ್ಧನಾದ ಸಿದ್ಧರಾಮೇಶ್ವರನ ಸರಸ, ಸರಳ ವಾಣಿಯು ಶಿವಭಕ್ತಿಯೆಂಬ ಸುಧಾಸಾಗರವನ್ನು ಉಕ್ಕೇರಿಸುವ ಚಂದ್ರಿಕೆಯಾಗಿದ್ದು ಕುವಲಯ (ನೀಲಕಮಲ ಭೂಮಂಡಲ)ಕ್ಕೆ ಉತ್ಸವ(ಸಂತೋಷ)ವನ್ನುಂಟು ಮಾಡುತ್ತದೆ ಎಂಬುದನ್ನು ಬಹು ಸುಂದರವಾಗಿ ವರ್ಣಿಸಿದ್ದಾರೆ.

---

೫೩. ಕವಿಸಮಯ ಸಮೀಕ್ಷಾ: ಸ್ವರಮಂಗಲಾ ಜೈಪುರ ಡಿಸೆಂಬರ-೧೯೮೩

೫೪. ಅದೇ

ಶಿವಭಕ್ತಿ ಸುಧಾಸಿಂಧು ಜೃಂಭಣಾಮಲಚಂದ್ರಿಕಾ ।
ಭಾರತೀ ಯಸ್ಯ ವಿದಧೇ ಪ್ರಾಯಃ ಕುವಲಯೋತ್ಸವಮ್ ॥ ೫೫

ಕುವಲಯ ಪದಪ್ರಯೋಗದಲ್ಲಿಯ ಶ್ಲೇಷಾಲಂಕಾರದ ಸರಳ ಸುಂದರ ರೂಪವನ್ನು ಮೆಚ್ಚಬೇಕು. ಇದೇ ರೀತಿ ಸೋಮನಾಥಲಿಂಗದಿಂದ ಉದ್ಭವಿಸಿದ ರೇಣುಕಾಚಾರ್ಯರನ್ನು ಕರ್ತೃ ಹೀಗೆ ಸ್ತುತಿಸಿದ್ದಾನೆ.

"ಶಿವಾಗಮ ಸುಧಾಸಿಂಧು ಸಮುನ್ಮೇಷ ಸುಧಾಕರಂ । ೫೬

ವೀರ ಶಿವಾಚಾರ ಶಿಖಾರತ್ನವಾದ ಸಿದ್ಧನಾಥ ಶಿವಾಚಾರ್ಯನಿಗೆ ಶಿವಯೋಗಿ ಎಂಬ ಪುತ್ರರತ್ನ ಜನಿಸಿದ್ದನ್ನು ಸುಧಾಸಾಗರದಿಂದ ಸುಧಾಕರ (ಚಂದ್ರ) ಜನಿಸುವುದಕ್ಕೆ ಹೋಲಿಸುವಲ್ಲಿಯ ಉಪಮಾಲಂಕಾರ ಮತ್ತು ಕವಿಸಮಯದ ಸುಂದರ ಪ್ರಯೋಗವನ್ನು ಕಾಣುತ್ತೇವೆ.

'ಅಭವತ್ ಶಿವಯೋಗೀತಿ ಸಿಂಧೋರಿವ ಸುಧಾಕರಃ । ೫೭

ಕಟಾಕ್ಷವೆಂಬ ಚಂದ್ರನು ಜ್ಞಾನಸಾಗರವರ್ಧನವಾಗಿದ್ದಿತೆಂಬಲ್ಲಿ 'ಕಟಾಕ್ಷ ಚಂದ್ರಮಾ ಯಸ್ಯ ಜ್ಞಾನಸಾಗರ ವರ್ಧನಃ' ೫೮

ಜ್ಞಾನ ಚಂದ್ರನಿಂದ ಉದಯಿಸಿದ ಪರಮಾನಂದ ಚಂದ್ರಿಕೆ

'ಜ್ಞಾನಚಂದ್ರ ಸಮುದ್ಭೂತಾಂ ಪರಮಾನಂದ ಚಂದ್ರಿಕಾಮ್' ೫೯

ಎಂಬಲ್ಲಿ ಅತ್ಯಂತ ಜನಪ್ರಿಯವಾದ ಕವಿಸಮಯದ ಪ್ರಯೋಗವನ್ನು ಕಾಣುತ್ತೇವೆ.

ಸಂಸಾರ ತಾಪತ್ರಯದಿಂದ ಬೆಂದ ಭಕ್ತ ಶಿವನಿಗೆ ಶರಣಾಗುವನಲ್ಲದೇ ಇತರ ದೇವತೆಗಳಿಗೆ ಶರಣಾಗತವಾಗಲಾರನೆಂಬ ವಿಷಯವನ್ನು ತಿಳಿಸಲು ಚಕೋರ ಚಂದ್ರಿಕೆಯನ್ನು ಕುರಿತ ಕವಿಸಮಯವನ್ನು ಬಹು ಸುಂದರವಾಗಿ ಬಳಸಿಕೊಳ್ಳಲಾಗಿದೆ. ಏಕೆಂದರೆ ತನ್ನ ತೃಷೆಯನ್ನು ನೀಗಿಸಲು ಚಂದ್ರ ಸಮರ್ಥನಾಗಿರುವಂತೆ, ಇತರ ತಾರೆಗಳು ಸಮರ್ಥವಾಗಲಾರವು. ಅಂತೆಯೇ ಚಕೋರ ಪಕ್ಷಿ ಇತರ ತಾರೆಗಳನ್ನು ಕಣ್ಣೆತ್ತಿಯೂ ನೋಡಲಾರದು. ಹೀಗೆ ಶಿವಭಕ್ತಿ ಪಾರಮ್ಯದ ಪರಿಚಯವನ್ನು ಕಾವ್ಯಮಯವಾಗಿ ಮಾಡಿಕೊಡುವಲ್ಲಿ ಗ್ರಂಥಕರ್ತೃ ಸಮರ್ಥನಾಗಿದ್ದಾನೆ.

---

೫೫. ಸಿದ್ಧಾಂತ ಶಿಖಾಮಣಿ ೧-೧೪

೫೬. ಅದೇ ೪-೬

೫೭. ಸಿದ್ಧಾಂತ ಶಿಖಾಮಣಿ ೧-೨೦

೫೮. ಅದೇ ೧೫-೬

೫೯. ಅದೇ ೧೯-೨೪

ಸಂಸಾರಾರ್ತಃ ಶಿವಂ ಯಾಯಾತ್ ಬ್ರಹ್ಮಾದ್ಯೈಃ ಕಿಂ ಫಲಂ ಸುರೈಃ।
ಚಕೋರಃ ತೃಷಿತಃ ಪಶ್ಯೇತ್ ಚಂದ್ರಂ ಕಿಂ ತಾರಕಾ ಅಪಿ ॥[೬೦]

ಇಲ್ಲಿ ಚಂದ್ರಕಾಂತಮಣಿ ಹಾಗೂ ಸೂರ್ಯಕಾಂತಮಣಿಗಳು ಕ್ರಮವಾಗಿ ಚಂದ್ರ ಹಾಗೂ ಸೂರ್ಯರ ಕಿರಣಗಳಿಂದ ದ್ರವಿಸುವ ಕವಿಸಮಯವನ್ನು ಚೆನ್ನಾಗಿ ಬಳಸಿಕೊಳ್ಳಲಾಗಿದೆ. ಆತ್ಮನಲ್ಲಿ ಶಿವನಿರುವ ಆಧ್ಯಾತ್ಮಿಕ ವಿಷಯವನ್ನು ಈ ಕವಿಸಮಯದ ಸಹಾಯದಿಂದ ಬಹು ಸುಂದರವಾಗಿ ವಿವರಿಸುತ್ತಾನೆ:

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾ ಜಲಮ್।
ಬೀಜೇ ಯಥಾಂಕುರಃ ಸಿದ್ಧಸ್ತಥಾತ್ಮನಿ ಶಿವಃ ಸ್ಥಿತಃ ॥[೬೧]

ಗುರುವಿನ ಆಲೋಕನಮಾತ್ರದಿಂದಲೇ ಶಿಷ್ಯನಲ್ಲಿ ಬೋಧ ಉತ್ಪನ್ನವಾಗುತ್ತದೆ ಎಂಬ ದಾರ್ಶನಿಕ ಸತ್ಯವನ್ನು ಸೂರ್ಯೋದಯದಿಂದ ಸೂರ್ಯಕಾಂತ ಪ್ರಕಾಶಮಾನವಾಗುವ ಕವಿಸಮಯದಿಂದ ಸುಂದರವಾಗಿ ವರ್ಣಿಸಲಾಗಿದೆ.

ಸೂರ್ಯೋದಯಮಾತ್ರೇಣ ಸೂರ್ಯಕಾಂತಃ ಪ್ರಕಾಶತೇ ।
ಗುರೋರಾಲೋಕಮಾತ್ರೇಣ ಶಿಷ್ಯೋ ಬೋಧೇನ ಭಾಸತೇ ॥[೬೨]

ಸೂರ್ಯಕಾಂತಮಣಿಯಲ್ಲಿ ಗುಪ್ತ (Latent) ವಾಗಿರುವ ತೇಜಸ್ಸು ಸೂರ್ಯಕಿರಣಗಳಿಂದ ಹೊರಬೀಳುವಂತೆ ತಪಸ್ವಿಗಳಲ್ಲಿ ಗುಪ್ತವಾಗಿರುವ ತಪೋಬಲ ಬೇರೆಯವರ ಆಕ್ರಮಣದಿಂದ ಅಭಿವ್ಯಕ್ತವಾಗುವ ವಿಷಯವನ್ನು ಕಾಲಿದಾಸ ಬಹು ಸುಂದರವಾಗಿ ವರ್ಣಿಸುವುದನ್ನಿಲ್ಲಿ ಸ್ಮರಿಸಬಹುದು:

ಶಮಪ್ರಧಾನೇಷು ತಪೋಧನೇಷು
ಗೂಢಂ ಹಿ ದಾಹಾತ್ಮಕಮಸ್ತಿ ತೇಜಃ
ಸ್ಪರ್ಶಾನುಕೂಲಾ ಅಪಿ ಸೂರ್ಯಕಾಂತಾಃ
ತದನ್ಯ ತೇಜೋಭಿ ಭವಾದ್ ವಮಂತಿ ॥[೬೩]

ದ್ರೌಪದಿಯ ಮಾತನ್ನು ಭೀಮಸೇನನು ಕಹಿಯಾದ ಔಷಧಿಯ ಚಿಕ್ಕಮಾತ್ರೆಗೆ ಹೋಲಿಸುತ್ತಿದ್ದು ಶಾಸ್ತ್ರದಂತೆಯೇ ಅವಳ ನುಡಿಯೂ ಸಹ ಪರಿಣಾಮ ಸುಖಕರವಾಗಿದ್ದು ಪ್ರಾರಂಭದಲ್ಲಿ ಕಹಿಯಾಗಿರುವುವೆಂಬ ವಿಷಯವನ್ನು ಸೂಚಿಸುತ್ತಾನೆ:

---

೬೦. ಅದೇ ೧೨-೯
೬೧. ಅದೇ ೫-೩೫
೬೨. ಸಿದ್ಧಾಂತ ಶಿಖಾಮಣಿ ೫-೩೫
೬೩. ಅದೇ ೧೭-೬೩

ಪರಿಣಾಮಸುಖೇ ಗರೀಯಸಿ
ವ್ಯಥಕೇಸ್ಮಿನ್ ವಚಸಿ ಕ್ಷತೌಜಸಾಮ್ ।
ಅತಿವೀರ್ಯವತೀವ ಭೇಷಜೇ
ಬಹುರಲ್ಪೀಯಸಿ ದೃಶ್ಯತೇ ಗುಣಃ ॥೬೫

ಇದರಿಂದ ವ್ಯಕ್ತವಾಗುವುದೇನೆಂದರೆ ಬಲಹೀನರಾದವರಿಗೆ ಕಹಿಯಾದ ಔಷಧಿಯ ಬಲಿಷ್ಠವಾದ ಮಾತ್ರೆಯನ್ನು ಸಹಿಸುವ ಶಕ್ತಿಯಿಲ್ಲದೇ ಇದ್ದಾಗ, ಅದಕ್ಕೆ ಸಿಹಿ ಲೇಪನ (Sugarcoat) ಮಾಡಿಕೊಟ್ಟು ಕಾಯಿಲೆಯನ್ನು ದೂರ ಮಾಡುವಂತೆ ಕ್ಲಿಷ್ಟವಾದ ಶಾಸ್ತ್ರಾರ್ಥವನ್ನು ಸುಕುಮಾರಮತಿಗಳಿಗೆ ಸರಿಯಾಗಿ ಸುಲಭವಾಗಿ ತಿಳಿಸಲು ಕಾವ್ಯಲೇಪನ ಮಾಡುವುದನ್ನು, ಅದರ ಒಳ್ಳೆಯ ಪರಿಣಾಮವನ್ನು ಸಿದ್ಧಾಂತ ಶಿಖಾಮಣಿ ಮುಂತಾದ ಶಾಸ್ತ್ರಗ್ರಂಥಗಳಲ್ಲಿ ಕಾಣಬಹುದಾಗಿದೆ.

೬೪. ಶಾಕುಂತಲ ೨-೯

೬೫. ಭಾರವಿ : ಕಿರಾತಾರ್ಜುನೀಯ ೨-೪

ತ್ರಿಭುವನಮಲ್ಲ ಮಲ್ಲಿದೇವನ ಕಾಲದ ತುಂಬೊಳ್ಳಿ ಶಾಸನ [ಶಕ ೧೦೬೨]

● ಡಾ. ಶ್ರೀನಿವಾಸ ಪಾಡಿಗಾರ
● ಗಣಪತಿಗೌಡ

ತ್ರಿಭುವನಮಲ್ಲ ಮಲ್ಲಿದೇವನ ಗುಂಡಬಾಳದ ಶಾಸನವನ್ನೂ[1] ಹಳದೀಪುರ ಚಂಡೇಶ್ವರದ ಕಾಮದೇವನ ವೀರಗಲ್ಲುಶಾಸನವನ್ನೂ[2] ಈ ಹಿಂದೆ ಪ್ರಕಟಿಸಿದಾಗ ತುಂಬೊಳ್ಳಿಯ ಒಂದು ಶಾಸನವನ್ನು ಅಲ್ಲಲ್ಲಿ ಪುರಾವೆಯಾಗಿ ಬಳಸಿಕೊಂಡಿದ್ದೇವೆ. ಇದೀಗ ಆ ಶಾಸನದ ಪಾಠವನ್ನು ಅವಲೋಕನಗಳೊಂದಿಗೆ ಪ್ರಕಟಿಸುತ್ತಿದ್ದೇವೆ. ತುಂಬೊಳ್ಳಿ ಹೊನ್ನಾವರ ತಾಲೂಕಿನ (ಉತ್ತರ ಕನ್ನಡಜಿಲ್ಲೆ) ಒಂದು ಕಿರುಗ್ರಾಮ. ಹೊನ್ನಾವರದಿಂದ ಸುಮಾರು ೧೫ ಕಿ.ಮೀ. ದೂರದಲ್ಲಿದೆ. ಅಲ್ಲಿರುವ ವಿಷ್ಣು ದೇವಾಲಯದಲ್ಲಿ ಪ್ರಸ್ತುತ ಶಾಸನವಿದೆ. ೮೬ ಸಾಲುಗಳ ಈ ಶಾಸನ ಕ್ರಿ. ಶ. ೧೨ನೇ ಶತಮಾನದ ಕನ್ನಡ ಲಿಪಿಯಲ್ಲಿ ಸುಂದರವಾಗಿ ಶಿಲಾಫಲಕದ ಮೇಲೆ ಬರೆಯಲ್ಪಟ್ಟಿದೆ. ಫಲಕದ ಮೇಲ್ಭಾಗದಲ್ಲಿರುವ ಕೆತ್ತನೆಯಲ್ಲಿ ನಡುವೆ ನಿಂತ ವಿಷ್ಣು ಬಿಂಬವೂ ಮೇಲ್ಭಾಗದಲ್ಲಿ ಯೋಗಾಸನದಲ್ಲಿ ಕುಳಿತಿರುವ ಒಬ್ಬ ಸ್ತ್ರೀ,[3] ಹಾಗೂ ಬದಿಗಳಲ್ಲಿ ಕಾಲ್ಪನಿಕ ಪ್ರಾಣಿ ಮತ್ತು ಆಕಳು-ಕರುವಿನ ಶಿಲ್ಪಗಳಿವೆ. ೨ನೇ ಸಾಲಿನಿಂದ ಆರಂಭವಾಗುವ ಶ್ಲೋಕ ಹಾಗೂ ೮೬ನೇ ಸಾಲಿನ ಅಪೂರ್ಣ ವಾಕ್ಯವನ್ನು ಬಿಟ್ಟರೆ ಉಳಿದವು ಕನ್ನಡ ಭಾಷೆಯಲ್ಲಿ. ಹೆಚ್ಚಾಗಿ ಪದ್ಯರೂಪದಲ್ಲಿವೆ. ದಾನವಿವರವನ್ನೊಳಗೊಂಡ ಸಾಲುಗಳು ಗದ್ಯದಲ್ಲಿವೆ.

ಶಾಸನದಲ್ಲಿ ಉಲ್ಲಿಖಿತ ಅರಸ **ತ್ರಿಭುವನಮಲ್ಲ** ಮಲ್ಲಿದೇವ. **ಕಾಮದೇವನ ಪಿರಿಯರಸಿ ಕಾಳಲದೇವಿಯು** ಕನ್ನೆದಾನದಗ್ರಹಾರ **ತುಂಬನಳ್ಳಿಯಲ್ಲಿ** ಮಾಡಿಸಿದ **ವಿಷ್ಣುದೇವಾಲಯಕ್ಕೆ** ಬಿಟ್ಟ ದತ್ತಿಗಳ ವಿವರಗಳನ್ನೊದಗಿಸುವದು ಶಾಸನದ ವಿಷಯವಾಗಿದೆ. ಅದರಲ್ಲಿ ಉಲ್ಲಿಖಿತ ಕಾಲ ವಿವರ ಹೀಗಿದೆ : **ಶಕವರ್ಷ ೧೦೬೨, ರೌದ್ರ ಸಂವತ್ಸರ** ಪುಶ್ಯ ಶುದ್ಧ ೧೩, ಬೃಹವಾರ, ಉತ್ತರಾಯಣ **ಸಂಕ್ರಮಣ.** ಈ ವಿವರ ಕ್ರಿ.ಶ. ೧೧೪೦, ಡಿಸೆಂಬರ್ ೨೩ ಕ್ಕೆ ಸರಿಯಾಗುತ್ತದೆ. ವಾರದ ದಿನ ಗುರುವಾರವಾಗಿರದೆ ಸೋಮವಾರವಾಗಿರಬೇಕು.

ವಿಷಯ ಸಂಗ್ರಹ :

ಹೃಷಿಕೇಶ (ವಿಷ್ಣು) ಸ್ತುತಿಯಿಂದ ಆರಂಭವಾಗುವ ಈ ಶಾಸನ **ಶಿಶುಕಲಿ** ಪುರವನ್ನು "ಕೊಂಕಣೋತ್ತಮಂ"ವೆಂದು ಪರಿಚಯಿಸುತ್ತದೆ. ಅಲ್ಲಿ **ಚಂದ್ರ**ನೆಂಬ 'ಸೋಮವಂಶ'ದ ರಾಜನು ಉದಯಿಸಿದನು. ಅವನ ಮಡದಿ **ಸಾವಲದೇವಿ.** ಇವರ ಮಗ "ಗಣ್ಡರ ದಾವಣಿ" **ಕಾಮನು. ಆಳುಪ** ಅರಸನನ್ನು ಸೋಲಿಸಿದ ಕೀರ್ತಿ ಇವನದು. ಇವನು ಶ್ರೇಷ್ಠ ಶಿವಭಕ್ತನೂ ಅಹುದು. ಕುಷ್ಠರೋಗಿಯೊಬ್ಬನು ಸೌರಾಷ್ಟ್ರಕ್ಕೆ ಹೋದಾಗ "ಮದನಧ್ವಂಸಿ"ಯು(ಶಿವನು) ಹೇಳಿದಂತೆ ಕಾಮದೇವನು ಮಿಂದ ನೀರಿನಲ್ಲಿ ಮಿಂದಾಗ ಅವನ ರೋಗ ವಾಸಿಯಾಯಿತು! ಇವನ ಅಗ್ರಮಹಿಷಿ **ಕಾಳಲದೇವಿ;** ಸಕಳ ಸದ್ಗುಣಗಳೇ ಮೈವೆತ್ತ ಮಾನಿನಿ. ಇವರಿಬ್ಬರ ಮಗ ಮಲ್ಲಿ ದೇವ, ಮಗಳು **ಹೈವಲದೇವಿ,** ಇನ್ನೊಬ್ಬ ಮಗ **ಬೊಪ್ಪದೇವ.** ಹೈವಲದೇವಿಯ ಮಗಳು **ನಾಗಲದೇವಿ.** ನಾಗಲದೇವಿಯ ಮಗ **ಮಲ್ಲಿದೇವ,** ಅವನ ತಮ್ಮ **ಕುಮಾರ ತೈಲಹದೇವ.** ತ್ರಿಭುವನಮಲ್ಲ ಮಲ್ಲಿದೇವನು ಸ್ವಪೌರುಷದಿಂದ **ಹಾನು ಗಲ್ಲು, ಹಲಸಿಗೆ, ಹೈವೆ, ಸಾಂತಳಿಗೆ, ಕೊಂಕಣ ಸಪ್ತಕ, ಮಲೆ, ಬನವಾಸಿ** ಮುಂತಾದವನ್ನು ಜಯಿಸಿದ ಸಾಹಸಿ. ಶಾಸನ ಹೊರಟಾಗ ಹೈವೆ-೫೦೦, ಕೊಂಕಣ-೯೦೦, ಸಾನ್ತಳಿಗೆ-೧೦೦೦. ಬನವಸೆ-೧೨,೦೦೦ ಇವನ್ನು **ಸಿರಿಯೂರ ನೆಲೆವೀಡಿ** ನಿಂದ ಆಳುತ್ತಿದ್ದನು. ಪರಶುರಾಮನ ಸೃಷ್ಟಿಯಲ್ಲಿ (ಕೊಂಕಣ) ಸುರರಾಜನ ಅಮರಾವತಿಯನ್ನು ಅಣಕಿಸುವ ಪರಿ **ತುಂಬನಳ್ಳಿ** ಗ್ರಾಮದ್ದು. ಅಲ್ಲಿಯ ದ್ವಿಜರೆಲ್ಲ ವೇದ, ತರ್ಕ, ಆಗಮಾದಿಗಳಲ್ಲಿ ಬಲ್ಲಿದರು. **ಕಾಮನೃಪಾಳನ ಮಡದಿ ಕಾಳಲ ದೇವಿ** ಇಲ್ಲಿ ವಿಷ್ಣುಗೃಹವನ್ನು ಮಾಡಿಸಿದಳು. ತುಂಬವಳ್ಳಿ **ಕನ್ನೆದಾನದ ಅಗ್ರಹಾರ** ವಾಗಿತ್ತು. ಉಲ್ಲಿಖಿತ ಕಾಲದಂದು ವಿಷ್ಣುಗೃಹಕ್ಕೆ ದತ್ತಿಗಳು ಬಿಡಲ್ಪಟ್ಟವು. ಶಾಸನ ದಲ್ಲಿ ಈ ದತ್ತಿಗಳ ವಿವರಗಳಿವೆ. ಶಾಪಾಶಯದ ನಂತರವೂ ಕೆಲವು ದಾನ-ದತ್ತಿ ವಿವರಗಳಿದ್ದು ಶಾಸನದ ಆರಂಭ ಭಾಗದಲ್ಲಿ ಮುಂದುವರಿದಿವೆ.

ರಾಜಕೀಯ ವಿಷಯ :

ಗುಂಡಬಾಳದ ಜಿನಾಲಯದ ಶಾಸನವನ್ನು ಕುರಿತಾಗಿ ಬರೆದಾಗ ತುಂಬೊ-ಳ್ಳಿಯ ಶಾಸನವನ್ನೂ ಆಧರಿಸಿ ಅರಸರ ವಂಶಾವಳಿಯನ್ನು ನೀಡಿದ್ದೆವು.[೪] ನಮ್ಮ ಇತ್ತೀಚಿನ ಅಧ್ಯಯನಗಳಿಂದ ಅದರಲ್ಲಿ ಕೆಲವು ಮಾರ್ಪಾಡುಗಳು ಅವಶ್ಯವೆಂದು ಕಂಡುಕೊಂಡಿದ್ದೇವೆ.

ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಗುಂಡಬಾಳದ ಶಾಸನ, ಹಾಗೂ ಅದರಂತೆ, ತುಂಬೊಳ್ಳಿಯ ಪ್ರಸ್ತುತ ಶಾಸನ ಇವೆರಡೂ "ಕದಂಬ"

ವಂಶದ ದೊರೆಗಳದ್ದಲ್ಲವೆಂಬುದು.[೫] ಈವರೆಗೆ ಗಮನಿಸಲಾಗಿರುವ ಇವರ ಯಾವ ಶಾಸನಗಳಲ್ಲೂ ಇವರನ್ನು ಕದಂಬರೆಂದು ಕರೆದಿಲ್ಲ. ಮಾತ್ರವಲ್ಲ, ಬಳ್ಳಿಗಾವೆ (ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ)ಯಲ್ಲಿ ದೊರೆತಿರುವ **ಇಮ್ಮಡಿ ಕಾಮನ** ಶಾಸನದಿಂದ ನಿಜವಾಗಿ ಇವರ ವಂಶ **"ಪಾಂಡ್ಯವಂಶ"**ವೆಂಬುದು ಸ್ಪಷ್ಟವಿದೆ.[೬] ಆದ್ದರಿಂದ ಇವರನ್ನು **ಶಿಶುಕಲಿಯ ಪಾಂಡ್ಯ**ವಂಶಜರೆಂದು ನಾಮಕರಣ ಮಾಡಬೇಕಾಗುತ್ತದೆ.

'ಶಿಶುಕಲಿ' ಅಥವಾ 'ಶಿಶುಗಲಿ' ಎಂಬುದು ಗುಂಡಬಾಳದ ಪರ್ಯಾಯ ನಾಮವಿರಬೇಕೆಂದು ನಾವು ಸೂಚಿಸಿದ್ದೆವು. ಆದರೆ ಸಿದ್ದಾಪುರ ತಾಲೂಕಿನಲ್ಲಿ 'ಸಸಿಗುಳಿ' ಎಂಬ ಗ್ರಾಮವಿದೆಯೆಂದು ಇತ್ತೀಚೆಗೆ ನಮ್ಮ ಗಮನಕ್ಕೆ ಬಂದಿದೆ.[೭] ಇದೇ 'ಶಿಶುಕಲಿ'ಯಾಗಿರುವ ಸಾಧ್ಯತೆಯಿದೆ.

ಇನ್ನು ವಂಶಾವಳಿಯ ಕುರಿತು: ನಮ್ಮ ಚರ್ಚೆಯಲ್ಲಿ ಹೈವಲದೇವಿಯನ್ನು ಮೊದಲನೇ ಮಲ್ಲಿದೇವನ ರಾಣಿಯೆಂದು ತಪ್ಪಾಗಿ ಉಲ್ಲೇಖಿಸಿದ್ದೇವೆ. ನಿಜವಾಗಿ ಈಕೆ ಇಮ್ಮಡಿ ಕಾಮದೇವ-ಕಾಳಲದೇವಿ ಇವರ ಮಗಳು.

ಪ್ರಸ್ತುತ ತುಂಬೊಳ್ಳಿಯ ಶಾಸನ ಹಾಗೂ ಗುಂಡಬಾಳದ ಜೈನ ಶಾಸನಗಳ ಹೇಳಿಕೆಗಳಿಂದ ಬೊಪ್ಪದೇವನೂ ವಿಕ್ರಮತೈಲನೂ ಓರ್ವನೇ ವ್ಯಕ್ತಿಯೆಂಬುದು ಸ್ಪಷ್ಟವೇ ಇದೆ. ಹೈವಲದೇವಿಯ ಗಂಡನ ಹೆಸರು ಹಾಗೂ ಅವಳ ಮಗಳು ನಾಗಲದೇವಿಯ ಗಂಡನ ಹೆಸರು ನಮ್ಮ ಗಮನಕ್ಕೆ ಬಂದಿರುವ ಈ ವಂಶದ ಯಾವ ಶಾಸನಗಳಲ್ಲೂ ಉಕ್ತವಾಗಿಲ್ಲವೆಂಬುದು ಅಚ್ಚರಿಯ ವಿಷಯ. ಗುಂಡಬಾಳದ ಶಾಸನದಲ್ಲಿ ಇಮ್ಮಡಿ ಮಲ್ಲಿದೇವನನ್ನು ವಿಕ್ರಮ ತೈಲನ ಮೊಮ್ಮಗನೆಂದು ಹೇಳಿರುವದರಿಂದ ಬೊಪ್ಪದೇವ/ವಿಕ್ರಮ ತೈಲನ ಮಗನನ್ನೆ (ಅನಾಮಧೇಯ) ಹೈವಲದೇವಿಯ ಮಗಳು ನಾಗಲದೇವಿ ವರಿಸಿದ್ದಳೆಂದು ಹೇಳಬೇಕಾಗುತ್ತದೆ. ಅಂತಾಗಿ ಶಿಶುಕಲಿಯ ಪಾಂಡ್ಯರ ವಂಶಾವಳಿ ಈ ಕೆಳಗಿನಂತಾಗುತ್ತದೆ.

ಮೊದಲನೇ ಚಂದ್ರ
ರಾಣಿ ಕಮ್ಮಲದೇವಿ

↓

ಮೊದಲನೇ ಕಾಮ
ರಾಣಿ ಭಾಗಲದೇವಿ

↓

ಇಮ್ಮಡಿ ಚಂದ್ರ
ರಾಣಿ ಸಾವಲದೇವಿ
↓
ಇಮ್ಮಡಿ ಕಾಮ
ರಾಣಿ ಕಾಳಲದೇವಿ
↓
ಮೊದಲನೇ ಮಲ್ಲಿದೇವ | ಹೈವಲದೇವಿ | ಬೊಪ್ಪದೇವ (ವಿಕ್ರಮ ತೈಲ)

ಹೈವಲದೇವಿ → ನಾಗಲದೇವಿ (+ ಅನಾಮಧೇಯ ಮಗ ?) ← ಬೊಪ್ಪದೇವ
↓
ತ್ರಿಭುವನ ಮಲ್ಲ ಇಮ್ಮಡಿ ಮಲ್ಲಿದೇವ | ಕುಮಾರ ತೈಲ

ಗುಂಡಬಾಳದ ಶಾಸನದಲ್ಲಿ ಹೇಳಿರುವ ಮೊದಲನೇ ಮಲ್ಲಿದೇವನ ಸೈನಿಕ ಸಾಧನೆಯನ್ನು ತುಂಬೊಳ್ಳಿಯ ಶಾಸನದಲ್ಲಿ ಇಮ್ಮಡಿ ಮಲ್ಲಿದೇವನ ಪಾಲಿಗೆ ನೀಡಲಾಗಿದೆ. ಸಿರಿಯೂರು ಇವನ ರಾಜಧಾನಿಯಾಗಿತ್ತು.[೮]

ಇತರ ವಿಷಯಗಳು :

ತುಂಬವಳ್ಳಿಯನ್ನು ಕನ್ನೆದಾನದಗ್ರಹಾರವಾಗಿ ಬಹುಶಃ ಕಾಮದೇವನ ಅಗ್ರ ಮಹಿಷಿ ಕಾಳಲದೇವಿಯೇ ಸ್ಥಾಪಿಸಿರಬೇಕು. ಅಲ್ಲಿಯ ವಿಷ್ಣುದೇವಾಲಯವನ್ನು ಆಕೆ ಮಾಡಿಸಿದಳೆಂದು ಶಾಸನ ತಿಳಿಸುತ್ತದೆ. ಈಗ ಇಲ್ಲಿರುವ ವಿಷ್ಣುದೇವಾಲಯದ ವಿಷ್ಣುಮೂರ್ತಿ ಅಪರೂಪ ಶೈಲಿಯ ವಿಶಿಷ್ಟ, ಸುಂದರ ಶಿಲ್ಪವಾಗಿದೆ. ಕಲ್ಯಾಣ ಚಾಲುಕ್ಯರ ನಿರ್ದಿಷ್ಟ 'ಮಾರ್ಗ' ಶೈಲಿಯಿಂದ ಇದು ಭಿನ್ನವಾಗಿರುವದು ಗಮನಾರ್ಹ.

ಸಾಹಿತ್ತಿಕದೃಷ್ಟಿಯಿಂದ ಗುಂಡಬಾಳದ ಶಾಸನದ ಕುರಿತಾಗಿ ಹೇಳಲಾಗಿರುವ ವಿಷಯಗಳು ಈ ಶಾಸನಕ್ಕಾದರೂ ಒಪ್ಪುತ್ತವೆ. ಇವೆರಡೂ ಶಾಸನಗಳಲ್ಲಿ ಕೆಲವು ಪದ್ಯಗಳು ಲಭ್ಯವಿರುವದರಿಂದ ಅವುಗಳ ರಚನಾಕಾರನು ಒಬ್ಬನೇ ಎಂಬುದು

ಪ್ರಕಟವಾಗುತ್ತದೆ. ಗುಂಡಬಾಳದ ಶಾಸನದಿಂದ ಈತ ಸಂಧಿವಿಗ್ರಹಿಯಾಗಿದ್ದ ಪದ್ಮಣರಸನೆಂದು ತಿಳಿಯುತ್ತದೆ.[೯]

ಇನ್ನು ದತ್ತಿವಿವರಗಳನ್ನು ಸಂಗ್ರಹವಾಗಿ ಹೀಗೆ ಇಡಬಹುದು :

ಅ) ಹಲ್ಲಿನಿಯ ತೆಱೆಗದ್ಯಾಣ ೮ ರಲ್ಲಿ—

ಶ್ರೀಗಂಧಕ್ಕೆ	೧ ಗದ್ಯಾಣ
ಚೈತ್ರ-ಪವಿತ್ರಕ್ಕೆ	೧ ಗದ್ಯಾಣ
ಅಯನಕ್ಕೆ	೫ ಪಣ
ಮಠವಿನ ಮಾಣಿಗೆ	೩ ಗದ್ಯಾಣ
ಹಱಿಯುವಂಗೆ	೧ ಗದ್ಯಾಣ

ಆ) ತುಂಬವಳ್ಳಿಯಿಂದ (ಆಯುದಲ್ಲಿ ?)—

ನಂದಾವೆಳಗಿಗೆ	೨ ಗದ್ಯಾಣ

ಇ) ಅಳ್ಳಿವಕ್ಕಲಯ ತೋಟದ ಭೂಮಿಯ ತೆಱೆ—

ಎರಡು ತಿಂಗಳ ಭಾರತಕ್ಕೆ ೧ ಗದ್ಯಾಣ

ಈ) ಹಲ್ಲಿನಿಯ ಕಾರಗದ್ದೆಯಿಂದ ೫ ಮೂಡೆ
ತೆಂಗಿನ ಖಣ್ಡದ ಗದ್ದೆಯಿಂದ ೪ ಮೂಡೆ | ಚೈತ್ರಕ್ಕೆ
೩೦ ಮೂಡೆ— ಎರಡು ಹೊತ್ತಿನ ನೈವೇದ್ಯಕ್ಕೆ
೬ ಮೂಡೆ— ಹಲ್ಲಿನಿಯ ಹಱಿಯುವಂಗೆ

ಉ) ಹಳವೂರ ನಾಗನಲಿಯ ಕಾರಗದ್ದೆಯಿಂದ—
೩ ಮೂಡೆ— ಶಾಂತಿಯ ಮಾಣಿಗೆ.

ಊ) ಅರಮನೆಯ ಕೆಳಗಣ ಮಕ್ಕಿಯಲ್ಲಿಯ ಹಲಸುಸಹಿತ
೯ ಮೂಡೆ— ಅಗ್ರಕ್ಕೆ.

ಋ) ಶಾಪಾಶಯದ ನಂತರ, ಶಾಸನಾರಂಭ ಭಾಗದಲ್ಲಿ :

೧. ಹಿರಿಯರಸಿ (**ಕಾಳಲದೇವಿ**) ಕರಣದ ಸೇನಬೋವಂಗೆ ಕೊಟ್ಟದ್ದು— ಲೊ (ಕ್ಕ ?) ಗ(ದ್ಯಾಣ ?) ೧; ಮಕ್ಕಿಯ ಮೂಡೆ.
೨. ಮಕ್ಕಿಯ ಭಾಗದ ಈಶ್ವರನ ಕಾರಗದ್ದೆ ೫ ಮೂಡೆ.
೩. ಆನೆಯ ಮೆಲುತಿ ಸೆಟ್ಟಿ ೩ ತಿಂಗಳ ನೈವೇದ್ಯಕ್ಕಾಗಿ ೪ ಮೂಡೆ ಭತ್ತವನ್ನು ಪಡೆಯಲು ಕೊಟ್ಟದ್ದು ೪ ಗದ್ಯಾಣ.

೪. **ಹೊಸವೂರ** ಮುದ್ದುವನ ತೆಱ ಆದಾಯ (?)— ೧ ತಿಂಗಳ ನಂದಾದೀವಿಗೆ ನೈವೇದ್ಯಗಳಿಗಾಗಿ. ಇದನ್ನು ಸಲ್ಲಿಸದಿದ್ದರೆ ೫ ಗದ್ಯಾಣ (ದಂಡ ?)

ಈ ಭಾಗದಲ್ಲಿ ಉಲ್ಲಿಖಿತ ಸ್ಥಳಗಳಲ್ಲಿ **ತುಂಬವಳ್ಳಿ** ಈಗಿನ ತುಂಬೊಳ್ಳಿ ಎಂಬುದು ಸ್ಪಷ್ಟವಿದೆ. **ಅಳ್ಳನಕ್ಕಿ** ಬಹುಶಃ ತುಂಬೊಳ್ಳಿಯ ಸಮೀಪದ ಅಳ್ಳಂಕಿ-ಯಾಗಿರಬೇಕು. ಹಳವೂರು, ಹೊಸವೂರುಗಳು ಯಾವವೆಂದು ಸ್ಪಷ್ಟವಾಗಿಲ್ಲ. **ಅರಮನೆಯ** ಉಲ್ಲೇಖ ಕುತೂಹಲಕಾರಿಯಾಗಿದೆ. **ಹಲ್ಲಿನಿಯನ್ನು** ಗುರುತಿಸುವ-ದಾಗಿಲ್ಲ.

ಶಾಸನದ ಲಿಪಿಕಾರ **ಲೊಕ್ಕುಂಡಿಯ** (=ಲಕ್ಕುಂಡಿ ?) **ಮದಿಗನೆಂದು** ತಿಳಿಯುತ್ತದೆ.

ಶಾಸನದ ಪಾಠ[೧೦]

೧. ★ ಹಿರಿಯರಸಿಯಕ್ಕರಣ ಸೇನಬೋವಗೆ ಲೊಗ ೧ ಮಕ್ಕಿ ಮೂಡೆಯುಂ ಕೈ ಮೇರೆಯಾಗಿ ಕೊಟ್ಟರು [।*][೧೧]

೨. ★ ಸರ್ವಲೋಕೇಶ ದೇವೇಶ ರಿಶಿಕೇಶ ನಮೋನಮಃ [।*] ಸಹಸ್ರಶಿರಸೇ ತುಭ್ಯಂ ಸಹಸ್ರಾಕ್ಷೇ ನಮೋಸ್ತುತೇ॥

೩. ಮಕ್ಕಿಯ ಭಾಗದೀಶ್ವರನ ಕಾರಗದ್ದೆ ಮೂಡೆಯುಯ್ದಾನೆಯ ಮೇಲು[ತಿ]ಸೆಟ್ಟಿ ೩ ತಿಂಗಳ ನಿವೇದ್ಯಕ್ಕೆ ನಾಲ್ಕು

೪. ಮೂಡೆ ಭತ್ತಮುಂ ತಾಮಾಡಿಕ್ಕುವನ್ತಾಗಿ ಕೊಟ್ಟ ಗದ್ಯಾಣ ೪ ಕ್ಕಾ ಭತ್ತಮ ನಿಕ್ಕದಿದ್ದರ್ಡಾಗದ್ದೆ ಯಾ.

೫. .॥ ಹೊಸವೂರ ಮದ್ದುವನ [ತೆ] ಱಾದಾಯ [ಬಿಡಬೆಮಾಗ]·· ಲೊಂದು ತಿಂಗಳ ನಂದಾವೆಳಗು ನಿವೇದ್ಯಮುಂ ಸ-

೬. ಲಿಸುವರಲ್ಲದಿರ್ದ್ದಡೆಯ್ದು ಗದ್ಯಾಣ ಪೊನ್ನ ಕೊಂಡು ಬಿಡುವುದು॥
★ ಲೊಕ್ಕುಂಡಿಯ ಮದಿಗನ ಲಿಖಿತ ಮಂಗಳ ಮಹಾ [॥]

೭. ★ ಶ್ರೀಗೆ ನಿವಾಸಮುಂ ಭುವನಮುಂ ಪಡೆವಂದಜನಿಲ್ಲಿ ಮುಂನಮುದ್ಯೋಗಿಸಿ ಬಯ್ತನಿಲ್ಲಿಯೆ ಪುನಃ ಪ್ರಸವಂ ಮ-

೮. ದನಂಗದಾಯ್ತು ಕಾನ್ತಾಗಣಕೀ ಕರೇಕ್ಷಣ ಸುಧಾರಸವೃಷ್ಟಿಯಿನೆಂಬ ಪೆಂಪ ನಾನ್ತಾಗಳುವೊಪ್ಪುಗುಂ [ಶಿ]

೯. ಶಿಶುಕಲಿ ಕ್ಷಿತಿಗಗ್ಗದ ಕೊಂಕಣೋತ್ತಮುಂ॥ ಆ ಪುರದೊಳು ಧರಾಧಿಪತಿ ಚಂದ್ರ ಮಹೀಪತಿಯೆಂ–

೧೦. ಬನುಜ್ವಳ ಶ್ರೀಪದ ಸೋಮವಂಶ ಸುರಭೂಮಿರುಹಂ ಬುಧರಾಜ ಸಂಕುಳಾರೋಪಿತ ಸಂಕುಳಂ ಸ–

೧೧. ಕಳ ರಾಜತಿರೀಟ ನಿಘೃಷ್ಟ ಪಾದನಾರೂಪನ ಕಾನ್ತೆ ಪುಣ್ಯವತಿ ಸಾವಲದೇವಿಯೆನಿಪ್ಪಳೊಪ್ಪು–

೧೨. ವಳು ॥ ಆ ನೃಪವಂಶ ಚಂದ್ರಮನ ಕೂರ್ಪ್ಪ ಮಗಂ ಬಹುಶಸ್ತ್ರ–ಶಾಸ್ತ್ರವಿದ್ಯಾ–

೧೩. ನಿಳಯಂ ವಿವೇಕನಿಳಯಂ ಸುಯಶೋನಿಳಯಂ ಪ್ರವೃದ್ಧಲಕ್ಷ್ಮೀನಿಳಯಂ ಬುಧೋ–

೧೪. ತ್ಪಳ ನಿಕಾಯ ಕಳಾನಿಧಿ ಧೈರ್ಯ್ಯವಾರ್ಯ್ಯತೇಜೋನಿಧಿ ಸದ್ಗುಣಾಂಬುನಿಧಿ ಗಣ್ಡರ ದಾವ–

೧೫. ಣಿ ಕಾಮಭೂಭುಜಂ ॥ ಒಱಿಯುಂ ಕಟ್ಟಿದನಿಕ್ಕಿದಂ ನಿಗಳಮಂ ಚಜ್ಗಿಗ್ಗಳ್ವ ಭೂಪಂಗೆ ನಾಡಱಿಯಲಾ–

೧೬. ಳ್ವರಾ ದೇವನಲ್ಲಿಗೆ ಕಳಂ ಬೆಳ್ದಿಯ್ದ ಬೂತ[ಜ್ಗ] ಪಱಂನೆಱಿದಾತಂ ಬಳಿಕಂಜಿ ಬಾರದಿರೆ ಗೆಲ್ಲಂ ಗೊಣ್ಡ ಗು[ರ್ವ್ವ]-

೧೭. [ಪ್ಪಿ?]ನಂ ಮೆಱೆದಂ ವೀರದ ಚಾಗದೆಳ್ತರಳ ಪೆಂಪಂ ಕಾಮ ಭೂಪಾಳಕಂ ॥ ಚಣ್ಡಭುಜಾಸಿದಣ್ಡವರಿ ಮು–

೧೮. ಣ್ಡಳಿಕರ್ಕ್ಕಳ ತೊರ್ಕ್ಕವೆತ್ತ ಗೋವಣ್ಡಳ ವಾಹವಾರಣ[ಮೆ] ಗೋದಣಿ ವೈರಿಗಳೆಲ್ವಗುರ್ಗ್ಗಂಟ ಮುನ್ನಣ್ಣಿ–

೧೯. ತಮಪ್ಪ ಪೆನ್ನರದ ದಾವಣಿಯೊಳ್ಸಲೆ ತಂದು ಕಟ್ಟುವಂ ಚಣ್ಡಣ ಭೀತರಂ ನೆಗರ್ದ್ದ ಗಣ್ಡರದಾವಣಿ ಕಾಮರ್ಭ–

೨೦. ಭೂಭುಜಂ ॥ ಇದು ಚಿತ್ರಂ ಧರೆಗಲ್ತು ಕುಷ್ಠಿಯ ನರಂ ಸೌರಾಷ್ಟ್ರಮಂ ಪೊಕ್ಕಡಾ ಮದನಧ್ವಂಸಿ–

೨೧. ಯ ಪೇಳೆ ಬನ್ದು ನೆಗರ್ದ್ದ ಭೂಪೇಂದ್ರನ ಸ್ನಾನಸಂಪದ ಪುಣ್ಯೋದಕ ಶೇಚ-ದಿಂದಮವನುಂ ಸೌವ–

೨೨. ರ್ಣ್ಣಮಂ ಕೂಡೆ ತಾಳ್ದಿದನೆಂದಂದೆ ಕಲಿಪ್ರಭೂತರಳವೆ ಶ್ರೀಕಾಮಭೂಪಾ–ಳಕಂ ॥ ಆ ನರಪಾ–

೨೩. ಳನಗ್ರಮಹಿಶೀ ವಧು ಕಾಳಲದೇವಿಯಾ ಧರಿತ್ರೀನುತೆಯುಂ ಜಗದ್ವಿದಿತ ಜಾನಕಿಯುಂ ನವದೇವಸಿನ್ದು–

೨೪. ವಂ ಮಾನವಲೋಕದೊಳ್ಸಕಳ ಸದ್ಗುಣಸಾರಸಮೂಹ ಪಿಣ್ಡಮಂ ಮಾನಿನಿ–ಯಾಗಿ ತಂದು ಬಿದಿಮಾಡಿ–

೨೫. ದ ಲಕ್ಷ್ಮಿಯನಾರೊ ಬಣ್ಣಿಪರು ॥ ಶರಣಾಯಾತ ನೃಪಾಳ ವಜ್ರಕವಚಂ ಪ್ರೋತ್ತುಂಗ ವೈರೀಭ ದುರ್ದ್ಧರ ದು–

೨೬. ಸ್ಸಾಧ್ಯ ಮದಪ್ರಭಂಜನ ಮೃಗೇಂದ್ರಂ ಮಲ್ಲಿದೇವಂ ನಿಜೋದರದೊಳು
ಕಳ್ಪಮಹೀಜದನ್ತೊಗೆದನಂ-
೨೭. ದಂದಾರೊ ಪೇಳು ಬಣ್ನಿಪನ್ನಿರ್ರುತಂ ಕಾಳಲದೇವಿಯುಂ ಪ್ರಚುರ
ಪುಣ್ಯೋತ್ತುಂಗೆಯುಂ ಗಂಗೆಯುಂ ॥ ರತಿರೂ-
೨೮. ಪಿನೊಳೆಸೆವಾ ಭಾರತಿ ಚತುರತೆಯಿಂದವೆನಿಪ ಹೈವಲದೇವಿ ಕ್ಷಿತಿನುತೆ ನಂದನೆ
ತನಗೆನೆ ಸತತಂ
೨೯. ಸರಿಯಾರೊ ಕಾಮನೃಪಕಾಮಿನಿಯೊಳು ॥ ಆ ನುತ ಕಾಳಲದೇವಿಗೆ ಭೂತನು
ನೆನಿಸಿದ್ದರ್ ಪುಟ್ಟಿ-
೩೦. ದಂ ನೃಪಧೀರಂ ದಾನಸುರಭೂಜನರ್ತ್ಥಿ ನಿಧಾನಂ ಶ್ರೀ ಬೊಪ್ಪದೇವನದಟರ
ದೇವಂ॥ ಅರಿಭೂಪಾಳ ಶಿರ-
೩೧. ಸ್ಸರೋಜವನವೇದಣ್ಡಂ ಪ್ರಮತ್ತಾಹಿತ[ದ್ವಿ]ರದಾಲಿಂಗನ ದೋಹಳಾತ್ಮಕರ
ಖಳ್ಗಂ ವೀರವಿದ್ಯು
೩೨. ಡ್ನಲಪೋತ್ಕರ ಲಕ್ಷ್ಮೀಪತಿ ಬೊಪ್ಪದೇವನನುಜಂ ತಾನೆಂದೊಡಿಂ ಪೆಂಪಿನಿಂ
ದೊರೆಯಾರು ಹೈ-
೩೩. ವಲದೇವಿಗೀ ಭುವನದೊಳು ವಿಖ್ಯಾತೆಯನ್ನೂರ್ತೆಯರು ॥ ಆ ನೃಪಬಾಳಿಕಾ
ಪ್ರಿಯಂ-
೩೪. ತನೂಭವೆ ನಾಗಲದೇವಿ ರಾಜಚಂದ್ರಾನತ ಪಾದೆ ಹೇಮ ಕದಳೀ ಸದೃಶೋರು
ಮೃಗೇಂದ್ರ-
೩೫. ಮಧ್ಯೆ ಲಕ್ಷ್ಮೀನಿಳಯೈಕ ಕುಂಭಕುಚೆ ಕಂಬುವಿಳಾಸ ವಿಭಾಸಿಕಣ್ಠೆ ಚಂದ್ರಾನನೆ
ಕೈರವಾಕ್ಷಿ ಕುಜಿ-
೩೬. [ಳಾ*]ಳಕಿಯಾ ಸತಿಯಾರೊಳಂ ಮಿಗಿಲು ॥ ಆ ಗುಣವತಿಯ ತನೂಜಂ
ವಾಗೀಶ್ವರ ವಿಬುಧ ವಾ-
೩೭. ಕ್ಸುಧಾವರ್ದ್ಧಿತ ವಿದ್ಯಾಗುಣ ಕಳ್ಪಮಹೀಜ ಶ್ರೀಗಧಿಪತಿಯೆನಿಪ ಮಲ್ಲಿದೇವ
ಕುಮಾರಂ ॥
೩೮. ಚತುರತೆಗಿಂದು ಕಣ್ಪೊಳವಿಯಾದುದು ಕೀರ್ತ್ತಿಗೆ ಕಾನ್ತಿಯೇಱಿತುಂನತಿಕೆಗೆ
ಕೊಬ್ಬುರ್ ಸಂಗ-
೩೯. ಡಿಸಿತಾನ್ಯಗೆ ತೇಜವೊಡರ್ಚ್ಚಿತೆಯ್ದೆ ಮಾನ್ಯತೆಗಧಿಕತ್ವಮಾಯ್ತು ವಿನಯಕ್ಕೆ
ನಯಂ ತೊ-
೪೦. ಡಗಿತ್ತು ಸದ್ಗುಣ ಪ್ರತತಿಗೆ ಹೆರ್ಮ್ಮೆ ಹೆರ್ಚ್ಚಿದುದು ಮಲ್ಲ ನೃಪಾಳನ
ಚಾರು ವೃ-

೪೧. ತ್ರಿಯಿ[ಂ] ॥ ಆತನ ತಮ್ಮಂ ವಿಮಳಖ್ಯಾತ ಪ್ರಣುತಂ ಕುಮಾರ ತೈಲಹ ದೇವಂ ನೀತಿಗುಣ-

೪೨. ರತ್ನನಿಳಯುಂ ಭೂತಳ ಬುಧವಂದಿಬೃಂದ ಕಳ್ಪಮಹೀಜಂ ॥ ಇನ್ತೆನಿಸಿದ ಸಕಳಾ-

೪೩. ನ್ವಯ ಸಂತತಿ ಗಜಯೂಥಮೊಳಾಗಜಾಧಿಪನೆನಿಪ ಭ್ರಾನ್ತೇನೊ ವೀರಲಕ್ಷ್ಮೀ ಕಾನ್ತಂ ನಿ-

೪೪. ಗಳಂಕಮಲ್ಲ ಮಲ್ಲನೃಪಾಳಂ ॥ ಚಲವೆ ವಿನಮ್ರರಾಗದ ಮಹೀಪರ ಬೇಗ್ಗ್ರಳನೆಯ್ದೆ

೪೫. ಕಿತ್ತುರ್ತ ತತ್ಕುಲಧನಮೆಲ್ಲಮುಂ ಕವರ್ದ್ದುಕೊಣ್ಡು ನಿಜಾಸಿಯಿನೊತ್ತಿ ಹಾನುಗಲ್ಲು ಹಲಸಿ-

೪೬. ಗೆ ಹಯ್ವೆ ಸಾನ್ತಳಿಗೆ ಕೊಂಕಣಸಪ್ತಕವಬ್ಧಿವಿಂಕ್ಕ ಬಲ್ಕಲೆ ಬನವಾಸೆಯೆಂಬಿ ವನಂಪಾರ್ಜ್ಜಿ-

೪೭. ಸಿದಂ ಕಲಿಮಲ್ಲಭೂಭುಜಂ ॥ ಅಧಿಕಂ ಬಲ್ಲಾಳೆನೆಂದ್ವಬ್ಬರಿಸಿ ನಿಜಭುಜಾ ಗರ್ವ್ವಮುಂ ನಚ್ಚಿ ನಾನಾ ವಿಧ-

೪೮. ದಿಂದಂ ಮಲ್ಲಿದೇವಂಗಧಿರದಿಧಿರ ನಾನಾಂಪೆನೆಂಬಂಗೆ ಶೂಲಾಯುಧಮುಂಟ್ಕೇ ಖಳ್ಗಮುಂ-

೪೯. ಟೇ ನೊಸಲೊಳಿಸೆವ ಕಣ್ಣುಂಟೆ ಖಟ್ವಾಂಗಮುಂಟೇ ವಿಧುರೇಖಾಳಂಕೃತ ಭ್ರಾಜಿತ ವಿಕಟ ಜ-

೫೦. ಟಾಜೂಟಿಕಾಜೀರಮುಂಟೇ ॥ ★ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮ-

೫೧. ಣ್ಡಳೇಶ್ವರಂ ಬನವಾಸಿಪುರವರಾಧೀಶ್ವರಂ ಜಯನ್ತಿ ಮಧುಕೇಶ್ವರಲಬ್ಧವರ ಪ್ರಸಾದಂ

೫೨. ಮೃಗಮದಾಮೋದಂ ಶ್ರೀ ಗೋಕರ್ಣ್ನ ಮಹಾಬಳದೇವ ಪಾದಾರಾಧಕಂ ಪರಬಳ ಸಾಧಕಂ

೫೩. ಗಣ್ಡಂಕ ಚಕ್ರವರ್ತ್ತಿ ಮಾರ್ಕ್ಕೊಳ್ವರಗಣ್ಡಂ ಶ್ರೀ ಮತೃಭುವನಮಲ್ಲ ಮಲ್ಲಿದೇವರಸರು

೫೪. ಹಯ್ವೆಯಯ್ನೂರುಮಂ ಕೊಂಕಣವೊಂಭಯ್ನೂರುಮಂ ಸಾನ್ತಳಿಗೆ-ಸಾಯಿರಮುಂ-

೫೫. ಮಂ ಬನವಸೆಪನ್ನಿರ್ಚ್ಛಾಸಿರಮುಮಂ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳನದಿಂ ಸುಕಥಾ-

೫೬. ವಿನೋದದಿಂ ಸಿರಿಯೂರ ನೆಲೆವೀಡಿನೊಳು ರಾಜ್ಯಂಗೆಯ್ಯುತ್ತಿರ್ಪ್ಪಲ್ಲಿ ॥ ಪತಿ ಕಾಮಕ್ಷಿತಿಪಾ-

೫೭. ಳಕ ಪ್ರಿಯಸುತಂ ಶ್ರೀ ಮಲ್ಲಭೂಪಾಳಕಂ ನುತ ವಿದ್ಯ್ಯಡ್ಬ್ಯಯನಾನ್ಯ- ಪಾಳನನು-

೫೮. ಜಂ ಶ್ರೀಬೊಪ್ಪದೇವಂ ಬುಧಸ್ತುತೆಯೀ ಹೈವಲದೇವಿ ನಂದನೆಯೆನಿಪ್ಪೀ ಪೆಂಪನಾಳ್ದೀ ಜಗಂನು-

೫೯. ತೆಯುಂ ಕಾಳಲದೇವಿಯುಂ ಪೊಗಳಲಿನ್ನಾ ಬಮ್ಮನುಂ ಬಲ್ಲನೇ ॥ ★ ಸ್ವಸ್ತಿ ಸಮಸ್ತ ಸೌ-

೬೦. ಭಾಗ್ಯ ಭೋಗಭಾಗಿನಿ ರೂಪಕಾತ್ಯಾಯನಿ ಪರೋಪಕಾರ ಬೀಜಾಂಕುರ ಜನ್ಮವಸುನ್ಧರೆ ನಿ-

೬೧. ರತಿಶಯ ಕಂಬುಕನ್ಧರೆ ಪರಿವಾರಕಳ್ಪವಲ್ಲರಿ ನಿಜ ವೀತರಣ ಯಶೋವಲ್ಲರಿ ಗಣ್ಡಂಕ

೬೨. ಚಕ್ರವರ್ತ್ತಿ ಶ್ರೀಮತ್ರಿಭುವನಮಲ್ಲ ಕಾಮಭೂಃಭುಜಃದ್ಧಾರ್ಙಂಗಿ ನಿರುಪಮ ಯಶೋಭಾತನ್ವಂ-

೬೩. ಗಿ ಪತಿಬ್ರತಾಗುಣ ಪವಿತ್ರಿತಗಾತ್ರೆ ಗೋತ್ರಪವಿತ್ರೆ ಅಂಬಿಕಾಚರಣ ಸರಸಿರುಹ ಮಧು-

೬೪. ಕರಿ ಬಿರುದ ಮಣ್ಣಳಿಕ ತೊಣ್ಡಂ ಬಡಿವನ ಮನೋಹರಿ ಶರಣಾಗತವಜ್ರ ಪಂಜರೋನ್ನತ ಭುಜವಿಜಯ ಶ್ರೀಕಾ-

೬೫. ನ್ತೆ ಅಳಿನಿಳಕು[ಟಿ]ಳಕುನ್ತಳಲತಾನ್ತೆ ಸತ್ಯವಾಕ್ಯಾಳಂಕಾರ ವಾಗ್ದೇವಿ ಯಿತ್ಯಖಿಳನಾಮಾವಳಿ ವಿ-

೬೬. ರಾಜಿತೆಯರುಮಪ್ಪ ಶ್ರೀಮತ್ಪಿರಿಯರಸಿ ಕಾಳಲದೇವಿಯರು॥ ಪರಶುಧರ ಶೃಷ್ಟಿಯೊ-

೬೭. ಳಗಿದು ಕರಮೆಸೆ[ದೊ]ಪ್ಪುವುದು ಚೆಲ್ವನಾಳ್ದುನ್ನತಿಯಿಂ ಸುರರಾಜನಪುರ ವರಮುಂ ಧರೆಯೊಳು

೬೮. ತೆಗಳುವುದು ತುಂಬವಳ್ಳಿ ಗ್ರಾಮ ॥ ಅಲ್ಲಿಯುದಿಯಿಸಿದ ಸದ್ವಿಜರೆಲ್ಲಂ ವೇದಾದಿ ತರ್ಕ್ಕಶಾಸ್ತ್ರಾರ್ತ್ಥ

೬೯. ವಿದರ್ಬ್ಬಲ್ಲರತಿಕುಶಳರಾಗಮಂದಲ್ಲಿಯೆ ಸ[ಪ್ರೌ]ಢರೆನಿಪರಾದ್ವಿಜಮ(ಮು) ಖ್ಯರು॥ ಕಾಮನೃಪಾಳ ಪ್ರಿ-

೭೦. ಯ ವಧು ಸೋಮಕುಳಾಭರಣೆಯೆನಿಪ ಕಾಳಲದೇವಿ ಶ್ರೀಮದ್ವಿಷ್ಣುಗೃಹಮುಮನೆ ಮಾತೆ

೨೧. ತುಂಬವಳ್ಳಿಯೊಳ್ಮಾಡಿಸಿದಳು ॥ ★ ಸ್ವಸ್ತಿ ಸಕವರ್ಷ ಸಾಸಿರದಱುವತ್ತೆರಡ ನೆಯ ರೌದ್ರ ಸಂವತ್ಸರದ ಪು-

೨೨. ಶ್ಯ ಸು ೧೩ ಬೃಹವಾರಮುತ್ತರಾಯಣ ಸಂಕ್ರಮಣ ವ್ಯತಿಪಾತಯೋಗ ಕೂಡಲು ಕನ್ನೆದಾನ-

೨೩. ದಗ್ರಹಾರಂ ತುಂಬವಳ್ಳಿಯ ಲ್ಮಾಡಿಸಿದ ವಿಷ್ಣುಗೃಹಕ್ಕೆ ಬಿಟ್ಟ ದತ್ತಿಯೆನ್ತೆಂದಡೆ ಹಲ್ಲಿನಿಯ ತೆಱಿಗ-

೨೪. ದ್ಯಾಣವೆಂಟರೊಳಗೆ ಶ್ರೀಗನ್ಧಕ್ಕೆ ಗದ್ಯಾಣವೊಂದು ಚೈತ್ರಪವಿತ್ರಕ್ಕೆ ಗದ್ಯಾಣ ವೊಂದಯನಕ್ಕೆ ಪ-

೨೫. ಣವಯ್ದು ಮಠವಿನ ಮಾಣಿಗೆ ಗದ್ಯಾಣಂ ಮೂಱು ಹಱಿಯುವಂಗೆ ಗದ್ಯಾ ೧ ತುಂಬವಳ್ಳಿಯಿಂದೊಳಗೆ ನಂದಾ-

೨೬. ವೆಳಗಿಂಗೆ ಗದ್ಯಾ ೨ ಅಳ್ಳವಕ್ಕಿಯ ತೋಟದ ಭೂಮಿಯಿಂ ತೆಱಿಯರಡು ತಿಂಗಳ ಭಾರತಕ್ಕೆ ಗದ್ಯಾ ೧ ದೇ-

೨೭. ವರ ನಿವೇದ್ಯಕ್ಕೆ ಹಲ್ಲಿನಿಯ ಕಾರಗದ್ದೆ ಮೂಡೆಯಯ್ದು ತೆಂಗಿನ ಖಣ್ಡದ ಗದ್ದೆ ಮೂಡೆ ನಾಲ್ಕುನ್ತುಮ್ಮೂ

೨೮. ಡೆಯಾ ಚೈತ್ರಕ್ಕಂ ಯಿಪ್ಪೂರ್ನ್ತಿನ ನಿವೇದ್ಯಕ್ಕೆ ಮೂಡೆ ಮೂವತ್ತು ಹಲ್ಲಿನಿಯಂ ಹಱಿಯುವಂಗೆ

೨೯. ಮೂಡೆಯಾಱು ಶಾನ್ತಿಯ ಮಾಣಿಗೆ ಹಳವೂರ ನಾಗವಲಿಯ ಕಾರಗದ್ದೆ ಮೂಡೆ ಮೂ-

೩೦. ಱರಮನೆಯ ಕೆಳಗಣ ಮಕ್ಕಿಯಲ್ಲಿಯ ಹಲಸೊಳಗಾಗಿಯಗ್ರಕ್ಕೆ ಮೂಡೆ ಯೊಂಬತ್ತು

೩೧, ಯಿಂತೀ ಧರ್ಮ್ಮಮಂ ರಾಜ್ಯಸ್ಥರಪ್ಪರಸುಗಳುಂ ಗ್ರಾಮಸಮೂಹಮುಂ ಪ್ರತಿಪಾಳಿಸುವರು [॥]

೩೨. ಮತ್ತವೀ ಧರ್ಮ್ಮಮಂ ಪ್ರತಿಪಾಳಿಸಿದರ್ಗ್ಗೆ ಗಂಗೆ ವಾಣರಾಸಿ ಕುರುಕ್ಷೇತ್ರ ದಲ್ಸಹಸ್ರ ಕವಿಲೆಯ-

೩೩. ನಳಂಕಾರ ಸಹಿತ ಸಬ್ರಾಹ್ಮಣರ್ಗ್ಗೆ ಕೊಟ್ಟ ಫಲ ವೀಧರ್ಮ್ಮವನಳಿದವನಾ ಕವಿಲೆಯುನಾ ಬ್ರಾ-

೩೪. ಹ್ಮಣರುಮನಳಿತ ಪಾತಕ ॥ ನಂದಾವೆಳಗು ನಿವೇದ್ಯಂ ಬಂದತಿಥಿಗಳ್ಗೆ ಗ್ರಹಾಱಿ[ಯು].

೩೫. ತೋರ್ಮ್ಮೆ ಪುರಾಣಂ ಕೋಟಿದಧಿ ಮಹಾಜನಮಂತೊಂದಾಗಿ ಪರೀ ಸಲ್ಕೊ. ಯ್ಯ್ಕಡೆ.

೩೬. ಧರ್ಮ್ಮ ॥ ಸ್ವದತ್ತಂ ಪರ

ಅಡಿ ಟಿಪ್ಪಣೆಗಳು

೧. ಕರ್ನಾಟಕ ಭಾರತಿ, ಸಂಪುಟ ೨೨, ಸಂಚಿಕೆ ೩, ಪು. ೭೮-೯೦. ಈ ಶಾಸನದ ಪಾಠವಾಗಲೇ ಸದಾನಂದ ನಾಯಕರ ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ (ಧಾರವಾಡ. ೧೯೭೪) ಗ್ರಂಥದಲ್ಲಿ (ಪು. ೯೨-೮೬) ಸಂಪಾದಿಸಲ್ಪಟ್ಟಿದೆಯೆಂದು ಶ್ರೀ ಸಾವಂತ ಅವರಿಂದ ನಮಗೆ ತಡವಾಗಿ ತಿಳಿಯಿತು. ಶ್ರೀ ಸಾವಂತ ಅವರಿಗೆ ಇದಕ್ಕಾಗಿ ಧನ್ಯವಾದಗಳು ಸಲ್ಲುತ್ತವೆ.

೨. ಕರ್ನಾಟಕ ಭಾರತಿ (ಅಚ್ಚಿನಲ್ಲಿ)

೩. ಈ ಸ್ತ್ರೀಯು ಚಿತ್ರ ಕಾಮದೇವನ ಅಗ್ರಮಹಿಷಿ ಕಾಳಲದೇವಿಯದೆಂದು ಸುಲಭವಾಗಿ ಊಹಿಸಬಹುದು.

೪. ಕರ್ನಾಟಕ ಭಾರತಿ, ಸಂಪುಟ ೨೨, ಸಂಚಿಕೆ ೩, ಪು. ೮೨.

೫. "ಶ್ರೀ ಗೋಕರ್ಣ್ಣ ಮಹಾಬಳದೇವ ಪಾದಾರಾಧಕ" ಎಂದು ಗುಂಡಬಾಳದ ಶಾಸನ (ಹಾಗೂ ಪ್ರಸ್ತುತ ತುಂಬೊಳ್ಳಿ ಶಾಸನ)ದಲ್ಲಿ ಬರುವ ಉಲ್ಲೇಖ ಮಾತ್ರದಿಂದ ಪಂಚಮುಖಿಯವರೂ, ಅವರನ್ನು ಅನುಸರಿಸಿ ಬಾ.ರಾ. ಗೋಪಾಲ ಮತ್ತಿತರರೂ, ಇವರನ್ನು ಚಂದಾವರ "ಕದಂಬ"ರೆಂದು ಕರೆದಂತೆ ಕಾಣುತ್ತದೆ. ಅದೇ ತಪ್ಪನ್ನು ನಾವಾದರೂ ಮಾಡಿದ್ದೇವೆ! ೧೩ನೇ ಶತಮಾನದ ಕೆಲವು ಶಾಸನಗಳಲ್ಲಿ "ಕದಂಬ" ವಂಶೀಯರಿಗೆ ಸಂಬಂಧಿಸಿದಂತೆ ಇದೇ ರೀತಿಯ ಉಲ್ಲೇಖ ಬರುತ್ತದೆಂಬುದು ನಿಜ. ಆದರೆ ಮಲ್ಲಿದೇವನನ್ನು ಆ ಕದಂಬ ವಂಶದ ದೊರೆಗಳಿಗೆ ಯಾವುದೇ ರೀತಿಯಿಂದಲೂ ಸಂಬಂಧ ಕಲ್ಪಿಸಲು ಸದ್ಯ ಅವಕಾಶವಿಲ್ಲ.

೬. ಎಪಿಗ್ರಾಫಿಯ ಕರ್ನಾಟಿಕ ಹಳೆಯ ಸಂಪುಟ ೭, ಎಸ್‌ಕೆ ೯೯; ಸದಾನಂದ ನಾಯಕರು (ಅದೇ, ಪು ೮೧-೮೮) ಇದನ್ನು ಪುನರ್ಪ್ರಕಟಿಸಿದ್ದಾರೆ.

೭. ಇದನ್ನು ನಮ್ಮ ಗಮನಕ್ಕೆ ತಂದವರು ಮೂಲ್ಕಿ ವಿಜಯಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಡಾ. ಕೆ. ಜಿ. ವಸಂತಮಾಧವ ಅವರು. ಇವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಸದಾನಂದ ನಾಯಕರು ಶಿಶುಗಲಿಯನ್ನು ಗೋಕರ್ಣದ ಪರ್ಯಾಯನಾಮವೆಂದು ಭಾವಿಸಿದ್ದಾರೆ. (ಅದೇ, ಪು. ೬೮)

೮. ನಾಯಕರು ಈ ಸಿರಿಯೂರು ಗೋಕರ್ಣದ ಬಳಿಯ ಶಿರೂರು ಇಲ್ಲವೆ ಚೀಪೂರು (ಕುಮಟಾ ತಾಲೂಕು) ಆಗಿರಬೇಕೆಂದು ಸೂಚಿಸಿದ್ದಾರೆ (ಅದೇ, ಪು ೬೯), ಆದರೆ ನಮ್ಮ ಅಭಿಪ್ರಾಯದಲ್ಲಿ ಇದು ಹೊನ್ನಾವರ ತಾಲೂಕಿನ ಹೊದಿಕೆ ಶಿರೂರು.

೯. ಸದಾನಂದ ನಾಯಕ, ಅದೇ, ಪು. ೯೭, ಸಾಲು ೮೬-೮೭.

೧೦. ಶಾಸನದ ಪಡಿಯಚ್ಚಿನಿಂದ ಓದಿದ್ದು. ಪಡಿಯಚ್ಚು ತೆಗೆಯಲು ಸಹಕರಿಸಿದ ತುಂಬೊಳ್ಳಿ ವಿಷ್ಣುದೇವಾಲಯದ ಅರ್ಚಕ ನಾಯ್ಕರಿಗೂ ಹಾಗೂ ಜಲವಳ್ಳಿಯ ಶ್ರೀ ವಾಸುದೇವ ನಾಯಕ್ ಇವರಿಗೂ ನಮ್ಮ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

೧೧. ಈ ಸಾಲನ್ನು ಶಿಲಾಫಲಕದ ಮೇಲ್ಭಾಗದಲ್ಲಿರುವ ಶಿಲ್ಪದ ಕೆಳಗೆ ಬರೆಯಲಾಗಿದೆ.

ಆತ್ಮಹತ್ಯೆಯ ನಿರಂತರ ರಹಸ್ಯ

● ಮೂಲ : ಜಾರ್ಜ್ ಹಾವೆಕೋಲ್ಸ್
● ಅನುವಾದ : ಡಾ. ಎ. ಎಸ್. ಧರಣೇಂದ್ರಯ್ಯ

ಅದು ಅಂತರ್ಮುಖವಾಗಿ ತಿರುಗಿದ ಕೋಪವೇ ? ರಾಸಾಯನಿಕ ಅಸಮತೆಯೋ ? ಕುಟುಂಬದ ಕುಸಿತವೇ ? ಜನರು ಯಾಕೆ ತಮ್ಮನ್ನು ತಾವೇ ಕೊಂದುಕೊಳ್ಳುತ್ತಾರೆಂಬುದನ್ನು ಯಾವುದೇ ಒಂದು ಸಿದ್ಧಾಂತವು ಪೂರ್ಣವಾಗಿ ವಿವರಿಸಲಾರದು.

ಎಲೆನ್ ಗ್ಲಾಸ್‌ಮನ್* ಒಬ್ಬ ಸಮಾಜ ಕಾರ್ಯಕರ್ತೆ.ಆದ್ದರಿಂದ ಆತ್ಮಹತ್ಯೆಗೆ ಮುನ್ನಿನ ಹತಾಸೆಯ ಚಿಹ್ನೆಗಳು ಮತ್ತು ಸುಳಿವುಗಳು ಆಕೆಗೆ ಚಿರಪರಿಚಿತ. ಕೇಡನ್ನು ತಂದುಕೊಳ್ಳಬಹುದೆಂದು ಆಕೆ ಸೂಕ್ಷ್ಮವಾಗಿ ಗ್ರಹಿಸುತ್ತಿದ್ದ ವ್ಯಕ್ತಿಗಳ ಬಗ್ಗೆ ಬಹಳ ಎಚ್ಚರ ವಹಿಸುತ್ತಿದ್ದಳು.ಹೀಗಿದ್ದರೂ ಆಕೆಯ ೭ ವರ್ಷ ವಯಸ್ಸಿನ ಮಗ ಪೀಟರ್* ನೇಣು ಹಾಕಿಕೊಂಡು ಸತ್ತ. ಆಗ ಆಕೆ ತನ್ನ ವೃತ್ತಿಗೆ ಸಂಬಂಧಿಸಿದಂತೆಯೂ ವೈಯಕ್ತಿಕವಾಗಿಯೂ ಜರ್ಝರಿತಳಾದಳು. ವಿಷಣ್ಣತೆಯಿಂದ ಹೊರಹೊಮ್ಮುವಂತೆ ಕಾಣುವ ಈ ಹೇಯಕೃತ್ಯವನ್ನು ಅರ್ಥಮಾಡಿಕೊಳ್ಳಲು ಆಕೆ ಯತ್ನಿಸಿದಳು.

ಪೀಟರ್ ಹಲವು ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದ. ಆದರೆ ಅವನಿಗೆ ಚಿಕಿತ್ಸೆ ಮಾಡುತ್ತಿದ್ದ ಮನೋವೈದ್ಯನೂ, ಎಲೆನ್‌ನಂತೆಯೇ ಆತನ ಆತ್ಮಹತ್ಯೆಯನ್ನು ನಿರೀಕ್ಷಿಸಿರಲಿಲ್ಲ. ಪೀಟರನ ದಿನಚರಿಯಲ್ಲಿ ಯಾವುದೇ ಸೂಚನೆಗಳಿರಲಿಲ್ಲ. ಮನೋ-ವಿಶ್ಲೇಷಣೆಗೆ ಸಂಬಂಧಿಸಿದ ಸಂಶೋಧನಾ ಪತ್ರಿಕೆಗಳನ್ನು ಪರಿಶೋಧಿಸಿದಾಗಲೂ ಎಲೆನ್‌ಗೆ ಯಾವುದೇ ಉತ್ತರಗಳು ಸಿಗಲಿಲ್ಲ. "ನನಗೆ ಅತ್ಯಂತ ನೆರವಾದ ಸಲಹೆಯು ಒಬ್ಬ ಮನೋವೈದ್ಯನಿಂದ ದೊರೆಯಿತು : ...'ಉತ್ತರ ನಿಮಗೆ ಎಂದೂ ಸಿಗದು' ಎಂದು ಆತ ಹೇಳಿದ", ಎಂದು ಆಕೆ ಹೇಳುತ್ತಾಳೆ.

ಜನರು ತಮ್ಮ ಪ್ರಾಣವನ್ನು ತಾವೇ ಏಕೆ ತೆಗೆದುಕೊಳ್ಳುತ್ತಾರೆ ? ಕಾರಣಗಳು ನುಣುಚಿಕೊಳ್ಳುತ್ತಲೇ ಇವೆ. ವ್ಯಕ್ತಿಯು ಕಳೆದುಕೊಂಡ ಪ್ರೇಮವಸ್ತುವಿನ ಮೇಲೆ

* ಇವು ಅವರ ನಿಜವಾದ ಹೆಸರುಗಳಲ್ಲ.

ಉಂಟಾಗುವ ಕೋಪ ಆತನತ್ತಲೇ ತಿರುಗುವುದೇ ಆತ್ಮಹತ್ಯೆ ಎಂದು ಫ್ರಾಯ್ಡ್ ಸೂಚಿಸುತ್ತಾನೆ. ವೈದ್ಯರು, ಆತ್ಮಹತ್ಯೆಯನ್ನು ಸಂಪೂರ್ಣವಾಗಿ ವಿಷಣ್ಣತೆಗೆ ಗಂಟು ಹಾಕಿದ್ದೂ ಉಂಟು.ಆದರೆ ವಿಷಣ್ಣತೆ ಕಳೆದ ಮೇಲೂ ಅನೇಕ ರೋಗಿಗಳು ತಮ್ಮನ್ನು ತಾವೇ ಯಾಕೆ ಕೊಂದುಕೊಳ್ಳುತ್ತಾರೆ ಎಂಬ ಪ್ರಶ್ನೆಗೆ ಇದರಿಂದ ವಿವರಣೆ ಸಿಗಲಿಲ್ಲ. ಮೆಸಾಚುಸೆಟ್ಸ್‌ನ ಕೇಂಬ್ರಿಡ್ಜಿನಲ್ಲಿರುವ ಕೇಂಬ್ರಿಡ್ಜ್ ಆಸ್ಪತ್ರೆಯ ಮನೋವೈದ್ಯ ಜುನ್ ಮ್ಯಾಕ್ ಹೀಗೆ ಹೇಳುತ್ತಾನೆ : "ಆತ್ಮಹತ್ಯಾಸಮಸ್ಯೆಯು ಎಲ್ಲಾ ರೋಗನಿದಾನಗಳನ್ನು ಭೇದಿಸಿಕೊಂಡು ಹೋಗುತ್ತದೆ. ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಕೆಲವರಿಗೆ ಮನೋರೋಗವಿದ್ದರೆ, ಹಲವರಿಗೆ ಇರುವುದಿಲ್ಲ." ಮಿದುಳಿನಲ್ಲಿ ರಾಸಾಯನಿಕ ಅಸಮತೆಯುಂಟಾಗುತ್ತದೆಂದು ಜೀವಶಾಸ್ತ್ರಜ್ಞರು ಹೇಳುತ್ತಾರೆ. ಕುಟುಂಬದ ಕುಸಿತದಂತಹ ಸಾಮಾಜಿಕ ಸಂಬಂಧದ ಹಾನಿಯತ್ತ ಸಮಾಜಶಾಸ್ತ್ರಜ್ಞರು ಗಮನ ಕೊಡುತ್ತಾರೆ. ನಂಬಿಕೆಯ ವಿನಾಶವೇ ಕಾರಣವೆಂಬುದು ಕೆಲವು ಧರ್ಮೋಪದೇಶಕರ ಮತ. ಆದರೆ, ಎಲ್ಲಾ ರೀತಿಯ ಆತ್ಮಹತ್ಯಾವರ್ತನೆಗೆ ಯಾವುದೇ ಒಂದು ಸಿದ್ಧಾಂತ ವಿವರಣೆ ಕೊಡಲಾರದು ಎಂಬುದೇ ಸರಳಸತ್ಯ.

ನ್ಯೂಜೆರ್ಸಿಯ ವೈದ್ಯಕೀಯ ಶಾಲೆಯಲ್ಲಿ ಸಹಾಯಕ ಮನೋವೈದ್ಯರಾಗಿರುವ ಲೋನಿಕಾ ಮೆಕ್‌ಗೊಲ್ಡ್ರಿಕ್ ಪ್ರಕಾರ, 'ಸತ್ತವರು ಸಾಯಲಿ' ಎಂಬುದು ಆತ್ಮಹತ್ಯೆಗೆ ಕಂಡುಬರುವ ಸಾಮಾನ್ಯ ಅನುಕ್ರಿಯೆ. ಆದರೆ ಅದು ಅಷ್ಟು ಸುಲಭವಲ್ಲ. ಆತ್ಮಹತ್ಯೆಯಿಂದ ಪಾರಾದವರು, ಅದೊಂದು ಆಕಸ್ಮಿಕವೆಂದು ನಟಿಸುತ್ತಾ, ಅದನ್ನು ಅನೇಕಸಲ ಮರೆಮಾಚಲು ಯತ್ನಿಸುತ್ತಾರೆ. ಹಾಗಾದಾಗ ಎಲ್ಲಾ ಕೋಪ ಮತ್ತು ಭಾವನೆಗಳು ವಿಕೃತಗೊಳ್ಳುತ್ತವೆ. ಒಂದು ಆತ್ಮಹತ್ಯೆ ನಡೆದಾಗ, ಸಂಬಂಧಪಟ್ಟ ಕುಟುಂಬಗಳು ಅದನ್ನು ಮುಚ್ಚಿಹಾಕಲು ಯತ್ನಿಸುತ್ತವೆ. ಯಾಕೆಂದರೆ, ಅವರ ಕಳಂಕ ತಮಗೂ ಹತ್ತಬಾರದೆಂಬ ಭಯ ಅವರಿಗಿರುತ್ತದೆ". ಆತ್ಮಹತ್ಯೆಯ ವಿಚಾರವನ್ನು ಅನೇಕವೇಳೆ, ಮಕ್ಕಳಿಗೆ ಹಲವು ವರ್ಷಗಳನಂತರ ತಿಳಿಸಲಾಗುತ್ತದೆ. ಕೆಲವು ಸಲ ತಿಳಿಸುವುದೇ ಇಲ್ಲ. ಇಪ್ಪತ್ತುವರ್ಷಗಳ ಹಿಂದೆ ಆದ ಆತ್ಮಹತ್ಯೆಗಳ ಬಗ್ಗೆ ಮಾತನಾಡಲು ಬರುವ ಜನರನ್ನು ಸ್ವ-ಸಹಾಯ ಸಮೂಹಗಳು ಗುರುತಿಸಿವೆ.

ಆತ್ಮಹತ್ಯೆಶಾಸ್ತ್ರದ ಕ್ಷೇತ್ರಕ್ಕೆ ೧೯೪೯ರಲ್ಲಿ ಅದೃಷ್ಟ ಕುದುರಿತು. ಕ್ಯಾಲಿಫೋರ್ನಿಯಾದ ವೆಸ್ಟ್‌ಲಾಸೆಂಜಲೀಸಿನ ಲಾಡ್ಸ್‌ವರ್ತ್ ವೆಟರನ್ಸ್ ಅಡ್ಮಿನಿಸ್ಟ್ರೇಷನ್ ಮೆಡಿಕಲ್ ಸೆಂಟರಿನಲ್ಲಿ ಆಗ ಎಡ್ವಿನ್ ಸ್ನೀಯ್ಡ್‌ಮನ್ ನೈದಾನಿಕ ಮನೋವಿಜ್ಞಾನಿಯಾಗಿದ್ದ. ಇಬ್ಬರು ಆತ್ಮಹತ್ಯಕರ ವಿಧವೆಯರಿಗೆ, ಸಂತಾಪಸೂಚಕ ಕರಡು ಪತ್ರಗಳನ್ನು ಸಿದ್ಧಪಡಿಸುವಂತೆ ಆತನನ್ನು ಕೇಳಲಾಯಿತು. ಪತ್ರಗಳನ್ನು ಸಿದ್ಧಪಡಿಸುತ್ತಿರುವಾಗ, ಆ ಕೌಂಟಿಯ ದುರ್ಮರಣ ವಿಚಾರಕನ ಕಛೇರಿಗೆ ಸ್ನೀಯ್ಡ್‌ಮನ್ ಭೇಟಿಕೊಡಬೇಕಾ

ಯಿತು. ಅಲ್ಲಿಗೆ ಹೋದಾಗ ಆತನನ್ನು ೩೦೦೦ ಆತ್ಮಹತ್ಯೆ ಪತ್ರಗಳನ್ನಿಟ್ಟದ್ದ ಒಂದು ನೆಲಮಾಳಿಗೆಗೆ ಕಳಿಸಲಾಯಿತು. ತನ್ನ ಜೊತೆಗಿದ್ದ ಮನೋವಿಜ್ಞಾನಿ ನಾರ್ಮನ್ ಫಾರ್‌ಬೆರೋನ ನೆರವಿನಿಂದ, ತಮ್ಮನ್ನು ತಾವೇ ಕೊಂದುಕೊಳ್ಳುವ ಜನರು ಬರೆದಿರುವ ಕೊನೆಯ ಮಾತುಗಳು ಅವರ ಬಗ್ಗೆ ಏನು ತಿಳಿಸುತ್ತವೆ ಎಂದು ಪರೀಕ್ಷಿಸಲು ಆತ ತೊಡಗಿದ. ಅವರು ಪ್ರಕಟಿಸಿದ ಲೇಖನಗಳು ಸಹಾಯಧನ ಪಡೆಯಲೂ ಮತ್ತು ೧೯೫೮ ರಲ್ಲಿ ಲಾಸೆಂಜಲೀಸ್ ಸೂಯಿಸೈಡ್ ಪ್ರಿವೆನ್‌ಷನ್ ಸೆಂಟರನ್ನು ಸ್ಥಾಪಿಸಲೂ ಅನುಕೂಲವ ದವು. ಈ ಕೇಂದ್ರವು ಮನೋವಿಜ್ಞಾನಿಗಳು, ಸಾಮಾಜಿಕಕಾರ್ಯಕರ್ತರು, ಮನೋವೈದ್ಯರು ಹಾಗೂ ತರಬೇತಿಪಡೆದ ಸ್ವಯಂ ಸೇವಕರು ಒಂದುಗೂಡಿ, ಸಂಶೋಧನೆ ಮತ್ತು ಚಿಕಿತ್ಸೆಗಳನ್ನು ಜೊತೆಜೊತೆಗೇ ನಡೆಸುವ ಒಂದು ಒಕ್ಕೂಟ. ಅದು ಅಂತಹ ಪ್ರಪ್ರಥಮ ಕೇಂದ್ರಗಳಲ್ಲಿ ಒಂದು. ಈ ಒಕ್ಕೂಟದ ಮಾರ್ಗದರ್ಶಕ ವಿಧಿ ಹೀಗಿದೆ: ಆತ್ಮಹತ್ಯೆಗೆ ಇಚ್ಛಿಸುವ ವ್ಯಕ್ತಿಯ ಮನಸ್ಸು ಇಬ್ಬಗೆಯಾಗಿರುತ್ತದೆ. ಒಂದು ಕಡೆ ಆತನಿಗೆ ಬದುಕುವ ಇಚ್ಛೆಯಿದ್ದರೆ, ಮತ್ತೊಂದುಕಡೆ ಸಾಯುವ ಇಚ್ಛೆ ಇರುತ್ತದೆ. ಆತ್ಮಹತ್ಯೆಯ ಪ್ರಯತ್ನವು ನೆರವಿಗೆ ಕಾತರಿಸುವ ಆರ್ತನಾದ. ಸಾವು ಬದುಕುಗಳ ನಡುವಣ ತೊಳಲಾಟವನ್ನು ಅದು ಸೂಚಿಸುತ್ತದೆ.

ಎಚ್ಚರಿಕೆಯ ಸೂಚಕಗಳು : ಜನಸಂಖ್ಯೆ ಅಧ್ಯಯನವೇ ಹಲವು ವರ್ಷಗಳಿಂದ, ಆತ್ಮಹತ್ಯೆಯ ತಡೆಗೆ ಪ್ರಮುಖ ಮಾರ್ಗವೆಂದು ಪರಿಗಣಿತವಾಗಿತ್ತು. ಯಾರು ಆತ್ಮಹತ್ಯೆ ಮಾಡಿಕೊಂಡಿ ದ್ದಾರೆ ಎಂಬುದನ್ನು ವಿಶ್ಲೇಷಿಸುವುದರ ಮೂಲಕ ಯಾರು ಆತ್ಮಹತ್ಯೆಮಾಡಿಕೊಳ್ಳ ಬಹುದು ಎಂದು ಮುನ್ಸೂಚನೆ ಕೊಡುವುದು ಅಂತಹ ಅಧ್ಯಯನಗಳ ಪ್ರಮುಖ ಉದ್ದೇಶ. ಆತ್ಮಹತ್ಯೆಗೆ ಹೆಂಗಸರು ಪ್ರಯತ್ನಿಸುವುದು ಹೆಚ್ಚಾಗಿದ್ದರೂ, ಹೆಂಗಸರಿಗಿಂತ ಗಂಡಸರೇ ಹೆಚ್ಚು ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು ಜನಸಂಖ್ಯಾ ಅಧ್ಯಯನಗಳು ತಿಳಿಸಿವೆ. ಆತ್ಮಹತ್ಯೆಯ ಸಂಖ್ಯೆ ಮುದುಕರಲ್ಲಿ ಅತ್ಯಂತ ಹೆಚ್ಚು. ಆತ್ಮಹತ್ಯೆಯ ಪೂರ್ವ ಪ್ರವಣತೆಗೆ ಇತರ ಕಾರಣಗಳಲ್ಲಿ, ಮದ್ಯಲಾಲಸೆ, ಸಲಿಂಗರತಿ, ಮತ್ತು ವಿವಾಹ ವಿಚ್ಛೇದನಗಳು ಸೇರುತ್ತವೆ. ಈ ಮಾಹಿತಿಯನ್ನು ಬಳಸಿಕೊಂಡು, ಆತ್ಮಹತ್ಯೆಯ ಅಪಾಯವನ್ನು ಮುನ್ಸೂಚಿಸಲು, ಹಾಗೂ ನಿರ್ಣಯ ಗಳನ್ನು ತೆಗೆದುಕೊಳ್ಳುವಲ್ಲಿ ನೆರವಾಗಲು ಸಂಶೋಧಕರು ಮಾಪನಗಳನ್ನು ರೂಪಿಸು ತ್ತಾರೆ. ಆದರೆ, ಅನೇಕ ಮಾಪನಗಳಲ್ಲಿ ಬಳಸಲಾಗುವ ಅಪಾಯಸೂಚಕ ಅಂಶಗಳ ವಿಶ್ವಸನೀಯತೆ ಕಡಿಮೆಯಾಗುತ್ತಿದೆ. ಏಕೆಂದರೆ, ಕಿರಿಯ ವಯಸ್ಕರಲ್ಲಿ ಆತ್ಮಹತ್ಯೆಯ ಸಂಖ್ಯೆಯೂ ಎದ್ದು ಕಾಣುವಷ್ಟು ಹೆಚ್ಚಿದೆ.

ಮಾಪನಗಳು ಸಂಪೂರ್ಣವಾಗಿ ವಿಶ್ವಸನೀಯವಾಗಿರುವುದು ಸಿದ್ಧವಾಗಿಲ್ಲವೆಂಬುದು ನಿಜ. ಅದರಂತೆಯೇ ಚಿಕಿತ್ಸಕರ ಅಂತಃಪ್ರಜ್ಞೆಯೂ ವಿಶ್ವಸನೀಯವೆಂದು ಸಿದ್ಧವಾಗಿಲ್ಲ. ಆತ್ಮಹತ್ಯೆಗೆ ಯತ್ನಿಸುವವರ ಬಗ್ಗೆ ಮುನ್ಸೂಚನೆ ಕೊಡುವಲ್ಲಿ ಅನುಭವಸ್ಥ ಚಿಕಿತ್ಸಕರಿಗಿಂತ, ಗಣಕಯಂತ್ರವು ಹೆಚ್ಚು ನಿಖರವಾಗಿರುತ್ತದೆ ಎಂದು ೧೯೭೦ಳರ ಅಧ್ಯಯನವೊಂದರಿಂದ ತಿಳಿದುಬಂತು.

ಆತ್ಮಹತ್ಯೆಯ ಮುನ್ಸೂಚನೆ ಕೊಡಲು ಇತರ ಸೂಚಕಗಳತ್ತ ಸ್ನೀಯ್ಡ್‌ಮನ್ ತನ್ನ ಗಮನ ಹರಿಸಿದ್ದಾನೆ. ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಬಹುಮಂದಿ ತಮ್ಮ ಉದ್ದೇಶಗಳಿಗೆ 'ಕುರುಹು'ಗಳನ್ನು ಬಿಟ್ಟಿರುತ್ತಾರೆ. ಅಂತಹ ಕುರುಹುಗಳು ಮಾತಿನ ಮೂಲಕ (ಉದಾಹರಣೆಗೆ; 'ನನ್ನನ್ನು ನೀವು ಇಲ್ಲಿ ಹೆಚ್ಚು ಕಾಲ ನೋಡ-ಲಾರಿರಿ); ಅಥವಾ ವರ್ತನೆಯ ಮೂಲಕ (ಉದಾಹರಣೆಗೆ : ಅಮೂಲ್ಯ ಆಸ್ತಿಪಾಸ್ತಿಗಳನ್ನು ಇತರರಿಗೆ ಕೊಡುವುದು, ವ್ಯವಹಾರಗಳನ್ನು ವ್ಯವಸ್ಥಿತಗೊಳಿಸುವುದು) ವ್ಯಕ್ತವಾಗಬಹುದು. ಯುವಜನರಲ್ಲಿ ಕಂಡುಬರುವ ಎಚ್ಚರಿಕೆಯ ಕುರುಹುಗಳ ಬಗ್ಗೆ ಜಾನ್‌ವ್ಯಾಕ್ ಮಾಡಿರುವ ಪಟ್ಟಿ ಹೀಗಿದೆ: ಆತ್ಮಹತ್ಯೆಯ ಮಾತು, ಭಾವುಕತೆ, ಮತ್ತೆಮತ್ತೆ ದಿನಚರಿಯತ್ತ ಗಮನ ಹರಿಸುವುದು, ಶಾಲೆಯಲ್ಲಿ ಸೋಲು, ಮರಣದ ಬಗ್ಗೆ ಸದಾ ಚಿಂತಿಸುತ್ತಿರುವುದು. ಆದರೆ "ಆತ್ಮಹತ್ಯೆ ಪೂರ್ವ ರೋಗ ಲಕ್ಷಣ" (Pre-Suicidal Syndrome) ಎಂದು ಮನೋವೈದ್ಯನು ಕಾಣುವ ವರ್ತನೆ, ತಂದೆತಾಯಿಗಳಿಗೆ "ಒಂದು ಅವಸ್ಥೆ" (a phase) ಎಂಬಂತೆ ತೋರಬಹುದು.

ಮೆಸಾಚುಸೆಟ್ಸ್‌ನ ಬೆಲೆವಾಂಟಿನಲ್ಲಿರುವ ಮೆಕ್‌ಲೀನ್ ಆಸ್ಪತ್ರೆಯಲ್ಲಿ ಮನೋವೈದ್ಯನಾಗಿರುವ ಪೀಟರ್ ಸಾಲ್ಟ್ಸ್‌ಮನ್ ಹೀಗೆ ಹೇಳುತ್ತಾನೆ; "ತಂದೆತಾಯಿಗಳೇ 'ಸಮಸ್ಯೆ'ಯಾಗಿರುವುದರಿಂದ, ಸಮಸ್ಯೆಯನ್ನು ಅವರು ಒಪ್ಪಿಕೊಳ್ಳುವಂತೆ ಮಾಡುವುದು ಅನೇಕಸಲ ಕಷ್ಟವಾಗುತ್ತದೆ. ಆತ್ಮಹತ್ಯೆಗೆ ಯತ್ನಿಸಿದ, ಸಾಲ್ಟ್ಸ್‌ಮನ್ನನ ಒಬ್ಬ ರೋಗಿಗೆ, ಅಪನ ತಂದೆ, "ಮುಂದಿನ ಸಲ ಸೇತುವೆಯಿಂದ ಕೆಳಕ್ಕೆ ಹಾರು" ಎಂದು ಹೇಳುವಂತೆ ಇತರರ ಗಮನ ಸೆಳೆಯಲು ಆಗದಿದ್ದಾಗ, ಅದು "ಮಾನ ಉಳಿಸಿಕೊಳ್ಳುವ" ಪ್ರಯತ್ನಕ್ಕೆ ದಾರಿಮಾಡಿಕೊಡಬಹುದು. ಮೆಸಾಚುಸೆಟ್ಸ್‌ನ ಕೇಂಬ್ರಿಡ್ಜಿನ ಹಾರ್ವರ್ಡ್ ಯೂನಿವರ್ಸಿಟಿ ಮೆಡಿಕಲ್ ಸ್ಕೂಲಿನಲ್ಲಿ ಮನೋವೈದ್ಯನಾಗಿರುವ ಡಾ. ಲಿಯೋನ್ ಐಸೆನ್‌ಬರ್ಗ್, ತನ್ನಸಹಪಾಠಿಯೊಬ್ಬಳೊಂದಿಗೆ ಗೊಂದಲಮಯ ಸಂಬಂಧ ಹೊಂದಿದ್ದ ಒಬ್ಬ ಕಾಲೇಜು ವಿದ್ಯಾರ್ಥಿಯ ವಿಷಯ ವಿವರಿಸುತ್ತಾ ಹೀಗೆ ಹೇಳಿದ್ದಾನೆ:

"ವಿದ್ಯಾರ್ಥಿ ಹೇಳಿದ್ದು –'ನೀನು ನನ್ನೊಡನೆ ಒಂದೇರೀತಿ ವರ್ತಿಸದಿದ್ದರೆ ಈ ಕಟ್ಟಡದಿಂದ ನಾನು ಕೆಳಗೆ ಹಾರುತ್ತೇನೆ'; ಅವಳು ಹೇಳಿದ್ದು.– ನಿನಗೆ ಆ ಧೈರ್ಯವಿಲ್ಲ'; ಅವನು ಆಡಿದಂತೆ ಮಾಡಿದ,ಅವನು ಎಂಟನೆಯ ಮಹಡಿಯವರೆಗೆ ಮೆಟ್ಟಲುಗಳನ್ನೆಲ್ಲಾ ಓಡುತ್ತಾ ಏರಿದ, ಮಾಳಿಗೆಯನ್ನು ತಲುಪಿದ ಮೇಲೆ ಅಲ್ಲಿಂದ ಕೆಳಕ್ಕೆ ಹಾರಿದ."

ತರಬೇತಿಪಡೆದ ಆತ್ಮಹತ್ಯಾಶಾಸ್ತ್ರಜ್ಞರೂ ಕೂಡ, ಕುರುಹುಗಳನ್ನು ಹಿನ್ನೋಟದಿಂದ ಮಾತ್ರ ಅನೇಕಸಲ ಗುರುತಿಸಬಲ್ಲರು. ಹಿಂದಿನ ಪ್ರಯತ್ನವು ನಿಜವಾಗಿಯೂ, ಆತ್ಮಹತ್ಯೆ ಅಪಾಯದ ಅತ್ಯಂತ ಹೆಚ್ಚು ವಿಶ್ವಸನೀಯ ಮುನ್ಸೂಚಕವಾಗಬಲ್ಲುದು. ಏಕೆಂದರೆ ಆತ್ಮಹತ್ಯೆಮಾಡಿಕೊಳ್ಳುವವರಲ್ಲಿ ಶೇಕಡ ೩೦-೪೦ ಮಂದಿ ಮೊದಲು ಪ್ರಯತ್ನಿಸಿದ್ದವರೇ. ಹೀಗಿದ್ದರೂ, ನ್ಯೂಯಾರ್ಕಿನ, ವಲ್ಹಾಲ್ಲಾದಲ್ಲಿರುವ ನ್ಯೂಯಾರ್ಕ್ ಮೆಡಿಕಲ್ ಕಾಲೇಜಿನ ಮನೋವೈದ್ಯ ಹರ್ಬರ್ಟ್ ಹೆಂಡಿನ್ ಹೇಳುವಂತೆ, ಆತ್ಮಹತ್ಯೆಗೆ ಯತ್ನಿಸಿದವರಲ್ಲಿ ಹಲವರಿಗೆ ಚಿಕಿತ್ಸೆಯನ್ನು ಮುಂದುವರಿಸದೆ ಅವರವರ ಮನೆಗಳಿಗೆ ಕಳುಹಿಸಲಾಗುತ್ತದೆ.

ಲಭ್ಯವಿರುವ ನೆರವು : ಒಂದು ಕಾಲದಲ್ಲಿ, ಆತ್ಮಹತ್ಯೆಗೆ ಯತ್ನಿಸುವವರು ಹುಚ್ಚರೆಂದೋ ಅಥವಾ ಆನುವಂಶಿಕವಾಗಿ ಹಾನಿಗೊಳಗಾದವರೆಂದೋ ನಂಬಿಕೆಯಿದ್ದುದರಿಂದ, ಅವರಿಗೆ ಚಿಕಿತ್ಸೆಮಾಡಲು ವೈದ್ಯರು ನಿರಾಕರಿಸುತ್ತಿದ್ದರು. ಆತ್ಮಹತ್ಯೆಯು ಒಂದು ವೈದ್ಯಕೀಯ ಸಮಸ್ಯೆಯೆಂದು ವೈದ್ಯಕೀಯ ಅಧಿಕಾರವರ್ಗದವರು ಇಂದು ಸಾಮಾನ್ಯವಾಗಿ ಪರಿಗಣಿಸುತ್ತಾರೆ. ಇದು ವಿಶೇಷವಾಗಿ ಮಾನಸಿಕ ಆರೋಗ್ಯ ಸಮಸ್ಯೆಯೆಂದೆನಿಸುವುದರಿಂದ ಇಲ್ಲಿ ಮನೋವೈದ್ಯರದ್ದೇ ಕೊನೇಮಾತು. ಹೀಗಿರುವುದರಿಂದ ಆತ್ಮಹತ್ಯೆಯ ಬಗ್ಗೆ ಮನೋವೈದ್ಯರು ಸಾಕಷ್ಟು ಜ್ಞಾನ ಪಡೆದಿರಬೇಕೆಂದು ಯಾರಾದರೂ ನಿರೀಕ್ಷಿಸುತ್ತಾರೆ. ಆದರೆ ಅವರು ತಿಳಿದುಕೊಳ್ಳಬೇಕಾಗಿರುವುದು ಇನ್ನೂ ಬಹಳ ಅಪಾರವಿದೆ ಎಂಬುದು ವಿಮರ್ಶಕರ ಮತ. ಆಸ್ಪತ್ರೆಗಳಲ್ಲಿ ವಿವಿಧ ಮನೋವೈದ್ಯಕೀಯ ತರಬೇತಿ ಕಾರ್ಯಕ್ರಮಗಳ ಬಗ್ಗೆ, ೧೯೭೦ರ ದಶಕದ ಮೊದಲ ವರ್ಷಗಳಲ್ಲಿ, ಡೊನಾಲ್ಡ್ ಲೈಟ್ ಎಂಬ ಸಾಮಾಜಿಕ ಮನೋವಿಜ್ಞಾನಿ ಅಧ್ಯಯನ ನಡೆಸಿದ. ತಮ್ಮ ಅಗತ್ಯ ಕಾರ್ಯ ತರಬೇತಿಯನ್ನು ಪೂರೈಸಿದಂತಹ ಮತ್ತು ಆಯ್ಕೆಗೊಂಡು ವಿಶಿಷ್ಟ ವಿಷಯವೊಂದರ ಅಧ್ಯಯನಕ್ಕೆ ನೇಮಕಗೊಂಡಂತಹ ವೈದ್ಯರಿಗಾಗಿ ಮೇಲ್ಕಂಡ ತರಬೇತಿ ಕಾರ್ಯಕ್ರಮಗಳಿದ್ದವು. ಈ ಕಾರ್ಯಕ್ರಮಗಳಲ್ಲಿ ಬಹುಮಟ್ಟಿಗೆ ಯಾವುದರಲ್ಲಿಯೂ, ಆತ್ಮಹತ್ಯೆಗೆ ಯತ್ನಿಸಿದಂಥವರ ಚಿಕಿತ್ಸೆಗೆ ಬೇಕಾದ ವಿಶೇಷ ಬೋಧನಾಂಶಗಳು ಇರಲಿಲ್ಲ.

"ಅನೇಕ ಸ್ವಯಂಸಿದ್ಧ ವಿಚಾರಗಳು, ಒಂದು ಪೀಳಿಗೆಯ ಮನೋವೈದ್ಯರಿಂದ ಮತ್ತೊಂದು ಪೀಳಿಗೆಗೆ ನಿರಂತರವಾಗಿ ಹರಿಯುತ್ತಿದ್ದವು ...ಕುರುಡರು ಕುರುಡರಿಗೆ ಮಾರ್ಗದರ್ಶನ ನೀಡುತ್ತಿದ್ದರು" ಎಂದು ಡೊನಾಲ್ಡ್ ಲೈಟ್ ಹೇಳುತ್ತಾನೆ.

ಆದರೆ ಆತ್ಮಹತ್ಯೆಗೆ ಯತ್ನಿಸಿದಂಥವರನ್ನು ಈ ಚಿಕಿತ್ಸಕರು ನಿಜವಾಗಿಯೂ "ವಾಸಿ" ಮಾಡಬಲ್ಲರೇ ? ಆತ್ಮಹತ್ಯೆ ರೋಗನಿದಾನವೆನಿಸದು. ಅದು ಒಂದು ರೋಗ ಲಕ್ಷಣ. ಆದ್ದರಿಂದ. 'ಅಂತರ್ಗತ ರೋಗಕ್ಕೆ' ಚಿಕಿತ್ಸಕನು ಮದ್ದು ಕೊಡಬೇಕು. ಅಂತಹ ರೋಗವು ರೋಗಿಯಲ್ಲಿ ಎದ್ದುಕಾಣುವ ಹಾಗೂ ನಿದಾನಸಾಧ್ಯ ಯಾತನೆಯಾಗಿರಬೇಕು. ಹೀಗಿದ್ದರೂ, ಆತ್ಮಹತ್ಯೆಗೆ ಯತ್ನಿಸಿದ ಕೆಲವರಲ್ಲಿ ಯಾವುದೇ ನಿದಾನ ಸಾಧ್ಯ ಕಾಯಿಲೆ ಇರುವುದಿಲ್ಲ.

ಆತ್ಮಹತ್ಯೆಮಾಡಿಕೊಳ್ಳುವವರಲ್ಲಿ, ಶೇಕಡ ಎಷ್ಟು ಮಂದಿ "ಮಾನಸಿಕರೋಗ" ದಿಂದ ನರಳುತ್ತಿರುತ್ತಾರೆ ಎಂದು ತೋರಿಸುವುದೇ ಹಲವು ಅಧ್ಯಯನಗಳ ಉದ್ದೇಶವಾಗಿದ್ದರೂ, ಇಲ್ಲಿ ಅಡಕವಾಗಿರುವ ವಾದ ಸಾಮಾನ್ಯವಾಗಿ ತಲೆಶಿರೋಭಾರವಿದ್ದಂತೆ ಎಂದು ಮಿನೆಯಾಪಾಲಿಸ್‌ನ ಕ್ರೈಸಿಸ್ ಇಂಟರ್‌ಲೆನ್‌ಷನ್ ಸೆಂಟರಿನ ನಿರ್ದೇಶಕ ಸಿಗ್‌ಫ್ರಿಡ್ಸ್ ಸ್ಟೆಲ್‌ಮ್ಯಾಚರ್‌ನ ಅಭಿಪ್ರಾಯ. ಆತ ಹೀಗೆ ಹೇಳುತ್ತಾನೆ. "ಮುಖ್ಯವಾಗಿ ಆತ್ಮಹತ್ಯೆಗೆ ಪ್ರಯತ್ನಿಸುವ ವ್ಯಕ್ತಿಗಳೆಲ್ಲಾ ಮನೋರೋಗಿಗಳೇ ಎಂದು ನಾವು ಹೇಳುತ್ತೇವೆ. ನಿಮಗೆ ಹೇಗೆ ಗೊತ್ತು ಎಂದು ಯಾರಾದರೂ ಕೇಳಿದರೆ, ಮನೋರೋಗಿಗಳುಮಾತ್ರ ಆತ್ಮಹತ್ಯೆಮಾಡಿಕೊಳ್ಳುತ್ತಾರೆ ಎಂಬುದು ಅಂತರ್ಗತ ಉತ್ತರ." ಹಾರ್ವರ್ಡ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನ ಸಂಶೋಧನಾ ತಂಡವೊಂದು, ಆಸ್ಪತ್ರೆಗೆ ಸೇರಿಸಿದ ಅಥವಾ ವೈದ್ಯರ ದಾಖಲೆಯ ಆಧಾರದಮೇಲೆ, ಆತ್ಮಹತ್ಯೆಗೆ ಮುಂಚೆ ರೋಗ ನಿದಾನಮಾಡಲಾದ ರೋಗಿಗಳ ಒಂದು ಪ್ರತಿದರ್ಶದಲ್ಲಿ ನೂರಕ್ಕೆ ೨೨ ಮಂದಿ ಮಾತ್ರ ಮನೋರೋಗಿಗಳಾಗಿರುತ್ತಾರೆಂಬುದು ಅತ್ಯಂತ ಹೆಚ್ಚಿನ ಅಂದಾಜು ಎಂಬುದನ್ನು ಕಂಡುಹಿಡಿಯಿತು. ಆತ್ಮಹತ್ಯೆ ನಡೆದ ನಂತರ, ಬಂಧುಮಿತ್ರರಿಂದ ಪಡೆದ ಮಾಹಿತಿಯ ಬಳಕೆಯಿಂದ ಅಥವಾ ಆತ್ಮಹತ್ಯೆಯ ಬಗೆಗಿನ ಜ್ಞಾನದ ಆಧಾರದ ಮೇಲೆ ಮಾಡಲಾದ ಅತ್ಯಂತ ಹೆಚ್ಚಿನ ಅಂದಾಜೆಂದರೆ ನೂರಕ್ಕೆ ೯೪.

ಆತ್ಮಹತ್ಯೆಗೆ ಯತ್ನಿಸುವವರು ಮನೋರೋಗಿಗಳಾಗಿದ್ದರೆ, ಅವರ ಚಿಕಿತ್ಸೆಯ ಬಗ್ಗೆ ಒಮ್ಮತವಿರುವುದು ಅತ್ಯಲ್ಪ. ಒಂದಿಲ್ಲ ಒಂದು ರೀತಿಯ ವಿಷಣ್ಣತೆಯಿಂದ ನರಳುತ್ತಿರುವ ವ್ಯಕ್ತಿಗೆ, ವಿಷಣ್ಣತೆ ವಿರೋಧೀ ಮದ್ದುಗಳು, ವಿದ್ಯುದಾಘಾತ ತಂತ್ರ

ಅಥವಾ ಇಂದು ಅನುಷ್ಠಾನದಲ್ಲಿರುವ ೩೦೦ ಮುಂದ್ರಾಂಕಿತ ಮನೋಚಿಕಿತ್ಸಾ ವಿಧಾನಗಳಲ್ಲಿ ಯಾವುದನ್ನಾದರೂ ಬಳಸಿಕೊಂಡು ಚಿಕಿತ್ಸೆ ನಡೆಸಬಹುದು.

ಸರಳ ವಿಧಾನಗಳನ್ನು ಚಿಕಿತ್ಸಕರು ಅನೇಕವೇಳೆ ಕಡೆಗಣಿಸುತ್ತಾರೆ "ನಾನು ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದ ಮೊದಲ ವರ್ಷದಲ್ಲಿ ತನ್ನನ್ನು ತಾನೇ ಗೀಳಿಕೊಳ್ಳುತ್ತಿದ್ದ ರೋಗಿಯೊಬ್ಬಳನ್ನು ನೋಡಿಕೊಳ್ಳಬೇಕಾಗಿದ್ದಿತು." ಎಂದು ಮನೋವೈದ್ಯನೊಬ್ಬ ನೆನಪಿಸಿಕೊಳ್ಳುತ್ತಾನೆ. ಗೀಳಿಕೊಳ್ಳುವುದನ್ನು ಅವಳು ಮುಂದುವರಿಸಿ ಏನು ಮಾಡಬೇಕೆಂದು ನನಗೆ ತಿಳಿಯದಾಯಿತು. ನಿರ್ದೇಶಕರಲ್ಲಿಗೆ ಹೋಗಿ, ನನಗೇ ಆಶ್ಚರ್ಯವಾಗುವ ರೀತಿಯಲ್ಲಿ ಅಳಲು ತೊಡಗಿದೆ. 'ನನ್ನೆದುರಿಗೆ ಅತ್ಯಂತೆಯೇ ರೋಗಿಯ ಎದುರು ಅತ್ತಿದ್ದರೆ, ತನ್ನ ಬಗ್ಗೆ ನಿನಗೆ ಅನುಕಂಪವಿದೆ ಎಂದು ಆಕೆಗೆ ಬಹುಶಃ ತಿಳಿಯುತ್ತಿತ್ತು ಎಂದು ನಾನುಭಾವಿಸುತ್ತೇನೆ' ಎಂದು ಅವರು ಹೇಳಿದರು. ಅವರು ಹೇಳಿದಂತೆಯೇ ಮಾಡಿದೆ. ಆಕೆ ಗೀಳಿಕೊಳ್ಳುವುದನ್ನು ನಿಲ್ಲಿಸಿದಳು", ಎಂದು ಆ ಮನೋವೈದ್ಯ ಹೇಳುತಾನೆ.

ಪೋಲೀಸರಿಗೆ ಕಾರ್ಯಾಗಾರಗಳನ್ನು ನಡೆಸುವ ಡೆಟ್ರಾಯಿಟ್ ನಗರದ ಒಬ್ಬ ಮನೋವೈದ್ಯ ಬ್ರೂಸ್‌ಡಾಂಟೋ, "ನಿಷ್ಕ್ರಿಯ ಕೇಳುಗರಾಗಿರುವುದನ್ನು ಬಿಟ್ಟು ಸಕ್ರಿಯ ಸಹಾಯಕರಾಗಿ ಬದಲಾಯಿಸಿಕೊಳ್ಳುವ ಅಗತ್ಯ ನಮಗಿದೆ. ಎಂದು ಹೇಳುತ್ತಾನೆ. ಆತ ಮುಂದುವರಿದು, "ನೀನು ಸುಮ್ಮನೆ ನಿನ್ನ ಕುರ್ಚಿಯಲ್ಲಿ ಕೂರಲಾಗದು. ಕೆಲವು ವೇಳೆ ನೀನು ಸಾಮಾಜಿಕ ಕಾರ್ಯಕರ್ತನಾಗಬೇಕಾಗುತ್ತದೆ. ಉದ್ಯೋಗ ದೊರಕಿಸಿಕೊಳ್ಳಲು ರೋಗಿಗೆ ನೆರವಾಗಬೇಕಾಗುತ್ತದೆ. ಆಸ್ಪತ್ರೆಗೆ ಭೇಟಿಕೊಡಬೇಕಾಗುತ್ತದೆ. ಅಲ್ಲದೆ ರೋಗಿಯ ಮನೆಗೂ ಹೋಗಿ ಬರಬೇಕಾಗುತ್ತದೆ. ಪಟ್ಟಿಮಾಡದ ಫೋನ್ ನಂಬರ್ ಪಡೆದಿರುವ ಚಿಕಿತ್ಸಕನ ಬಳಿಗೆ ಯಾರನ್ನೂ ನಾನು ಎಂದೂ ಕಳಿಸಲಾರೆ" ಎಂದು ಹೇಳುತ್ತಾನೆ. ಈ ಅಭಿಪ್ರಾಯವನ್ನು ಒಪ್ಪುತ್ತಾ, ಬೋಸ್ಟನ್ ಮನೊವೈದ್ಯನಾದ ಜಾನ್ ಮಾಲ್ಟಸ ಬರ್ಜರ್, "ಆತ್ಮಹತ್ಯೆಗೆ ಯತ್ನಿಸುವ ರೋಗಿಗಳಿಗೆ ಚಿಕಿತ್ಸೆ ಮಾಡುವುದೆಂದರೆ ಅವರಿಗೆ ಬೇಕಾದಾಗ ಲಭ್ಯವಿರುವುದು" ಎಂದು ಹೇಳುತ್ತಾನೆ.

ಮಾರ್ಗಗಳನ್ನು ವಿಂತಿಗೊಳಿಸುವುದು : ಜಗತ್ತಿನಾದ್ಯಂತ ಇರುವ ಆತ್ಮಹತ್ಯೆ ನಿರೋಧ ಕೇಂದ್ರಗಳಲ್ಲಿರುವ ಯಾವುದೇ ವ್ಯಕ್ತಿಯು ಟೆಲಿಫೋನ್ ಮೂಲಕ ಸಂಪರ್ಕಿಸಬಹುದಾದ ಸ್ವಯಂಸೇವಕ ಸಮೂಹಗಳಲ್ಲಿ, ಅತ್ಯಂತ ಹೆಸರುವಾಸಿಯಾದವರೆಂದರೆ ಸಮಾರಿಟನ್ನರು (Samaritans). ೧೯೫೩ರಲ್ಲಿ ಲಂಡನ್ ನಗರದಲ್ಲಿ ದಿನಕ್ಕೆ ಮೂರು ಆತ್ಮಹತ್ಯೆ ಪ್ರಕರಣಗಳಿರುತ್ತಿದ್ದವು. ಇದರಿಂದ ಆತಂಕಗೊಂಡ

ಆಂಗ್ಲಿಕನ್ ಧರ್ಮಬೋಧಕ ಚಡ್‌ವಾರಹ್, ಸಮಾರಿಟನ್ಸ್‌ನ ಯರ ಕಾರ್ಯ ಪ್ರಾರಂಭಿಸಿದ. ಸಂಕಟಕರ ಸಮಯದಲ್ಲಿ ವ್ಯಕ್ತಿಗಳ ಆತಂಕದ ಕಥೆಯನ್ನು ಕೇಳಲು ತಾನು ಸದಾಲಭ್ಯವಿರುವುದಾಗಿ ಆತನು ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿದ. ಇದಕ್ಕೆ 'ಸ್ನೇಹ ಬೆಳಸುವುದು' ಎಂದು ಆತ ಹೆಸರಿಟ್ಟ. ಮತ್ತೊಬ್ಬರ ನೆರವನ್ನು ಪಡೆದುಕೊಳ್ಳುವ ಯತ್ನವನ್ನು ಹೆದರಿಕೆಯು ತಪ್ಪಿಸುತ್ತದೆ ಎಂಬ ಲಾರ್ಕಹ್‌ನ ಊಹೆ ನಿಜವೆನಿಸಿತು. ಇಂದು ಬ್ರಿಟಿಷ್ ದ್ವೀಪಗಳಲ್ಲಿ ೧೮೦ ಸಮಾರಿಟನ್ ಶಾಖೆಗಳಿವೆ. ಈ ಶಾಖೆಗಳು ೨೦,೦೦೦ ಸ್ವಯಂಸೇವಕರನ್ನು ಬಳಸಿಕೊಳ್ಳುತ್ತವೆ. ಇದಲ್ಲದೆ ಇತರ ೩೬ ದೇಶಗಳಲ್ಲಿ† ೧೦೦ ವಿಭಾಗಗಳಿವೆ.

ಆತ್ಮಹತ್ಯೆಗೆ ಯತ್ನಿಸುವವರಿಗೆ ನೆರವು ಕೊಡಲು ಅತ್ಯುತ್ತಮ ಅವಕಾಶ ಪಡೆದವರೆಂದರೆ, ಸಾಮಾನ್ಯರೋಗಚಿಕಿತ್ಸಕರು. ಆದರೆ, ಅವರಿಗಿರುವ ಸಿದ್ಧತೆ ಅತ್ಯಲ್ಪ. ತಾವು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮುಂಚೆ ನಾಲ್ಕು ತಿಂಗಳ ಅವಧಿಯಲ್ಲಿ, ಶೇಕಡ ೭೫ ಮಂದಿ, ಒಂದಿಲ್ಲ ಒಂದು ಸಲ ಯಾರಾದರೂ ಚಿಕಿತ್ಸಕನನ್ನು ಭೇಟಿಯಾಗಿರುತ್ತಾರೆ ಎಂದು ಅಂದಾಜು ಮಾಡಲಾಗಿದೆ. ಆದರೆ. ಆತ್ಮಹತ್ಯೆಗೆ ಸಂಬಂಧಿಸಿದಂತೆ, ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಬಹುಮಂದಿ ಒಂದಾದರೂ ಉಪನ್ಯಾಸವನ್ನು ಎಂದೂ ಕೇಳಿರುವುದಿಲ್ಲ.

"ಪೋಲೀಸ್ ಕ್ಷೇತ್ರದಲ್ಲಿ, ಈ ಬಗ್ಗೆ ಹೆಚ್ಚು ಕಾರ್ಯ ನಡೆಯುತ್ತಿದೆಯೆಂದು ನಾನು ಭಾವಿಸುತ್ತೇನೆ" ಎಂದು ಬ್ರೂಸ್‌ಡಾಂಟೋ ಹೇಳುತ್ತಾನೆ. ನೂಯಾರ್ಕ್ ನಗರದ ಪೋಲೀಸ್ ವಿಭಾಗದ ತುರ್ತು ಸೇವಾಘಟಕದ ಅಧಿಕಾರಿ ಫ್ರಾಂಕ್ ಗಾಲಾಘರ್, "ಸಾಧನ ಸಲಕರಣೆಗಳಿಲ್ಲದೆ, ಇತರ ಮೂರು ವಸ್ತುಗಳನ್ನು-ತಿಳಿವಳಿಕೆ ತಾಳ್ಮೆ ಮತ್ತು ಆದರ, ಇವುಗಳನ್ನು ನಮ್ಮ ತಂಡಗಳು ತಮ್ಮೊಂದಿಗೆ ಒಯ್ಯುತ್ತವೆ," ಎಂದು ಹೇಳುತ್ತಾನೆ. ೧೯೮೨ ರಲ್ಲಿ ೧೬೬೧ ಮಂದಿ ಹಾರಿ ಪ್ರಾಣತೆಗೆದುಕೊಳ್ಳುವವರನ್ನು ಉಳಿಸಲು ಈ ಘಟಕ ನೆರವಾಯಿತು. ಅವರಲ್ಲಿ ಶೇಕಡ ೧೦ ಮಂದಿ ಮಾತ್ರ ದುರಾದೃಷ್ಟವನ್ನಪ್ಪಿದರು.

ನ್ಯಾನ್ಸಿ ಕೆಹೋ ಒಬ್ಬ ನೈದಾನಿಕ ಮನೋವಿಜ್ಞಾನಿ ಹಾಗೂ ಕ್ರೈಸ್ತ ಸನ್ಯಾಸಿನಿ. ಆಕೆಯು ಕಳುಹಿಸಿಕೊಟ್ಟ ಪ್ರಶ್ನಾವಳಿಗಳಿಂದ ದೊರೆತ ಮಾಹಿತಿಗಳು, ರೋಗಿಗಳ ಧಾರ್ಮಿಕತೆಯ ಬಗ್ಗೆ ಚಿಕಿತ್ಸಕರು ಕೇಳುವುದು ಅಪರೂಪ ಎಂಬ ಅಂಶವನ್ನು ಬೆಳಕಿಗೆ ತಂದವು. "ಯಾವುದು ತನ್ನ ಬದುಕು-ಸಾವುಗಳ ಬಗ್ಗೆ ಒಬ್ಬ

---

† ನೋಡಿ ''Sanjivini, a Friend Indeed'' Readers Digest, March 1980

ವ್ಯಕ್ತಿಯು ಕೊನೆಯು ಹೇಳಿಕೆಯಂತಿರುತ್ತದೋ ಅಂತಹ ಆತ್ಮಹತ್ಯೆಯ ಎದುರಲ್ಲಿ ನಾವೇಕೆ ಮಾನಸಿಕ ಆರೋಗ್ಯ ಮತ್ತು ನಂಬಿಕೆಗಳನ್ನು ಪ್ರತ್ಯೇಕಿಸುತ್ತೇವೆ* ? ಎಂದು ಆಕೆ ಕೇಳುತ್ತಾಳೆ. ಮುಂಧುವರಿದು ಆಕೆ "ಈ ಸಮಸ್ಯೆಯನ್ನು ಅರಿತು ವ್ಯವಹರಿಸಿದ ಚಿಕಿತ್ಸಕರು ಆದರ ಉಪಯುಕ್ತತೆಯನ್ನು ಕಂಡುಕೊಂಡಿದ್ದಾರೆ" ಎಂದು ಹೇಳುತ್ತಾಳೆ.

ನೆರವಾಗಬಲ್ಲಂತಹ ಇತರ ಅನೇಕ ವಿಧಾನಗಳನ್ನು ಕೆಲವು ಆತ್ಮಹತ್ಯೆ ಶಾಸ್ತ್ರಜ್ಞರು ಸೂಚಿಸುತ್ತಾರೆ. ಅವುಗಳಲ್ಲಿ ಕೆಲವು ಹೀಗಿವೆ : ಕಟ್ಟಳೆ. ಔಷಧಿಗಳ ಮೇಲೆ ಬಿಗಿಯಾದ ನಿಯಂತ್ರಣ; ವೀಕ್ಷಕ ಅಟ್ಟಣೆಗಳಿಗೆ ಈಟಿ ಸಂರಕ್ಷಣೆ, ಅಗಲವಾಗಿ ತೆರೆಯಲಾಗದ ಕಿಟಕಿಗಳು ಮತ್ತು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ, ಬಂದೂಕು ನಿಯಂತ್ರಣ ಮಾರಕ ವಿಧಾನಗಳಿಗೆ ಅವಕಾಶವನ್ನು ಮಿತಿಗೊಳಿಸಿದಾಗ, ಆತ್ಮಹತ್ಯೆಯ ಸಂಖ್ಯೆ ಕಡಿಮೆಯಾಗುತ್ತದೆಂದು ಈ ಆತ್ಮಹತ್ಯೆ ಶಾಸ್ತ್ರಜ್ಞರು ಭಾವಿಸುತ್ತಾರೆ. ಕೆಳಗೆ ಬೀಳುವುದರಿಂದ ತಪ್ಪಿಸಲಾದ ೫೧೫ ಮಂದಿಯಲ್ಲಿ, ಕೇವಲ ಶೇಕಡ ೨೫ ಮಂದಿ ಮಾತ್ರ ತಮ್ಮ ಪ್ರಾಣವನ್ನು ತಾವೇ ತೆಗೆದುಕೊಳ್ಳಲು ಹೊರಟವರು ಎಂದು ಒಂದು ಅಧ್ಯಯನ ತೋರಿಸಿದೆ. ಕ್ರಿ. ಪೂ. ೪೬ ರಲ್ಲಿ ಮುನ್ನುಗ್ಗುತ್ತಿರುವ ಶತ್ರುಸೈನ್ಯ ಕೊಲ್ಲುವ ಮೊದಲೇ ತನ್ನ ಪ್ರಾಣ ಕಳೆದುಕೊಳ್ಳುವ ಉದ್ದೇಶದಿಂದ ಕಿರಿಯ ಕ್ಯಾಟೋ ತಾನೇ ತನ್ನ ಕತ್ತಿಯಮೇಲೆ ಬಿದ್ದ. ಎಚ್ಚರಗೊಂಡಾಗ, ವೈದ್ಯನೊಬ್ಬನು ತನ್ನ ಗಾಯಕ್ಕೆ ಬಟ್ಟೆಕಟ್ಟುತ್ತಿದ್ದುದನ್ನು ಕಂಡ. ಆ ವೈದ್ಯನನ್ನು ಜೋರಾಗಿ ದೂರತಳ್ಳಿ, ಗಾಯಕ್ಕೆ ಕಟ್ಟಿದ್ದ ಬಟ್ಟೆಯನ್ನು ಕಿತ್ತೊಗೆದು ಕ್ಯಾಟೋ ಸತ್ತ.

ಆತ್ಮಹತ್ಯೆ ಮಾಡಿಕೊಳ್ಳುವ ಹಕ್ಕಿನ ಬಗ್ಗೆ ಬಹಳ ಹಿಂದಿನಿಂದಲೂ ವಾದ ವಿವಾದ ನಡೆದಿದೆ. ಲಂಡನ್ನಿನಲ್ಲಿ ಎಕ್ಸಿಟ್ ಎಂಬ ಹೆಸರಿನ ಸಂಸ್ಥೆಯೊಂದು "ಆತ್ಮ ವಿಮೋಚನೆಗೆ ಒಂದು ಮಾರ್ಗದರ್ಶಿ" (A Guide to self Deliverance) ಎಂಬ ಪುಸ್ತಕವನ್ನು, ಸರ್ಕಾರ ಅದನ್ನು ಧ್ವಂಸಮಾಡಿ ನ್ಯಾಯಾಲಯಕ್ಕೆ ಎಳೆಯುವ ಬೆದರಿಕೆ ಹಾಕುವವರೆಗೂ, ಪ್ರಕಟಿಸುತ್ತಿತ್ತು. ಪ್ಯಾರಿಸ್ಸಿನಲ್ಲಿ "ಆತ್ಮಹತ್ಯೆ ಕಾರ್ಯಾಚರಣೆಯ ಸೂಚನೆಗಳು" ಎಂಬ ಪುಸ್ತಕವು ಪ್ರಕಟವಾದ ಒಂದು ತಿಂಗಳೊಳಗಾಗಿ ೫೦,೦೦೦ ಪ್ರತಿಗಳು ಮಾರಾಟವಾದವು.

ಹೀಗಿದ್ದರೂ ವೈದ್ಯರ ನಡುವೆ ವಾದವಿವಾದವಿರುವುದು ಅತ್ಯಲ್ಪ. "ಜೀವನದಲ್ಲಿ ಅಸಫಲರಾದ ಜನರ ವಿಷಣ್ಣತೆಗೆ ಚಿಕಿತ್ಸೆ ಮಾಡಿರುವದನ್ನೂ ಅಂತಹ ಚಿಕಿತ್ಸೆಯಿಂದ ಲಾಭಪಡೆದವರು ತಾವು ಬದುಕಿರುವದಕ್ಕಾಗಿ ಇಂದು ಕೃತಜ್ಞರಾಗಿರುವುದನ್ನೂ ನಾವು ಕಂಡಿದ್ದೇವೆ. ಈ ಕಾರಣಕ್ಕಾಗಿಯೇ ಅನೇಕ ಚಿಕಿತ್ಸಕರು ಆತ್ಮಹತ್ಯೆಗೆ ಮಹತ್ವ ಕೊಡುವುದಿಲ್ಲ" ಎಂದು ಲಿಯೋನ್ ಐಸನ್ ಬರ್ಗ್ ಹೇಳುತ್ತಾನೆ. ಕಳೆದ ಮೂವತ್ತು

ವರ್ಷಗಳಿಗಿಂತಲೂ ಹೆಚ್ಚಾದ ಅವಧಿಯಲ್ಲಿ, ಆರನೆಯ ಮಹಡಿಯಿಂದ ನೆಗೆದೂ ಉಳಿದುಕೊಂಡಿರುವ ನಾಲ್ಕು ಮಂದಿಯೊಡನೆ ಹರ್ಬರ್ಟ್ ಹೆಂಡಿನ್ ಸಮಾಲೋಚಿಸಿದ. ಅವರಲ್ಲಿ ಇಬ್ಬರು ಕೆಳಗೆ ಬೀಳುತ್ತಿರುವಾಗ ಮನಸ್ಸು ಬದಲಿಸಿದ್ದರು. ಇಬ್ಬರು ಬದಲಿಸಿರಲಿಲ್ಲ. ಆ ನಾಲ್ಕು ಜನರಲ್ಲಿ ಒಬ್ಬನು ಮಾತ್ರ ಮತ್ತೊಮ್ಮೆ ಆತ್ಮಹತ್ಯೆಗೆ ಯತ್ನಿಸಿದ್ದ.

ಜೀವಿಸಲು ಒಂದು ಉದ್ದೇಶ : ಯಾವುದೇ ಆತ್ಮಹತ್ಯೆಗೆ ಜೀವಿತಾದ್ಯಂತದ ಇತಿಹಾಸವಿರುತ್ತದೆ ಎಂದು ಹೆಂಡಿನ್ ನಂಬುತ್ತಾನೆ. ಆತ್ಮಹತ್ಯೆಯು ಅನೇಕವೇಳೆ ವಿಷಣ್ಣತೆಯ ಪರಿಣಾಮವಾಗಿರದೆ, ವಿಚಾರವಿಕೃತಿಯ ಪರಿಣಾಮವಾಗಿರುತ್ತದೆ ಎಂಬುದು ಪಾಲ್‌ವಾಲ್ಟರ್ಸನ ನಂಬಿಕೆ. ಆತ ಕ್ಯಾಲಿಫೋರ್ನಿಯದ ಸ್ಟಾನಫೋರ್ಡ ನಗರದಲ್ಲಿರುವ ಸ್ಟಾನ್‌ಫೋರ್ಡ ವಿಶ್ವವಿದ್ಯಾನಿಲಯದ ಕೋವೆಲ್ ಮಾನಸಿಕ ಸೇವಾ ಕೇಂದ್ರದಲ್ಲಿ ಮನೋವೈದ್ಯನಾಗಿದ್ದಾನೆ. ಆತ ಹೀಗೆ ಹೇಳುತ್ತಾನೆ : "ನನ್ನ ದೃಷ್ಟಿಯಲ್ಲಿ ಪ್ರಧಾನ ಕಾರಣವೆಂದರೆ, ಶೂನ್ಯತನ. ನಿಮ್ಮ ಆತ್ಮಗೌರವದ ನಿಯಂತ್ರಣವನ್ನು ನಿಮ್ಮ ಅಂತರಂಗದಲ್ಲಿಯೇ ಮಾಡಿಕೊಳ್ಳಬೇಕು. ಹಾಗಾದಾಗ, ನಿಮಗೆ ನೀವೇ ಕೊಟ್ಟುಕೊಳ್ಳುವ ಭರವಸೆ ಮತ್ತು ಅದರ ಈಡೇರಿಕೆಗಳನ್ನು ನಿಮ್ಮ ಬಗ್ಗೆ ನಿಮಗಿರುವ ಭಾವನೆ ಹೆಚ್ಚು ಅವಲಂಬಿಸಿರುತ್ತದೆ. ಆದರೆ ಕೆಲವು ಜನರು ಇಟ್ಟುಕೊಳ್ಳಬಲ್ಲ ಏಕೈಕ ಭರವಸೆಯೆಂದರೆ ಆತ್ಮಹತ್ಯೆ ಒಂದೇ. ಅದು ಅವರ ಕೊನೆಯ ನಿಯಂತ್ರಣ ಬೇರೆ ಏನೇ ಆದರೂ ಕೂಡ ಅವರು ಯಾವಾಗಲಾದರೂ ತಮ್ಮ ಪ್ರಾಣವನ್ನು ತೆಗೆದುಕೊಳ್ಳಬಲ್ಲರು. ಇದು ಭೀಕರ."

ಹೀಗಿರುವಾಗ, "ಒಬ್ಬ ವ್ಯಕ್ತಿಯು ಯಾತಕ್ಕಾಗಿ ಜೀವಿಸಬೇಕು" ಎಂಬುದನ್ನು ಕಂಡುಹಿಡಿಯಬೇಕೆಂಬುದು ಅನಿವಾರ್ಯವಾಗುತ್ತದೆ ಎಂಬುದು ರೂಲ್ಟಸಬರ್ಜರನ ಅಭಿಮತ. ಆತ ಹೀಗೆ ಹೇಳುತ್ತಾನೆ : "ಚಿತ್ರವಿಚಿತ್ರವಾದ ವಸ್ತು ವಿಷಯಗಳಿಗಾಗಿ ಬಹು ಜನ ಜೀವಿಸುತ್ತಾರೆ. ಒಂದು ಕಡೆ ಏನಾದರೂ ಕಳೆದುಕೊಂಡರೆ ಅವರು ಮತ್ತೊಂದು ಕಡೆ ಅದನ್ನು ಪಡೆಯಬಲ್ಲರು. ಆದರೆ ಆತ್ಮಹತ್ಯೆಗೆ ಯತ್ನಿಸುವ ಜನರು ತಮ್ಮ ಆಂತರಿಕ ಸಂಪನ್ಮೂಲಗಳ ಆಧಾರದ ಮೇಲೆಯೇ ಜೀವಿಸಲಾರರು, ಹಾಗೆ ಜೀವಿಸಿರಲು ಬೇಕಾದ ಶಕ್ತಿಸಾಮರ್ಥ್ಯಗಳಲ್ಲಿ ಅವರು ದುರ್ಬಲರಾಗಿರುತ್ತಾರೆ. ಇದನ್ನು ಹೋಲುವಂತಹ ವಿಚಾರವನ್ನೇ ವಾಲ್ಟರ್ಸ್ ಪ್ರತಿಧ್ವನಿಸುತ್ತಾನೆ. ಕಿರಿಯ ವಯಸ್ಕರೊಂದಿಗೆ ಕೆಲಸ ಮಾಡುವುದೆಂದರೆ, ಅವರು ತಮ್ಮನ್ನು ತಾವೇ ಕೊಂದು ಕೊಳ್ಳುವಂತೆ ಪಡೆಯುವ ಪ್ರಯತ್ನ ಎಂದು ಅನೇಕರು ಯೋಚಿಸುತ್ತಾರೆ. ಅದು ಅಷ್ಟುಮಾತ್ರವಲ್ಲ. ಜೀವಿಸಲು ಬೇಕಾದ ಉದ್ದೇಶವೊಂದನ್ನು ಕಂಡುಕೊಳ್ಳುವಂತೆ ಅವರಿಗೆ ನೆರವು ನೀಡುವ ಪ್ರಯತ್ನವೂ ಹೌದು" ಎಂದು ವಾಲ್ಟರ್ಸ್ ಹೇಳುತ್ತಾನೆ.

ಅಂದು ಅಮೆರಿಕೆಯ ಆತ್ಮಹತ್ಯೆಶಾಸ್ತ್ರ ಸಂಘದ ೧೫ ನೇ ವಾರ್ಷಿಕಾಧಿವೇಶನದ ಕೊನೆಯ ದಿನ, ೫೦೦ ಕ್ಕೂ ಹೆಚ್ಚು ಮಂದಿ ಆತ್ಮಹತ್ಯೆ ಶಾಸ್ತ್ರಜ್ಞರು ನ್ಯೂಯಾರ್ಕ ನಗರದಲ್ಲಿ ಒಗ್ಗೂಡಿದ್ದರು. "ಅಂಚಿನ ವ್ಯಕ್ತಿತ್ವವಿಕಾರಗಳು ಮತ್ತು ಆತ್ಮಹತ್ಯಾ ವರ್ತನೆ" ಎಂಬ ವಿಷಯವಾಗಿ ಬೆಳಿಗ್ಗೆ ೮-೩೦ ಗಂಟೆಗೆ ಸಭೆ ನಡೆದಿತ್ತು.

ಅಂಚಿನ ರೋಗಿಯ ಅಧ್ಯಯನಗಳ ಮೂಲಪುರುಷನೆನಿಸಿದ ಡಾ. ಒಟೋ ಕರ್ನ್‌ಬರ್ಗ್, ತನ್ನ ಸಂಶೋಧನಾ ಪ್ರಬಂಧವನ್ನು ಓದುವುದನ್ನು ಮುಗಿಸಿದ್ದ. ಪ್ರಶ್ನೆ ಕೇಳಲು ಅಧ್ಯಕ್ಷರು ಸಭಿಕರನ್ನು ಆಹ್ವಾನಿಸಿದರು. ಹಿಂದಿನ ಸಾಲಿನಲ್ಲಿ ಒಂದು ಕೈ ಮೇಲೆದ್ದಿತು. ತನ್ನ ಉದ್ದವಾದ ತಲೆಗೂದಲನ್ನು ಹಿಂದಕ್ಕೆ ಎಳೆದು ಕಟ್ಟಿಕೊಂಡಿದ್ದ ಓರ್ವ ದುರ್ಬಲ ಯುವಕನು ಹಾಗೆ ಕೈ ಎತ್ತಿದ್ದ.

ಅವನು ಎದ್ದು ನಿಂತ. ಆತ್ಮಹತ್ಯೆಗೆ ಧ್ಯಾನವು ಸಿದ್ಧೌಷಧಿ ಎಂಬುದು ಆತನು ಕೇಳಿದ ಅಸಂಬದ್ಧ ಪ್ರಶ್ನೆಯಿಂದ ಸೂಚಿತವಾಗಿತ್ತು. ಸಭಿಕರ ಕಣ್ಣುಗಳೆಲ್ಲ ಅವನ ಕಡೆಗೆ ತಿರುಗಿದವು ಮತ್ತು ನಗುವಿನ ಅಲೆಗಳೆದ್ದವು. ಅಧ್ಯಕ್ಷರು ಮಧ್ಯೆ ಪ್ರವೇಶಿಸಿ "ಅದು ಕುತೂಹಲಕಾರಿ ಪ್ರಶ್ನೆ, ಆದರೂ ನಾವು ಮುಂದೆ ಸಾಗೋಣ" ಎಂದು ಹೇಳಿದರು.

"ನಿನಗೆ ತುಂಬಾ ಧನ್ಯವಾದಗಳು, ನಾವೆಲ್ಲಾ-ಅನೇಕ ವಿಷಯಗಳನ್ನು ತಿಳಿದುಕೊಂಡೆವು ಎಂದು ನಾನು ನಂಬುತ್ತೇನೆ...ಎಂಬ ತನ್ನ ಭಾಷಣವನ್ನು ಅಧ್ಯಕ್ಷರು ಪ್ರಾರಂಭಿಸಿದಾಗ, ದಿಗ್ಭ್ರಮೆಗೊಂಡ ಆ ಯುವಕನು ಕುಳಿತುಕೊಳ್ಳತೊಡಗಿದ. ಆಗ ಕರ್ನ್‌ಬರ್ಗ್ ಮೈಕ್ರೊಫೋನನ್ನು ಕೈಗೆತ್ತಿಕೊಂಡು, "ಆ ಪ್ರಶ್ನೆಗೆ ಉತ್ತರಿಸಲು ನಾನು ಇಷ್ಟಪಡುತ್ತೇನೆ" ಎಂದು ಹೇಳಿದ. ಹಾಗೆಯೇ ತನ್ನ ಪಠ್ಯಪುಸ್ತಕದ ವಿಯನ್ನೀಯ ಶೈಲಿಯಲ್ಲಿ ಎಚ್ಚರಿಕೆ ಮತ್ತು ಆದರದ ನುಡಿಗಳಲ್ಲಿ ಉತ್ತರಿಸಲು ಆತ ತೊಡಗಿದ.

ಕರ್ನಾಟಕ ಜಾನಪದ ರಂಗಭೂಮಿ

● ಸಿ. ಕೆ. ನಾವಲಗಿ

ರಂಗಭೂಮಿ–ನಾಟಕದ ಮೂಲಭೂತ ಆವಶ್ಯಕತೆಗಳಲ್ಲಿ ಒಂದು. ದೃಶ್ಯಾತ್ಮಕ ಕಲೆಯಾದ ನಾಟಕದ ಪ್ರದರ್ಶನ ರಂಗಭೂಮಿಯಿಲ್ಲದೆ ಸಾಧ್ಯವಿಲ್ಲ. ಒಂದು ನಾಟಕದ ನಿಜವಾದ ಯಶಸ್ಸು ಅದರ ಪ್ರದರ್ಶನ ಕಲೆಯನ್ನು ಅವಲಂಬಿಸಿರುತ್ತದೆ. ಹೀಗಾಗಿ, ನಾಟಕದ ಕಲಾತ್ಮಕ ಯಶಸ್ಸಿನಲ್ಲಿ ರಂಗಭೂಮಿಯ ಪಾತ್ರ ತುಂಬ ಮಹತ್ವಪೂರ್ಣ–ವಾದುದು.

ರಂಗಭೂಮಿ ಎಂದರೆ ರಂಗಮಂಟಪ ಅಥವಾ 'ವೇದಿಕೆ' ಮಾತ್ರವಲ್ಲ. ವಾಸ್ತವವಾಗಿ ಅದು ಪ್ರದರ್ಶನ ರಂಗ ಅಥವಾ ರಂಗಸ್ಥಳ, ಪರದೆ, ಆಸನಗಳು, ವೇಷ–ಭೂಷಣ, ಪ್ರೇಕ್ಷಕ ಸ್ಥಳ, ಮತ್ತು ಶಬ್ದ ವ್ಯವಸ್ಥೆಯನ್ನೊಳಗೊಂಡ. ರಂಗ ಭವನದ ಮುಖ್ಯಾಂಗ; ಸಾಮೂಹಿಕ ಕಲೆಯಾದ ನಾಟಕವನ್ನು ಸಾರ್ವಜನಿಕರ ಮುಂದೆ ಪ್ರದರ್ಶಿಸುವ 'ಅಭಿನಯ ಕ್ಷೇತ್ರ'ವದು. "ರಂಗಭೂಮಿ ಎಂಬುದಕ್ಕೆ ವಿಶಾಲವ್ಯಾಪ್ತಿಯಿದೆ. ನಾಟಕ, ನಟ, ಪ್ರೇಕ್ಷಕರನ್ನೊಳಗೊಂಡ ಮಹಾಸಂಸ್ಥೆ ಅದು. ಒಂದು ದೇಶದ ರಂಗಭೂಮಿಯ ವಿವೇಚನೆ ಮಾಡುವಲ್ಲಿ ಆ ದೇಶದ ನಾಟಕದ ಸ್ವರೂಪ, ಬೆಳವಣಿಗೆ, ನಟ-ನಟಿಯರ ಸಾಮರ್ಥ್ಯ, ಪ್ರದರ್ಶನವಿಧಾನ, ಪ್ರೇಕ್ಷಕರ ಅಭಿರುಚಿ ಈ ಎಲ್ಲದರ ಸಮೀಕ್ಷೆ ಅವಶ್ಯವಾಗುತ್ತದೆ" ಜಾನ್‌ರಸೆಲ್ ಬ್ರಾನ್–ರಂಗಸ್ಥಳ, ಪ್ರೇಕ್ಷಕಸ್ಥಳ, ಮತ್ತು ನಾಟಕ ಕ್ರಿಯೆಗಳಿಗಾಗಿ ಜೋಡಣೆ[೧] (Settings) ಇವು ಮೂರೇ ರಂಗಭೂಮಿಯ ಪ್ರಧಾನಾಂಗಗಳು, ಇವು ಮೂರು ರಂಗಭೂಮಿಯನ್ನು ತಿಳಿಯಲು ಅರಿವಿರಬೇಕಾದ ಅಂಶಗಳು ಎಂಬುದಾಗಿ ಹೇಳುತ್ತಾನೆ. ಭರತಮುನಿ–ರಂಗಭೂಮಿಯನ್ನು ನಾಟ್ಯಮಂಟಪ ಅಥವಾ ಪ್ರೇಕ್ಷಾಗೃಹ, ಪ್ರಯೋಗ, ನಟರು ಮತ್ತು ಪ್ರೇಕ್ಷಕರು ಎಂದು ನಾಲ್ಕು ಭಾಗವಾಗಿ ವಿಂಗಡಿಸುತ್ತಾನೆ.

ಭಾರತದ ಇತರ ಪ್ರಾದೇಶಿಕ ರಂಗಭೂಮಿಗಳಂತೆ, ಕನ್ನಡ ರಂಗಭೂಮಿಯು ಜನಪದ, ವೃತ್ತಿ ಮತ್ತು ವಿಲಾಸೀ ರಂಗಗಳನ್ನು ಒಳಗೊಂಡಿದೆ. ಇವು ಕಾಲಕ್ರಮೇಣ

---

೧. ಡಾ. ಎಚ್. ಕೆ. ರಂಗನಾಥ : ಕರ್ನಾಟಕ ರಂಗಭೂಮಿ - ಪು. ೨೭

ಒಂದರ ಜೊತೆಯಲ್ಲಿಯೇ ಇನ್ನೊಂದು ಅಸ್ತಿತ್ವವನ್ನು ಪಡೆದು, ಬೆಳೆದು ಬಂದಿವೆ. ಮಾನವಕಲ್ಯಾಣ ಮತ್ತು ಆತನ ಧಾರ್ಮಿಕ ಬದುಕಿನ ವೈಭವಪೂರ್ಣ ಚಿತ್ರವನ್ನು ಈ ತ್ರಿರಂಗಗಳು ಪ್ರತಿಬಿಂಬಿಸಿವೆ. ರಂಗಭೂಮಿಯ ಪ್ರಯೋಜನದ ಬಗೆಗೆ ಒಂದೇ ಮಾತಿನಲ್ಲಿ ಹೇಳುವುದಾದರೆ— ಇದು ಜೀವನರಂಗಕ್ಕೆ ಹಿಡಿದ ಕೈಗನ್ನಡಿ; ಇದರಲ್ಲಿ ಅಪೇಕ್ಷಿತ-ಅನಪೇಕ್ಷಿತ ದೃಶ್ಯಗಳೆಲ್ಲವೂ ಸುಳಿದು ಹೋಗುತ್ತವೆ. "ಮಾನವನ ಅನುಭವಗಳ ಅಭಿವ್ಯಕ್ತಿಗೆ ರಂಗಭೂಮಿಗಿಂತ ಉತ್ತಮ ಮಾಧ್ಯಮ ಬೇರೊಂದಿಲ್ಲ." ಆದುದರಿಂದಲೇ "ಕಾವ್ಯೇಷು ನಾಟಕಂ ರಮ್ಯಂ" ಎಂಬ ಪ್ರಾಚೀನರ ಅನುಭವದ ಅಭಿವ್ಯಕ್ತಿ ಇಂದಿಗೂ ಪ್ರಸ್ತುತ.[೧] ಈ ದೃಷ್ಟಿಯಿಂದಲೇ ವಿದ್ವಾಂಸರು ಹೇಳಿದಂತೆ, 'ರಂಗಭೂಮಿ ಎಂದರೆ ಜನತೆಯ ವಿಶ್ವವಿದ್ಯಾನಿಲಯ, ಜನತೆಯ ದೇಗುಲ'[೨]. ಇಂಥ ವಿಶಿಷ್ಟ ಅರ್ಥ, ಗೊತ್ತು-ಗುರಿಗಳನ್ನು ಕನ್ನಡ ಜನಪದ ರಂಗಭೂಮಿಯೂ ಪ್ರತಿ-ಬಿಂಬಿಸಿವೆ ಎಂಬ ವಿಚಾರವನ್ನು ಅದರ ಇತಿಹಾಸದಿಂದ ಕಂಡುಕೊಳ್ಳಬಹುದು.

ಜನಪದ ರಂಗಭೂಮಿಯ ಪ್ರಾಚೀನತೆ : ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯವನ್ನು ಜಾನಪದ, ಶಿಷ್ಟ ಎಂಬ ಪ್ರಕಾರಗಳಲ್ಲಿ ವಿಂಗಡಿಸುತ್ತೇವೆ. ಮೊದಲು ಜಾನಪದ, ಆಮೇಲೆ ಶಿಷ್ಟ. -ಇದನ್ನೇ ಬಿ. ಎಂ. ಶ್ರೀ ಅವರ ಮಾತಿನಲ್ಲಿ ಹೇಳುವುದಾದರೆ, ಮೊದಲು ಜನವಾಣಿ, ಆಮೇಲೆ ಕವಿವಾಣಿ. ವಿಶ್ವವ್ಯಾಪಿ ಸಾಮಾನ್ಯವಾಗಿರುವ ಈ ಮಾತು 'ರಂಗಭೂಮಿ'ಗೂ ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ ಜನಪದ ರಂಗಭೂಮಿ, ಶಿಷ್ಟರಂಗಭೂಮಿಗಿಂತ ಪ್ರಾಚೀನ ಜನಪದರಂಗಭೂಮಿ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿ'ಗಳಾದ ಹಳ್ಳಿಗರಿಂದ, ಸ್ವತಂತ್ರವಾಗಿ, ಅವರ ಮನೋರಂಜನೆ ಮತ್ತು ಮನೋವಿಕಾಸಕ್ಕಾಗಿ ಹುಟ್ಟಿ-ಬೆಳೆಯಿತು. ಇದರ ಹುಟ್ಟು-ಬೆಳವಣಿಗೆ ಗ್ರಾಮೀಣ ಪರಿಸರವಾದ್ದರಿಂದ, ಗ್ರಾಮೀಣರ ಜೀವನವಿಧಾನ, ರೀತಿ-ನೀತಿ, ಚಾತುರ್ಯ-ಚಮತ್ಕಾರ, ಆದರ್ಶ-ಮೌಲ್ಯಗಳೆಲ್ಲ ಇದರಲ್ಲಿ ಯಥಾವತ್ತಾಗಿ ಚಿತ್ರಿತವಾಗಿರುತ್ತವೆ. ಈ ದೃಷ್ಟಿಯಿಂದ ಜನಪದ ರಂಗಭೂಮಿಯ ಆಟಗಳು, ಗ್ರಾಮೀಣ ಪರಿಸರದ ಅಂತಃಸತ್ವವನ್ನು ಪ್ರತಿಬಿಂಬಿಸುವ ಕನ್ನಡಿಗಳಾಗಿವೆ. ಗ್ರಾಮೀಣ ರಂಗಭೂಮಿಯ ಕಲಾವಿದರು, ಕಲಾಪೋಷಕರು, ನಿರಕ್ಷರಿಗಳಾದುದರಿಂದ, ಇದರ ಪ್ರಾಚೀನತೆಗೆ ನಿಖರವಾದ ಮತ್ತು ಹೆಚ್ಚಿನ ಆಧಾರಗಳು ದೊರಕುವುದಿಲ್ಲ. ಆದರೂ 'ಜನತಾ ರಂಗಭೂಮಿ'ಯ ಪ್ರಾಚೀನತೆಯ ಮೇಲೆ, ವೇದಗಳಲ್ಲಿ, ಶಿಲಾಶಾಸನಗಳಲ್ಲಿ, ಕಾವ್ಯ-ಪುರಾಣಗಳಲ್ಲಿ

---

೧. ಡಾ. ಎಚ್. ಕೆ. ರಂಗನಾಥ . 'ಕರ್ನಾಟಕ ರಂಗಭೂಮಿ'–ಪು.೨೭

೨. ಉದ್ಧೃತ : ಅದೇ.

ದೊರಕುವ ವಿರಳ ಲಿಖಿತಾಧಾರಗಳು ಬೆಳಕುಚೆಲ್ಲುತ್ತವೆ. ಈ ಲಿಖಿತಾಧಾರಗಳು ಸೂಚ್ಯವಾಗಿದ್ದು, ಅಸ್ಪಷ್ಟವಾಗಿವೆ. ಏನೇ ಆದರೂ ಇಷ್ಟಾದರೂ ಸಿಕ್ಕುತ್ತವಲ್ಲ ಎಂಬ ಸಂತಸ. ೯ನೇ ಶತಮಾನದ 'ಕವಿರಾಜಮಾರ್ಗ'ದಲ್ಲಿ ಉಲ್ಲಿಖಿತಗೊಂಡ ನಾಳ್ಪಗರಣ, ಬೆದಂಡೆಗಬ್ಬ. ಚತ್ತಾಣ, ಭಾಜನಗಬ್ಬಗಳು-ದೇಸೀ ಆಟಗಳೆಂದು ವಿದ್ವಾಂಸರು ಖಚಿತಗೊಳಿಸಿದ್ದಾರೆ. 'ಮದನತಿಲಕ' ಗ್ರಂಥದಲ್ಲಿ 'ಪಗರಣ'ದಂಥ ಆಟವನ್ನು ಜವ್ವನೆಯರು ಕನ್ಯಾಮಣಿಗಳು ನೋಡಬಾರದೆಂದು ಹೇಳಿದೆ ಅಂದರೆ ಈ ಗ್ರಂಥದ ರಚನೆಯ ವೇಳೆಗಾಗಲೇ 'ಜನತಾರಂಗಭೂಮಿ' ಜನಪ್ರಿಯವಾಗಿರುವ ಸಾಧ್ಯತೆಯಿದೆ. ನಿಜಗುಣ ಶಿವಯೋಗಿಗಳ 'ವಿವೇಕ ಚಿಂತಾಮಣಿ'ಯಲ್ಲಿ ಮೂಡಲಪಾಯ ದೊಡ್ಡಾಟದ ಸೂಚನೆಯಿದೆ. ಹಾಗೆಯೇ ಕುಮಾರವ್ಯಾಸ, ತನ್ನ ಭಾರತದಲ್ಲಿ ಹಳ್ಳಿಯ ನಾಟಕರಂಗದ ಆಟವನ್ನು 'ನಾಡಾಡಿಗಳ ನಾಟಕ'ವೆಂದು ಕರೆದಿದ್ದಾನೆ. ಅಲ್ಲದೆ. ದೇಸೀ ರಂಗಭೂಮಿಯ ಕಲಾವಿದರನ್ನೂ, ಜವನಿಕೆ' ಎನ್ನುವ ಹೆಸರಿನಿಂದ ದೊಡ್ಡಾಟದ ಪರದೆಯನ್ನು ಕುಮಾರವ್ಯಾಸ ಸೂಚಿಸಿದ್ದಾನೆ. ೧೨೦೮ರ ಸೊರಬದ ಶಿಲಾಶಾಸನ, ಹೊಯ್ಸಳ ವೀರಬಲ್ಲಾಳನೆಂಬ ಪ್ರಸಿದ್ಧ ಬಯಲಾಟ ಪಾತ್ರಧಾರಿಯನ್ನು ಉಲ್ಲೇಖಿಸಿದೆ. ಹಾಗೂ ರಾಜ-ಮಹಾರಾಜರು ಜನಪದ ಕಲಾವಿದರನ್ನು ಪ್ರೋತ್ಸಾಹಿಸಿದುದರ ಅನೇಕ ಉಲ್ಲೇಖಗಳಿವೆ. ಹೀಗಾಗಿ, ಜನಪದ ರಂಗಭೂಮಿಯ ಪ್ರಾಚೀನತೆ ಬಹು ಹಿಂದಕ್ಕೆ ಸರಿಯುತ್ತದೆ.

ಜನಪದ ರಂಗಭೂಮಿಯ ಹುಟ್ಟು-ಬೆಳವಣಿಗೆಗೆ ಪ್ರೇರಕವಾದ ಮೂಲ ಕಲಾರೂಪಗಳು ಅನೇಕ. ಎಲ್ಲಮ್ಮನ ಜೋಗವ್ವ-ಜೋಗಪ್ಪ, ಪುರವಂತರು, ಗೊಂದಲಿಗರು, ಸಾರುವ ಅಯ್ಯನವರು, ಕರಪಾಲದವರು, ಗೊಗ್ಗಯ್ಯ, ತೊಗಲು ಗೊಂಬೆಯಾಟ, ಕವಲೆತ್ತು, ವೇಷಗಾರರು, ಭೂತಾರಾಧನೆ, ಕರಡಿಮಜಲು, ಕೋಲಾಟ, ಕೀರ್ತನೆ-ಇವೇ ಮೊದಲಾದ ದೇಸೀ ಕಲೆಗಳಲ್ಲಿ ಹಳ್ಳಿಯ ನಾಟಕರಂಗಭೂಮಿಯ ಹುಟ್ಟು-ಬೆಳವಣಿಯ ವಿವಿಧ ಹಂತಗಳನ್ನು ಗುರುತಿಸಬಹುದು. ಈ ಕಲೆಗಳಲ್ಲಿ ಪ್ರಯೋಗಗೊಳ್ಳುವ ಸಂಭಾಷಣೆ, ಗೀತ ವಾದ್ಯ-ನೃತ್ಯ, ವೇಷ-ಭೂಷಣ ಪಾತ್ರಗಳು, ಮುಖವರ್ಣಿಕೆ; ಇಲ್ಲಿಯ ಕೆಲವು ಕಲೆಗಳಲ್ಲಿಯ ನಾಂದಿ, ಇಷ್ಟದೇವತೆಯ ಸ್ತುತಿ, ನಂತರ ಸ್ಥಾನಿಕ ದೇವತೆಗಳ ಪ್ರಾರ್ಥನೆ, ಹಾಡಿನೊಂದಿಗೆ ನಟನೆ, ಅಲ್ಲಲ್ಲಿ ಹಾಸ್ಯ, ಹಿಮ್ಮೇಳ-ಮುಮ್ಮೇಳ, ಕೊನೆಯಲ್ಲಿ ಮಂಗಳಗೀತೆ- ಇತ್ಯಾದಿಯಾದ ಕಲೆಯ ಅಂಶಗಳು (ರೂಪಗಳು) ದೇಸೀ ರಂಗಭೂಮಿಯ ಮುಂದಿನ ಬೆಳವಣಿಗೆಯಾದ, ಇಂದು ನಾವು ನೋಡುತ್ತಿರುವ ಬಯಲಾಟಗಳ ಸ್ವರೂಪಕ್ಕೆ ಮೂಲನೆಲೆಯಾಗಿವೆ. ಹೀಗಿರುವುದರಿಂದ, ಮೇಲಿನ ಕಲಾಪ್ರಭೇದಗಲ್ಲಿಯೇ ರಂಗಭೂಮಿಯ ಅಂಕುರಾರ್ಪಣೆಯನ್ನು ಕಾಣುತ್ತೇವೆ. ಅಷ್ಟೇ ಅಲ್ಲ, ಗೊಂದಲಿಗರ ಕಥೆ ಮತ್ತು

ತೊಗಲುಗೊಂಬೆಯಾಟಗಳಲ್ಲಿ, ದೇಸೀ ರಂಗಭೂಮಿಯ ಬೆಳವಣಿಗೆಯ ಪ್ರಬುದ್ಧ ಸ್ಥಿತಿಯನ್ನೇ ಕಾಣುತ್ತೇವೆ. ಜನಪದ ಕಲಾಪ್ರಭೇದಗಳೆಲ್ಲವೂ ಧಾರ್ಮಿಕ ಹಿನ್ನೆಲೆ-ಯಲ್ಲಿಯೇ, ಹಳ್ಳಿಗರಿಂದ ಸೃಷ್ಟಿಗೊಂಡವು. ಬರಬರುತ್ತಾ ಅವು ಅವರ ಮನರಂಜನಾ ಸಾಧನಗಳಾಗಿಯೂ, ಹೊಟ್ಟೆಹೊರೆಯುವ ವೃತ್ತಿಕಲೆಗಳಾಗಿಯೂ ಪರಿಣಮಿಸಿದುವು. ಆದುದರಿಂದ ಜನಪದ ರಂಗಭೂಮಿಯ ಉಗಮದ ವಿಚಾರದಲ್ಲಿ ಎರಡು ಪ್ರಮುಖ ಸಿದ್ಧಾಂತಗಳು ಹುಟ್ಟಿಕೊಂಡಿವೆ. ಒಂದು 'ಧರ್ಮಮೂಲ ಸಿದ್ಧಾಂತ', ಇನ್ನೊಂದು 'ಅನುಕರಣ ಮೂಲಸಿದ್ಧಾಂತ'. ಅದೇನೇ ಇದ್ದರೂ ಕನ್ನಡ ಜನಪದ ರಂಗ-ಭೂಮಿಯು, ಪ್ರಾಚೀನ ಜನಪದ ಕಲೆಗಳ ಮೂಲರೂಪಗಳ ಸಹಾಯದಿಂದ, ತನ್ನದೇ ವಿಶಿಷ್ಟ ಸ್ವರೂಪವನ್ನು ಹೊಂದಿ, ಅನೇಕ ಬಯಲಾಟಗಳನ್ನು ಒಳಗೊಂಡು, ಗ್ರಾಮೀಣ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ, ಕಾಲಕಾಲಕ್ಕೆ ಮಾರ್ಪಾಟಾಗುತ್ತ ಅವರನ್ನು ರಂಜಿಸುತ್ತ ಬಂದಿದೆ.

ಕನ್ನಡ ಬಯಲಾಟದಲ್ಲಿ ಪ್ರಮುಖವಾಗಿ 'ದೊಡ್ಡಾಟ' ಮತ್ತು 'ಸಣ್ಣಾಟ' ಗಳೆಂದು ಎರಡು ವಿಧ. ದೊಡ್ಡಾಟದಲ್ಲಿ ಮತ್ತೆ 'ಮೂಡಲಪಾಯ', 'ಪಡುವಲ ಪಾಯ' ಎಂದು ಎರಡು ವಿಭಾಗಗಳು. ದೊಡ್ಡಾಟವನ್ನು ಮೂಡಲಪಾಯವೆಂದೂ, ಯಕ್ಷಗಾನವನ್ನು ಪಡುವಲಪಾಯವೆಂದೂ ಕರೆಯುವುದುಂಟು.

ಮೂಡಲಪಾಯ ಬಯಲಾಟ (ದೊಡ್ಡಾಟ) : ಮೂಡಲಪಾಯ ಉತ್ತರ ಕರ್ನಾಟಕದ ಬಯಲಾಟಗಳಲ್ಲೆಲ್ಲ ಹೆಚ್ಚು ಪ್ರಾಚೀನವೂ, ಪ್ರೌಢ ಪ್ರಯೋಗ ವುಳ್ಳದೂ ಆಗಿದೆ. ವಿದ್ವಾಂಸರ ಅಭಿಪ್ರಾಯದಂತೆ ಸುಮಾರು ನೂರಾಐವತ್ತು ಅರವತ್ತು ವರ್ಷಗಳ ಇತಿಹಾಸ ಇದಕ್ಕಿದೆ. ಮೂಡಲಪಾಯ ಬಯಲಾಟ, ಬಯಲು ಸೀಮೆಯ ಅತ್ಯಂತ ಪ್ರಮುಖ ರಂಗಕಲೆ. ಈ ಸೀಮೆಯಲ್ಲಿ (ಉತ್ತರ ಕರ್ನಾಟಕ) ಪ್ರಚಲಿತವಿರುವ ಬಯಲಾಟಗಳಲ್ಲೆಲ್ಲ ಭವ್ಯವಾದ ಮೂಡಲಪಾಯ ಬಯಲಾಟ ತನ್ನ ಶ್ರೀಮಂತ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ. 'ಮೂಡಲ' ಅಂದರೆ ಪೂರ್ವ, 'ಪಾಯ' ಅಂದರೆ ಪದ್ಧತಿ, ರೀತಿ, ಶೈಲಿ. ಮೂಡಲಪಾಯ ವೆಂದರೆ 'ಪೂರ್ವದಪದ್ಧತಿ' ಅಥವಾ ಪೂರ್ವಪ್ರದೇಶಗಳ ಸಂಪ್ರದಾಯ ಎಂದರ್ಥ. ಪಶ್ಚಿಮಕರಾವಳಿಯ ರಮ್ಯಮನೋಹರವಾದ ಯಕ್ಷಗಾನಕ್ಕಿಂತ ವಿಭಿನ್ನವಾದ ಮೂಡಲಪಾಯ ಬಯಲಾಟ ವೀರಪರಂಪರೆ ಹಾಗೂ ಬಯಲುನಾಡಿಗೊಪ್ಪುವ ರುದ್ರಮನೋಹರವಾದ ಕಲಾಪ್ರಕಾರ. ಬಯಲಾಟವನ್ನು ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯುವುದುಂಟು. ಅವು–ಮೂಡಲಪಾಯ, ದೊಡ್ಡಾಡ, ಹಿರೇಆಟ, ಅಟ್ಟದಾಟ, ದಶಾವತಾರದ ಆಟ ಇತ್ಯಾದಿ.

ಕಥಾವಸ್ತುವಿನ ಆಯ್ಕೆಯಲ್ಲಿ, ವಿಷಯ-ರಸ-ಶೈಲಿಗಳ ನಿರೂಪಣೆಯಲ್ಲಿ, ಭಾಷೆಯಬೆಡಗಿನಲ್ಲಿ, ಹಾಡು-ಕುಣಿತ-ಮಣಿತ,-ಹಾವ-ಭಾವಗಳ ಪ್ರದರ್ಶನದಲ್ಲಿ, ವೇಷ-ಭೂಷಣಗಳ ಥಳಕಿನಲ್ಲಿ, ವಾದ್ಯಗಳ ಮೊಳಗಿನಲ್ಲಿ, ರಂಗಸಜ್ಜಿಕೆಯ ವಿಧಾನದಲ್ಲಿ ಮೂಡಲಪಾಯ ಬಯಲಾಟ ದೊಡ್ಡದಾಗಿ ಗೋಚರಿಸಿದ್ದರಿಂದ ಅದು 'ದೊಡ್ಡಾಟ' ವಾಯಿತು. ಇದು ಪುರುಷಪ್ರಧಾನ ಆಟ. ಇದರಲ್ಲಿ ಗಂಡಸರೇ ಪಾತ್ರಧಾರಿಗಳು. ಹಳ್ಳಿಮಧ್ಯದ ಬಯಲಿನಲ್ಲಿ ನಿರ್ಮಿಸಿದ ಅಟ್ಟದ ಮೇಲೆ ಅತ್ಯಂತ ಅಟ್ಟಹಾಸದಿಂದ ವಿಜೃಂಭಿಸಿದ ರುದ್ರಭಯಂಕರ ಆಟ ಈ ದೊಡ್ಡಾಟ. 'ಮೂಡಲಹರಿಯುವವರೆಗೂ ಅಥವಾ ಸೂರ್ಯೋದಯವಾಗುವವರೆಗೂ ನಡೆಯುವ ಆಟವಿದು. ಉತ್ತರ ಕರ್ನಾಟಕ ದಲ್ಲಿ ದೊಡ್ಡಾಟದ ಮೇಳಗಳಿಲ್ಲದ ಹಳ್ಳಿಗಳೇ ಇಲ್ಲ. ಈ ಆಟದಲ್ಲಿ ಜನಪದರಂಗದ ಕೆಚ್ಚು ಹಾಸುಹೊಕ್ಕಾಗಿದೆ.

ಸಣ್ಣಾಟ : ಸಣ್ಣಾಟ ಸುಮಾರು ಅರವತ್ತು ಎಪ್ಪತ್ತು ವರ್ಷಗಳಲ್ಲಿ ಬೆಳೆದುಬಂದ ಹಳ್ಳಿಯ ನಾಟಕ ಪದ್ಧತಿ. ಒಂದು ಕಾಲದಲ್ಲಿ, ಬೆಳಗಾವಿ, ಧಾರವಾಡ, ವಿಜಾಪುರ ಮೊದಲಾದ ಜಿಲ್ಲೆಗಳಲ್ಲಿ ಪ್ರದರ್ಶನದ ಜಯಭೇರಿ ಮೊಳಗಿಸಿ, ಮೂಡಲ ಪಾಯ ದೊಡ್ಡಾಟಗಳ ಸ್ಥಾನವನ್ನು ಆಕ್ರಮಿಸಿದ ಕೀರ್ತಿ ಸಣ್ಣಾಟಗಳದಾಗಿತ್ತು. ಅಂದ ಹಾಗೆ, ಸಣ್ಣಾಟ ದೊಡ್ಡಾಟದ ಪ್ರತಿರೂಪವಲ್ಲ; ನಾಟಕವನ್ನು ಜನಪದ ರೀತಿಯಲ್ಲಿ ಆಡುವ ರಂಗಭೂಮಿಯ ಆಟ. ಡಾ. ಎಂ. ಎಸ್. ಸುಂಕಾಪುರ ಅವರು ಅಭಿಪ್ರಾಯಪಟ್ಟಂತೆ, "ಸಣ್ಣಾಟದಲ್ಲಿ ದೊಡ್ಡಾಟದ ದೊಡ್ಡಸ್ತಿಕೆಯಿಲ್ಲ. ಸಾಮಾನ್ಯ ಪರಿಸರದಲ್ಲಿ ಮೂಡಿಬಂದ ಆಟ ಸಣ್ಣಾಟ. ಆಟ ಸಣ್ಣದು. ವೇಷಭೂಷಣ ಸಾಧಾರಣ, ಕೊನೆಯವರೆಗೂ ಲಘುಸಂಗೀತದ ಮೆರಗು, ತರ್ಕಬದ್ಧ ಮಾತು, ತ್ವರಿತಗತಿಯ ಚಿಟುಕುಕಟ್ಟಿದ ದಪ್ಪು, ಚಕಮಕತಾಳ, ದಿಡಗಿನ ಕುಣಿತ, ಕಥೆಯ ಓಟ ಹರಿಹರನ ರಗಳೆಯಂತೆ ವೇಗದಿಂದ ಸಾಗುವಂತಹದು. ಒಟ್ಟಾರೆ ನೋಡಿದರೆ, ದೊಡ್ಡಾಟದ ವಿರುದ್ಧರೂಪವೇ ಸಣ್ಣಾಟವೆಂದು ಹೇಳಿದರೆ ತಪ್ಪಾಗಲಾರದು." ದೊಡ್ಡಾಟದ ಆಟಗಳು ಪೌರಾಣಿಕ ವಸ್ತುವನ್ನೊಳಗೊಂಡಿದ್ದರೆ, ಸಣ್ಣಾಟದ ಆಟಗಳು ಭಕ್ತಿಪಂಥದ ಕಥೆಗಳನ್ನೇ ಆಧರಿಸಿವೆ. ತಿರುನೀಲಕಂಠ, ಅಲ್ಲಮಪ್ರಭು, ಕನಕದಾಸ, ಕಬೀರದಾಸ ಮೊದಲಾದ ಐತಿಹಾಸಿಕ ಮಹಾಪುರುಷರ ಚರಿತ್ರೆಗಳು ಸಣ್ಣಾಟಗಳಾದವು. ಬರಬರುತ್ತ ಸಾಮಾಜಿಕ ವಸ್ತುಗಳೂ ಸಣ್ಣಾಟದ ವಸ್ತು ಗಳಾದುವು. ಸಂಗ್ಯಾಬಾಳ್ಯಾ, ರೂಪಸೇನ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ್ ಮುಂತಾದವು ಈ ವರ್ಗದವು. ರಾಜಮಹಾರಾಜರನ್ನು ಕುರಿತು ಬರೆದ ಸಣ್ಣಾಟಗಳು 'ರಾಜಾನಾಟ'ವಾದರೆ, ವೈಷ್ಣವಪರ ಆಟಗಳು 'ದಾಸರಾಟ'ವಾದುವು. 'ದಾಸರಾಟ'

ಮಹಾರಾಷ್ಟ್ರಕ್ಕೂ ಪ್ರವೇಶಿಸಿ, ಅಲ್ಲಿಯ ಕಲಾರಸಿಕರ ಕೈಯಲ್ಲಿ 'ತಮಾಶಾ' ಎಂಬ ಹೊಸರೂಪಧರಿಸಿ ಜನಪ್ರಿಯವಾಯಿತು. ಕರ್ನಾಟಕದ 'ದಾಸರಾಟ'ದ ಸ್ತ್ರೀ ಪಾತ್ರವನ್ನು ಮರಾಠಿಯವರು 'ರಾಧಾ' ಎಂದು ನಾಮಕರಣಗೊಳಿಸಿದರು. ಈ ಆಟದಲ್ಲಿ 'ರಾಧಾ'ಳದೇ ಪ್ರಮುಖಪಾತ್ರವಾದುದರಿಂದ, ಮರಾಠಿಯ 'ತಮಾಶಾ' ದಲ್ಲಿ ಕೆಲವಾರು ಮಾರ್ಪಾಟುಗಳನ್ನು ಮಾಡಿಕೊಂಡು. ಇದಕ್ಕೆ 'ರಾಧಾನಾಟ' ಎಂದು ಪುನರ್‌ನಾಮಕರಣ ಮಾಡಿದರು, ಕನ್ನಡ ಜನಪದ ರಂಗಕಲಾವಿದರು. "ದ್ರಾವಿಡ ಪದ್ಧತಿಯ ಜನಪದರಂಗಭೂಮಿಯ ಅಂಕುರಾರ್ಪಣೆಗೆ ಈ ಆಟದ ಪಾತ್ರನನ್ನು ಅಲ್ಲಗಳೆಯುವಂತಿಲ್ಲ."

ಶ್ರೀಕೃಷ್ಣ ಪಾರಿಜಾತ[೧] : ಪಾರಿಜಾತವೂ ಉತ್ತರ ಕರ್ನಾಟಕದ ಜನಪದ ರಂಗಭೂಮಿಯ ಒಂದು ಮಹತ್ವದ ಬಯಲಾಟ. ಪಾರಿಜಾತಗಳಲ್ಲೆಲ್ಲ ಶ್ರೀಕೃಷ್ಣಪಾರಿಜಾತವೇ ಪ್ರಸಿದ್ಧವಿದ್ದುದರಿಂದ, ಪಾರಿಜಾತವೆಂದರೆ 'ಶ್ರೀಕೃಷ್ಣಪಾರಿ ಜಾತವೇ' ಎಂದು ಕರೆಯುವ ಸಂಪ್ರದಾಯ. ಉತ್ತರ ಕರ್ನಾಟಕದ ಜನಮನ ರಂಜಿಸಿದ ಕಲೆಯಿದು. ತನ್ನ ಜನಪ್ರಿಯತೆಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಕೃಷ್ಣಪಾರಿಜಾತ ಕನ್ನಡ ಜನಪದ ರಂಗಭೂಮಿಗೆ ಉತ್ತರ ಕರ್ನಾಟಕದ ಅಪೂರ್ವ ಕೊಡುಗೆಯಾಗಿದೆ. ಕ್ರಿ.ಶ. ೧೮೦೦ ರ ಸಮಾರಿಗೆ, ರಾಯಚೂರು ಜಿಲ್ಲೆಯ 'ಅಪರಾಳ ತಮ್ಮಣ್ಣ'ನೆಂಬ ಜನಪದಕವಿಯು ಗೀತರೂಪದಲ್ಲಿ ಅಥವಾ ಯಕ್ಷಗಾನ ರೂಪದಲ್ಲಿ ಪಾರಿಜಾತ ರಚಿಸಿದ. ಇದು ರಂಗರಚನೆಯಲ್ಲ; ಹಾಡುಗಬ್ಬ. ಹಾಡು ಗಬ್ಬವಾಗಿ ಸಾಕಷ್ಟು ಜನಪ್ರಿಯವಾದ ಈ ಗ್ರಂಥವನ್ನು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕುಲಗೋಡ ಗ್ರಾಮದ ತಮ್ಮಣ್ಣ-ಪರಿಷ್ಕರಿಸಿ, ರಂಗಭೂಮಿಗೆ ಅಳವಡಿಸಿದ. ಹಾಡುಗಬ್ಬ ರಂಗವನ್ನೇರಿ ಬಯಲಾಟ ರೂಪತಾಳಿತು. ತಮ್ಮಣ್ಣ ಪಾರಿಜಾತ 'ಮೇಳ'ಕಟ್ಟಿ, ತಾನೇ ಅದರ ಮುಖ್ಯಸ್ಥನಾಗಿ, ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಅಟ್ಟಕಟ್ಟಿ. ಆಡಿ, ಜನಮೆಚ್ಚುಕೆಯನ್ನು ಗಳಿಸಿದ. ತಮ್ಮಣ್ಣನ ತರುವಾಯ ಅಂದರೆ ಕ್ರಿ.ಶ. ಸುಮಾರು ೧೮೫೦ ರ ಸುಮಾರಿಗೆ 'ಕೌಜಲಗಿ ನಿಂಗಮ್ಮ' ಎಂಬ ರಂಗಕಲಾವಿದೆ, ತನ್ನ ತಂಡದೊಂದಿಗೆ ಪಾರಿಜಾತ ಆಟಗಳಗಳನ್ನು ಆಡುತ್ತ ಹಳ್ಳಿಗಳನ್ನು ಸುತ್ತಿದಳು. ಪಾರಿಜಾತವನ್ನು ಉತ್ತರ ಕರ್ನಾಟಕದ ತುಂಬ ಪ್ರಸಾರಮಾಡಿ, ಅದಕ್ಕೆ ಭದ್ರಸ್ಥಾನಕಲ್ಪಿಸಿ, ಪಾರಿಜಾತ ಪರಂ ಪರೆಯನ್ನು ಪೋಷಿಸಿಕೊಂಡು ಬಂದ ಶ್ರೇಯಸ್ಸು ಖಂಡಿತವಾಗಿಯೂ ನಿಂಗಮ್ಮನಿಗೆ ಸಲ್ಲಬೇಕು. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಬರಗಿರಾಚಯ್ಯ, ಸವದಿಮಲ್ಲಯ್ಯ, ಚೂಡಪ್ಪ, ಅರಿಗೂರು, ಕುಂಚನೂರು, ರಾಮದುರ್ಗದ ಶಿವಗುರಿ, ಮುತನಾಳದ

೧. ಎಂ. ಟಿ. ಧೂಪದ : ಕರ್ನಾಟಕ ಜಾನಪದ ರಂಗಭೂಮಿ : ಪು : ೨೨೨

ನಾಗಪ್ಪ, ನಾವಲಗಟ್ಟಿ ಸಾವಕ್ಕ, ಜಮಖಂಡಿ ಅಪ್ಪಾಲಾಲ (ಈತನನ್ನು ರಾಜ್ಯ ಸಂಗೀತ ಅಕಾಡೆಮಿ ಗೌರವಿಸಿದೆ), ಶಿರಗುಪ್ಪಿ ಕಾಡಗೌಡ, ಮೋಳೆರಾಮ, ಸನದಿ ಗೊಂದಲಿಗ, ಬಡಗುಂದ್ರಿ ಬಸಪ್ಪ, ಹುಕ್ಕೇರಿ ಸಿದ್ರಾಮಪ್ಪ ಮುಂತಾದವರು ಪಾರಿಜಾತವನ್ನು ಅಭಿನಯಿಸಿದ ಪ್ರಸಿದ್ಧ ತಂಡಗಳ ಸುಪ್ರಸಿದ್ಧ ಕಲಾವಿದರು.

"ಇತರ ಬಯಲಾಟಗಳಲ್ಲಿರುವುದಕ್ಕಿಂತಲೂ ಹೆಚ್ಚಿನ ಕ್ರಮಬದ್ಧ ವಾದಸಂಭಾಷಣೆ,ರಂಗಭೂಮಿಯ ಲಾಲಿತ್ಯವುಳ್ಳ ಹಾಡುಗಳ ಸಂಗೀತ, ಸ್ತ್ರೀಪಾತ್ರದಲ್ಲಿ ಸ್ತ್ರೀ ಇತ್ಯಾದಿಗಳು ಪಾರಿಜಾತದ ಪ್ರಯೋಗದಲ್ಲಿ ಕಂಡು ಬರುವುದರಿಂದ, ಇದು ಹೆಚ್ಚು ಜನಾದರಣೀಯವಾಗಿತ್ತು" ಆದರೆ[೧] ಪ್ರೇಕ್ಷಕರ ಮತ್ತು ರಂಗಭೂಮಿಯ ಕಲಾವಿದರ ಅಭಿರುಚಿಯ ಬದಲಾವಣೆಯಿಂದಾಗಿ, ಜನಪದ ಸಂಗೀತ ಹಾಡುಗಳು ದೂರಸರಿಯ ತೊಡಗಿದವು. ಕಲಾವಿದರು, ಪ್ರೇಕ್ಷಕರು ಮರಾಠಿಯ ಲಘುಸಂಗೀತಕ್ಕೆ ಆಕರ್ಷಿತರಾದರು.

ಯಕ್ಷಗಾನ : ಯಕ್ಷಗಾನ-ಕರಾವಳಿ ಪ್ರದೇಶದ ರುದ್ರಮನೋಹರವಾದ ಜನಪ್ರಿಯ ಗ್ರಾಮೀಣ ರಂಗಕಲೆ. ಇದು ಭಾರತೀಯ ರಂಗಭೂಮಿಗೆ ಕನ್ನಡ ನಾಡಿನ ಹೆಮ್ಮೆಯ ಕೊಡುಗೆಯೂ ಆಗಿದೆ. ಗೀತ-ನೃತ್ಯಗಳೇ ಈ ಆಟದ ವೈಶಿಷ್ಟ್ಯ, ಗದ್ಯದ ಮಾತುಗಳು ಇಲ್ಲವೆನ್ನುವಷ್ಟು ಕಡಿಮೆ. ಮೂಡಲಪಾಯದಂತೆ ರಂಗಮಂದಿರದಲ್ಲಿಯೇ ಯಕ್ಷಗಾನವು ಪ್ರಯೋಗಿಸಲ್ಪಡುತ್ತದೆ. "ಇಲ್ಲಿ ಪೂರ್ವರಂಗ ವಿಸ್ತಾರವಾಗಿರುತ್ತದೆ. ಕೋಡಂಗಿ ಜೊತೆ ಸೇರಿ,ಭಾಗವತನೂ ಪ್ರೇಕ್ಷಕರಿಗೆ ಹಾಸ್ಯವನ್ನುಂಟು ಮಾಡುತ್ತಾನೆ. ಭಾಗವತ ಒಂದು ಹಾಡು ಹೇಳಿ, ಅದರ ಭಾವಾರ್ಥವನ್ನು ವಿವರವಾಗಿ ಪಾತ್ರಗಳಿಗೆ ತಿಳಿಸುವನು; ಆತನ ಮಾತುಗಳಲ್ಲಿಯೇ ಈ ಸಂವಾದವು ನಡೆಯುತ್ತದೆ. ಭಾಗವತನ ನಿರ್ದೇಶನದಂತೆಯೇ ಅಭಿನಯಿಸಲಾಗುತ್ತದೆ. ಉಳಿದ ರಂಗಭೂಮಿಯಲ್ಲಿ ಈ ಸಂಪ್ರದಾಯವಿಲ್ಲ." [೨]

ಯಕ್ಷಗಾನದ ಕೃತಿಗಳ ವಸ್ತು ಹೆಚ್ಚಾಗಿ ಮಹಾಭಾರತ, ಭಾಗವತಗಳಿಂದಾಯ್ದುದು. ಇದರ ಪ್ರಮುಖ ಘಟಕಗಳೆಂದರೆ, ಕಾಳಗ, ಮಾತುಮಾತಿಗೆ ಕುಣಿತ, ಕುಣಿತದಲ್ಲಿ ಯಮಕ, ಸಂಗೀತ, ರೌದ್ರಗಂಭೀರ ದೃಶ್ಯ. ಕಾಳಗವು ಯಕ್ಷಗಾನದ ಜೀವ ಜೀವಾಳ. ಮುಖವರ್ಣಾಲಂಕಾರ ಮತ್ತು ಸಾಂಪ್ರದಾಯಿಕ ವೇಷ-ಭೂಷಣಗಳಿಂದ ಸೋಗುಗಳು ರೌದ್ರಾಕಾರವಾಗಿರುತ್ತವೆ.

---

೧. ಎಂ. ಟಿ. ಧೂಪದ : ಕರ್ನಾಟಕ ಜಾನಪದ ರಂಗಭೂಮಿ : ಪು : ೨೨೯

೨. ಎಂ. ಟಿ. ಧೂಪದ : ಕರ್ನಾಟಕ ಜಾನಪದ ರಂಗಭೂಮಿ : ಪು. ೨೪೮-೪೯

೧೭ನೇ ಶತಮಾನದ ಆದಿಭಾಗದಲ್ಲಿಯೇ ಯಕ್ಷಗಾನ ತುಂಬ ಜನಪ್ರಿಯವಾದ ಒಂದು ವಿಶಿಷ್ಟ ರೀತಿಯ 'ಸಂಗೀತ ಪದ್ಧತಿ'ಯಾಗಿತ್ತೆಂದು 'ಗೋವಿಂದ ದೀಕ್ಷಿತ'ನ ('ಸಂಗೀತ ಸುಧೆ'ಯಲ್ಲಿ) ಅಭಿಪ್ರಾಯ. ಹಾಗೂ 'ಯಕ್ಷಗಾನ-ಬಯಲಾಟ'ದ ಕರ್ತೃ ಡಾ. ಶಿವರಾಮ ಕಾರಂತರ ಯಕ್ಷಗಾನದ ಪ್ರಾಚೀನತೆಯ ಅಭಿಪ್ರಾಯಗಳನ್ನು ಸಂಗ್ರಹಿಸಿ ಪರಿಶೀಲಿಸಿದಾಗ, ೧೬ನೇ ಶತಮಾನದ ವೇಳೆಗೆ 'ಯಕ್ಷಗಾನ', ಕನ್ನಡ ಜನಪದ ರಂಗದ ಒಂದು ಪ್ರದರ್ಶನ ಪದ್ಧತಿಯಾಗಿತ್ತೆಂದು ಹೇಳಬಹುದು. ೧೫ ರಿಂದ ೧೯ನೇ ಶತಮಾನದವರೆಗಿನ ಯಕ್ಷಗಾನ ಕವಿಗಳನ್ನು, ಸಂಶೋಧಿಸಿ, ತಮ್ಮ 'ಯಕ್ಷಗಾನ ಬಯಲಾಟ'ದಲ್ಲಿ ಕಾರಂತರು ತಿಳಿಸಿ ಉಪಕರಿಸಿದ್ದಾರೆ.

ಜನಪದ ರಂಗಭೂಮಿಯ ಸಂರಕ್ಷಣೆ : ಜನಪದ ರಂಗಭೂಮಿಯ ಬಯಲಾಟಗಳು ಬರೀ ಮನೋರಂಜನಾ ಕಲೆಗಳಲ್ಲ; ಇವು ಸಮಾಜಕ್ಕೆ ನೀತಿ ಬೋಧಕವೂ ಆಗಿವೆ. ಸತ್ಯ–ನ್ಯಾಯ–ಧರ್ಮ ಮೊದಲಾದ ಮಾನವೀಯ ಮೌಲ್ಯ-ಗಳನ್ನೂ ಬಿತ್ತರಿಸುವವು. ಸಾಮಾನ್ಯ ಜನತೆಯ ಮಧ್ಯಹುಟ್ಟಿ, ಅವರಲ್ಲಿಯೇ ಬೆಳೆದು ಬೆಳಗುವ ಈ ಬಯಲಾಟಗಳ ರಂಗಭೂಮಿ, ಅವರಿಗೆ ಭಾಷೆಯ ಮಹತಿ, ಹಾಡು, ಕುಣಿತ, ಮಣಿತ, ಹಾವ-ಭಾವಗಳ ಬೆಡಗನ್ನು, ದೇವರು-ಧರ್ಮಗಳ ಬಗೆಗೆ ಶ್ರದ್ಧೆ-ನಿಷ್ಠೆ, ಭಯ-ಭಕ್ತಿಗಳನ್ನು ಕಲಿಸುವ ಸಾರ್ವಜನಿಕ ವಿದ್ಯಾಲಯವಾಗಿವೆ. ರಂಗಭೂಮಿ ಶೈವ-ವೈಷ್ಣವ ಎಲ್ಲ ಪಂಥದವರಿಗೂ ಮನರಂಜನೆಯ ಜೊತೆಗೆ, ಮತಧರ್ಮಗಳ ನಿಶ್ಚಿತ ರೂಪವನ್ನು ನಿರೂಪಿಸುವುದು. ಅಲ್ಲದೆ, ಇದು ಕಲಾವಿದರನ್ನು, ಪ್ರೇಕ್ಷಕ-ರನ್ನು ಒಂದುಗೂಡಿಸುವ ಮಾಧ್ಯಮವಾಗಿದೆ. ರಾಮಾಯಣ-ಮಹಾಭಾರತ ಪುರಾಣ ಗಳೂ, ವೀರಶೈವ-ಶರಣ-ಶಿವಭಕ್ತರ ಪುರಾಣಗಳೂ, ಸಾಮಾಜಿಕ ವಿಷಯ-ವಸ್ತು ಗಳೂ ಈ ರಂಗಭೂಮಿಯ ಮೂಲಕ ಜನಮನದಲ್ಲಿ ಪ್ರಭಾವ ಬೀರಿವೆ. ಒಂದರ್ಥ ದಲ್ಲಿ ಇದು ಸಾಮಾಜಿಕ ಶಿಕ್ಷಣ ಮಾಧ್ಯಮವಾಗಿದೆ; ಜನಪದ ರಂಗಭೂಮಿ ಜನಪದ ಜನಾಂಗದ ರಂಗಪರಂಪರೆಯ ಭವ್ಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ.

ಮೌಖಿಕ ಪರಂಪರೆಯ ಹಳ್ಳಿಗಾಡಿನ ನಿರಕ್ಷರಿಗಳು, ತಮ್ಮ ಜೀವನದ ಗಾಢ ಅನುಭವದೊಂದಿಗೆ, ಪುರಾಣ–ಪುಣ್ಯಕಥೆಗಳ ಪರಿಚಯದೊಂದಿಗೆ, ಜನಪ್ರಿಯ ಶೈಲಿ-ಯಲ್ಲಿ ಬಯಲಾಟಗಳನ್ನು ರಚಿಸಿ, ಆಡಿ ಹಾಡಿ, ಕುಣಿದು ತೃಪ್ತಿಪಟ್ಟು, ಜನಸಮು-ದಾಯವನ್ನು ತೃಪ್ತಿಪಡಿಸಿದವರು. ಇಂಥವರ ಸಮಷ್ಟಿ-ಪ್ರಯತ್ನದ ಫಲವೇ ರಂಗಭೂಮಿಯ ಬಯಲಾಟಗಳು. ಧರ್ಮಪೀಠಗಳು, ಕನ್ನಡಶಾಲೆಯ ಶಿಕ್ಷಕರು ಪತ್ತಾರ, ಕಂಬಾರ, ಕುಂಬಾರ ಮೊದಲಾದ ಸಾಂಸ್ಕೃತಿಕ ಮನೋಧರ್ಮದ ಕಲಾವಿದರು ಹೆಚ್ಚಾಗಿ, ಇಂಥ ಆಟಗಳನ್ನು ರಚಿಸಿದರು, ಆಡಿಸಿದರು, ಪೋಷಿಸಿದರು. ರಾಜ-ಮಹಾರಾಜರು, ದೇಸಾಯಿ-ದೇಶಪಾಂಡೆಯವರು, ಧರ್ಮಪೀಠ-ಮಠಗಳು

ಈ ಕಲೆಯನ್ನು ಬೆಳೆಯಿಸಿದ ಪುಣ್ಯಭಾಗಿಗಳು, ಹೀಗೆ ಜನಪದ ಸಮಾಜದಲ್ಲಿಯೇ ಹುಟ್ಟಿ-ಬೆಳೆದ ಬಯಲಾಟಗಳು ಬದುಕಬೇಕಾದರೆ, ಆ ಸಮಾಜವೇ ಅವಕ್ಕೆ ಆಶ್ರಯ. ಆದರೆ, ಇಂದು ವಿಜ್ಞಾನದ ಪ್ರಗತಿಯಿಂದಾಗಿ ಸಮಾಜದ ಆಶ್ರಯ ಶಿಥಿಲಗೊಂಡಿರುವುದರಿಂದ, ಜನಪದ ಆಟಗಳನ್ನು ಮತ್ತು ಕಲಾಕಾರರನ್ನು ಅದೇ ಸಮಾಜ ಅಸಹನೆಯಿಂದ ಕಾಣತೊಡಗಿದೆ, ಅಲ್ಲದೆ ಆಧುನಿಕ ಸಮೂಹ ಮಾಧ್ಯಮಗಳಾದ ನಾಟಕ, ಸಿನಿಮಾ, ರೇಡಿಯೊ, ದೂರದರ್ಶನಗಳು ಈ ಸಾಮಾನ್ಯ ಕಲೆಯ ಉಳಿವಿಕೆಗೆ ಪ್ರತಿರೋಧವನ್ನೊಡ್ಡಿ ನಿಂತಿವೆ. ಹೀಗಾದರೆ ಕಲೆ ಬೆಳೆಯುವದೆಂತು ? ಕಲೆ ಬೆಳೆಯಬೇಕಾದರೆ ಕಲಾಕಾರನೂ ಬದುಕಿ ಬೆಳೆಯಬೇಕಲ್ಲವೆ ! ಆದುದರಿಂದ ಜನಪದ ಕಲಾಕಾರರನ್ನು ಗುರುತಿಸಿ, ಗೌರವ ಭಾವನೆಯಿಂದ ಕಂಡು ಅವರಿಗೆ ಮತ್ತು ಅವರ ಕಲೆಗೆ ಪ್ರೋತ್ಸಾಹ ನೀಡುವ ವಿಶಾಲಭಾವವುಳ್ಳ ಜನತೆ ಹುಟ್ಟಬೇಕಾಗಿದೆ. ಅಂದಾಗ ಮಾತ್ರ ಕಲಾಕಾರನ ಜೊತೆ ಅವನ ಕಲೆಯೂ ಬೆಳೆಯುತ್ತದೆ. ಹಾಗಾದರೆ ಇವುಗಳ ರಕ್ಷಕರಾರು ? ಇವುಗಳ ರಕ್ಷಣೆಯನ್ನು ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಟ್ರಸ್ಟ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಮುಂತಾದ ಸಂಸ್ಥೆಗಳು ವಹಿಸಿಕೊಳ್ಳಬೇಕು. ಸರಕಾರವೂ ಈ ದಿಶೆಯಲ್ಲಿ ವಿಶೇಷ ಗಮನಹರಿಸಬೇಕು. ಕರ್ನಾಟಕ ಜಾನಪದ ಅಕಾಡೆಮಿ ಈ ನಿಟ್ಟಿನಲ್ಲಿ ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ, ಈಗಾಗಲೇ ಈ ಸಂಸ್ಥೆಗಳು ಜನಪದ ಕಲೆಯ ಸಂವರ್ಧನೆಗೆ ಟೊಂಕಕಟ್ಟಿ ನಿಂತಿವೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು, ಕರ್ನಾಟಕದ ವಿವಿಧ ಭಾಗಗಳಲ್ಲಿ ಈಗಾಗಲೇ ಸುಮಾರು ೧೫ ಜನಪದ ಸಾಹಿತ್ಯ ಸಮ್ಮೇಲನಗಳನ್ನು ಯಶಸ್ವಿಯಾಗಿ ನೆರವೇರಿಸಿದೆ. 'ಜಾನಪದ ಸಾಹಿತ್ಯ ದರ್ಶನ ಮತ್ತು 'ಜನಪದ ಸಾಹಿತ್ಯಮಾಲೆ' ಯ ಅಡಿಯಲ್ಲಿ ಹಲವಾರು ಜನಪದ ಮತ್ತು ಬಯಲಾಟದ ಮೌಲಿಕ ಕೃತಿಗಳನ್ನು ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ, ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ, ಡಾ. ಎಂ. ಎಂ. ಕಲಬುರ್ಗಿ ಮುಂತಾದವರ ಸಂಪಾದಕತ್ವದಲ್ಲಿ ಪ್ರಕಟಿಸಿ, ಜಾನಪದ ಅಧ್ಯಯನಕ್ಕೆ ವಿಶೇಷ ಸೇವೆ ಸಲ್ಲಿಸಿದೆ. ಡಾ. ಎಸ್. ಜಿ. ಇಮ್ರಾಪುರ, ಡಾ. ಎಂ. ಎಸ್. ಲಠ್ಠೆ, ಡಾ. ಜೀಶಂ.ಪ. ಅವರಂಥ ಜಾನಪದ ತಜ್ಞರು ಬಯಲಾಟಗಳ ಕೃತಿ ಸಂಪಾದನೆ ಮತ್ತು ಪ್ರಕಟನೆಯಲ್ಲಿ ತೋರುತ್ತಿರುವ ಆಸ್ಥೆ ನಿಜಕ್ಕೂ ಅಭಿನಂದನೀಯ. ಹಾಗೆಯೇ ಕನ್ನಡ ಜನಪದ ರಂಗಭೂಮಿಯ ಬಗೆಗೆ ಸಂಶೋಧನಾತ್ಮಕ ಗ್ರಂಥಗಳನ್ನು ಬರೆದವರೂ ಹಲವಾರು ಜನ. ಇಲ್ಲಿ ಕೆಲವರನ್ನು ಉಲ್ಲೇಖಿಸಲೇಬೇಕು. ಶಿವರಾಮ ಕಾರಂತ, (ಯಕ್ಷಗಾನ ಬಯಲಾಟಗಳು)ಎಚ್. ಕೆ. ರಂಗನಾಥ (ಕರ್ನಾಟಕ ರಂಗಭೂಮಿ), ಚಂದ್ರಶೇಖರ ಕಂಬಾರ (ಉತ್ತರ ಕರ್ನಾಟಕ ರಂಗಭೂಮಿ), ಎಂ. ಟಿ. ಧೂಪದ (ಕರ್ನಾಟಕ ಜಾನಪದ ರಂಗಭೂಮಿ), ಕೆ. ವಿ.

ಆಚಾರ (ಕರ್ನಾಟಕ ರಂಗಭೂಮಿ), ಡಿ. ಕೆ. ರಾಜೇಂದ್ರ (ದಕ್ಷಿಣ ಕರ್ನಾಟಕ ರಂಗಭೂಮಿ), ಬಸವರಾಜ ಮಲಶೆಟ್ಟಿ (ಉತ್ತರ ಕರ್ನಾಟಕದ ಬಯಲಾಟಗಳು), ಎಚ್. ಬಿ. ಯಶೋಧರ (ಕನ್ನಡದಲ್ಲಿ ಯಕ್ಷಗಾನ ಸಾಹಿತ್ಯ ಅಪ್ರಕಟಿತ), ಆರ್. ಬಿ. ಇಟ್ಟಣ್ಣವರ (ಶ್ರೀಕೃಷ್ಣ ಪಾರಿಜಾತ: ಒಂದು ಅಧ್ಯಯನ) ಸಿ. ಆನಂದರಾಜ ಉಪಾಧ್ಯಾಯ (ಯಕ್ಷಗಾನ ಮಹಾಭಾರತ ಪ್ರಸಂಗಗಳು, ಅಪ್ರಕಟಿತ) ಮುಂತಾದವರು. ಇದೇ ನಿಟ್ಟಿನಲ್ಲಿ ಜನಪದ ರಂಗಭೂಮಿಯನ್ನು ಕುರಿತು ಕನ್ನಡದಲ್ಲಿ ಗೋಷ್ಠಿಗಳಲ್ಲಿ ಮಂಡಿಸಿದ, ಪತ್ರಿಕೆಗಳಲ್ಲಿ ಬರೆದ ನೂರಾರು ಲೇಖನಗಳು ಮೂಡಿ ಬಂದುದು ಗಮನಾರ್ಹ. ರಾಜ್ಯದ ಇನ್ನುಳಿದ ವಿಶ್ವವಿದ್ಯಾಲಯಗಳು, ಸಾಹಿತ್ಯ ಪರಿಷತ್ತು, ಬೇರೆ ಬೇರೆ ಅಕಾಡೆಮಿಗಳು. ಗ್ರಾಮೀಣ ರಂಗಭೂಮಿಯ ಕುರಿತಾದ ಗೋಷ್ಠಿಗಳು, ಗ್ರಂಥಪ್ರಕಟನಾ ಕಾರ್ಯಗಳನ್ನು ಆಗಾಗ್ಗೆ ಹಮ್ಮಿಕೊಳ್ಳುತ್ತಲೇ ಬರುತ್ತಿವೆ. ಆಕಾಶವಾಣಿ ಕೂಡಾ ಬಯಲಾಟಗಳ ರಕ್ಷಣೆಗೆ ನಾನಾ ರೀತಿಯಿಂದ ಶ್ರಮಿಸುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ.

ಉತ್ತರ ಕರ್ನಾಟಕದ ಜನಪದ ರಂಗಭೂಮಿಯ ಭವ್ಯಪರಂಪರೆಯ ಮೂಡಲ ಪಾಯ ಬಯಲಾಟಗಳು ನಶಿಸಿಹೋಗುತ್ತಿರುವ ಇಂದಿನ ದಿನಗಳಲ್ಲಿ ಅವುಗಳ ಮೂಲರೂಪ ಸ್ವರೂಪ ವಿನ್ಯಾಸಗಳನ್ನು ಗುರುತಿಸಿ, ಅಧ್ಯಯನ ಮಾಡುವ ಹಾಗೂ ಈ ವಿಶೇಷ ಕಲೆಯನ್ನು ಪುನರುಜ್ಜೀವಿಸುವ ಅಗತ್ಯವನ್ನು ಮನಗಂಡ ಕರ್ನಾಟಕ ಜಾನಪದ ಅಕಾಡೆಮಿ ಮತ್ತು ಕನ್ನಡ ಅಧ್ಯಯನ ಪೀಠಗಳ ಸಂಯುಕ್ತ ಆಶ್ರಯದಲ್ಲಿ ೧೯೮೭ ರಲ್ಲಿ ಮೊದಲಬಾರಿಗೆ ಹತ್ತುದಿನಗಳ ಮೂಡಲಪಾಯ ಬಯಲಾಟ ಕಮ್ಮಟವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಮ್ಮಟದಲ್ಲಿ ರಾಜ್ಯದ ವಿವಿಧ ಭಾಗದ ಒಟ್ಟು ೧೦ ಮೇಳದವರು ದೊಡ್ಡಾಟಗಳನ್ನು ಆಡಿ ತೋರಿಸಿದರು. ಸುಮಾರು ೩೦ ವಿದ್ಯಾರ್ಥಿಗಳಿಗೆ ಮೂಡಲಪಾಯ ಬಯಲಾಟದ ವಿವಿಧ ಅಂಶಗಳನ್ನು (ಕಥೆಗಾರ, ಸಾರಥಿ. ಹಾಡುಗಾರ) ಕುರಿತು ತರಬೇತಿ ನೀಡಲಾಯಿತು. ವಿದ್ವಾಂಸರ, ಉಪನ್ಯಾಸ, ಚರ್ಚೆ, ಪ್ರಾತ್ಯಕ್ಷಿಕೆಗಳನ್ನೊಳಗೊಂಡ ಕಾರ್ಯಚಟುವಟಿಕೆಗಳನ್ನು ಈ ಕಮ್ಮಟದಲ್ಲಿ ಅಳವಡಿಸಲಾಗಿತ್ತು. ಇದೊಂದು ಸ್ತುತ್ಯ ಕಾರ್ಯವಾದರೂ ಜನಪದ ರಂಗಭೂಮಿಯ ವಿವಿಧ ಪ್ರಕಾರದ ಆಟಗಳನ್ನು ಉಳಿಸಿಕೊಳ್ಳುವಲ್ಲಿ ಈ ವಿದ್ಯಾಸಂಸ್ಥೆಗಳು ಮತ್ತು ಸರಕಾರ ತೀವ್ರಗತಿಯಿಂದ ಸಾಗಬೇಕಾಗಿದೆ. ಇತ್ತೀಚೆಗಲಾಗಿ, ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರವೊಂದು ಸ್ಥಾಪಿತವಾಗಿ ಯಕ್ಷಗಾನದ ಪುನಶ್ಚೇತನಕ್ಕಾಗಿ, ಬೆಳವಣಿಗೆ-ಪ್ರಸಾರಗಳಿಗಾಗಿ ಶ್ರಮಿಸುತ್ತಿದೆ. ಪ್ರಸ್ತುತ ಅಧ್ಯಯನ ಕೇಂದ್ರವು ಕೆಲವು ತಿಂಗಳುಗಳ ಹಿಂದೆ, ಕರ್ನಾಟಕ ಜಾನಪದ ವಿದ್ವಾಂಸರ, ಜಾನಪದ ಸಮಾ-

ವೇಶವನ್ನು ಮಾಡಿ, ಬಯಲಾಟಗಳ ಸಂರಕ್ಷಣೆ. ಪರಿಷ್ಕರಣೆ ಮೊದಲಾದ ವಿಷಯ-ಗಳ ಬಗೆಗೆ ಚರ್ಚೆ ನಡೆಯಿಸಿದುದು ಬಯಲಾಟಗಳ ಬಗೆಗಿನ ವಿದ್ವಾಂಸರ ಆಸಕ್ತಿಗೆ ನಿದರ್ಶನವಾಗಿದೆ. ಮಾರ್ಗಪರಂಪರೆಯ ಯಕ್ಷಗಾನವು ಜಾನಪದದ ಹೆಸರಿನಲ್ಲಿ ಮತ್ತು ಶಿವರಾಮ ಕಾರಂತರಂಥ ಸಮರ್ಥ ಕಲಾವಿದರಿಂದ, ಇಂದು ದೇಶ-ವಿದೇಶಗಳಲ್ಲಿ ಸಾಕಷ್ಟು ಕೀರ್ತಿ-ಪ್ರಸಾರ-ಮಹತ್ವಗಳಿಗೆ ಕಾರಣವಾಗಿದೆ. ಯಕ್ಷಗಾನ ತಂಡಗಳಿಗೆ ನಮ್ಮ ಸಂಸ್ಥೆಗಳವರಾಗಲಿ, ಸರಕಾರವಾಗಲಿ ಕೊಡುತ್ತಿರುವ ಹಣ ಅಪಾರ. ಒಂದು ಪ್ರಯೋಗಕ್ಕೆ ಸುಮಾರು ಐದಾರು ಸಾವಿರದವರೆಗೆ ಹಣ ಯಕ್ಷಗಾನ ತಂಡಕ್ಕೆ ನೀಡಲಾಗುತ್ತಿದೆಯೆಂದು ಕೇಳಿದ್ದೇವೆ. ಅದೂ ಅಲ್ಲದೆ, 'ದೂರದರ್ಶನ'ದಲ್ಲಿ ಆಗಾಗ್ಗೆ ಯಕ್ಷಗಾನ ಬಯಲಾಟಗಳನ್ನು ತೋರಿಸಲಾಗುತ್ತದೆ. ಯಕ್ಷಗಾನಕ್ಕೆ ಸಿಗುತ್ತಿರುವ ಪ್ರೋತ್ಸಾಹ-ಅವಕಾಶಗಳು ಉತ್ತರ ಕರ್ನಾಟಕದ ಬಯಲಾಟಗಳಿಗೆ ಏಕೆ ದೊರೆಯುತ್ತಿಲ್ಲ ? ಈ ದಿಶೆಯಲ್ಲಿ ಏನು ಮಾಡಬೇಕು ? ಹೇಗೆ ಪ್ರಯತ್ನಿಸ-ಬೇಕು ? ಇತ್ಯಾದಿ ಪ್ರಶ್ನೆಗಳು ಬಯಲಾಟಗಳ ಬಗೆಗೆ ಆಸ್ಥೆಹೊಂದಿದ ಯಾರನ್ನಾದರೂ ಕಾಡುತ್ತವೆ. ಚಂದ್ರಶೇಖರ ಕಂಬಾರರಿಂದ 'ಸಂಗ್ಯಾಬಾಳ್ಯಾ'-ಸಣ್ಣಾಟ ಮಾತ್ರ, ಬೆಂಗಳೂರಿನಲ್ಲೂ ಜೀವ ಉಳಿಸಿಕೊಂಡಿದೆ. ಮಿಕ್ಕ ಉತ್ತರ ಕರ್ನಾಟಕದ ಬಯಲಾಟಗಳು, ಪ್ರೋತ್ಸಾಹವಿಲ್ಲದೆ ಬೆಳೆಯುತ್ತಿಲ್ಲ, ಬೆಳವಣಿಗೆ ಸ್ಥಗಿತಗೊಂಡಿದೆ. ಸಾಹಿತ್ಯ ಪರಿಷತ್ತು, ಸರಕಾರ, ಅಕಾಡೆಮಿಗಳು ಇತ್ತಕಡೆ ಹೆಚ್ಚಿನ ಗಮನ ನೀಡಿದಂತಿಲ್ಲ. ಅರ್ಥಪೂರ್ಣ ವೈಭವಪೂರ್ಣ ಹಾಗೂ ಕಲಾಪೂರ್ಣ ಜನಪದ ರಂಗಭೂಮಿ ಇರುವುದು ಉತ್ತರ ಕರ್ನಾಟಕದಲ್ಲಿ ಮಾತ್ರ. ಆದುದರಿಂದ, ಯಕ್ಷಗಾನಕ್ಕೆ ದೊರೆತಂಥ ಪ್ರೋತ್ಸಾಹ, ಪ್ರಸಾರ, ಕೀರ್ತಿ, ಮಾನ-ಮರ್ಯಾದೆ ಉತ್ತರ ಕರ್ನಾಟಕದ ಬಯಲಾಟಗಳಿಗೂ ಸಿಕ್ಕಬೇಕು. ಹಾಗಿದ್ದಲ್ಲಿ ಉತ್ತರ ಕರ್ನಾಟಕದ ನೆಲದಲ್ಲಿಯೇ ಮೂಡಲಪಾಯದ ಉಳಿವಿಗಾಗಿ ನಿರ್ದೇಶನ ಸಂಸ್ಥೆಯೊಂದನ್ನು ನಿರ್ಮಿಸಬೇಕು. ಈ ಸಂಸ್ಥೆಯ ಮೂಲಕ ಹಲವು ಯೋಜನೆಗಳನ್ನು ಹಾಕಿಕೊಂಡು ಕಾರ್ಯಪ್ರವೃತ್ತರಾಗಬೇಕು. ಪ್ರತಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತಿವರ್ಷ ಬಯಲಾಟ ಸಮ್ಮೇಲನಗಳನ್ನು ಹಮ್ಮಿಕೊಳ್ಳುವುದು, ವೇಷ-ಭೂಷಣಗಳ ವಸ್ತುಸಂಗ್ರಹಾಲಯ ಒಳ್ಳೆಯ ಬಯಲಾಟಗಳ ಚಿತ್ರೀಕರಣ, ಧ್ವನಿಮುದ್ರಣಗಳನ್ನು ಯಂತ್ರ ವೇಗದಲ್ಲಿ ಮಾಡುವುದು, ಬಯಲಾಟಗಳ ಹಳೆಯ ಆವೃತ್ತಿಗಳನ್ನು ಕಾಯ್ದಿಡುವುದು: ಪ್ರಸಂಗವಶಾತ್ ಸಂಗ್ರಹಿಸಿದ ಹಳೆಯ ಹಸ್ತಪ್ರತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸುವುದು. ಹಬ್ಬ-ಹರಿದಿನ ಜಾತ್ರೆಯ ಸಂದರ್ಭಗಳಲ್ಲಿ ದೊಡ್ಡಾಟ-ಸಣ್ಣಾಟಗಳನ್ನು ಆಡುವ ವ್ಯವಸ್ಥೆ ಮಾಡುವುದು. ಈ ಆಟಗಳ ಪ್ರದರ್ಶನವನ್ನು ದುಡ್ಡು ಕೊಟ್ಟು ನೋಡುವ ವ್ಯವಸ್ಥೆ ಮಾಡುವುದು; ಜನತೆಗೆ ಅವುಗಳ ಮಹತ್ವ ತಿಳಿಸುವುದು; ಇವೇ ಮೊದಲಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಆ ಸಂಸ್ಥೆ ಮುನ್ನಡೆಯಬೇಕು.

ಜನಸಾಮಾನ್ಯರಲ್ಲಿ ವಿನೂತನ ಕ್ರಾಂತಿ, ರಾಷ್ಟ್ರೀಯ ಭಾವನೆ, ಸ್ವಸಹಾಯ ದೃಷ್ಟಿ ಮೂಡಬೇಕಾದರೆ ಪರಂಪರೆಯಾಗಿ ಬಂದಿರುವ ಬಯಲಾಟದಂತಹ ಜನಪದ ಕಲೆಗಳಿಗೆ ವಿಶೇಷ ಗಮನ ನೀಡಬೇಕು. ಆಧುನಿಕ ಜೀವನಕ್ಕೆ ಹೊಂದುವಂತೆ ಅವುಗಳನ್ನು ಪರಿಷ್ಕರಿಸಿ, ತನ್ನ ಮೂಲಸತ್ವ–ರೀತಿ ಕೆಡದಂತೆ ಬೆಳೆಯಿಸಿ, ವಿಶೇಷ ಪ್ರಚಾರ ನೀಡಬೇಕು. ಅದೊಂದು ಸಾರ್ವಜನಿಕ ಶಿಕ್ಷಣ ಮಾಧ್ಯಮವಾಗಲಿದೆ. ಕಲಾವಿದರ ಪ್ರತಿಭೆ, ಪ್ರಕಾಶ, ಜಾಣತನ ಪಡೆದಿರುವ ಹಳ್ಳಿಗಳ ತರುಣರ ಶಕ್ತಿ ಕಿಡಿಗೇಡಿ ಪ್ರವೃತ್ತಿಗಳಿಗೆ ಹರಿಯದೆ, ರಚನಾತ್ಮಕ ಹಾಗೂ ಕ್ರಿಯಾಶೀಲ ಪರಿವರ್ತನೆಗೆ ಈ ಕಲಾಸಾಧನೆ ದಾರಿಮಾಡಿಕೊಡುತ್ತದೆ. ಈಗಲೂ ಅನೇಕ ಹಳ್ಳಿಗಳಲ್ಲಿ ಬಯಲಾಟ ಮೇಳಗಳಿವೆ. ಅವುಗಳಿಗೆ ಪ್ರೋತ್ಸಾಹ–ಪ್ರೇರಣೆ, ಸರಕಾರ ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ದೊರೆಯಬೇಕಾಗಿದೆ. ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ವಿಶ್ವವಿದ್ಯಾಲಯಗಳು ಈ ಬಗೆಗೆ ವಹಿಸುತ್ತಿರುವ ಆಸ್ಥೆ ಕ್ರಿಯಾಶೀಲವಾಗಬೇಕು. ಅಕಾಡೆಮಿಕ್ ರೀತಿಯ ಕಾರ್ಯಗಳೊಡನೆ ಗ್ರಾಮೀಣ ಜನರೊಡನೆ ಸಂಪರ್ಕ ಬೆಳೆಯಿಸುವ ಹಾಗೂ ನೂತನ ಆಟದ ರೀತಿಗಳನ್ನು ಪ್ರಚಾರಪಡಿಸುವ ಕಾರ್ಯಗಳತ್ತ ಗಮನ ಹರಿಸಬೇಕು. ಗ್ರಾಮಕೇಂದ್ರಗಳಲ್ಲಿ ಕಲೆ, ಕ್ರೀಡೆ ಹಾಗೂ ಸಮಾಜಸೇವೆಗಳನ್ನು ಚುರುಕುಗೊಳಿಸುವ ಸ್ವಯಂ ನಿರ್ಮಿತ 'ತರುಣಬಳಗ'ಗಳು ನಿರ್ಮಾಣವಾಗಬೇಕು. ಸರಕಾರದ ಅಥವಾ ಅಕಾಡೆಮಿ ಮತ್ತು ವಿಶ್ವವಿದ್ಯಾಲಯಗಳ ಕಾರ್ಯಗಳಿಗೆ ಪೂರಕವಾಗುವಂಥ ಕಾರ್ಯಗಳನ್ನು ಈ ಬಳಗಗಳು ಮುಂದುವರಿಸಬೇಕು; ಸಹಕರಿಸಬೇಕು. ಅಕಾಡೆಮಿ ನಾಲ್ಕಾರು ಬಯಲಾಟ (ದೊಡ್ಡಾಟ–ಸಣ್ಣಾಟ) ಮೇಳಗಳನ್ನು ರೂಪಿಸಿ, ನಗರ, ಗ್ರಾಮಗಳಲ್ಲಿ ಅವುಗಳ ಪ್ರದರ್ಶನ ನಡೆಯುವ ವ್ಯವಸ್ಥೆಗೊಳಿಸಬೇಕು. ತಾಲ್ಲೂಕು ಮಟ್ಟದಲ್ಲಿ ಬಯಲಾಟ ಪ್ರದರ್ಶನಕ್ಕೆ ಬೇಕಾದ ವೇಷ–ಭೂಷಣ ಧ್ವನಿವರ್ಧಕ ಬೆಳಕಿನ ವ್ಯವಸ್ಥೆ ಮುಂತಾದ ಅವಶ್ಯಕ ಸಾಮಗ್ರಿಗಳ ಸಂಗ್ರಹ ಏರ್ಪಟ್ಟು ಹಳ್ಳಿಗರಿಗೆ ಸುಲಭ ಬಾಡಿಗೆಯಲ್ಲಿ ದೊರೆಯುವಂತಾಗಬೇಕು. ಸ್ಥಳೀಯ ಕತೆಗಾರರು, ಹಾಡುಗಾರರು, ಉತ್ತಮ ಪಾತ್ರಧಾರಿಗಳು, ಮದ್ದಳೆವಾದಕರು, ಮುಂತಾದ ಕಲಾವಿದರಿಗೆ ಪ್ರೋತ್ಸಾಹಪರ ಮಾಸಾಶನ ನೀಡಬೇಕು.

ಜಾನಪದ ವಿದ್ವಾಂಸರು, ಬರೀ ರಂಗನಾಟಕಗಳ ಅಧ್ಯಯನಶೀಲರಾಗದೆ, ಅವುಗಳ ರಕ್ಷಕರೂ ಆಗಬೇಕಾಗಿದೆ. ಬೇಸಿಗೆ ರಜೆಯ ದಿನಗಳಲ್ಲಿ, ಇತ್ತಿತ್ತಲಾಗಿ ಮಕ್ಕಳ ನಾಟಕ ಶಿಬಿರಗಳನ್ನು ಏರ್ಪಡಿಸಿ, ನಾಟಕ ತರಬೇತಿ ನೀಡಲಾಗುತ್ತಿದೆ. ಹಾಗೆಯೇ ಮಕ್ಕಳ, ಬಯಲಾಟ ಶಿಬಿರಗಳನ್ನು ಏರ್ಪಡಿಸಿ, ಅವರಿಗೆ ಬಯಲಾಟದ ಉಚಿತ ತರಬೇತಿಯನ್ನು ನೀಡುವುದಾಗಬೇಕು. ವಾರ್ಷಿಕ ದಿನಾಚರಣೆ ಮೊದಲಾದ ಸಂದರ್ಭಗಳಲ್ಲಿ ಹೈಸ್ಕೂಲು, ಕಾಲೇಜು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ

ನಾಟಕದಂತೆ, ಬಯಲಾಟ ಸ್ಪರ್ಧೆಯನ್ನೂ ಏರ್ಪಸುವಂತಾಗಬೇಕು. ಆಕಾಶವಾಣಿಯವರು ಪ್ರತಿವರ್ಷ ನಾಟಕದ ರಾಷ್ಟ್ರಮಟ್ಟದ ಸ್ಪರ್ಧೆಯನ್ನು ಏರ್ಪಡಿಸಿ, ರಾಷ್ಟ್ರೀಯ ಪ್ರಶಸ್ತಿಯನ್ನು ನೀಡುವ ರೀತಿಯಲ್ಲಿ ಬಯಲಾಟಗಳಲ್ಲಿಯೂ ರಾಷ್ಟ್ರಮಟ್ಟದ ಸ್ಪರ್ಧೆಯನ್ನು ಏರ್ಪಡಿಸಿ, ರಾಷ್ಟ್ರೀಯ ಪುರಸ್ಕಾರ ಸಿಗುವಂತಾಗಬೇಕು. ಹಾಗೂ ಸಂಗೀತ, ನಾಟಕ ಮೊದಲಾದ ಕಲೆಗಳ ಪ್ರಸಾರಕ್ಕೆ ನಿಲಯದ ಕಲಾವಿದರನ್ನು ನಿಯಮಿಸಿಕೊಳ್ಳುವ ಹಾಗೆ ಜನಪದ ಸಂಗೀತ-ಆಟ ಇತ್ಯಾದಿಯಾದ ಕಲೆಗಳನ್ನು ಬಿತ್ತರಿಸಲು ನಿಲಯದ ಕಲಾವಿದರನ್ನಾಗಿ, ಜನಪದ ಕಲಾವಿದರನ್ನೂ ನೇಮಣೂಕಿಗೊಳಿಸುವುದಾಗಬೇಕು. ಈ ಬೇಡಿಕೆಗಳನ್ನು ಜನರೇ ಜನತಾಪ್ರತಿನಿಧಿಗಳ ಮುಂದೆ ಇಟ್ಟು ಒತ್ತಾಯಪಡಿಸಬೇಕು. ಅಳದ ಮಗುವಿಗೆ ತಾಯಿಯೂ ಹಾಲು ಕೊಡುವುದಿಲ್ಲ. ಈ ರೀತಿಯ ಜನತಾ ಒತ್ತಾಸೆ ಇಲ್ಲದೇ ಹೋದಲ್ಲಿ, ಬರಲಿರುವ ಜನ, ಕರ್ನಾಟಕದ ಜನಪದರಂಭೂಮಿಯ ಆಟಗಳಿಗಾಗಿ ಚರಿತ್ರೆಯ ಪುಟಗಳನ್ನೇ ನೋಡುವ ದುರ್ದೈವದ ಅನಿವಾರ್ಯ ಪರಿಸ್ಥಿತಿ ಬಂದೀತು!!!

ಶರಣರ ಉದಯದ ಪೂರ್ವಕಾಲ

● ಡಾ. ವೀರಣ್ಣ ರಾಜೂರ

ಪೀಠಿಕೆ :

ಕರ್ನಾಟಕದ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನ ಒಂದು ಉಜ್ವಲಯುಗ. ಅಂದು ಅಸಂಖ್ಯಾತ ಶಿವಶರಣರು ಕಲ್ಯಾಣದಲ್ಲಿ ಕೇಂದ್ರೀಕೃತವಾಗಿ, ತಮ್ಮ ಪ್ರಖರವಾದ ವೈಚಾರಿಕ ಪ್ರಜ್ಞೆಯಿಂದ ಅದ್ಭುತ ಕ್ರಾಂತಿಯನ್ನು ಎಸಗಿ, ಸಮಾಜದ ಗತಿಯನ್ನೇ ಬದಲಿಸಿದರು. ನಾಡಿನ ನರನಾಡಿಗಳಲ್ಲಿ ನವಚೈತನ್ಯ ತುಂಬಿ ಬದುಕಿಗೊಂದು ಹೊಸ ಅರ್ಥವನ್ನು ತಂದುಕೊಟ್ಟರು. ಜೀವನದ ಎಲ್ಲ ರಂಗಗಳಲ್ಲಿ ವ್ಯಾಪಿಸಿದ್ದ ಅಜ್ಞಾನ-ಅಂಧಕಾರ-ಅಸಮಾನತೆಗಳನ್ನು ತೊಡೆದು ಸುಜ್ಞಾನ ಸೂರ್ಯನ ಸುವರ್ಣಕಿರಣಗಳನ್ನು ಬೀರಿದರು.

ಇಂಥ ಒಂದು ವಿನೂತನ ಕ್ರಾಂತಿ, ವಿಶಿಷ್ಟ ಚಳುವಳಿ ಆ ಕಾಲಕ್ಕೆ ಒಮ್ಮೆಲೆ ಆರಂಭವಾಗಲು ಕಾರಣವೇನು ? ಅದಕ್ಕೆ ದೊರೆತ ಪ್ರೇರಣೆಗಳು ಯಾವವು ? ಆ ಚಳುವಳಿಯಲ್ಲಿ ಪಾಲ್ಗೊಂಡ ವ್ಯಕ್ತಿಗಳು ಯಾರು ? ಎಂಥವರು ? ಅವರಿಗೆ ಈ ಚಳುವಳಿ ಕೈಕೊಳ್ಳಲು ಒದಗಿ ಬಂದ ಅನಿವಾರ್ಯತೆಗಳು ಯಾವವು ? ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡಾಗ ಅದರ ಅದ್ವಿತೀಯತೆ ಹಾಗೂ ಅಪೂರ್ವತೆಗಳು ಸುಸ್ಪಷ್ಟವಾಗುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಶರಣರ ಉದಯದ ಪೂರ್ವಕಾಲದಲ್ಲಿದ್ದ ರಾಜಕೀಯ-ಧಾರ್ಮಿಕ-ಸಾಮಾಜಿಕ-ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಅವಲೋಕನೆಯಿಂದ ಅರಿತಕ್ಕೆ ಬರುತ್ತದೆ.

ಯಾವುದೇ ಕ್ರಾಂತಿ ಅಥವಾ ಚಳುವಳಿ ಒಮ್ಮೆಲೆ ತಟ್ಟನೆ ಉದ್ಭೂತವಾದುದಲ್ಲ; ಅದು ಯಾವುದೇ ಒಬ್ಬ ವ್ಯಕ್ತಿ ಹುಟ್ಟುಹಾಕಿದುದೂ ಅಲ್ಲ. ಅದರ ಹಿಂದೆ ಅಗೋಚರವಾದ ಸುದೀರ್ಘ ಸುಪ್ತ ಕ್ರಿಯಾಚರಣೆ ನಡೆದಿರುತ್ತದೆ. ಅನೇಕ ವ್ಯಕ್ತಿಗಳ ಅಂತರಂಗದ ತುಮುಲಕಾರಣವಾಗಿ, ಕಾಲ ಪಕ್ವವಾದಾಗ ಅದು ಹೊರಹೊಮ್ಮುತ್ತದೆ. ಅದು ವ್ಯಷ್ಟಿಸೃಷ್ಟಿಯಲ್ಲ; ಸಮಷ್ಟಿಸಾಧನೆ. "ಸಾಮೂಹಿಕವಾಗಿ ಸಮಷ್ಟಿ ಮನಸ್ಸನ್ನು ಜಾಗ್ರತಗೊಳಿಸಿ, ಕಾರ್ಯೋನ್ಮುಖವಾಗುವಂತೆ ಮಾಡಲು ಕೈಕೊಳ್ಳುವ ಬಹುಜನರ ಬಹುಮುಖ ಪ್ರಯತ್ನಗಳ ನಿರಂತರ ಕ್ರಿಯಾಶೀಲತೆಯ

ಸಾಧನೆಗಳ ಸರಣಿಯೇ ಚಳವಳಿ. ಇದರ ಪರಿಣಾಮವಾಗಿ ಸಮಾಜದಲ್ಲಿ ಮೂಡುವ ತೀವ್ರವಾದ ಪ್ರತಿಕ್ರಿಯೆ ಮತ್ತು ಪರಿಣಾಮಗಳೇ ಕ್ರಾಂತಿ ಎನಿಸುತ್ತವೆ"[೧] ಸಮಾಜದಲ್ಲಿ ಅನ್ಯಾಯಗಳು ಸಂಗ್ರಹವಾಗುತ್ತ ಹೋಗಿ ಕೊನೆಗೊಮ್ಮೆ ತಾಳಿಕೊಳ್ಳಲಾರದ ಅಂತಿಮ ಸ್ಥಿತಿಯನ್ನು ಮುಟ್ಟುತ್ತವೆ.[೨] ಆಗ ಅದರ ಪರಿಣಾಮವಾಗಿ ಕ್ರಾಂತಿ ಉದ್ಭವಿಸುತ್ತದೆ. ಅದು ಖಡ್ಗ ಹಿಡಿದು ಹೋರಾಡುವ ಹಿಂಸಾರೂಪದ ರಕ್ತಕ್ರಾಂತಿಯಾಗಬಹುದು, ಇಲ್ಲವೆ 'ಸುಪ್ತವಾಗಿದ್ದ ಅಂತಃಶಕ್ತಿಯನ್ನು, ಅಂತಃಪ್ರಜ್ಞೆಯನ್ನು ಉದ್ದೀಪಿಸುವ ಅನಂತ ಶಕ್ತಿ-ಉಕ್ತಿಗಳ ಅಭಿವ್ಯಕ್ತಿ' ರೂಪವಾದ, ಕ್ರಿಯಾಜ್ಞಾನಾನುಭಾವಸಮನ್ವಿತ ಅಹಿಂಸಾತ್ಮಕ ವೈಚಾರಿಕ ಕ್ರಾಂತಿಯಾಗಬಹುದು. ಶರಣರು ಎಸಗಿದ್ದು ಅಹಿಂಸಾತ್ಮಕ ವೈಚಾರಿಕ ಕ್ರಾಂತಿ. ಅದನ್ನವರು ತಮ್ಮ ಸತ್ಯ ಶುದ್ಧ ನಡೆ-ನುಡಿ ಹಾಗೂ ವಚನ ಮಾಧ್ಯಮದ ಮೂಲಕ ನೆರವೇರಿಸಿದರು.

'ಜಗತ್ತಿನ ಸಾಂಸ್ಕೃತಿಕ ಇತಿಹಾಸವೆಂದರೆ ಆಂದೋಲನಗಳ ಚರಿತ್ರೆ.' ಪ್ರಪಂಚದ ಬೇರೆ ಬೇರೆ ರಾಷ್ಟ್ರದ ಬೇರೆ ಬೇರೆ ರಂಗಗಳಲ್ಲಿ ಕಾಲದಿಂದ ಕಾಲಕ್ಕೆ ಅನೇಕ ಚಳುವಳಿಗಳು ನಡೆಯುತ್ತಲೇ ಬಂದಿವೆ. ಅವುಗಳಿಗೆ ರಾಜಕೀಯ ದಾಸ್ಯ, ಆರ್ಥಿಕ ವಿಷಮತೆ, ಸಾಮಾಜಿಕ ಅಸಮಾನತೆ, ಅತಿಯಾದ ಧಾರ್ಮಿಕ ಕಟ್ಟುಪಾಡು, ವ್ಯಕ್ತಿಯ ಹಕ್ಕುಚ್ಯುತಿ, ಜನಾಂಗದ ಜಾಗೃತಿ, ನಾಡು-ನುಡಿ ರಕ್ಷಣೆ, ಮತಧರ್ಮ ಪ್ರತಿಷ್ಠೆ-ಹೀಗೆ ಅನೇಕ ಅಂಶಗಳು ಕಾರಣವಾಗಿ ನಿಂತಿವೆ.

ಇವುಗಳಲ್ಲಿ ಶರಣರ ಚಳುವಳಿಗೆ ಧಾರ್ಮಿಕ ಮತ್ತು ಸಾಮಾಜಿಕ ಸಂಗತಿಗಳು ಪ್ರಮುಖ ಕಾರಣವಾಗಿದ್ದರೂ ಉಳಿದೆಲ್ಲ ಅಂಶಗಳೂ ಅವುಗಳ ಅಡಿಯಲ್ಲಿಯೇ ಸೇರುವುದರಿಂದ, ಅವರದು ಒಂದು ದೃಷ್ಟಿಯಿಂದ ಮಾನವನ ಸರ್ವಾಂಗೀಣ ಬದುಕಿನ ಏಳಿಗೆಗೆ ಸಂಬಂಧಿಸಿದ 'ಸಾಂಸ್ಕೃತಿಕ ಸಮಗ್ರಕ್ರಾಂತಿ' ಎನಿಸಿದೆ. ಈ ಹಿನ್ನೆಲೆಯಲ್ಲಿ ಶರಣರ ಉದಯದ ಪೂರ್ವಕಾಲದ ಸ್ಥಿತಿಗತಿಗಳನ್ನು ಕುರಿತು ಮುಂದೆ ಸ್ಥೂಲವಾಗಿ ಸಮೀಕ್ಷಿಸಬಹುದು.

ರಾಜಕೀಯ ವಾತಾವರಣ :

ಶರಣರ ಪೂರ್ವಕಾಲದ-ಅಂದರೆ ೧೧ನೆಯ ಶತಮಾನದ-ರಾಜಕೀಯ ವಾತಾವರಣ ಅಷ್ಟೊಂದು ಹಿತಕರವಾಗಿರಲಿಲ್ಲ. ಆಗ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ

---

೧. ವಚನ ಚಳುವಳಿ : ಡಾ. ಎಚ್. ತಿಪ್ಪೇರುದ್ರಸ್ವಾಮಿ ಪು. ೫

೨. "Revolution is the precipitated result of accumulated worngs" ಎಲ್. ಡ್ಯೂರಾಂಟ್ (ಅದೇ)

(೯೭೩-೧೧೯೦) ದಕ್ಷಿಣಭಾರತದ ಪ್ರಸಿದ್ಧ ಅರಸು ಮನೆತನವಾಗಿತ್ತು. ಚಾಲುಕ್ಯರಿಗೂ ಚೋಳರಿಗೂ ವಂಶಪಾರಂಪರ್ಯ ದ್ವೇಷವಿದ್ದು ಅದು ಕೊನೆಯವರೆಗೂ ಸಾಗಿಬಂದಿತ್ತು. ಜಯಸಿಂಹನು (೧೦೧೫-೧೦೪೩) ಚಾಲುಕ್ಯ ಸಾಮ್ರಾಜ್ಯವನ್ನು ಆಳುತ್ತಿದ್ದಾಗ ರಾಜೇಂದ್ರ ಚೋಳ, ಪರುಮಾರ ಭೋಜ ಮತ್ತು ಕಲಚುರಿಯ ಗಂಗಯದೇವ ಮೂವರೂ ಒಪ್ಪಂದ ಮಾಡಿಕೊಂಡು ಒಟ್ಟಾಗಿ ೧೦೧೯ರ ಸುಮಾರಿಗೆ ಅವನ ಮೇಲೆ ಏರಿಬಂದರು. ಮೊದಲನೆಯ ಸೋಮೇಶ್ವರನ(೧೦೪೩-೧೦೬೮) ಕಾಲದಲ್ಲಿ ಚೋಳರ ದ್ವೇಷ ಇನ್ನೂ ಹೆಚ್ಚಿತು. ಈ ಅವಧಿಯಲ್ಲಿ ಚೋಳ ರಾಜಾಧಿರಾಜ ಕಲ್ಯಾಣವನ್ನು ಹಾಳು ಮಾಡಿ, ಅಲ್ಲಿಯೇ ವೀರಪಟ್ಟಾಭಿಷೇಕ ಮಾಡಿಸಿಕೊಂಡು 'ವೀರರಾಜೇಂದ್ರ' ಎಂಬ ಬಿರುದನ್ನು ಪಡೆದ. ಹೀಗಾಗಿ ಸೋಮೇಶ್ವರನ ಆಳಿಕೆಯೆಲ್ಲ ಯುದ್ಧದಲ್ಲಿಯೇ ಕಳೆಯಿತು. ಸೋಮೇಶ್ವರನ ತರುವಾಯ ಚಾಲುಕ್ಯ ಸಾಮ್ರಾಜ್ಯದಲ್ಲಿ ಯಾದವೀ ಕಲಹ ಆರಂಭವಾಯಿತು. ಇಮ್ಮಡಿ ಸೋಮೇಶ್ವರನು ಬನವಾಸಿಯಲ್ಲಿ ಆಳುತ್ತಿದ್ದ ತನ್ನ ತಮ್ಮ ವಿಕ್ರಮಾದಿತ್ಯನ ಪರಾಕ್ರಮ ಸಹಿಸದೆ, ಚೋಳರ ಸಹಾಯ ಪಡೆದು ಅತನ ಸದೆಬಡಿಯಲು ಪ್ರಯತ್ನಿಸಿದ. ಹೀಗಾಗಿ ರಾಜ್ಯದಲ್ಲಿ ಎರಡು ಹೋಳುಗಳಾದವು. ಪರಸ್ಥಿತಿ ಹದಗೆಟ್ಟಿತು. ಆದರೆ ಪರಾಕ್ರಮಿಯಾದ ವಿಕ್ರಮಾದಿತ್ಯ ಇಬ್ಬರನ್ನೂ ಸೋಲಿಸಿ ಕಲ್ಯಾಣ ಸಾಮ್ರಾಜ್ಯಾಧಿಪತಿಯಾಗಿ ೫೦ ವರ್ಷಕಾಲ ದಕ್ಷತೆಯಿಂದ ರಾಜ್ಯಭಾರ ಮಾಡಿದನು. (೧೦೭೬-೧೧೨೬). ಹೀಗಿದ್ದೂ ಆತನ ಆಳಿಕೆಯಲ್ಲಿಯೂ ಅಂತರಿಕ ಹೋರಾಟಗಳು ಇದ್ದೇ ಇದ್ದವು. ಹೊಯ್ಸಳ ಬಿಟ್ಟಿದೇವ ಕ್ರಿ. ಶ. ೧೧೧೬ರಲ್ಲಿ ಚೋಳರಾಜ್ಯದ ಮೇಲೆ ದಾಳಿಯಿಟ್ಟು ಗಂಗವಾಡಿಯ ಅಡಿಗೈಮಾರನನ್ನು ಸೋಲಿಸಿದ. ಕೊನೆಗೆ ವಿಕ್ರಮಾದಿತ್ಯನ ವಿರುದ್ಧ ಯುದ್ಧ ಸಾರಿ ಸೋತುಹೋದ. ವಿಕ್ರಮಾದಿತ್ಯನ ಆಳಿಕೆಯ ಕೊನೆಯಲ್ಲಿ ಚಾಲುಕ್ಯ ಸಾಮ್ರಾಜ್ಯದ ಪತನದ ಲಕ್ಷಣಗಳು ಕಾಣಿಸಿದವು. ಸಾಮಂತನಾದ ಹೊಯ್ಸಳ ಬಿಟ್ಟಿದೇವ ಸ್ವತಂತ್ರನಾದುದು ಇದಕ್ಕೊಂದು ನಿದರ್ಶನ

ವಿಕ್ರಮಾದಿತ್ಯನ ತರುವಾಯ ಬಂದ ಮೂರನೆಯ ಸೋಮೇಶ್ವರ (೧೧೨೬-೧೧೩೮) ಅಷ್ಟೊಂದು ಮುತ್ಸದ್ದಿಯಾಗಿರಲಿಲ್ಲ. ಬಿಟ್ಟಿದೇವ ಅವನ ಶಾಂತಸ್ವಭಾವದ ಲಾಭಪಡೆದು ತನ್ನ ಅಸ್ತಿತ್ವವನ್ನು ಸ್ಥಾಪಿಸತೊಡಗಿದ. ಅವನ ಮೇಲೆ ದಂಡೆತ್ತಿ ಬಂದು ಬನವಾಸಿ, ಪಾನುಂಗಲ್, ಉಚ್ಚಂಗಿ ಮೊದಲಾದವುಗಳನ್ನು ವಶಪಡಿಸಿಕೊಂಡ. ಮೂರನೆಯ ಸೋಮೇಶ್ವರನ ನಂತರ ಪಟ್ಟಕ್ಕೆ ಬಂದ ಮೂರನೆಯ ಜಗದೇಕಮಲ್ಲನ ಕಾಲದಲ್ಲಿ ಹೊಯ್ಸಳರು ಮತ್ತಷ್ಟು ಪ್ರಬಲರಾದರು. ಜೊತೆಗೆ ಚಾಲುಕ್ಯರ ಇನ್ನೊಬ್ಬ ಸಾಮಂತರಾದ ಕಲಚೂರಿಗಳೂ ಸ್ವತಂತ್ರರಾಗಲು

ಹವಣಿಸಿದರು. ಮಾಳವ, ಗೂರ್ಜರ ಹಾಗೂ ದಕ್ಷಿಣದ ಕುಲೋತ್ತುಂಗ ಚೋಳ ಮುಂತಾದವರೊಡನೆ ಯುದ್ಧ ಮಾಡಿ ಜಗದೇಕನ ಸೈನ್ಯ ದಿನದಿಂದ ದಿನಕ್ಕೆ ಕ್ಷೀಣಿಸ-ತೊಡಗಿತು. ಇತ್ತ ಸಾಮಂತರು ಇನ್ನಷ್ಟು ಪ್ರಬಲರಾಗತೊಡಗಿದರು. ಹೀಗಾಗಿ ಚಾಲುಕ್ಯ ಸಾಮ್ರಾಜ್ಯದ ಶಕ್ತಿ ಕುಂದುತ್ತ ನಡೆಯಿತು.

ಮೂರನೆಯ ಜಗದೇಕಮಲ್ಲನ ತರುವಾಯ ಅವನ ತಮ್ಮ ಮೂರನೆಯ ತೈಲಪ (೧೧೫೧) ಪಟ್ಟಕ್ಕೆ ಬಂದ. ಈತ ತುಂಬ ದುರ್ಬಲನಾಗಿದ್ದ. ಈಗ ಸಾಮಂತರೆಲ್ಲರೂ ಸ್ವತಂತ್ರರಾದರು. ರಾಜಕೀಯದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಯಿತು. ಇದೇ ಸಮಯ ಸಾಧಿಸಿ ಕಲಚುರಿಯ ಬಿಜ್ಜಳ ರಾಜ್ಯಸೂತ್ರವನ್ನು ಕೈಯಲ್ಲಿ ತೆಗೆದುಕೊಂಡನು. ೧೧೪೨ ರಿಂದ ೧೧೫೧ರ ವರೆಗೆ ಆತ ತರ್ದವಾಡಿಯಲ್ಲಿ ಆಳುತ್ತಿದ್ದು, ಮುಂದೆ ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ.[೩]

ಹೀಗೆ ಶರಣರು ಉದಿಸುವ ಪೂರ್ವದಲ್ಲಿ ರಾಜಕೀಯದಲ್ಲಿ ಅಸ್ಥಿರತೆ, ಅಭದ್ರತೆ ಹಾಗೂ ಅಶಾಂತಿ ತಾಂಡವವಾಡುತ್ತಿದ್ದವು. ಇಂಥ ಸಮಯದಲ್ಲಿ ತಮ್ಮ ಸ್ಥಾನ ಉಳಿಸಿಕೊಳ್ಳಲು ಹೆಣಗುತ್ತಿದ್ದ ಅರಸರಿಗೆ ಪ್ರಜೆಗಳ ಕಷ್ಟ ಸುಖಗಳ ಬಗೆಗೆ ಗಮನ ಹರಿಸಲು ಅವಕಾಶವೇ ಇರಲಿಲ್ಲ. ಹೀಗಾಗಿ ಸಾಮಾನ್ಯ ಜನರ ಜೀವನ ತುಂಬ ಶೋಚನೀಯ ಸ್ಥಿತಿಗೆ ಬಂದಿತ್ತು.

ತುಂಬ ದಕ್ಷತೆಯಿಂದ ಆಳಿದ ಅರಸನೆಂಬ ಖ್ಯಾತಿಗೆ ಪಾತ್ರನಾದ ವಿಕ್ರಮಾದಿತ್ಯನ ಕಾಲದಲ್ಲಿ ರಾಜಕೀಯ ಪ್ರತಿಷ್ಠೆ ಉತ್ತುಂಗತೆಗೇರಿತ್ತಾದರೂ ಸಾಮಾಜಿಕರ ಜೀವನ ನೆಮ್ಮದಿದಾಯಕವಾಗಿರಲಿಲ್ಲ. "ಒಬ್ಬ ಬಲಾಢ್ಯ ಅರಸನ ಹಿಂದೆ ಬಲಾಢ್ಯ ಅಧಿಕಾರಿವರ್ಗ ಮತ್ತು ಪುರೋಹಿತವರ್ಗಗಳು ಬೆಳೆಯುತ್ತವೆಂಬಂತೆ, ಈತನ ೫೦ ವರ್ಷದ ಆಳಿಕೆಯಲ್ಲಿ ವರ್ಗವ್ಯವಸ್ಥೆ, ವರ್ಣವ್ಯವಸ್ಥೆಗಳು ವ್ಯಾಪಕವಾಗಿ ಬೆಳೆದು ಬಂದವು. ವರ್ಣವ್ಯವಸ್ಥೆಯ ಪುರೋಹಿತಶಾಹಿಯು ಬಲಾಢ್ಯವಾದುದಕ್ಕೆ ನಿದರ್ಶನವೆಂಬಂತೆ ಈ ಹಿಂದೆ ಇಲ್ಲದಷ್ಟು ಅಗ್ರಹಾರಗಳು ಅಂದು ಹುಟ್ಟಿಕೊಂಡವು. ದೇವಾಲಯ ಮತ್ತು ಮಠಗಳು ಊರೂರು ತಲೆಯೆತ್ತಿದವು. ರಾಷ್ಟ್ರದ ಎಲ್ಲೆಯನ್ನು ವಿಸ್ತರಿಸುವ, ಪ್ರಾಂತದ ಆಡಳಿತವನ್ನು ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನಗಳು ಗಾಢವಾಗಿ ನಡೆದವು. ಇದರಿಂದಾಗಿ ೫೦ ವರ್ಷಗಳ ಅವಿಚ್ಛಿನ್ನ ಆಳಿಕೆಯಲ್ಲಿ ಒಂದೆಡೆ ಚಕ್ರವರ್ತಿ ಮಾಂಡಳಿಕ, ಸಾಮಂತ, ದಂಡನಾಯಕ, ಮಂತ್ರಿ, ನಾಳ್ಗಾವುಂಡ,

---

೩. ಈ ವಿಷಯವನ್ನು ಡಾ. ಆರ್. ಸಿ. ಹಿರೇಮಠ ಅವರ 'ಷಟ್‌ಸ್ಥಲ ಪ್ರಭೆ' ಪು. ೧-೮ ರಿಂದ ಸಂಗ್ರಹಿಸಲಾಗಿದೆ.

ಗಾವುಂಡ ಸೇನಬೋವ ಮೊದಲಾದ ವರ್ಗವ್ಯವಸ್ಥೆಗಳೂ, ಇನ್ನೊಂದೆಡೆ ಮಹಾಜನ ಪುರೋಹಿತ, ಸ್ಥಾನಪತಿ, ತಪೋಧನ ಮೊದಲಾದ ವರ್ಣವ್ಯವಸ್ಥೆಗಳೂ ವಿಪುಲ ಸಂಖ್ಯೆಯಲ್ಲಿ ಬೆಳೆದು ಪ್ರಜೆಗಳಿಗೆ ತಲೆಭಾರವೆನಿಸಿದವು. ಅರಸನ ದರ್ಪಕ್ಕೆ ಅಂಜಿ ಬಂಡೆಯನ್ನು ಹೊತ್ತು ಬದುಕುವಂಥ ಸ್ಥಿತಿ ಈಗ ಪ್ರಜೆಗಳದಾಯಿತು. ಈ ಬಂಡೆಯನ್ನು ಬಹಿರಂಗವಾಗಿ ಕೆಳಗೆ ಚೆಲ್ಲುವ ಪ್ರತಿಭಟನೆ ಅಲ್ಲಿಂದ ೫೦ ವರ್ಷಗಳ ತರುವಾಯ ಬಿಜ್ಜಳನ ಕಾಲದಲ್ಲಿ ನಡೆದರೂ ಅದರ ಕಾರಣಗಳು, ಸೂಚನೆಗಳು ವಿಕ್ರಮಾದಿತ್ಯನ ಕಾಲದಲ್ಲಿಯೇ ಅಸ್ಪಷ್ಟವಾಗಿ ಕಂಡುಬರುತ್ತವೆ. ಸ್ಫೋಟನಕ್ರಿಯೆ ಬಿಜ್ಜಳನ ಕಾಲದಲ್ಲಿ ಘಟಿಸಿದರೂ ಅದರ ಸ್ಪಂದನಕ್ರಿಯೆ ವಿಕ್ರಮಾದಿತ್ಯನ ಕಾಲದಲ್ಲಿಯೆ ಪ್ರಾರಂಭವಾದಂತಿದೆ."[೪] ಇದಕ್ಕೆ ಹರಿಹರನ ಕೊಂಡಗುಳಿ ಕೇಶಿರಾಜನ ರಗಳೆ, ರೇವಣಸಿದ್ಧೇಶ್ವರ ರಗಳೆ, ಬಾಹೂರ ಬೊಮ್ಮಯ್ಯನ ರಗಳೆ, ತೆಲುಗು ಜೊಮ್ಮಯ್ಯನ ರಗಳೆ – ಈ ಕೃತಿಗಳು ಸಾಕ್ಷಿ ನುಡಿಯುತ್ತವೆ.

ಧಾರ್ಮಿಕ ಪರಿಸ್ಥಿತಿ :

ಶರಣರ ಉದಯದ ಪೂರ್ವದಲ್ಲಿ ವೈದಿಕ–ಜೈನ ಮತ್ತು ಶೈವಧರ್ಮಗಳು ಕರ್ನಾಟಕದಲ್ಲಿ ಪ್ರಚಾರದಲ್ಲಿದ್ದವು. ೧೧ನೆಯ ಶತಮಾನದ ಹೊತ್ತಿಗೆ ಜೈನಧರ್ಮದ ಪ್ರಭಾವ ಕಡಿಮೆಯಾಗಿತ್ತು. ರಾಜಾಶ್ರಯದ ತಪ್ಪಿಕೆ, ಶೈವ-ವೈಷ್ಣವ ಧರ್ಮಗಳ ಹೆಚ್ಚಳಿಕೆ, ಶಾಸ್ತ್ರಜಡತೆ, ಆಚಾರಶೈಥಿಲ್ಯ, ಸತ್ಯಶುದ್ಧಿಪತನ, ಕಠಿಣವ್ರತ–ನಿಯಮ ಬದ್ಧತೆ ಇತ್ಯಾದಿ ಕಾರಣವಾಗಿ ಅದು ಜನಸಾಮಾನ್ಯರ ಹೃದಯದ ಆಶೋತ್ತರಗಳಿಗೆ ಸಂದಿಸದೆ ಇಳಿಯುಖವಾಯಿತು.

ಜೈನ ಧರ್ಮದ ನಂತರ ಶೈವಧರ್ಮ ಹೆಚ್ಚು ಪ್ರಾಬಲ್ಯವನ್ನು ಸ್ಥಾಪಿಸಿತು. ಅದರಲ್ಲಿ ಹಲವು ಪಂಥಗಳಿದ್ದವು. ಪಾಶುಪತ, ಕಾಳಾಮುಖ, ಕಾಪಾಲಿಕ ಮತ್ತು ಶೈವ ಇವು ಪ್ರಮುಖವಾದವು. ಕಾಪಾಲಿಕಪಂಥ ಉಗ್ರ-ತಾಮಸ-ವಾಮಮಾರ್ಗವನ್ನು ಅನುಸರಿಸಿದರೆ, ಉಳಿದವು ಶುದ್ಧ-ಸಾತ್ವಿಕ ಆಚರಣೆಗಳನ್ನು ಅಳವಡಿಸಿಕೊಂಡಿದ್ದವು. ಕಾಳಾಮುಖಪಂಥ ಆತ ಸಾಮಾಜಿಕವಾಗಿ ತುಂಬ ಪ್ರತಿಷ್ಠಿತಸ್ಥಾನವನ್ನು ಪಡೆದಿತ್ತು. ಇದರ ಕೇಂದ್ರಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಇದ್ದವು. ಈ ಪಂಥದ ಗುರುಗಳು ರಾಜಪೂಜಿತರಾಗಿ ದೇವಾಲಯ ಮಠಗಳನ್ನು ಕಟ್ಟಿಸಿ ಧರ್ಮಪ್ರಸಾರ ವಿದ್ಯಾಪ್ರಸಾರಕಾರ್ಯವನ್ನು ಕೈಕೊಂಡರು. ಸಾಮಾಜಿಕ ಚಟುವಟಿಕೆಗಳಿಗೂ ಅವು ಕೇಂದ್ರವೆನಿಸಿದವು. ಅರಸರು ಅವುಗಳಿಗೆ ದಾನ-ದತ್ತಿಗಳನ್ನು ಬಿಟ್ಟು ಗೌರವ ಸಲ್ಲಿಸಿ

---

೪. ಮಾರ್ಗ (ಸಂ. ೧)–ಡಾ. ಎಂ. ಎಂ. ಕಲಬುರ್ಗಿ ಪು. ೧೬೭

ದರು. ಕಾಳಾಮುಖರು ಕಟ್ಟಿಸಿದ ಮಠಗಳು ಮುಂದೆ ವೀರಶೈವಮಠಗಳಾಗಿ ಪರಿವರ್ತನೆ ಹೊಂದಿದ ಕಾರಣ ವೀರಶೈವ ಒಂದು ದೃಷ್ಟಿಯಿಂದ ಕಾಳಾಮುಖಪಂಥದ ಪರಿಷ್ಕೃತರೂಪ ಎಂದು ಹೇಳಲಾಗುತ್ತದೆ. ಆದರೆ ಎರಡರಲ್ಲಿಯೂ ತಾತ್ವಿಕವಾಗಿ ತುಂಬ ವ್ಯತ್ಯಾಸವಿದೆ. ಕಾಳಾಮುಖರು ಸಂಪ್ರದಾಯನಿಷ್ಠರು; ಸ್ಥಾವರಲಿಂಗ ಪೂಜಕರು, ವೈದಿಕ ವಿಧಿವಿಧಾನಗಳನ್ನು ಅನುಸರಿಸುವವರು, ವರ್ಣಾಶ್ರಮಧರ್ಮದಲ್ಲಿ ನಿಷ್ಠೆ ಇಟ್ಟವರು. ದೇವಾಲಯ ನಿರ್ಮಾಣ, ರಾಜಾಶ್ರಯಗಳಿಗೆ ಬದ್ಧರಾದವರು. ಆದರೆ ವೀರಶೈವರು ಇವೆಲ್ಲವನ್ನು ಧಿಕ್ಕರಿಸಿ ನಿಂತ ಸ್ವತಂತ್ರರು; ಪ್ರಯೋಗಶೀಲರು. ಈ ಎಲ್ಲ ಶೈವಸಂಪ್ರದಾಯಗಳಲ್ಲಿ ಕುಂದುಕೊರತೆ ದೋಷಗಳನ್ನು ಕಂಡವರು. ಹೀಗಾಗಿ ಅವುಗಳನ್ನು ಟೀಕಿಸಿದರು. ಅಲ್ಲಮಪ್ರಭು ಇವರ ಆಚರಣೆಯನ್ನು 'ಕಾಕು ಸಟೆ ಭ್ರಾಂತು' ಎಂದು ಕರೆದರೆ, ಚೆನ್ನಬಸವಣ್ಣ ತನ್ನ ಅನೇಕ ವಚನಗಳಲ್ಲಿ 'ಶೈವಕರ್ಮಿಗಳು' ಎಂದು ಇವರನ್ನು ನಿಂದಿಸಿದ್ದಾರೆ. ಅಲ್ಲದೆ ಇವರು 'ಭಕ್ತಿಪಥಕ್ಕೆ ಸಲ್ಲರು' ಎಂದಿದ್ದಾರೆ :

> "ಶೈವ ಸೈವೆರಗಾದ, ಪಾಶುಪತಿ ಪಥವರಿಯ, ಕಾಳಾಮುಖಿ ಕಂಗೆಟ್ಟ,
> ಮಹಾವ್ರತಿ ಮದವೇರಿದ, ಸನ್ಯಾಸಿ ಪಾಷಂಡಿಯಾದ, ಕಾಪಾಲಿ
> ಮರುಳಾಗಿತಿರುಗಿದ, ಈ ಆರು ಭಕ್ತಿಪಥಕ್ಕೆ ಸಲ್ಲವು ಕೇಳಿರಣ್ಣಾ".

ಶೈವಧರ್ಮಕ್ಕಿಂತ ಹೆಚ್ಚಾಗಿ ವೈದಿಕ ಧರ್ಮ ಅಂದು ಜನತೆಯನ್ನು ಅಜ್ಞಾನದ ಕತ್ತಲೆಯಲ್ಲಿ ನೂಕಿತ್ತು. ಹಲವು ಹತ್ತು ಜಾತಿಗಳಲ್ಲಿ ಹರಿದು ಹಂಚಿದ ಅದು ಸ್ವಾರ್ಥ–ಮೋಸ–ವಂಚನೆಗಳ ತವರಾಗಿತ್ತು. ವೇದವನ್ನು ಓದುವ ಹಕ್ಕು ಬ್ರಾಹ್ಮಣರಿಗೆ ಮಾತ್ರ, ಶೂದ್ರರಿಗೆ, ಸಾಮಾನ್ಯರಿಗೆ, ಸ್ತ್ರೀಯರಿಗೆ ಅವುಗಳನ್ನು ಕೇಳಲೂ ಸಹಿತ ಅವಕಾಶವಿಲ್ಲ. ಉತ್ತಮರ ಸೇವೆಗೈಯ್ಯುವುದು ಮಾತ್ರ ಅಂತ್ಯಜರ ಕಾರ್ಯ, ಅವರವರ ಕರ್ಮಫಲಕ್ಕೆ ತಕ್ಕಂತೆ ಆಯಾ ಜಾತಿಯಲ್ಲಿ ಜನಿಸುತ್ತಾರೆ. ಹೀಗೆ ಇಲ್ಲ ಸಲ್ಲದ ವಿಚಾರಗಳನ್ನು ಸಾಮಾನ್ಯ ಜನರ ತಲೆಯಲ್ಲಿ ತುಂಬಿ ಅಧೈರ್ಯ ಅಂಧಶ್ರದ್ಧೆ ಕೀಳರಿಮೆಗಳನ್ನು ಅವರಲ್ಲಿ ಬೆಳೆಸಿತು. ಯಜ್ಞಯಾಗಾದಿ ಹಿಂಸಾಮೂಲ ಕರ್ಮಗಳು ಪ್ರತಿಷ್ಠೆಯ ಸಾಧನಗಳಾದವು ಜೋತಿಷ್ಯ ಶಕುನ ತಿಥಿ ವಾರ ನಕ್ಷತ್ರ ಮೊದಲಾದವುಗಳಲ್ಲಿ ಸಾಮಾನ್ಯರ ಆಸಕ್ತಿ ಹೆಚ್ಚಿಸಿ ಶೋಷಣೆ ನಡೆಸಿತು. ಒಟ್ಟಿನಲ್ಲಿ ಉಪನಿಷತ್ತು, ಭಗವದ್ಗೀತೆಗಳ ಉದಾತ್ತ ಸಂದೇಶ ಮರೆಯಾಗಿ ಧರ್ಮದ ಹೆಸರಿನಲ್ಲಿ ಏನೆಲ್ಲ ಅನಾಹುತಗಳು ನಡೆಯತೊಡಗಿದ್ದವು.

ಹೀಗೆ ಸಾಮಾನ್ಯ ಜನತೆ– ಒಂದೆಡೆ ಮೇಲ್ವರ್ಗದವರ ಧರ್ಮದಿಂದ ಶೋಷಿತರಾದರೆ ಮತ್ತೊಂದೆಡೆ ತಾವೇ ಸೃಷ್ಟಿಸಿಕೊಂಡ ಅನೇಕ ಕ್ಷುದ್ರ ದೇವತೆಗಳ ಉಪಾ–

ಸನೆಯ ನೆಪದಲ್ಲಿ ಪ್ರಾಣಬಲಿಕೊಡುವುದು, ವಿಪರೀತ ಉಗ್ರ ವಿಧಿ ನಿಯಮ ಆಚರಣೆಗಳನ್ನು ಪಾಲಿಸುವುದರ ಮೂಲಕ ತಮ್ಮನ್ನು ತಾವೇ ಕಷ್ಟ ನಷ್ಟಗಳಿಗೆ ಈಡು ಮಾಡಿಕೊಳ್ಳುವುದೂ ನಡೆಯಿತು.

ಇಂಥ ವಿಪರ್ಯಾಸವನ್ನು ಕಂಡ ಶರಣರು ಮನಕರಗಿದರು; ಅದನ್ನು ಕಟುವಾಗಿ ಟೀಕಿಸಿದರು. ಶೋಷಣೆರಹಿತ ಧರ್ಮವನ್ನು ರೂಪಿಸಲು ಮುಂದಾದರು. ಅದರ ಫಲವಾಗಿ 'ವೀರಶೈವ'ವೆಂಬ ವಿನೂತನ ಮಾನವಧರ್ಮ ಮೂಡಿಬಂದಿತು.

ವೀರಶೈವ ಧರ್ಮದ ಹುಟ್ಟು. ಮತ್ತು ಅದರ ಸ್ಥಾಪಕನ ವಿಷಯದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳು ತಲೆದೋರಿವೆ. ಯಾವುದೇ ಧರ್ಮದ ಹುಟ್ಟನ್ನು ಕುರಿತು ಸಬಲ ಆಧಾರಗಳಿಲ್ಲದೆ ಕರಾರುವಾಕ್ಕಾಗಿ ಹೇಳಲು ಬರುವುದಿಲ್ಲ. ವೀರಶೈವ ಧರ್ಮಕ್ಕೂ ಈ ಮಾತು ಅನ್ವಯಿಸುತ್ತದೆ. ಇದು ತುಂಬ ಪ್ರಾಚೀನವಾದುದು ಎಂದು ಹೇಳಲಾಗುತ್ತದೆ. ಆದರೆ ಎಷ್ಟು ಪ್ರಾಚೀನ ಎಂಬ ಪ್ರಶ್ನೆಗೆ ಉತ್ತರ ಅಷ್ಟು ಸುಲಭವಲ್ಲ. ಇಲ್ಲಿ ಅದರ ದೀರ್ಘವಾದ ಚರ್ಚೆಗೆ ತೊಡಗದೆ ಖಚಿತ ಆಧಾರಗಳ ಮೇಲೆ ನಿರ್ಣಿತವಾದ ಅಭಿಪ್ರಾಯಗಳನ್ನು ಮಾತ್ರ ಹೇಳಿ ಮುಂದೆ ಸಾಗುತ್ತೇನೆ.

ವೀರಶೈವದ ಉಲ್ಲೇಖಗಳನ್ನು ವಾತುಲಶುದ್ಧಾಖ್ಯ, ಸೂಕ್ಷ್ಮ, ಪಾರಮೇಶ್ವರ, ಕಾರಣ ಮೊದಲಾದ ಶಿವಾಗಮಗಳಲ್ಲಿ ಕಂಡುಕೊಳ್ಳಲಾಗಿದೆ. ಇಪ್ಪತ್ತೆಂಟು ಶಿವಾಗಮಗಳಲ್ಲಿ ಮೊದಲ ಭಾಗಗಳು ಶೈವಸಿದ್ಧಾಂತವನ್ನು ಪ್ರತಿಪಾದಿಸಿದರೆ, ಉತ್ತರ ಭಾಗಗಳು ವೀರಶೈವವನ್ನು ಪ್ರತಿಪಾದಿಸುತ್ತವೆ ಎಂದು ಹೇಳಲಾಗುತ್ತದೆ ಆದರೆ. ಎಲ್ಲವೂ ಇಂದು ದೊರೆತಿಲ್ಲ. ಅಲ್ಲದೆ ಅವುಗಳ ಕಾಲವೂ ಖಚಿತವಾಗಿಲ್ಲ.[೫] ಚೆನ್ನಬಸವಣ್ಣ ತನ್ನ 'ಕರಣಹಸುಗೆ'ಯನ್ನು 'ವಿಜಯ ಭೈರವಿ' ಎಂಬ ಆಗಮಗ್ರಂಥವೊಂದನ್ನು ಆಧರಿಸಿ ಬರೆದಿರುವುದಾಗಿ ತಿಳಿಸುತ್ತಾನೆ. ಇದರಿಂದ ೧೨ ಶ.ಕ್ಕಿಂತ ಮೊದಲು ಆಗಮಗಳು ರಚಿತವಾಗಿದ್ದವು ಎಂದು ನಂಬಬಹುದಾದರೂ ಬಸವಾದಿಗಳ ವೀರಶೈವ ಸಿದ್ಧಾಂತಗಳಿಗೆಲ್ಲ ಅವೇ ಆಕರ ಎಂದು ಹೇಳಲುಬರುವಂತಿಲ್ಲ.[೬]

ಬಸವಪೂರ್ವದ ಯಾವುದೇ ಶಾಸನಗಳಲ್ಲಿ ವೀರಶೈವದ ಉಲ್ಲೇಖ ಬರುವುದಿಲ್ಲ. ಸದ್ಯ 'ವೀರಶೈವ' ಎಂಬ ಪದದ ಜೊತೆಗೆ ಅದರ ಕೆಲವು ಪರಿಭಾಷೆಗಳನ್ನು ತಿಳಿಸುವ ಗ್ರಂಥಗಳೆಂದರೆ ಕೊಂಡಗುಳಿ ಕೇಶಿರಾಜನ ಕಂದಗಳು. ಕಲ್ಯಾಣಿ ಚಾಲುಕ್ಯ

---

೫. ಕೆಲವು ಆಗಮಗಳಲ್ಲಿ ಅಲ್ಲಮ ಬಸವಣ್ಣನವರ ಹೆಸರುಗಳೂ ಬರುತ್ತವಂತೆ.

೬. 'ಸಿದ್ಧಾಂತ ಶಿಖಾಮಣಿ' ವೀರಶೈವದ ಆಧಾರ ಗ್ರಂಥವೆಂದು ಹೇಳಲಾಗುತ್ತದೆ. ಆದರೆ ಇದರ ಕಾಲ ನಿಶ್ಚಿತವಿಲ್ಲ. ಶಿವಶರಣರು ಇದರ ಉಲ್ಲೇಖ ಮಾಡಿಲ್ಲ.

೬ನೆಯ ವಿಕ್ರಮಾದಿತ್ಯನಲ್ಲಿ (೧೦೭೬-೧೧೨೬) ದಂಡನಾಯಕನಾಗಿದ್ದ ಕೇಶಿರಾಜ (೧೧೦೭-೧೧೩೨), ಮಂತ್ರ ಮಹತ್ವದ ಕಂದ, ಲಿಂಗಸ್ತೋತ್ರದ ಕಂದ (೧, ೨), ಶೀಲಮಹತ್ವದ ಕಂದ, ನವರತ್ನಮಾಲೆ, ಅಳಲಾಷ್ಟಕ ಎಂಬ ಆರು ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ೧೨ನೆಯ ಶತಮಾನದ ವೀರಶೈವತತ್ವ, ಸಿದ್ಧಾಂತ, ದೃಷ್ಟಿ-ಧೋರಣೆಗಳು ವ್ಯವಸ್ಥಿತವಾಗಿ, ಸ್ಪಷ್ಟವಾಗಿ ವರ್ಣಿತವಾಗಿವೆ. ತಾನು ನಂಬಿ ಆಚರಿಸುತ್ತಿದ್ದ ಧರ್ಮವನ್ನು ಕೇಶಿರಾಜ 'ವೀರಶೈವ', 'ಲಿಂಗಾಯತ' ಎಂದು ಹೆಸರಿಸಿದ್ದಾನೆ. ವೀರಶೈವ ಸಿದ್ಧಾಂತಕ್ಕೆ ಸಂಬಂಧಿಸಿದ ಕ್ರೀಲಿಂಗ. ಇಷ್ಟಲಿಂಗ, ಲಿಂಗಾನುಭವದ ಸುಖ, ಸೆಜ್ಜೆ. ಉರಸೆಜ್ಜೆಯಲಿಂಗ, ತುರಿಯ, ಆರೋಗಣೆ, ತ್ರಿಲಿಂಗ, ತ್ರಿವಿಧಮಲ, ಮಹೇಶ, ತ್ರಿವಿಧ ಆಯತ ಸ್ವಾಯತ ಸನ್ನಿಹಿತ, ಸಮಯಾಚಾರ, ವೀರಶೈವ ಧರ್ಮದ ಪಂಚಾಚಾರಗಳು, ಸದಾಚಾರ, ಗಣಾಚಾರ ಶಿವಾಚಾರ, ಭೃತ್ಯಾಚಾರ, ಲಿಂಗಾಚಾರ, ಆರುತೆರದ ಭಕ್ತಿ, ಜಂಗಮ, ಲಿಂಗಧಾರಣೆ ಪಾದತೀರ್ಥ, ಭವಿ, ಏಕಾದಶವಿಧ ಪ್ರಸಾದ, ಆರು ಮೂಲಮಂತ್ರ, ಆರುವ್ರತ, ಆರುಶೀಲ, ಕಾಯಭೋಗ, ಲಿಂಗಭೋಗ, ಐದುಜ್ಞಾನ, ಕಾಯಕ—ಎಂಬ ಪಾರಿಭಾಷಿಕ ಪದಗಳನ್ನು ಬಳಸಿ ವೀರಶೈವಸಿದ್ಧಾಂತಸಾಹಿತ್ಯಪ್ರಥಮಾಚಾರ್ಯನೆನಿಸಿದ್ದಾನೆ. ಈತನ ಕಂದಗಳು ಬಸವಾದಿ ಶರಣರ ವಚನಗಳ ಮೇಲೆ ದಟ್ಟವಾದ ಪ್ರಭಾವ ಬೀರಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.[೭] ಅಲ್ಲದೆ ವೈಯಕ್ತಿಕವಾಗಿ ಈತನು ನಡೆಸಿದ ಜಾತಿಭೇದ ನಿರ್ಮೂಲನ, ವೃತ್ತಿಗೌರವ, ಧಾರ್ಮಿಕ ಸಂಘರ್ಷ, ರಾಜ-ಸತ್ತೆಯ ಪ್ರತಿಭಟನೆ, ಲಿಂಗಭೇದ ನಿವಾರಣಾ ಕಾರ್ಯಗಳು ಬಸವಯುಗದ ಸಮಗ್ರ ಕ್ರಾಂತಿಗೆ ಪ್ರೇರಣೆಯನ್ನು ನೀಡಿವೆ.

ಕೊಂಡಗುಳಿ ಕೇಶಿರಾಜನ ತರುವಾಯದವನಾದ ಜೇಡರ ದಾಸಿಮಯ್ಯನಲ್ಲಿ ವೀರಶೈವದ ಕುರುಹುಗಳು ಇನ್ನಷ್ಟು ನಿಚ್ಚಳವಾಗಿ ತೋರುತ್ತವೆ. ಪ್ರಥಮ ವಚನಕಾರನೆನಿಸಿದ ಈತನ ವಚನಗಳಲ್ಲಿ ಬಸವಾದಿಗಳ ವೀರಶೈವ ಕೆನೆಗಟ್ಟಿನಿಂತಿವೆ. ಕಾಯಕತತ್ವ, ಸ್ತ್ರೀ ಪುರುಷ ಸಾಮ್ಯವಾದ, ಸಾಕಾರ-ನಿರಾಕಾರ, ಪ್ರಾಣ-ಪ್ರಕೃತಿ, ಭವಿ-ಭಕ್ತ, ಜಂಗಮತತ್ತ್ವ, ಸೇವಾಮೌಲ್ಯ, ಇಷ್ಟಲಿಂಗಕ್ರಾಂತಿ, ಅಸ್ಪೃಶ್ಯತೆ, ನಡೆನುಡಿ ಶುದ್ಧಿ, ಏಕದೈವನಿಷ್ಠೆ, ಅನುಭಾವ, ನೀತಿ, ಸಮಾಜವಿಮರ್ಶೆ—ಈ ಎಲ್ಲ ಸಂಗತಿಗಳು ಆತನ ವಚನಗಳಲ್ಲಿ ನಿಶ್ಚಿತರೂಪವನ್ನು ಪಡೆದಿವೆ. ಮುಂದೆ ಬಸವ-ಚೆನ್ನಬಸವಾದಿಗಳು ಇವುಗಳಿಗೆ ಒಂದು ವ್ಯವಸ್ಥಿತ, ಪರಿಪೂರ್ಣರೂಪವನ್ನು ನೀಡಿದರು.

---

೭. ನೋಡಿ : ಕೊಂಡಗುಳಿ ಕೇಶಿರಾಜನ ಕೃತಿಗಳು : ಡಾ. ಎಂ. ಎಂ. ಕಲಬುರ್ಗಿ ಪ್ರಸ್ತಾವನೆ.

ಈ ಹಿನ್ನೆಲೆಯಲ್ಲಿ ವೀರಶೈವದ ಬೇರುಗಳು ಶಿವಾಗಮಗಳಲ್ಲಿದ್ದರೂ ಅವುಗಳಿಗೆ ಒಂದು ಪರಿಷ್ಕೃತ–ಖಚಿತ–ನವೀನ ಆವಿಷ್ಕಾರ ನೀಡಿದವರು ಬಸವಾದಿಗಳು. ಈ ಅರ್ಥದಲ್ಲಿ ಅದರ ಉಗಮ ೧೧–೧೨ ನೆಯ ಶತಮಾನದಲ್ಲಿ ಎಂದು ಹೇಳಬಹುದು.

ಸಾಮಾಜಿಕ ಪರಿಸರ :

ಹನ್ನೆರಡನೆಯ ಶತಮಾನಪೂರ್ವಕಾಲದ ಸಾಮಾಜಿಕ ಪರಿಸರ ಅಶಾಂತಿಮಯವಾಗಿತ್ತು. ವೈದಿಕರು ಹುಟ್ಟುಹಾಕಿದ ವರ್ಗಭೇದ-ವರ್ಣಭೇದ-ಲಿಂಗಭೇದ–ವರ್ಣಾಶ್ರಮಧರ್ಮಗಳು ಜನಜೀವನಕ್ಕೆ ಶೃಂಖಲೆಗಳಾಗಿ ಪರಿಣಮಿಸಿದ್ದವು. ವಿದ್ಯೆ, ಅಧಿಕಾರ, ಅಂತಸ್ತು, ಸಂಪತ್ತು ಈ ಎಲ್ಲ ಅವಕಾಶಗಳು ಕೇವಲ ಪ್ರಭುವರ್ಗ, ಪುರೋಹಿತವರ್ಗಗಳಿಗೆ ಮಾತ್ರ ಮೀಸಲಾಗಿದ್ದು ಸಾಮಾನ್ಯಜನ ಇವೆಲ್ಲದರಿಂದ ವಂಚಿತರಾಗಿ ಅಜ್ಞಾನ-ದಾರಿದ್ರ್ಯಗಳಲ್ಲಿ ನರಳುವಂತಾಗಿತ್ತು. ದುಡಿಯುವವನೊಬ್ಬನಾದರೆ ದುಡಿದುದನ್ನು ಹಾಯಾಗಿ ಕುಳಿತು ಉಣ್ಣುವವ ಮತ್ತೊಬ್ಬನಾಗಿದ್ದ. ದುಡಿಮೆಗೆ ತಕ್ಕ ಗೌರವವಿರಲಿಲ್ಲ. ಮೇಲಿಂದ ಮೇಲೆ ನಡೆಯುವ ಯುದ್ಧಗಳಿಂದಾಗಿ ನೆಮ್ಮದಿ ಇಲ್ಲದಾಗಿತ್ತು. ಯುದ್ಧಕಾರಣವಾಗಿ ಉಂಟಾಗುವ ಪ್ರಾಣಹಾನಿ, ಆರ್ಥಿಕ ಹಾನಿಗಳನ್ನು ಸಾಮಾನ್ಯ ಕಾಯಕಜೀವಿಗಳು, ವೃತ್ತಿನಿರತರು ಭರಿಸಬೇಕಾಗಿತ್ತು. ಅರಸರು, ಪುರೋಹಿತರು, ವ್ಯಾಪಾರಿಗಳು ಇದರ ಲಾಭವನ್ನು ಪಡೆದು ಸಾಮಾನ್ಯರನ್ನು ಮತ್ತಷ್ಟು ಶೋಷಣೆಗೆ ಗುರಿಮಾಡುತ್ತಿದ್ದರು. ಚಾಲುಕ್ಯ ಅರಸರ ಕಾಲದ ಶಾಸನ-ಕಾವ್ಯಗಳಲ್ಲಿ ಇದಕ್ಕೆ ಅನೇಕ ನಿದರ್ಶನಗಳು ದೊರೆಯುತ್ತವೆ. ಈ ಅವಧಿಯಲ್ಲಿ ಜನರ ಮೇಲೆ ಹಾಕುತ್ತಿದ್ದ ತೆರಿಗೆಗಳಿಗೆ ಲೆಕ್ಕವಿರಲಿಲ್ಲ. ಅಕ್ಕಸಾಲೆ, ನಾಯಿಂದ ಅಗಸ, ಅಂಬಿಗ, ಕಮ್ಮಾರ, ಕುಂಬಾರ-ಮೊದಲಾದವರು ತೆರಿಗೆ ಕೊಡಬೇಕಾಗಿತ್ತು. ಇದಲ್ಲದೆ ಗಾಣದತೆರೆ, ನೂಲತೆರೆ, ಮಗ್ಗದದೆರೆ ಬಣ್ಣದೆರೆ, ಕುಲುಮೆದೆರೆ ಹೀಗೆ ಎಲ್ಲಾ ವೃತ್ತಿಯವರಿಂದಲೂ ತೆರಿಗೆ ವಸೂಲು ಮಾಡಲಾಗುತ್ತಿತ್ತು. ಉಪ್ಪು ಮಾಡುವವರ ಮೇಲೆ ಸುಂಕ ಹಡಗದ ತೆಪ್ಪಗಳಿಗೆ ಸುಂಕ, ಬಟ್ಟೆ ನೇಯುವವರ ಮೇಲೆ ಸುಂಕ-ಹೀಗೆ ತೆರಿಗೆ ಭಾರದಿಂದ ಸಾಮಾನ್ಯಜನ ತತ್ತರಿಸಿಹೋಗಿತ್ತು.[೮] ಆ ಕಾಲದಲ್ಲಿ ವೈಭವದಿಂದ ತಲೆಯೆತ್ತಿದ ಮಠ-ಮಂದಿರಗಳು ಶೋಷಣೆಯ ಕೇಂದ್ರಗಳಾಗಿದ್ದವು. ಅಗ್ರಹಾರಗಳಲ್ಲಿ ವೈದಿಕರಿಗೆ ಬೇಕಾದ ಅಧ್ಯಾತ್ಮ ವಿದ್ಯಾಭ್ಯಾಸ ಮಾತ್ರ ನಡೆಯುತ್ತಿತ್ತು. ಅದರಿಂದ ದೊರೆಯಬಹುದೆಂದು ಭಾವಿಸಿದ ಮೋಕ್ಷದ್ವಾರ ಅವರಿಗೆ ಮಾತ್ರ ತೆರೆದು ಇತರರಿಗೆ ಮುಚ್ಚಿಕೊಂಡಿತ್ತು. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ'

---

೮. ಹನ್ನೆಡನೆಯ ಶತಮಾನದ ಕಾಯಕ ಜೀವಿಗಳ ಚಳುವಳಿ. ಬಿ. ಪೀರಣ್ಣ-ಪು ೧೩.೧೪

ಎಂಬ ಮನುವಿನ ಉಕ್ತಿಯಿಂದ ಸ್ತ್ರೀ ಬಂಧಿತಳಾಗಿ ಕೇವಲ ಕೆಲಸದ ಆಳಾಗಿದ್ದಳು; ಭೋಗದವಸ್ತುವೆನಿಸಿದ್ದಳು. ವಿದ್ಯೆ, ವಿಚಾರ, ಸ್ವಾತಂತ್ರ್ಯಗಳು ಅವಳಿಗೆ ಕನಸಿನ ಮಾತುಗಳಾಗಿದ್ದವು. ಸಾಮಾನ್ಯಜನ ತಮ್ಮ ಕಷ್ಟನಷ್ಟಗಳ ಪರಿಹಾರಕ್ಕಾಗಿ ಮಾರಿ ಮಸಣಿ ಕಾಳಿ ದುರ್ಗಿ ಮೈಲಾರ ಚೌಡಿ ಮೊದಲಾದ ಕ್ಷುದ್ರದೈವಗಳಲ್ಲಿ ಮೊರೆ ಹೋಗಿ ಪ್ರಾಣಬಲಿ, ಉಗ್ರ ಆಚರಣೆಗಳಲ್ಲಿ ತೊಡಗಿ ಇನ್ನಷ್ಟು ತೊಂದರೆ, ಅಶಾಂತಿ ಗಳನ್ನು ತಂದುಕೊಂಡರು. ಮೂಢನಂಬಿಕೆಗಳಿಗೆ ತುತ್ತಾಗಿ ಅವರ ಬದುಕು ಜರ್ಜರಿತವಾಗಿತ್ತು. ಇಂಥ ಸ್ಥಿತಿಯನ್ನು ಕಂಡ ಶರಣರು ಸಮಾಜದ ಶುದ್ಧಿಗಾಗಿ, ಸಮಾನತೆ–ಶಾಂತಿ–ನೆಮ್ಮದಿಗಾಗಿ ಪ್ರಥಮತಹ ತಮ್ಮನ್ನು ಪಣವಾಗಿಟ್ಟರು.

ಸಾಹಿತ್ಯಿಕ ಸ್ವರೂಪ :

ಕನ್ನಡ ಸಾಹಿತ್ಯಕ್ಕೆ ಒಂದು ಶ್ರೀಮಂತ ಪರಂಪರೆಯಿದೆ. ಅದು ನಮ್ಮ ಧರ್ಮ–ಸಮಾಜ–ಸಂಸ್ಕೃತಿಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಬೆಳೆದುಬಂದಿದೆ. 'ಕಾವ್ಯ ಎನ್ನುವುದು ಮೂಲತಃ ಒಂದು ಸಾಹಿತ್ಯ ನಿರ್ಮಿತಿ ಎಂಬುದಕ್ಕಿಂತ ಅದೊಂದು ಧಾರ್ಮಿಕ ಕ್ರಿಯೆ, ಧರ್ಮ ಪ್ರಸಾರದ, ಆತ್ಮೋದ್ಧಾರದ ಮಾರ್ಗ ಎಂಬಂಥ ಭಾವನೆಗಳೇ ಮೊದಲಿನಿಂದಲೂ ನಮ್ಮಲ್ಲಿ ರೂಢಮೂಲವಾಗಿದ್ದುದು'[೯] ಕಂಡುಬರುತ್ತದೆ. ಹೀಗಾಗಿ ಎಲ್ಲ ಕವಿ–ಅನುಭಾವಿ–ದಾರ್ಶನಿಕರು ಸಾಹಿತ್ಯವನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡರು.

ಕನ್ನಡ ಸಾಹಿತ್ಯ ಜೈನಕವಿಗಳಿಂದ ಆರಂಭವಾಗುತ್ತದೆ. ಅಗಾಧವಾದ ಪ್ರತಿಭೆ–ಪಾಂಡಿತ್ಯ–ಲೋಕಾನುಭವ–ಕವಿತ್ವಕಲೆಗಳಿಂದ ಅವರು ಉತ್ಕೃಷ್ಟವಾದ ಕಾವ್ಯ ಗಳನ್ನು ರಚಿಸಿ ಕನ್ನಡದ ಕೀರ್ತಿಯನ್ನು ಬೆಳಗಿದರು. ಪಂಪ-ರನ್ನ-ಪೊನ್ನ–ಜನ್ನ–ನಾಗಚಂದ್ರ ಮೊದಲಾದ ಕವಿಗಳು ಆ ಕೀರ್ತಿಯಲ್ಲಿ ಭಾಗಿಗಳಾದರು. ಚಂಪೂರೂಪ, ರಾಮಾಯಣ ಮಹಾಭಾರತ ತೀರ್ಥಂಕರರ ಚರಿತ್ರೆಗಳಂಥ ಸಿದ್ಧವಸ್ತು, ಸಂಸ್ಕೃತ ಭೂಯಿಷ್ಟ ಪ್ರೌಢ ಭಾಷೆ,ವೀರಮೌಲ್ಯ–ಕ್ಷಾತ್ರತೇಜ–ರಾಜಸ್ತುತಿ- ಪಂಡಿತ ಮೆಚ್ಚುಗೆ ಯಂಥ–ಸಂಗತಿಗಳನ್ನು ಅಳವಡಿಸಿಕೊಂಡ ಅವರ ಕೃತಿಗಳು ಮಹಾಕಾವ್ಯಗಳೆಂದು ಪ್ರಸಿದ್ಧಿಪಡೆದವು. ರಾಜರ–ಪಂಡಿತರ ಮನ್ನಣೆ ಗಳಿಸಿದವು. ಹತ್ತನೆಯ ಶತಮಾನ ಇಂಥ ಕಾವ್ಯಗಳ ಸುಗ್ಗಿಯ ಸುವರ್ಣಯುಗವೆನಿಸಿತು. ಆದರೆ ಹನ್ನೊಂದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಈ ರೂಪ ತನ್ನ ಮಹತ್ವವನ್ನು ಕಳೆದುಕೊಳ್ಳ-ತೊಡಗಿತ್ತು. ರಾಜರ ಪ್ರೀತಿಗೋಸ್ಕರ, ಕವಿಚಕ್ರವರ್ತಿ ಬಿರುದಿಗೋಸ್ಕರ, ಪಂಡಿತ

---

೯. ಕನ್ನಡ ಸಾಹಿತ್ಯ ಸಮೀಕ್ಷೆ (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ–೧) : ಡಾ. ಜಿ. ಎಸ್. ಶಿವರುದ್ರಪ್ಪ ಪು-೧೬.

ಮಂಡಳಿಯ ಮೆಚ್ಚುಗೆಗೋಸ್ಕರ, ಪ್ರತಿಭೆ ಪಾಂಡಿತ್ಯ ಪ್ರದರ್ಶನಕ್ಕೋಸ್ಕರ, ಮಹಾ ಕವಿಯೆನಿಸಿಕೊಳ್ಳಬೇಕೆಂಬ ಅಭಿಲಾಷೆಗೋಸ್ಕರ ಏರಾಟ ನಡೆಸಿದ ಚಂಪೂ ಕಾವ್ಯ ಜನಸಾಮಾನ್ಯರನ್ನು ಮುಟ್ಟಲಿಲ್ಲ. ಒಂದೇ ವಿಧವಾದ ಬಂಧ-ಭಾಷೆ-ವಸ್ತು-ತಂತ್ರ ಗಳಿಂದಾಗಿ ಚರ್ವಿತಚರ್ವಣವೂ ಹೆಚ್ಚಿ ಹೊಸತೇನನ್ನೂ ಹೇಳಲು–ಇನ್ನೇನನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬ ಸ್ಥಿತಿಗೆ ಅದು ಬಂದು ತಲುಪಿತು. ಪ್ರಭುವರ್ಗ-ಪುರೋಹಿತವರ್ಗಗಳನ್ನು ಸಂಪ್ರೀತಗೊಳಿಸುವಲ್ಲಿಯೇ ನಿರತವಾಗಿ ಪ್ರಜಾವರ್ಗವನ್ನು ಮರೆಯಿತು. 'ಸಾಹಿತ್ಯ ಸಮಾಜಕ್ಕಾಗಿ' ಎಂಬ ಕಲ್ಪನೆ ಕಿಂಚಿತ್ತೂ ಅದರಲ್ಲಿ ಇಣಿಕ ಹಾಕಲಿಲ್ಲ. ಹೀಗಾಗಿ ಅದು ಬರುಬರುತ್ತ ತನ್ನ ವರ್ಚಸ್ಸನ್ನು ಕಡಿಮೆ ಮಾಡಿ ಕೊಂಡಿತು.

ಒಂದು ಸಾಹಿತ್ಯರೂಪ ಕಾಲದ-ಸಮಾಜದ 'ಬೇಕು'ಗಳನ್ನು ಈಡೇರಿಸಲು ಅಸಮರ್ಥವಾದಾಗ ಮತ್ತೊಂದು ಹೊಸರೂಪ ವ್ಯೆದಾಳುತ್ತದೆ. ಪರಿಸರದ ಬಯಕೆ ಯನ್ನು ಅರಿತ ಪ್ರತಿಭಾನ್ವಿತ ಅದರ ಇಚ್ಛೆಯನ್ನು ಈಡೇರಿಸಲು ಮುಂದಾಗುತ್ತಾನೆ. ಹಾಗೆ ೧೨ನೆಯ ಶತಮಾನದ ಜನತೆಯ ಆಶೆ–ಆಕಾಂಕ್ಷೆ. ಹಸಿವು-ಹಂಬಲಗಳನ್ನು ಈಡೇರಿಸಲು ಬಂದ ಸಾಹಿತ್ಯರೂಪ ವಚನ.

ವಚನಕಾರರು ಮೂಲತಃ ಕವಿಗಳಲ್ಲ. ತಮ್ಮ ಕವಿತ್ವವನ್ನು ಮೆರೆಯಬೇಕು, ಕನ್ನಡಸಾಹಿತ್ಯದ ದಿಕ್ಕನ್ನು ಬದಲಿಸಬೇಕು ಎಂದು ಉದ್ದೇಶಪೂರ್ವಕವಾಗಿ ಬರವಣಿಗೆಗೆ ತೊಡಗಿದವರಲ್ಲ. ಅವರು ಅನುಭಾವಿಗಳು, ಸಮಾಜಸುಧಾರಕರು ತಮ್ಮ ಅನುಭವವನ್ನು ಇತರರಜೊತೆ ಹಂಚಿಕೊಳ್ಳಬೇಕೆಂಬ ತುಡಿತ ಅವರಲ್ಲಿ ತೋರಿದ್ದು ಸಮಾಜಸುಧಾರಣೆಯ ಹಿನ್ನೆಲೆಯಲ್ಲಿ. ಹೀಗಾಗಿ ವಚನ ಎನ್ನುವುದು ಅವರ ಕ್ರಿಯಾ ಜ್ಞಾನಗಳ ಸಮರಸದಿಂದ ಹೊರಹೊಮ್ಮಿತು; ಅವರು ಕೈಕೊಳ್ಳಬಯಸಿದ ಚಳು ವಳಿಯ ಪ್ರಮುಖ ಮಾಧ್ಯಮವಾಯಿತು. ಅದೇ ಕನ್ನಡದ ಒಂದು ಅಪೂರ್ವ ಪ್ರಕಾರವಾಗಿ, ವಿಶ್ವಸಾಹಿತ್ಯದಲ್ಲಿ ಕನ್ನಡದ ಸ್ಥಾನ ಸ್ಥಿರವಾಗಲು ಕಾರಣವಾಯಿತು. ಜನಸಾಮಾನ್ಯರನ್ನು ನೇರವಾಗಿ ಮುಟ್ಟುವ ವಸ್ತು–ಭಾಷೆ ದೃಷ್ಟಿ-ಧೋರಣೆ ಗಳಿಂದಾಗಿ ತುಂಬ ಜನಪ್ರಿಯವೂ ಎನಿಸಿತು. ಎಲ್ಲ ಅಂತಸ್ತಿನ, ಎಲ್ಲ ವರ್ಣದ, ಎಲ್ಲ ವೃತ್ತಿಯ ಜನ ಸುಲಭವಾಗಿ ಅದರಲ್ಲಿ ತಮ್ಮ ತಮ್ಮ ಅನುಭಗಳನ್ನು ವ್ಯಕ್ತಪಡಿಸಲು ವಾಹಕವಾಯಿತು. ನಿಜವಾದ ಕನ್ನಡದ ಸಾಹಿತ್ಯರೂಪ ಇದೇ ಎಂಬ ಖ್ಯಾತಿಗೂ ಕಾರಣವಾಯಿತು.

ಸಾಂಸ್ಕೃತಿಕ ಬದುಕು :

ಸಾಂಸ್ಕೃತಿಕವಾಗಿ ಶರಣರ ಪೂರ್ವದ ಕಾಲ ತುಂಬ ವೈಭವಪೂರ್ಣವೆನಿಸಿತ್ತು. ಕಲೆ-ಸಾಹಿತ್ಯ-ಧರ್ಮಪ್ರೇಮಿಗಳಾದ ಅರಸರು ಕರ್ನಾಟಕದಲ್ಲಿ ಅವುಗಳ ಬೆಳವಣಿ

ಗಾಗಿ ಮನಃಪೂರ್ವಕವಾಗಿ ಶ್ರಮಿಸಿದ್ದಾರೆ. ವಿದ್ಯಾಕೇಂದ್ರಗಳ ಸ್ಥಾಪನೆ, ದೇವಾಲಯ ನಿರ್ಮಾಣ, ಕವಿಗಳಿಗೆ ಆಶ್ರಯ, ಸಂಗೀತ ನೃತ್ಯಗಾರರಿಗೆ ಉತ್ತೇಜನ, ವಾಸ್ತುಶಿಲ್ಪ-ಮೂರ್ತಿಶಿಲ್ಪ-ಚಿತ್ರಕಲೆಗಳಿಗೆ ವಿಶೇಷಪ್ರೋತ್ಸಾಹವಿತ್ತು. ಅಪೂರ್ವ ಕಲಾಕೃತಿಗಳು ಸೃಷ್ಟಿಯಾಗಲು ಕಾರಣವಾಗಿದ್ದಾರೆ. ಕದಂಬ-ರಾಷ್ಟ್ರಕೂಟ-ಚಾಲುಕ್ಯ-ಹೊಯ್ಸಳ-ಎಲ್ಲ ಅರಸರು ಈ ದಿಸೆಯಲ್ಲಿ ಮಾಡಿದಕಾರ್ಯ ಅದ್ವಿತೀಯವಾಗಿದ್ದು.ಭಾರತದಲ್ಲಿಯೇ ಕರ್ನಾಟಕದ ಕೀರ್ತಿಯನ್ನು ಎತ್ತಿ ಮೆರೆಯುವಂತಾಗಿದೆ.

ಯಾವುದೇ ಕಲೆ ಅಥವಾ ಸಾಹಿತ್ಯದ ಸಾಧನೆ ಸಾರ್ಥಕವಾಗಬೇಕಾದರೆ ಅದು ಅಂದಿನ ಕಾಲದ ಜನಜೀವನದ ಹೃದಯವನ್ನು ಮುಟ್ಟಿ, ಅವರ ಬದುಕನ್ನು ಅರಳಿಸಲು ಸಮರ್ಥವಾಗಬೇಕು. ಆದರೆ ಇಲ್ಲಿ ಆದದ್ದೇನು ? ಅವು ಕೇವಲ ಕೆಲವರ ಗುತ್ತಿಗೆಯಾದವು. ದೇವಾಲಯಗಳು ಪುರೋಹಿತರ ಉಪಜೀವನದ ವಿಲಾಸ ಪ್ರವೃತ್ತಿಯ ಸಾಧನಗಳಾದರೆ, ಸಾಹಿತ್ಯ-ಸಂಗೀತ-ನೃತ್ಯಾದಿ ಕಲಾಮಾಧ್ಯಮಗಳು ಕೇವಲ ಪ್ರತಿಷ್ಠಿತರ,ಮೇಲ್ವರ್ಗದವರ ಮನರಂಜನೆಯ,ಭೋಗಲಾಲಸೆಯ ಸಾಮಗ್ರಿಗಳೆನಿಸಿದವು. ಧರ್ಮತತ್ವಗಳನ್ನು ಅಳವಡಿಸಿಕೊಂಡ ಉದಾತ್ತವೆನಿಸಿದ ಪ್ರೌಢವಾದ ಸಾಹಿತ್ಯಕೃತಿಗಳು ಕೇವಲ ಪಂಡಿತರಿಗೆ, ಸಮಾಜದಲ್ಲಿ ಶ್ರೇಷ್ಠರೆನಿಸಿದ ಕೆಲವರಿಗೆ ಮಾತ್ರ ಮೀಸಲಾದವು. ವಿದ್ಯೆ ಕಲಿವ ಹಕ್ಕು ಪುರೋಹಿತಪುತ್ರರಿಗೆ, ಅರಸುಕುಮಾರರಿಗೆ ಮಾತ್ರ ಪ್ರಾಪ್ತವಾಯಿತು. ಹೀಗಾಗಿ ಜನಸಾಮಾನ್ಯರ ಪಾಲಿಗೆ ಉಳಿದದ್ದು 'ಬೀದಿವರಿ ಬೀರನ ಕಥೆ' ಮಾತ್ರ ಇಂಥ ಸಂಸ್ಕೃತಿ ನಿಜವಾಗಿ ಶ್ರೀಮಂತ ಸಂಸ್ಕೃತಿಯೇ? ಅಲ್ಲವೆಂದಿತು ಸಕಲ ಜೀವಾತ್ಮರಿಗೆ ಲೇಸನ್ನು ಬಯಸಬೇಕೆಂದು ಸಾದಿಸಿದ ಶರಣ ಹೃದಯ.

ಹೀಗೆ ೧೨ನೆಯ ಶತಮಾನದ ಪೂರ್ವದಲ್ಲಿ ರಾಜಕೀಯ ರಂಗದಲ್ಲಿ ಅರಾಜಕತೆ ಧಾರ್ಮಿಕ ಕ್ಷೇತ್ರದಲ್ಲಿ ಅಭಾಸತೆ, ಸಮಾಜಜೀವನದಲ್ಲಿ ಅಸಮಾನತೆ, ಸಾಹಿತ್ಯ ಕ್ಷೇತ್ರದಲ್ಲಿ ಪ್ರೌಢತೆ, ಸಾಂಸ್ಕೃತಿಕ ಬದುಕಿನಲ್ಲಿ ಅಸಂಪೂರ್ಣತೆಗಳು,ತಲೆದೋರಲು-ಒಟ್ಟು ಸಮಾಜ ಜೀವನದಲ್ಲಿ ಜಡಗಟ್ಟಿದ ಸ್ಥಿತಿ ಉಂಟಾಗಿತ್ತು. ಇದನ್ನು ತೊಡೆದು ಹಾಕಲು ಅಲ್ಲಲ್ಲಿ ವೈಯಕ್ತಿವಾಗಿ ಪ್ರತಿಕ್ರಿಯೆಗಳು ತೋರುತ್ತ ನಡೆದಿದ್ದವು. ಕೊಂಡಗುಳಿ ಕೇಶಿರಾಜ, ಬಾಹೂರ ಬೊಮ್ಮಯ್ಯ, ತೆಲುಗು ಜೊಮ್ಮಯ್ಯ, ಜೇಡರ ದಾಸಿಮಯ್ಯ ಮೊದಲಾದ ಬಸವಣ್ಣನವರ ಹಿರಿಯ ಸಮಕಾಲೀನರಾದ ಶರಣರು ಅರಸೊತ್ತಿಗೆಯನ್ನು ಧಿಕ್ಕರಿಸುವ ಮೂಲಕ, ಮೇಲು-ಕೀಳು, ಸ್ತ್ರೀ-ಪುರುಷ, ಪ್ರಭು-ಪ್ರಜೆ, ಉತ್ತಮ-ಅಧಮ ಎಂಬ ಭೇದಭಾವ ತೊಡೆಯುವುದರ ಮೂಲಕ, ಅನುಭಾವಗೋಷ್ಠಿ ನಡೆಸುವುದರ, ಮೂಲಕ ಶಿವಪರವಾದ,ಜನಪರವಾದ ಕೃತಿ-

ಗಳನ್ನು ರಚಿಸುವುದರ ಮೂಲಕ ಸ್ಥಗಿತವ್ಯವಸ್ಥೆಯನ್ನು ಒಡೆದುಹಾಕಲು ಪ್ರಯತ್ನಗಳನ್ನು ನಡೆಸಿದ್ದರು. ಬಿಡಿಬಿಡಿಯಾದ ಸಂಘಟನೆಗಳು ಒಬ್ಬ ಸರಿಯಾದ ನಾಯಕನಿಗಾಗಿ ಕಾಯುತ್ತ ಕುಳಿತಿದ್ದವು.

ಹಳೆಯ ಆದರ್ಶಗಳು ಸತ್ವಹೀನವಾಗಿ ಲೋಕ ಕಂಗೆಟ್ಟ ಸಮಯದಲ್ಲಿ ಪರಿಸರ ಹೊಸತನ್ನು ಕುರಿತು ತಪಸ್ಸನ್ನಾಚರಿಸುತ್ತದೆ; ಕಾರಣಪುರುಷನನ್ನು ಕೈಮಾಡಿ ಕರೆಯುತ್ತದೆ.' ಜನಮನದ ಶಕ್ತಿಯೇ ಮಹಾತ್ಮರನ್ನು ನಮ್ಮೆಳೆಗೆ ಎಳೆದು ತರುತ್ತದೆ' ಎಂಬಂತೆ ಕಾಲ ಬಸವಾದಿ ಪ್ರಮಥರನ್ನು ಕೈಮಾಡಿ ಕರೆಯಿತು. ಅದರ ಕರೆಗೆ ಓಗೊಟ್ಟು ಬಂದ ಶರಣರು ಮರ್ತ್ಯದ ಮಣಿಹವನ್ನು ಅಂತಃಕರಣಪೂರ್ವಕವಾಗಿ ಪೂರೈಸಿ ಮಾನವ ಜೀವನವನ್ನು ಅರ್ಥಪೂರ್ಣಗೊಳಿಸಿದರು. ಜೊತೆಗೆ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡರು.

ಬಿಲ್ವಮಂಗಲನ ಕಣ್ಣುಗಳು

ನಾಟಕ

- ಹಿಂದೀ ಮೂಲ : **ಶ್ರೀ ಚಿರಂಜೀತ**
- ಕನ್ನಡ ರೂಪಾಂತರ : **ಡಾ. ಪಂಚಾಕ್ಷರಿ ಹಿರೇಮಠ**

ನಿವೇದಕ : "ಬಿಲ್ವ ಮಂಗಲ"ದ ನಾಟಕಕಾರ, ದಿವಂಗತ ಜನಾಬ ಆಗಾಹಶ್ರ ಕಶ್ಮೀರಿಯವರು. ಭಾರತದ ಬಹು ಪ್ರಖ್ಯಾತ ನಾಟಕಕಾರರು. ಸುಮಾರು ಮೂವತ್ತು ಮೂವತ್ತೈದು ವರುಷಗಳ ಹಿಂದೆ ಈ ನಾಟಕದ ಕೀರ್ತಿ ನಾಡಿನ ತುಂಬ ಹಬ್ಬಿತ್ತಲ್ಲದೆ ಆ ಕಾಲದಲ್ಲಿ ಈ ನಾಟಕದಲ್ಲಿ ಪಾತ್ರವಹಿಸುತ್ತಿದ್ದವರ ಕೀರ್ತಿಯೂ ಪಸರಿಸಿತ್ತು. ಈ ನಾಟಕದಲ್ಲಿ ನಾಯಕ ಪಾತ್ರವಹಿಸುತ್ತಿದ್ದ ಓರ್ವ ಕಲಾವಿದನ ಅಂತಿಮ ಜೀವನವನ್ನು ಚಿತ್ರಿಸುತ್ತದೆ ಶ್ರೀ ಚಿರಂಜೀತರ ಈ "ಬಿಲ್ವ ಮಂಗಲನ ಕಣ್ಣುಗಳು" ನಾಟಕ.

(ಹುಡುಗಿಯರ ನೃತ್ಯ, ಗೀತೆಗಳ ಮಧುರ ಧ್ವನಿ)

ಮನವ ಕದ್ದೊಯ್ದನಾ ಕೃಷ್ಣ ಮುರಾರಿ
ಕೊಳಲ ಊದುತ ನನ್ನ ನಂದಕಿಶೋರ
ನೋಡಲ್ಲಿ ಓ! ನನ್ನ ಸಖಿ ಹೊರಟೇ ಹೋದ
ನನ್ನ ಚಿತ್ತವನೇ ಕದ್ದ ಚಿತಚೋರ
ಗೋವರ್ಧನಗಿರಿಯನೆತ್ತಿದ ನಂದಗೋಪಾಲ
ಹೊರಟೇ ಹೋದ ನೋಡು ಓ! ಎನ್ನ ಸಖಿ.

ವೃದ್ಧ ಬಾಲಂ : (ಬರುತ್ತ) ಶಬ್ಬಾಷ... ಮಕ್ಕಳೇ ಶಬ್ಬಾಷ...

ಹುಡುಗಿಯರು : (ಸಂತಸದಿಂದ) ಮಾಸ್ಟರ ಬಂದರು... ಮಾಸ್ಟರ ಬಂದರು.

ಡಾಕ್ಟರ : (ಚಕಿತರಾಗಿ) ಮಾಸ್ಟರ, ನೀವು ಈ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಇಲ್ಲಿಗೆ ಹೇಗೆ ಬಂದಿರಿ ? ನಾಡದ್ದು ನಿಮ್ಮ ಕಣ್ಣಿನ ಪಟ್ಟಿ ಬಿಚ್ಚುವುದಾಗಿ ನಾನು ಹೇಳಿದ್ದೆ. ಹೀಗಿರುವಾಗ ನೀವು ಆಸ್ಪತ್ರೆಯಿಂದ ಇಲ್ಲಿಗೆ ಬರಬಾರದಿತ್ತು. ಪಟ್ಟಿ ಬಿಚ್ಚುವ ಮೊದಲೇ.........

ಮಾಸ್ತರ : ನೀವು ಸಿಟ್ಟಾಗದಿರಿ ಡಾಕ್ಟರ, ಯಾರಿಗೂ ಏನನ್ನೂ ಹೇಳದೆ ಕಳ್ಳನಂತೆ ನಿಮ್ಮ ಆಸ್ಪತ್ರೆಯಿಂದ ಓಡಿ ಬಂದಿರುವೆ. ಹಳೆಯ ಶಿಷ್ಯನೊಬ್ಬ ನನ್ನನ್ನು ನೋಡಲೆಂದು ಬಂದಿದ್ದ. ಅವನ ಸಹಾಯದಿಂದಲೇ ಟ್ಯಾಕ್ಸಿಯಲ್ಲಿ ಇಲ್ಲಿಗೆ ಬಂದೆ. ಇಂದು ನಿಮ್ಮ ಹಿರಿಯ ಮಗಳ ಹುಟ್ಟುಹಬ್ಬ. ಸಾಯಂಕಾಲದ ಹುಟ್ಟು ಹಬ್ಬದ ಸಮಾರಂಭದಲ್ಲಿ ಆಕೆ ತನ್ನ ತಂಗಿಯೊಂದಿಗೆ ನಾನು ಕಲಿಸಿದ ನೃತ್ಯಗೈಯಲಿದ್ದಾಳೆ, ಗೀತ ಹಾಡಲಿದ್ದಾಳೆ. ಈ ಕಾರ್ಯಕ್ರಮ ಈ ಮೊದಲೇ ನಿಶ್ಚಿತವಾಗಿತ್ತು. ಹೀಗಿರುವಾಗ ನೀವೇ ಯೋಚಿಸಿ, ನಾನು ಈ ಸಮಾರಂಭದಲ್ಲಿ ಭಾಗವಹಿಸದೇ ಆಸ್ಪತ್ರೆಯಲ್ಲಿ ಬಿದ್ದುಕೊಂಡಿರಲು ಸಾಧ್ಯವೇ ? ಮಗುವಿನ ಹುಟ್ಟುಹಬದಲ್ಲಿ ನಾನು ಆಶೀರ್ವದಿಸಲು ಇರಬೇಡವೇ ಡಾಕ್ಟರೆ, ಆಕೆಯ ಸಂತೋಷದಲ್ಲಿ ನಾನು ಪಾಲುಗೊಳ್ಳುವುದು ಬೇಡವೆ ? ಇದೆಲ್ಲ ಹೇಗೆ ಸಾಧ್ಯ ಹೇಳಿ. ಸರಿ, ಹಂ...ಅದೇ ಹಾಡು ಹಾಡಿ ಮಕ್ಕಳೇ...ಇನ್ನೊಮ್ಮೆ ಹಾಡಿ .. ಆ ತಬಲಾ ನನ್ನ ಮುಂದಿರಿಸಿ...ಹುಂ. ಇನ್ನು ಹಾಡಿ...

ಡಾಕ್ಟರ : ಕೊಂಚ ತಾಳಿ ಮಾಸ್ತರ, ಮಗಳ ಹುಟ್ಟುಹಬ್ಬದ ಈ ಸಮಾರಂಭದಲ್ಲಿ ಬಹಳ ಜನ ಪ್ರತಿಷ್ಠಿತ ಅತಿಥಿಗಳು ಬಂದಿದ್ದಾರೆ. ಅವರಿಗೆಲ್ಲ ನಿಮ್ಮ ಪರಿಚಯ ಮಾಡಿಸಿ ಕೊಡುವೆ. (ಕೊಂಚ ಎತ್ತರದ ಧ್ವನಿಯಲ್ಲಿ) ಬಂಧು, ಭಗಿನೀಯರೇ ಗೀತ ನೃತ್ಯ ನಡುವೆಯೇ ನಿಂತು ಹೋದವು. ಕಾರಣ, ನಮ್ಮ ಮನೆಯ ಹಿರಿಯರೂ, ಮ್ಯೂಜಿಕ್ ಟೀಚರರೂ, ನನ್ನ ಅಂದರೆ ಡಾಕ್ಟರನ ಮಾತನ್ನೂ ಕಡೆಗಣಿಸಿ ಈ ಸಮಾರಂಭದಲ್ಲಿ ಭಾಗವಹಿಸಲು ಇಲ್ಲಿಗೆ ಆಸ್ಪತ್ರೆಯಿಂದ ಓಡಿ ಬಂದಿದ್ದಾರೆ. ಇವರ ಬರುವಿಕೆಯಿಂದ ಸಮಾರಂಭದ ಗೌರವ ಹೆಚ್ಚಿದೆಯಲ್ಲದೆ ಅದರ ಕಳೆಯೂ ಸಾವಿರಪಟ್ಟು ವರ್ಧಿಸಿದೆ. ಆದರೆ ನಾನು ಡಾಕ್ಟರ ಆದ ಕಾರಣ ಅವರ ಈ ವರ್ತನೆಯಿಂದ ಕೆಲ ಮಟ್ಟಿಗೆ ಬೇಜಾರು ಪಟ್ಟಿರುವುದು ನಿಜ, ಅವರ ಕಣ್ಣಿಗೆ ಪಟ್ಟಿ ಇರುವುದನ್ನು ನೀವು ಕಾಣುತ್ತಿರುವಿರಿ. ಅವರ ಕಣ್ಣು ಮೋತಿಬಿಂದುವಿನಿಂದಾಗಿ ಕಾಣುತ್ತಿರಲಿಲ್ಲ. ಕೇವಲ ನಾಲ್ಕು ದಿನಗಳ ಹಿಂದೆ ನನ್ನ ಆಸ್ಪತ್ರೆಯಲ್ಲಿ ಇವರ ಕಣ್ಣಿನ ಆಪರೇಷನ ಮಾಡಿದೆ. ಆಪರೇಶನ ಯಶಸ್ವಿಯಾಯಿತು. ನಾಡದ್ದು ಪಟ್ಟಿ ತೆರೆದಾಗ ಮಾಸ್ತರರ ಕಣ್ಣು ಮೊದಲಿನಂತೆಯೇ ಈ ಲೋಕದ ವೈವಿಧ್ಯವನ್ನು ಕಾಣಬಲ್ಲುದು......ಮೂವತ್ತು ವರುಷಗಳ ಹಿಂದಿನಂತೆ...(ತಡೆದು ಸ್ವಲ್ಪ ನಕ್ಕು) ಮೂವತ್ತು ವರ್ಷಗಳ ಹಿಂದಿನ ಇವರ ವೈಭವಯುಕ್ತ ಚರಿತ್ರೆಯನ್ನು ಹೇಳ ಹೊರಟ ನಾನು ಕಣ್ಣಿನ ಆಪರೇಶನ್ ಬಗ್ಗೆ ಹೇಳತೊಡಗಿದೆನಲ್ಲ...ಕ್ಷಮಿಸಿ...ಎಷ್ಟಾದರೂ ನಾನು ಡಾಕ್ಟರ ಅಲ್ಲವೇ ? ಸ್ವಪ್ರತಿಷ್ಠೆ, ಸ್ವಪ್ರಶಂಸೆ, ಡಾಕ್ಟರ ಜಾತಿಗೇ ಅಂಟಿದ

ಜಾಡ್ಯ. (ಎಲ್ಲರೂ ನಗುತ್ತಾರೆ) ಹಾಂ, ನಾನು ನಿಮಗೆಲ್ಲ ಓರ್ವ ಮಹಾ ವ್ಯಕ್ತಿಯ ಪರಿಚಯ ಮಾಡಿಸಿಕೊಡುತ್ತಿದ್ದೆ...ಆ ಮಹಾವ್ಯಕ್ತಿ-ಕಾಷಾ ಯಾಂಬರ, ನೀಳವಾದ ಬಿಳಿಗಡ್ಡ ಹಾಗೂ ಅರವತ್ತು ವರುಷಗಳು ಕಳೆದಿವೆ ಯೆಂದು ಹೇಳುವ ಮುಖದ ಮೇಲಿನ ನಿರಿಗೆಗಳಲ್ಲಿ ಮುಚ್ಚಿಕೊಂಡಿದೆ. ಒಂದು ತಿಂಗಳ ಹಿಂದಿನವರೆಗೂ ಮುಂಬಯಿಯಿಂದ ದೂರದಲ್ಲಿರುವ ಹಳ್ಳಿಯೊಂದರ ಮಂದಿರದಲ್ಲಿ, ಬಾವಾ ಬಾಲ ಮೋಹನ ಎಂಬ ಹೆಸರಿನಿಂದ, ಜೀವನಸಾಗಿಸು ತ್ತಿದ್ದರು. ಮೂವತ್ತುವರುಷಗಳ ಹಿಂದೆ ಈ ವ್ಯಕ್ತಿ ಭಾರತೀಯ ಕಂಪನಿ ನಾಟಕಗಳಲ್ಲಿ ದೊರೆಯಂತೆ ಬಾಳಿದುದು ಬಹಳ ಜನಕ್ಕೆ ಗೊತ್ತಿರಲಿಕ್ಕಿಲ್ಲ.

(ಸಮಾರಂಭದಲ್ಲಿದ್ದ ಜನರ ಪಿಸು ಮಾತು)

ತಾರಾಬಾಯಿ : (ಒಮ್ಮೆಲೇ ದೂರದಿಂದ) ಏನು, ಅಂದಿನ ಮಾಸ್ತರ ಬಾಲಮನೇ ಈತನೇನು ? ಹಾಗಾದರೆ, ಓ! ಅದೆಷ್ಟು ವರುಷಗಳಿಂದ ನಾನು ಈತನನ್ನು ಹುಡುಕುತ್ತಿದ್ದೆನಲ್ಲ......

ಬಾಲಮ್ : ಡಾಕ್ಟರರೇ, ಈ ಹೆಣ್ಣುಮಗಳು......ಯಾರೀ ಹೆಣ್ಣುಮಗಳು ?

ಡಾಕ್ಟರ : ಮುಂಬಯಿಯ ಸುಪ್ರಸಿದ್ಧ ಹಳೆಯ ತಲೆಮಾರಿನ ಸಿನಿಮಾತಾರೆ ಶ್ರೀಮತಿ ತಾರಾಬಾಯಿ.

ಬಾಲಮ್ : (ವಿಚಾರಮಗ್ನ) ತಾ...ರಾ....ಬಾ...ಯಿ ?

ತಾರಾಬಾಯಿ : (ಹತ್ತಿರ ಬರುತ್ತ) ನಿಜ, ಈತ ಅದೇ ಬಾಲಮ್. ಬಾಲಮ್, ನೀನು ನನ್ನ ಗುರುತಿಸಲಾರೆಯಾ ? ನೀನು ಹೇಗೆ ಗುರುತಿಸಬಲ್ಲೆ ಹೇಳು, ನಿನ್ನ ಕಣ್ಣಿಗೆ ಪಟ್ಟಿ ಕಟ್ಟಿರುವಾಗ, ಆದರೆ ನಾನು......ನಾನು ಬಾಲಮ್— ನಿನ್ನನ್ನು ಗುರುತಿಸಿದ್ದೇನೆ.

ಬಾಲಮ್ : ತಾರಾಬಾಯಿ, ನಿನ್ನ ಧ್ವನಿ ಗುರುತಿಸಬಲ್ಲೆ. ನೀನು ಕಮಲಾ ಥಿಯೇಟ್ರಿಕಲ್ ಕಂಪನಿಯಲ್ಲಿದ್ದೆ. 'ಬಿಲ್ವ ಮಂಗಲ' ನಾಟಕದಲ್ಲಿ ನಾನು ಬಿಲ್ವ ಮಂಗಲನ ಪಾತ್ರ ವಹಿಸುತ್ತಿದ್ದೆ. ನೀನು ನನ್ನ ಹೆಂಡತಿ ರಂಭಾಳ ಪಾತ್ರ-ವಹಿಸುತ್ತಿದ್ದೆ.

ತಾರಾ : ನಿಜ, ಬಾಲಮ್, ನೀನು ನನ್ನನ್ನು ಸರಿಯಾಗಿ ಗುರುತಿಸಿದೆ. ನನ್ನ ಮೇಲೆ ಅದೆಂಥ ಉಪಕಾರ ಮಾಡಿರುವೆ ನೀನು ಬಾಲಮ್.

ಡಾಕ್ಟರ : (ಎತ್ತರದ ಧ್ವನಿಯಲ್ಲಿ) ಸೋದರ, ಸೋದರಿಯರೇ, ಕುಮಾರಿ ತಾರಾಬಾಯಿ ನನ್ನ ಕೆಲಸವನ್ನು ಹಗುರ ಗೊಳಿಸಿದ್ದಾರೆ. ದಿವಂಗತ ಆಗಾಹಶ್ರ ಕಶ್ಮೀರಿಯವರ ಸುಪ್ರಸಿದ್ಧ ನಾಟಕ 'ಬಿಲ್ವಮಂಗಲ ಉರ್ಫ ಭಕ್ತ ಸೂರದಾಸ' ದಲ್ಲಿ ಬಿಲ್ವಮಂಗಲನ ಪಾತ್ರ ನೋಡಲು ಮುಂಬಯಿಯಿಂದ ಕಲಕತ್ತಾವರೆಗಿನ ನಾಟಕ ಪ್ರೇಮಿಗಳು ಧಾವಿಸಿ ಬರುತ್ತಿದ್ದರು. ನಾಟಕದ ಚಕ್ರವರ್ತಿ ಇಂದು ತಮ್ಮೆಲ್ಲರೆದುರಿಗೆ ಕುಳಿತಿದ್ದಾರೆ. ಆಗ ನಾನು ತುಂಬ ಚಿಕ್ಕವನಿದ್ದೆ. ನನ್ನ ತಂದೆಗೆ ನಾಟಕದ ಹುಚ್ಚು ಬಹಳವಿತ್ತು. ನಾನು ಆಗ ಅವರೊಂದಿಗೆ ನಾಟಕಗಳಿಗೆ ಹೋಗುತಿದ್ದೆ. ರಂಗಭೂಮಿಯ ಈ ಚಕ್ರವರ್ತಿ ಬಾಲಮ್ ಪಾತ್ರ ವಹಿಸುತ್ತಿದ್ದ 'ಬಿಲ್ವಮಂಗಲ' ನಾಟಕಕ್ಕೆ ಟೀಕೆಟು ಸಿಕ್ಕುವುದು ತುಂಬ ಕಷ್ಟವಾಗಿತ್ತು. ಹಲವಾರು ದಿನಗಳ ವರೆಗೂ ಟಿಕೆಟ್‌ಗಾಗಿ ಕಾಯಬೇಕಾಗುತ್ತಿತ್ತು. ಹಾಂ...ಈಗ ತಾನೇ ನೆನಪಾಯಿತು. ಇವರೊಂದಿಗೆ ಪಾತ್ರವಹಿಸುತ್ತಿದ್ದವರು ಮಿಸ್ ರಾಣಿದೇವಿ ಎಂಬುವರು. ಅವರು ಈ ನಾಟಕದಲ್ಲಿ ಚಿಂತಾಮಣಿಯ ಪಾತ್ರವಹಿಸುತ್ತಿದ್ದರು. ಬಾಲಮರೊಂದಿಗೆ ಆಕೆಯ ಹೆಸರು ಕೂಡ ತುಂಬ ಪ್ರಸಿದ್ಧಿ ಪಡೆದಿತ್ತು.

ಬಾಲಮ್ : (ಕೊಂಚ ಹೌಹಾರಿ) ಡಾಕ್ಟರ ಸಾ...ಹೇ...ಬ ..

ಡಾಕ್ಟರ : ನನಗೆ ಸಂಪೂರ್ಣವಾಗಿ ಹೇಳಗೊಡಿ ಮಾಸ್ಟರ ಬಾಲಮ್ (ಎತ್ತರದ ಧ್ವನಿಯಲ್ಲಿ) ಮಾತನಾಡುವ ಚಲನಚಿತ್ರಗಳ ಕಾಲ ಬಂತು. ಆಗ ಈ ನಾಟಕ-ಗಳ ಕಂಪನಿಗಳು ಮೂಲೆಗುಂಪಾದವು. ಮಾಸ್ಟರ ಬಾಲಮರ ಮಾತಿನಲ್ಲಿಯೇ ಹೇಳುವುದಾದರೆ ಸಿನಿಮಾದ ಬೊಂಬೆಗಳು ರಂಗಭೂಮಿಯ ಜೀವಂತ ಕಲಾವಿದರನ್ನು ಹಾಳು ಮಾಡಿದವು. ಈ ಬಣ್ಣದ ಲೋಕವನ್ನೇ ನಾಶಮಾಡಿದವು. ಮಾಸ್ಟರ ಬಾಲಮರಂಥ ಸರ್ವೋತ್ಕೃಷ್ಟ ಕಲಾಕಾರರ ಜೀವನೋಪಾಯಕ್ಕೇನೇ ಕೊಡಲಿ ಏಟು ಹಾಕಿದವು. ಈ ಸಿನೇಮಾಗಳು, ಅವರ ಕೀರ್ತಿ ಪತಾಕೆಯನ್ನು ಮಣ್ಣಿನಲ್ಲಿ ಕಚಕಚನೇ ತುಳಿದವು. ಕಂಪನಿಯ ಅದೆಷ್ಟೋ ಕಲಾವಿದರು ನಿರ್ಜೀವ ಸಿನಿಮಾ ಪ್ರಪಂಚಕ್ಕೆ ಶರಣುಹೋದರು. ಆದರೆ ಮಾಸ್ಟರ್ ಬಾಲಂ ಅವರಿಗೆ ಡಬ್ಬಿಯಲ್ಲಿ ಬಂಧಿಸಲ್ಪಟ್ಟ ನಿರ್ಜೀವ ಕಲೆ ಹಿಡಿಸಲಿಲ್ಲ.

ತಾರಾ : ಉಳಿದ ಕಥೆಯನ್ನು ನಾನು ಹೇಳುತ್ತೇನೆ. ನಾವು ಪಾತ್ರವಹಿಸುತ್ತಿದ್ದ ಕಮಲಾ ಥಿಯೇಟ್ರಿಕಲ್ ಕಂಪನಿ ಮುರಿದಾಗ, ಮುಂಬಯಿಯ ಒಂದು ಫಿಲ್ಮ ಕಂಪನಿಯಲ್ಲಿ ಬಂದು ನಾನು ಸೇರಿದೆ. ಫಿಲ್ಮ ಕಂಪನಿಯವರು ಮಾಸ್ಟರ ಬಾಲಮ್ ಅವರನ್ನೂ ಪಾತ್ರ ವಹಿಸಲು ಆಮಂತ್ರಣ ನೀಡಿದರು. ಆದರೆ ಅವರು ಒಪ್ಪಲಿಲ್ಲ. ನಾನು ಕೂಡ ಅವರನ್ನು ಕರೆಯಲು ಹೋದೆ. ಆದರೆ

ಅವರು ಸಿನಿಮಾಗಳಲ್ಲಿ ಪಾತ್ರವಹಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಅಂದು ಅವರು ಜೀವಂತ ಕಲೆಯಲ್ಲಿ ನನ್ನ ಕೀರ್ತಿ ಗೌರೀಶಂಕರ ತಲುಪಿರು-ವಾಗ ಫಿಲ್ಮನ ನಿರ್ಜೀವ ಪರಿಸರದಲ್ಲಿ ಡಬ್ಬಿಯಲ್ಲಿ ನನ್ನ ಪ್ರಾಣ ಕಳೆದುಕೊಳ್ಳುವುದು ನನಗೆ ಬೇಕಾಗಿಲ್ಲ. ನಾನು ಉಪವಾಸ ಸಾಯಬಲ್ಲೆ ಆದರೆ ಫಿಲ್ಮಿನಲ್ಲಿ ಕೆಲಸ ಮಾಡಲಾರೆ ಎಂದು ಹೇಳಿದರಷ್ಟೇ ಅಲ್ಲ ಹಾಗೆ ನಡೆದುಕೊಂಡರು.

ಬಾಲಮ್ : ಸಾಕು, ಸಾಕು. ಮಕ್ಕಳ ಹುಟ್ಟು ಹಬ್ಬದ ಈ ಸಮಾರಂಭದಲ್ಲಿ ನನ್ನಂಥ ಸಾಮಾನ್ಯನ ಮೆರವಣಿಗೆಯನ್ನೇ ನಡೆಸಿದಿರಿ. ಇದು ಸರಿಯಾದುದಲ್ಲ. ಇಂದು ಈ ಮಗುವಿನ ಹಿರಿಯ ಮಗಳ ಹುಟ್ಟುಹಬ್ಬ. ಆಕೆಯ ಉಜ್ವಲ ಭವಿಷ್ಯಕ್ಕೆ ಆಶೀರ್ವಾದ ನೀಡುವ ದಿನವಿದು...... ಮಗು ನಿನಗೆ ದೀರ್ಘ ಆಯುಷ್ಯವಿರಲಿ, ನಿನ್ನ ಜೀವನ ಸುಖಕರವಾಗಲಿ. ಹುಂ... ನಿನ್ನ ಸೋದರಿಯೊಂದಿಗೆ ಇನ್ನೊಮ್ಮೆ ಅದೇ ಹಾಡನ್ನು ಹಾಡು. (ಇಬ್ಬರೂ ಹುಡುಗಿಯರು ಮೊದಲು ಹೇಳಿದ ಹಾಡನ್ನೇ ಮತ್ತೊಮ್ಮೆ ಹೇಳುತ್ತಾರೆ. ಹಾಡು ಮುಗಿಯುತ್ತಿರಲು ಎಲ್ಲರೂ ಚಪ್ಪಾಳೆ ಹಾಕುತ್ತಾರೆ. ಅದರ ಸಪ್ಪಳ ಕಡಿಮೆಯಾಗುತ್ತಿರುವಂತೆ ಫೇಡ ಔಟ)

ಡಾಕ್ಟರ : ಮಾಸ್ಟರಜೀ.

ಹುಡುಗಿ ೧ : ಡ್ಯಾಡಿ, ಒಳಗೆ ಬನ್ನಿ, ಸಮಾರಂಭ ಮುಗಿದ ಕೂಡಲೇ ನಾವು ಮಾಸ್ತರ ಅವರನ್ನು ಅವರ ಕೋಣೆಗೆ ಕರೆದು ತಂದಿರುವೆವು.

ಹುಡುಗಿ ೨ : ಡ್ಯಾಡಿ, ಮಾಸ್ಟರಜೀಯನ್ನು ನಾವು ಹಾಸಿಗೆಯ ಮೇಲೆ ಮಲಗಿಸಿದ್ದೇವೆ. ಕಂಬಳಿ ಹೊದಿಸಿದ್ದೇವೆ. ಇಂದು ಹೆಚ್ಚು ಛಳಿ ಇದೆಯಲ್ಲವೇ ಡ್ಯಾಡಿ ? ಹೊರಗಡೆ ತುಂಬ ಗಾಳಿ.

ಡಾಕ್ಟರ : ಈಗತಾನೇ ಆಸ್ಪತ್ರೆಯಿಂದ ಫೋನ ಬಂದಿತ್ತು. ಮಾಸ್ಟರ, ಅಲ್ಲಿರುವ ಡಾಕ್ಟರ-ನರ್ಸ, ಚೌಕಿದಾರ ಸಹಿತ ಎಲ್ಲರೂ ನೀವು ಇದ್ದಕ್ಕಿದ್ದಂತೆ ಯಾರಿಗೂ ಗೊತ್ತಾಗದಂತೆ ಆಸ್ಪತ್ರೆಯಿಂದ ಇಲ್ಲಿಗೆ ಬಂದಿರುವುದುರಿಂದ ಅವರೆಲ್ಲ ಗಾಬರಿಯಾಗಿದ್ದಾರೆ. ನೀವು ಇಲ್ಲಿಗೆ ಬಂದಿರುವುದಾಗಿಯೂ, ಗಾಬರಿಗೊಳ್ಳಬೇಕಾಗಿಲ್ಲವೆಂದೂ ಅವರಿಗೆ ತಿಳಿಸಿದ್ದೇನೆ. ಆದರೆ ನೀವು ಅಲ್ಲಿ ಯಾರಿಗೂ ಹೇಳದೆ ಹೀಗೆ. ಬರಬಾರದಾಗಿತ್ತು.

ಬಾಲಮ್ : ಈ ಮಕ್ಕಳ ಪ್ರೀತಿ ನಾನು ಹೀಗೆ ಬರುವಂತೆ ಮಾಡಿತು ಡಾಕ್ಟರರೇ. ನಾನು ಒಂದು ವೇಳೆ ಅವರಿಗೆ ಹೇಳಿದ್ದರೆ ಅವರು ಯಾರೂ ನನ್ನನ್ನು ಇಲ್ಲಿಗೆ ಬರಲು ಬಿಡುತ್ತಿರಲಿಲ್ಲ.

ಹುಡುಗಿ ೧ : ಮಾಸ್ಟರಜೀ, ನೀವು ಬಂದು ಒಳ್ಳೆಯದನ್ನೇ ಮಾಡಿದಿರಿ. ನೀವು ಇಲ್ಲದಿದ್ದರೆ ನನ್ನ ಈ ಹುಟ್ಟು ಹಬ್ಬ ವೈಭವಯುಕ್ತವಾಗಿ ಸಾಗುತ್ತಿದ್ದಿಲ್ಲ.

ಹುಡುಗಿ ೨ : ನಾವು ಇಂದಿನ ಸಮಾರಂಭದಲ್ಲಿ ಹಾಡಿದ ಹಾಡು 'ಬಿಲ್ವ ಮಂಗಲ' ನಾಟಕದಲ್ಲಿಯ ಹಾಡಂತೆ;ಹೀಗೆಂದು ಮಾಸ್ಟರಜೀ ಹೇಳುತ್ತಿದ್ದರು, ಡ್ಯಾಡಿ.

ಹುಡುಗಿ ೧ : ಡ್ಯಾಡಿ, ಮಾಸ್ಟರಜೀ ಈಗತಾನೇ ಆ 'ಬಿಲ್ವಮಂಗಲ' ನಾಟಕದ ಕಥೆಯನ್ನೂ ನಮಗೆ ಹೇಳಿದರು. ಅಕ್ಬರನ ದರಬಾರಿನಲ್ಲಿ ರಾಮದಾಸನೆಂಬ ಬಹುದೊಡ್ಡ ಕಲಾವಿದನಿದ್ದ. ಅವನ ಮಗನ ಹೆಸರೇ ಬಿಲ್ವಮಂಗಲ. ಸರಿ ತಾನೇ ಮಾಸ್ಟರಜಿ ?

ಹುಡುಗಿ ೨ : ಬಿಲ್ವಮಂಗಲನ ಹೆಂಡತಿಯ ಹೆಸರು ರಂಭಾ. ಬಿಲ್ವಮಂಗಲ ತನ್ನ ಹೆಂಡತಿಯ ಬದಲಾಗಿ ಓರ್ವ ಹಾಡುವ ಕುಣಿವ ಹೆಂಗಸನ್ನು ಪ್ರೀತಿಸುತ್ತಿದ್ದ.

ಹುಡುಗಿ ೧ : ಆ ಹಾಡುವ ಕುಣಿವ ಹೆಂಗಸಿನ ಹೆಸರು ಚಿಂತಾಮಣಿ. ಮಾಸ್ಟರಜೀ ಸರಿ ತಾನೇ ?

ಹುಡುಗಿ : ೨ ಒಂದು ರಾತ್ರಿ ಭಾರಿ ಬಿರುಗಾಳಿ, ಧಾರಾಕಾರವಾಗಿ ಸುರಿವ ಮಳೆ. ಅಂಥ ಭಯಾನಕ ರಾತ್ರಿಯಲ್ಲಿ ಬಿಲ್ವ ಮಂಗಲ ಜಮುನಾ ನದಿಯನ್ನು ದಾಟಿ ಪ್ರೇಯಸಿ ಚಿಂತಾಮಣಿಯನ್ನು ಕಾಣಲು. ಕೂಡಲು ಹೋದನು. ಆದರೆ ಆಕೆ ಬಿಲ್ವಮಂಗಲನನ್ನು ತರಾಟೆಗೆ ತೆಗೆದು ಕೊಂಡಳಲ್ಲದೆ, ತನ್ನ ಮೇಲಿರುವ ಈ ಅಪರಾವಾದ ಪ್ರೇಮವನ್ನು ಭಗವಂತನ ಮೇಲಿರಿಸಿದ್ದರೆ ಜನ್ಮ ಸಾರ್ಥಕ ವಾಗ್ತುತ್ತು ಎಂದು ಹೇಳಿದಳು....ನಾನು ಹೇಳುತ್ತಿರುವುದು ಸರಿ ಇದೆ ಯಲ್ಲವೇ ಮಾಸ್ಟರಜಿ ?

ಹುಡುಗಿ ೧ : ಬಿಲ್ವಮಂಗಲ ಎಲ್ಲವನ್ನೂ ತ್ಯಜಿಸಿ ಸರ್ವಸಂಗ ಪರಿತ್ಯಾಗಿಯಾಗಿ ಆಗ್ರಾ ತೊರೆದು ಇನ್ನಾವುದೋ ಪಟ್ಟಣಕ್ಕೆ ಹೊರಟು ಹೋದ. ಅಲ್ಲಿ ಓರ್ವ ಸೇಠನ ಸುಂದರ ಪತ್ನಿಯನ್ನು ಕಂಡು ಮತ್ತೆ ಅವನಲ್ಲಿ ಪಾಪ ತಲೆ ಎತ್ತಿತು.

ಹುಡುಗಿ ೨ ; ಬಿಲ್ವಮಂಗಲ. ಈ ಪಾಪಕ್ಕೆ ಪ್ರಾಯಶ್ಚಿತ್ತವಾಗಲೇಬೇಕೆಂದು ತನ್ನ ಕಣ್ಣುಗಳನ್ನು ತಾನೇ ಕಳೆದುಕೊಂಡು ಕುರುಡನಾದ.

ಡಾಕ್ಟರ : (ನಕ್ಕು) ಸಾಕು, ಸಾಕು. ನಿಮ್ಮಿಬ್ಬರಿಗೂ ಬಿಲ್ವಮಂಗಲನ ಕಥೆ ಗೊತ್ತಿದೆಯೆಂಬುದು ನನಗೆ ಗೊತ್ತಾಯಿತು. ನೀವೆಲ್ಲ ಇನ್ನು ಮಮ್ಮಿಯ ಹತ್ತಿರ ಹೋಗಿ ಮಲಗಿಕೊಳ್ಳಿ. ಮಾಸ್ಟರಜಿಗೆ ಕೊಂಚ ವಿಶ್ರಾಂತಿ ಕೊಡಿ. ಈಗಾಗಲೇ ಒಂಬತ್ತುಗಂಟೆ.

ಹುಡುಗಿ : ಡ್ಯಾಡಿ, ಬರ್ಥಡೇ ಪಾರ್ಟಿ ಮುಗಿದ ನಂತರ ಎರಡನೆಯ ಷೋ ಸಿನಿಮಾಕ್ಕೆ ಹೋಗೋಣ ವೆಂದು ಹೇಳಿದ್ದೆ.

ಡಾಕ್ಟರ : ಇಂದು ಬೇಡ ಮಗು, ಹವೆ ಅಷ್ಟು ಚೆನ್ನಾಗಿಲ್ಲ.

ಬಾಲಮ್ : ನಿಮ್ಮೆಲ್ಲರಿಗೂ ಸಿನಿಮಾದ ಹುಚ್ಚು ಬಹಳ. ನಾನು ಕಳೆದ ೨೦–೨೫ ವರುಷಗಳಲ್ಲಿ ಒಮ್ಮೆ ಕೂಡ ಸಿನಿಮಾ ನೋಡಿಲ್ಲ. ಸರಿ, ಮಕ್ಕಳೇ ಇನ್ನು ಹೋಗಿ ಮಲಗಿಕೊಳ್ಳಿ. ತುಂಬ ಛಳಿಬಿಟ್ಟಿದೆ.

ಇಬ್ಬರೂ ಹುಡುಗಿಯರು } ಸರಿ. ಪ್ರಣಾಮಗಳು. ಮಾಸ್ಟರಜಿ ನಾವು ಹೋಗುತ್ತೇವೆ. ಏನಾದರೂ ಬೇಕಾದಲ್ಲಿ ನಮ್ಮನ್ನು ಕರೆಯಿರಿ. (ಹೋಗುತ್ತಾರೆ)

ಬಾಲಮ್ : (ಕೆಲ ಸಮಯದ ನಂತರ)ತುಂಬ ಮುದ್ದಾದ ಬುದ್ಧಿವಂತ ಮಕ್ಕಳು ದೇವರು ಮಕ್ಕಳಿಗೆ ತುಂಬ ಆಯುಷ್ಯ ನೀಡಲಿ. ನಾನು ಅವಿವಾಹಿತನೆಂಬು ದನ್ನು ನಿಮಗೆ ಈವರೆಗೂ ಹೇಳಿಲ್ಲ ಡಾಕ್ಟರ. ನಾನು ಮದುವೆಯನ್ನೇ ಮಾಡಿಕೊಳ್ಳಲಿಲ್ಲ. ಹೀಗಾಗಿ ನನಗೆ ಯಾರೂ ಹತ್ತಿರದವರೆನ್ನುವವರಿಲ್ಲ; ಪ್ರೀತಿಯಿಂದ ಕಾಣುವವರೂ ಇಲ್ಲ. ಮನೆಗೆ ಬರುವ ಮೊದಲು ನಾನು ಬಹುಮಟ್ಟಿಗೆ ಲೌಕಿಕ ಬದುಕಿನಿಂದ ಸಂನ್ಯಾಸ ಸ್ವೀಕರಿಸಿದ್ದೆ. ಇಲ್ಲಿಗೆ ಬಂದ ಮೇಲೆ ಈ ಮಕ್ಕಳು ನನ್ನನ್ನು ಮತ್ತೆ ವ್ಯಾಮೋಹದಲ್ಲಿ ಸಿಲುಕಿಸಿದವು. ಮಕ್ಕಳು ನೀಡುತ್ತಿರುವ ಪ್ರೀತಿಯೇ ನನ್ನನ್ನು ಲೌಕಿಕದತ್ತ ಆಕರ್ಷಿಸುವಂತೆ ಮಾಡಿದೆ. ನೀವು ಮನೆಯಲ್ಲಿ ನನಗೆ ಆಶ್ರಯ ನೀಡಿ ಉಪ ಕರಿಸಿದ್ದೀರಿ. ಡಾಕ್ಟರ ಬಾಬು, ನಾನು ನಿಮಗೆ ತುಂಬಾ ಕೃತಜ್ಞನಾಗಿದ್ದೇನೆ...

ಡಾಕ್ಟರ : ಹಾಗೆಲ್ಲ ಅನ್ನಬೇಡಿ, ಮಾಸ್ಟರಜಿ. ನನ್ನ ಮನೆಯಲ್ಲಿರಲು ನೀವು ಒಪ್ಪಿದಿರಿ ಅಲ್ಲದೆ ನಿಮ್ಮ ಸೇವೆ ಮಾಡುವ ಭಾಗ್ಯವನ್ನು ನನಗೆ ದೊರಕಿಸಿಕೊಟ್ಟಿರಿ. ಇದ ಕ್ಕಾಗಿ ನಾನು ಕೃತಜ್ಞತೆ ಅರ್ಪಿಸಬೇಕು ನಿಮಗೆ. ಹಾಂ ಮಾಸ್ಟರಜಿ. ನಾನು ಆಸ್ಪತ್ರೆಗೆ ಹೋಗಿ ಈ ದಿನದ ಕೊನೆಯ ಭೇಟಿ ನೀಡಿ ರೋಗಿಗಳನ್ನು ನೋಡಿ ಕೊಂಡು ಬರುವೆ. ನಡಿರಿ, ನಿಮ್ಮನ್ನು ಆಸ್ಪತ್ರೆಯಲ್ಲಿ ಬಿಟ್ಟು ಬರುತ್ತೇನೆ. ನಾಡದ್ದು ಪಟ್ಟಿ ತೆಗೆದ ನಂತರ ನೀವು ಇಲ್ಲಿಗೆ ಬರುವಿರಂತೆ.

ಬಾಲಮ್ : ಡಾಕ್ಟರ ಸಾಹೇಬ, ಅಲ್ಲಿ ಹೋಗಿಯೂ ಮಲಗುವುದು ತಾನೇ ? ಇಲ್ಲಿ ನನ್ನ ಈ ಕೋಣೆಯಲ್ಲಿ ಮಲಗುವುದು ನನಗೆ ಅಲ್ಲಿಗಿಂತಲೂ ಹೆಚ್ಚು ಹಿತಕರ ವೆನಿಸುತ್ತದೆ. ನಾಡದ್ದು ಪಟ್ಟಿ ತೆಗೆಯಿಸಿಕೊಳ್ಳಲು ನಿಮ್ಮೊಂದಿಗೆ ನಾನು ಆಸ್ಪತ್ರೆಗೆ ಬರುವೆ. ಆಗಬಹುದಲ್ಲವೇ ?

ಡಾಕ್ಟರ : ತಮ್ಮ ಇಚ್ಛೆ ಇದ್ದಂತೆ ಆಗಲಿ. ಆಸ್ಪತ್ರೆಯಲ್ಲಿ ತಮ್ಮ ಯೋಗಕ್ಷೇಮ ನೋಡಿಕೊಳ್ಳಲು ಹೆಚ್ಚು ಸೌಲಭ್ಯ ಹಾಗೂ ಜನರಿದ್ದರು. ಅದಕ್ಕೆಂದೇ ಹೇಳಿದೆ ಅಷ್ಟೆ. ಅಲ್ಲಿ ತಮಗೆ ಏಕಾಂತ ಹಾಗೂ ವಿಶ್ರಾಂತಿ ಲಭಿಸುತ್ತಿತ್ತು.

ಬಾಲಮ್ : ಇಲ್ಲ ಡಾಕ್ಟರ, ಅಲ್ಲಿ ನನ್ನ ಮನಸ್ಸೇ ಹಿಡಿಸುವುದಿಲ್ಲ. ಈ ಮಕ್ಕಳೊಂದಿಗೆ ನಾನಿಲ್ಲಿ ಹೆಚ್ಚು ಸಂತೋಷಿಯಾಗಿದ್ದೇನೆ. ಆರೋಗ್ಯವಾಗಿದ್ದೇನೆ. (ಬಿರುಗಾಳಿಯ ಭಯಾನಕ ಶಬ್ದ).

ಡಾಕ್ಟರ್ : ಹಾಗಾದರೆ ನಾನಿನ್ನು ಹೊರಡುತ್ತೇನೆ. (ಒಮ್ಮೆಲೇ) ಗಾಳಿ ವಿಪರೀತವಾಗಿದೆ. ಕೋಣೆಯ ಈ ಕಿಟಕಿಗಳನ್ನು ಮುಚ್ಚಿ ಬಿಡುತ್ತೇನೆ (ಕಿಟಕಿ ಮುಚ್ಚುವ ಸಪ್ಪಳ) ಈ ಲೈಟ ಕೂಡ ಆರಿಸಿ ಬಿಡುತ್ತೇನೆ. (ಆರಿಸುವ ಶಬ್ದ) ಲೈಟಿನ ಬೆಳಕು ತಮ್ಮ ಕಣ್ಣಿಗೆ ಒಳ್ಳೆಯದಲ್ಲ. ಮಂಚದಿಂದ ತಾವು ಏಳಕೂಡದು (ಸಿಡಿಲು ಮಿಂಚುಗಳ ಆರ್ಭಟ) ಓ ಏನೀ ಬಿರುಗಾಳಿ ಸಿಡಿಲು-ಹೊರಗೆ ಹೋಗುವುದೇ ಕಠಿಣ. ಆಸ್ಪತ್ರೆಗೆ ಹೋಗಿ ಕೊನೆಯ ಬಾರಿ ರೋಗಿಗಳನ್ನು ನೋಡಿಕೊಂಡು ತೀವ್ರ ಬರುವೆ. ಬಾಗಿಲನ್ನು ಹೊರಗಿನಿಂದ ಹಾಕಿಕೊಂಡೇ ಹೋಗುವೆ. (ಬಾಗಿಲು ಮುಚ್ಚುವ ಸಪ್ಪಳ...... ಕೆಲ ಹೊತ್ತಿನ ನಂತರ ಕಾರು ಹೊರಡುವ ಸಪ್ಪಳ)

ಬಾಲಮ್ : (ಸ್ವಗತ) ಅದೆಷ್ಟು ಒಳ್ಳೆಯವರು ಈ ಡಾಕ್ಟರ. ಡಾಕ್ಟರ ಅವರು ನನಗೆ ಮಾಡುವ ಸುಶ್ರೂಷೆ ನೋಡಿದರೆ ಯಾವ ಮಗನು ಕೂಡ ತನ್ನ ತಂದೆಗೆ ಇಷ್ಟೊಂದು ಸೇವೆ ಮಾಡಲಾರ-ಎಂದೆನಿಸುತ್ತದೆ. ಈ ಮಹಾನುಭಾವ ನನಗೆ ಕೇವಲ ಕಣ್ಣಿನ ಬೆಳಕು ನೀಡಲಿಲ್ಲ. ಜೀವನದ ಬೆಳಕನ್ನೇ ನೀಡಿದ್ದಾನೆ. ಆದರೆ... ಆದರೆ... ಇನ್ನೊಂದು ನನ್ನ ಗತವೈಭವದ ದಿನಗಳ ಮೇಲಿದ್ದ ಆವರಣ ತೆರೆದು, ಆ ಅವಿಶ್ವಾಸಿ ರಾಣಿಯ ನೆನಪು ತೆಗೆದು... (ಬಾಗಿಲು ಬಡಿಯುವ ಸಪ್ಪಳ)

ಬಾಲಮ್ : ಯಾರು ?

ತಾರಾಬಾಯಿ : (ಕೊಂಚ ದೂರದಿಂದ) ನಾನು... ತಾರಾಬಾಯಿ, ಒಳಗೆ ಬರಬಹುದೇ ?

ಬಾಲಮ್ : ಬಾ... ಬಾ... ಬಾಗಿಲು...ಹೊರಗಿನಿಂದಲೇ ತೆಗೆದುಕೊಂಡು ಬಾ, (ಬಾಗಿಲು ತೆರೆಯುವ ಸಪ್ಪಳ) (ಕೊಂಚ ಚಿಂತಿತ ಸ್ವರದಲ್ಲಿ) ಹಾಗಾದರೆ... ನೀನಿನ್ನೂ ಹೋಗಿಲ್ಲ.

ತಾರಾ : ನಿನ್ನನ್ನು ಭೆಟ್ಟಿಯಾಗದೆ ನಾನು ಹೋಗಲು ಹೇಗೆ ಸಾಧ್ಯ. ಇದೇನು ಕೋಣೆಯ ತುಂಬೆಲ್ಲ ಕತ್ತಲು.

ಬಾಲಮ್ : ಲೈಟು ಹಚ್ಚಲ್ಲ. ಈಚೆಗೆ...ನನ್ನ ಮಂಚದ ಸಮೀಪ ಈ...ಗೋಡೆಯಲ್ಲಿ ಸ್ವಿಚ್ ಇದೆ ನೋಡು. (ಸ್ವಿಚ್ ಹಾಕಿದ ಸಪ್ಪಳ) ಪಾರ್ಟಿ ಮುಗಿದ ನಂತರ ಇನ್ನುಳಿದ ಅತಿಥಿಗಳೊಂದಿಗೆ ನೀನು ಹೊರಟು ಹೋಗಿರಬಹುದೆಂದು ತಿಳಿದಿದ್ದೆ.

ತಾರಾ : ಇಲ್ಲ, ನಾನು ಬೇಕಂತಲೇ ಇಲ್ಲಿ ಉಳಿದೆ. ಡಾಕ್ಟರರ ಮಕ್ಕಳು ನಿನ್ನನ್ನು ಈ ಕೋಣೆಗೆ ಕರೆದುಕೊಂಡು ಬಂದಾಗ, ನಾನು ಹೊರಗಿದ್ದೆ. ಇಲ್ಲಿಗೆ ಡಾಕ್ಟರ ಬಂದುದರಿಂದ ನಾನು ಈ ವರೆಗೂ ಹೊರಗೇ ಇದ್ದೆ. ನಾನು ನಿನ್ನೊಂದಿಗೆ ಏಕಾಂತದಲ್ಲಿ ಕೂಡ ಬಯಸಿದ್ದೆ. ಡಾಕ್ಟರ ಇಲ್ಲಿಂದ ಹೋದ ನಂತರ ಬರುವುದೆಂದು ನಿರ್ಣಯಿಸಿ ನಾನು ಡಾಕ್ಟರರ ಪತ್ನಿಯೊಂದಿಗೆ ಹರಟೆ ಹೊಡೆಯುತ್ತ ಕುಳಿತೆ. ನಾಟಕ ಕಂಪನಿಗಳ ಬಗ್ಗೆ ಆಸೆ ಇರಿಸಿಕೊಂಡಿರುವ ಡಾಕ್ಟರರು ನನ್ನನ್ನು ಬಹುಕಾಲದಿಂದ ಬಲ್ಲರು. ಇವರ ಮನೆಗೆ ಬಹಳ ವರುಷಗಳಿಂದ ನಾನು ಬರುತ್ತಲಿರುವೆ. ಈಗ ತಾನೇ ಡಾಕ್ಟರರು ಹೊರಗೆ ಹೋದುದನ್ನು ನೋಡಿಕೊಂಡು ನಿನ್ನನ್ನು ಕಾಣಲು ಬಂದೆ.

ಬಾಲಮ್ : ಅದೆಷ್ಟು ವರುಷಗಳ ನಂತರ ನಿನ್ನ ಭೆಟ್ಟಿ ? ಸುಮಾರು ಇಪ್ಪತ್ತೇಳು, ಇಪ್ಪತ್ತೆಂಟು ವರುಷಗಳ ನಂತರ...

ತಾರಾ : ನಾನು ನಿನ್ನನ್ನು ಸದಾ ನೆನಸುತ್ತಿದ್ದೆ. ನಿನ್ನ ಸ್ಮರಣೆ ಬರದ ದಿನಗಳೇ ಇಲ್ಲ. ಬಾಲಮ್. ನೀನು ನಂಬಬೇಕು. ನನ್ನ ಈ ಮಾತುಗಳನ್ನು. ನಾನು ನಿನ್ನನ್ನು ತುಂಬ ಹುಡುಕಿದೆ. ನೀನು ಆಗ ನನಗೆ ದೊರೆಯಲಿಲ್ಲ. ಇಂದು ಈ ಡಾಕ್ಟರರ ಕೃಪೆಯಿಂದ ನೀನು ನನಗೆ ಮತ್ತೆ ದೊರಕಿರುವೆ. ತಮ್ಮ ಮಗಳ ಬರ್ಥಡೇ ಪಾರ್ಟಿಯಲ್ಲಿ ನನ್ನನ್ನು ಕರೆದು ನಾನು ಕಳೆದು ಕೊಂಡಿದ್ದ ನನ್ನ ಸಂಗಾತಿಯನ್ನು ಈ ವೃದ್ಧಾಪ್ಯದಲ್ಲಿ ದೊರಕಿಸಿಕೊಟ್ಟಿದ್ದಾರೆ. ಬಾಲಮ್. ನೀನು ಒಮ್ಮಿಂದೊಮ್ಮೆಲೇ ಕಾಣದಂತೆ ಎಲ್ಲಿ ಅಡಗಿದೆ ಆವಾಗ ?

ಬಾಲಮ್ : ತಾರಾ, ಆ ಹಳೆಯ ಕಥೆ ಈಗ ಬೇಡ. ನಾನೀಗ ಅದನ್ನೆಲ್ಲ ಮರೆಯ ಬಯಸುತ್ತೇನೆ.

ತಾರಾ : ನಿಜ ಅನ್ನು, ರಾಣಿಯ ಅವಿಶ್ವಾಸ ಘಾತಕತನವನ್ನು ಮರೆಯುವುದೇ ಲೇಸು. ಕಮಲಾ ಥಿಯೇಟ್ರಿಕಲ್ ಕಂಪನಿ ಮುರಿದು ಹೋದ ನಂತರ ನಿನ್ನ

ನಿಜವಾದ ಪ್ರೇಮವನ್ನು ಕಡೆಗಣಿಸಿ ರಾಣಿ ಓರ್ವ ಲಕ್ಷಾಧೀಶ ವ್ಯಾಪಾರಿಯೊಂದಿಗೆ ಮದುವೆ ಮಾಡಿಕೊಂಡು ಅಮೇರಿಕಾಕ್ಕೆ ಹೊರಟು ಹೋದಳು. ಈ ಘಟನೆಯಿಂದಾಗಿ ನಿನಗೆ ಬಹುದೊಡ್ಡ ಆಘಾತವಾಯಿತು. ಈ ಆಘಾತದಿಂದಾಗಿಯೇ ನೀನು ಸಿನಿಮಾದಲ್ಲಿ ಪಾತ್ರವಹಿಸಲೂ ನಿರಾಕರಿಸಿದೆ. ಅದೂ ಅಲ್ಲದೆ, ಮುಂಬಯಿಯನ್ನೇ ಬಿಟ್ಟು ಹೊರಟುಹೋದೆ. ಅಷ್ಟೇ ಅಲ್ಲದೆ ನೀನು ರಾಣಿಯನ್ನು ಪಡೆಯುವ ಹುಚ್ಚಿನಲ್ಲಿ ಅಮೇರಿಕಾಕ್ಕೂ ಹೋದೆಯೆಂದು ಕೆಲವರು ಸುದ್ದಿ ಹಬ್ಬಿಸಿದರು.

ಬಾಲಮ್ : (ಸಿಟ್ಟಿನಿಂದ) ಏನು ಹೇಳುತ್ತಿರುವೆ ತಾರಾ... ನಾನು... ನಾನು... (ಸಾವರಿಸಿಕೊಂಡು) ಹೋಗಲಿ ಬಿಡು ಅದೆಲ್ಲ... ನೀನು ಚೆನ್ನಾಗಿದ್ದೀಯಲ್ಲ ?

ತಾರಾ : ಫಿಲ್ಮಗಳಿಂದ ನಾನು ಸಾಕಷ್ಟು ಹಣ ಗಳಿಸಿದ್ದೇನೆ. ಬ್ಯಾಂಕಿನಲ್ಲಿ ವಿಪುಲವಾದ ಧನರಾಶಿ ಇದೆ. ನಾಲ್ಕು ಅಂತಸ್ತಿನ ಭಾರಿ ಸೌಧ ಇದೆ; ಕಾರಿದೆ. ಆಳು–ಗೀಳು ಬೇಕಾದಷ್ಟು, ಮಾನ, ಮರ್ಯಾದೆ, ಪ್ರಸಿದ್ಧಿ ಎಲ್ಲವೂ ಇದೆ. ಏನಾ–ದರೂ ಕೊರತೆಯೆಂದರೆ ಕೇವಲ......

ಬಾಲಮ್ : ನಿಲ್ಲಿಸಿದೆ ಏಕೆ ತಾರಾ ? ಹೇಳು......

ತಾರಾ : ನಾನು ನಿನ್ನನ್ನು ನನ್ನೊಂದಿಗೆ ಕರೆದೊಯ್ಯಲು ಬಂದಿದ್ದೇನೆ.

ಬಾಲಮ್ : [ಚಕಿತನಾಗಿ] ಆಂ. ಏನೆಂದೆ ?

ತಾರಾ : ಬಾಲಮ್, ನಾವು ಥಿಯೇಟರಿನಲ್ಲಿದ್ದ ಕಾಲದಿಂದಲೂ ನಾನು ನಿನ್ನನ್ನು ಪ್ರೀತಿಸುತ್ತಿರುವುದು ನಿನಗೆ ಗೊತ್ತಿದೆ. ಆದರೆ, ನೀನು ರಾಣಿಗಾಗಿ ಹುಚ್ಚನಾಗಿದ್ದೆ. ರಾಣಿಗಾಗಿ ನೀನು ನನ್ನನ್ನು ಸದಾ ತಿರಸ್ಕರಿಸುತ್ತ ಬಂದೆ. ಈಗಲಾದರೂ ನಿನ್ನ ಸೇವೆ ಮಾಡುವ ಅವಕಾಶ ನನಗೆ ನೀಡು ಬಾಲಮ್, ನಿನ್ನ ಈ ಸ್ಥಿತಿಯನ್ನು ನಾನು ನೋಡಲಾರೆ. [ಹೊರಗೆ ಗುಡುಗು, ಸಿಡ್ಲು, ಬಿರುಗಾಳಿಗಳ ಮೊರೆತ]

ಬಾಲಮ್ : ತಾರಾ, ಬಹಳ ಕತ್ತಲಾಯಿತು. ಹೊರಗೆ ಮಳೆಗಾಳಿ ನಿಲ್ಲುವ ಸ್ಥಿತಿಯಲ್ಲಿಲ್ಲ. ನೀನು ಇನ್ನು ಮನೆಗೆ ಹೋಗು ತಾರಾ,

ತಾರಾ : [ಪ್ರೀತಿಯಿಂದ] ಬಾಲಮ್......

ಬಾಲಮ್ : [ಗದರಿಸುತ್ತ] ನೀನು ನನ್ನನ್ನು ಮುಟ್ಟಬೇಡ ತಾರಾ. ನೀನು ಮುಟ್ಟುವುದೆಂದರೆ ನನ್ನ ಪಾಲಿಗೆ ಅದೇ ವಿಷ. ಹೆಣ್ಣು ಜಾತಿಯನ್ನೇ ನಾನು ದ್ವೇಷಿಸುತ್ತೇನೆ. ಏಳು, ನೀನಿನ್ನು ನಿನ್ನ ಮನೆಗೆ ಹೋಗು.

ತಾರಾ : ಬಾಲಮ್, ನೀನು ನನ್ನನ್ನು ಈ ರೀತಿ ತಿರಸ್ಕರಿಸಬೇಡ. ನಿನ್ನ ಈ ಮುಪ್ಪಿನಲ್ಲಿ ಸುಖ ಸಂತೋಷ ತರಬಯಸುತ್ತೇನೆ. ಬಣ್ಣ ಬಣ್ಣದ ಬದುಕನ್ನು ನಿನಗೆ ನೀಡಬಯಸುತ್ತೇನೆ, ಬಾಲವ್.

ಬಾಲಮ್ : ನೀನು ನಿನ್ನ ಐಶ್ವರ್ಯದಿಂದ ಬಲೆಯಲ್ಲಿ ಸಿಲುಕಿಸಬಯಸುತ್ತಿರುವೆ. ಸಾಧ್ಯವಿಲ್ಲ, ಎಂದಿಗೂ ಸಾಧ್ಯವಿಲ್ಲ ತಾರಾ, ನೀನು ಇಲ್ಲಿಂದ ಹೊರಟು ಹೋಗು. ನನಗೆ ನಿನ್ನ ಬಗ್ಗೆ ಆಗಲೂ ತಿರಸ್ಕಾರವಿತ್ತು, ಈಗಲೂ ಇದೆ.

ತಾರಾ : ಸರಿ, ಹೋಗುತ್ತೇನೆ. ಆ ಬಿಲ್ವಮಂಗಲ ನಾಟಕದ ಕೆಟ್ಟ ನೆರಳು ಈಗಲೂ ನಮ್ಮಿಂದ ದೂರಾಗಿಲ್ಲ. ನಾಟಕದಲ್ಲಿ ನಿನ್ನ ಹೆಂಡತಿಯಾದಾಗಲೂ ನೀನು ನನ್ನನ್ನು ದ್ವೇಷಿಸಿದೆ, ನಾಟಕದಲ್ಲೂ ಹಾಗೆ ನಿತ್ಯಜೀವನದಲ್ಲೂ ಹಾಗೆಯೇ, ಬರೀ ದ್ವೇಷ. ಈ ಇಪ್ಪತ್ತೇಳು ಇಪ್ಪತ್ತೆಂಟು ವರುಷಗಳ ನಂತರವಾದರೂ ಆ ಬಿಲ್ವಮಂಗಲದ ಪಾತ್ರದ ಕೆಟ್ಟ ನೆರಳಿನಿಂದ ನೀನು ದೂರವಾಗಿರಬಹುದೆಂದೆಣಿಸಿದ್ದೆ. ನೀನೀಗ ವಾಸ್ತವಿಕ ಬದುಕನ್ನು ಅರಿತು ಬುದ್ಧಿವಂತನಾಗಿರಬಹುದೆಂದು ತಿಳಿದಿದ್ದೆ. ಆದರೆ, ನೀನು ಅಂದೂ ಕುರುಡನಾಗಿದ್ದೆ. ಇಂದೂ ಕುರುಡನಾಗಿರುವೆ, ಆಯಿತು, ನಾನು ಬರುವೆ, [ಬೇಗ ಬೇಗ ಹೊರಟು ಹೋಗುತ್ತ ಬಾಗಿಲು ಹಾಕಿಕೊಳ್ಳುವ ಸಪ್ಪಳ]

ಬಾಲಮ್ : ಹೊರಟು ಹೋದಳು – ಕಳೆದು ಹೋದ ಬದುಕಿನ ಕಿಡಿಗಳನ್ನು ಚೆಲ್ಲಾಪಿಲ್ಲಿ ಮಾಡಿ, ಸತ್ತ ಸ್ಮರಣೆಗಳ ಹಿಲಾಲು ಉರಿಸಿ ಹೊರಟು ಹೋದಳು ಮೂರ್ಖ ಹೆಂಗಸು...... ಹೆಂಗಸಲ್ಲ, ನನ್ನ ಕಳೆದ ಜೀವನದ ಸ್ಮಶಾನದ ಭೂತ, ಇವಳಿನ್ನು ನನ್ನ ಶಾಂತಿಮಯ ಬದುಕನ್ನು ಅಶಾಂತಿಗೊಳಿಸದೆ ಬಿಡಲಾರಳು. ನಾನಿಂದು ಸಾಯಂಕಾಲ ಆಸ್ಪತ್ರೆಯಿಂದ ಈ ಸಮಾರಂಭಕ್ಕೆ ಬರಬಾರದಾಗಿತ್ತೆಂದು ಈಗ ಯೋಚಿಸುತ್ತಿರುವೆ, ಬರದಿದ್ದರೆ ಈ ತಾರಾಬಾಯಿಯು ಭೆಟ್ಟಿಯಾಗುತ್ತಿದ್ದಿಲ್ಲ. ಈ ಕಳೆದ ದಿನಗಳ ಸ್ಮರಣೆಗಳ ಬಿರುಗಾಳಿ ಬೀಸುತ್ತಿದ್ದಿಲ್ಲ...... [ಅಪಾರವಾದ ಬಿರುಗಾಳಿ, ಮಳೆ, ಮಿಂಚುಗಳ ಹಾವಳಿ] [ಕೊಂಚ ಸಮಾಧಾನಿಯಾಗಿ] ಬಹು ಆಕಸ್ಮಾತ್ತಾಗಿ ಬಿರುಗಾಳಿ ಬೀಸಿತು ನನ್ನ ಒಳಗೆ ಮತ್ತು ಹೊರಗೆ [ಗುಡುಗುಗಳ ಗರ್ಜನೆ] ಓ! ಬಿರುಗಾಳಿಯ ಈ ಭಯಾನಕ ರಾತ್ರಿ ಪೆಟ್ಟು ತಿಂದ ಹೆಬ್ಬಾವಿನ ಫೂಂಕಾರದಂತೆ ಭಯೋತ್ಪಾದಕವಾಗಿದೆ, ಚರ್ಮ ಚಕ್ಷುಗಳಿಗೆ ಪಟ್ಟಿ ಹಾಕಲಾಗಿದೆ ನಿಜ. ಆದರೆ ನಾನು ಆಂತರಿಕ ಕಣ್ಣುಗಳಿಂದ ಎಲ್ಲವನ್ನೂ ನೋಡುತ್ತಿರುವೆ, (ಒಮ್ಮೆಲೇ) ಅರೆ, ಇದೇನು ನೀರಿನ ಈ

ಹನಿಗಳು......ಪಿಚಕಾರಿ ಹೊಡೆದ ಹಾಗೆ......ಇವು ಎಲ್ಲಿಂದ ಬರುತ್ತಲಿವೆ ......ಓ! ಬಹುಶಃ ಕೋಣೆಯ ಕಿಟಕಿಗಳು ತೆರೆದುಕೊಂಡಿರಬೇಕು [ಕೊಂಚ ತಡೆದು] ಓ!! ಇದೆಂಥ ಛಳಿಗಾಳಿ ಬೀಸುತ್ತಲಿದೆ, ಈ ಮಳೆಯೊಂದಿಗೆ ಮುಂಬಯಿಯಲ್ಲಿ ಇಂಥಛಳಿ ಅಬ್ಬಾ. ಇನ್ನು ಏಳಲೇಬೇಕಾಯಿತು. ಕುರುಡನ ತೆರದಿ ಕಿಟಕಿ ಕೈ ಸವರುತ್ತ ಹುಡುಕಬೇಕು. [ಏಳುತ್ತ] ಕಣ್ಣು ಮುಚ್ಚಿವೆ. ಮತಿಯೂ ಮಂದವಾಗಿದೆ. ಈ ಸಮಸ್ತ ಸಂಸಾರವೂ ಕುರುಡು...ಇಲ್ಲ... ಇಲ್ಲ...ಕುರುಡು...ಪಾತ್ರ ನಾಟಕದಲ್ಲಿಯ ಪಾತ್ರ ಯಾರ, ಯಾವುದರ ಪಾತ್ರ ? ತಾರಾಬಾಯಿ ಏನಂದಿದ್ದಳು ? ಬಿಲ್ವಮಂಗಲನ ಪಾತ್ರದ ಕೆಲ ಮಾತು ಹೇಳಿದ್ದೆ. ಮೂರ್ಖ...ಇದು...ಹೌದು, ಕಿಟಕಿ...ಸಿಕ್ಕಿತು [ಕಿಟಕಿ ಮುಚ್ಚುವ ಸಪ್ಪಳ] ಹಾಂ. ಈಗ ಛಳಿ ಕಡಿಮೆಯಾಯ್ತು. [ಅಚ್ಚರಿಯಿಂದ] ಅದೇ, ಇದೇನು ಇಷ್ಟು ವರುಷಗಳ ನಂತರ ಥಿಯೇಟರಿಕಲ್ ಕಂಪನಿಯಲ್ಲಿಯ ಮಾತುಗಳನ್ನು ಹೇಳ ಹತ್ತಿರುವೆನಲ್ಲ. ಏನೆಂಥ ಸೊಗಸಿತ್ತು. ಏನೆಂಥ ಲಯವಿತ್ತು. ಆ ಧ್ವನಿಯಲ್ಲಿ, ಆ ಮಾತುಗಳಲ್ಲಿ. ಮಾತು ಮಾತಿನಲ್ಲಿ ಕಾವ್ಯ, ದ್ವಿಪದಿ, ಭಾವಗೀತಗಳ ಸುರಿಮಳೆ...ಓ!!...ನೆನಪು...

ನಿನ್ನದೇ ರೂಪು ಈ ಕಣ್ಣುಗಳಲಿ
ನಿನ್ನದೇ ಕಥೆ ಈ ತುಟಿಗಳಲಿ
ನಾನೋ, ನಿನ್ನ ಬಯಕೆಯಲಿ
ಹುಚ್ಚನಾಗಿಹೆ, ಕೆಳದಿ!

[ಅಚ್ಚರಿಯಿಂದ] ಈ ಮುಕ್ತಕ...ಬಿಲ್ವಮಂಗಲ ತನ್ನ ಪ್ರೇಯಸಿ ಚಿಂತಾ ಮಣಿಗೆ ತನ್ನ ಪ್ರೇಮವನ್ನು ವ್ಯಕ್ತಗೊಳಿಸುತ್ತ ಹೇಳುತ್ತಾನೆ. ಬಾಲಮ್ ರಾಣಿಗೆ ಹೇಳುತ್ತಾನೆ...ಓ! ಇಲ್ಲ ಇಲ್ಲ ನಾನು ಇದೇನನ್ನು ಸ್ಮರಿಸಿಕೊಳ್ಳು ತ್ತಿರುವೆ. ನಾನೀಗ ಮಂಚದ ಮೇಲೆ ಒರಗಿಕೊಳ್ಳಬೇಕು...ಮಲಗಿಕೊಳ್ಳ ಬೇಕು. [ಬಿರುಗಾಳಿಯ ಅಪಾರ ಮೊರೆತ ಅದರೊಂದಿಗೆ ಗೋಪುರದ ಗಡಿಯಾರ ರಾತ್ರಿಯ ಹನ್ನೆರಡು ಗಂಟೆ ಬಾರಿಸುತ್ತದೆ] ಅರೆ. ಇದೇನು ಹನ್ನೆರಡು ಗಂಟೆ...ಮಧ್ಯರಾತ್ರಿ...ಅರ್ಧರಾತ್ರಿ ಕಳೆದು ಹೋದುದೇ ಗೊತ್ತಾಗಲಿಲ್ಲ. ನಾನು ಇನ್ನೂ ಮಲಗಲೇ ಇಲ್ಲ. ಕಣ್ಣಿನ ಈ ರೋಗ... ಜೊತೆಗೆ ವೃದ್ಧಾಪ್ಯ. ನಿದ್ರೆ ಬಾಯೆಂದರೆ ಬರಬೇಕಾದರೂ ಹೇಗೆ ? ಜಾಗರಣೆ ಮಾಡುತ್ತಿದ್ದ ಮೂವತ್ತು ವರುಷಗಳ ಹಿಂದಿನ ರೂಢಿ ಅದೆಲ್ಲಿ ಹೋದೀತು. ಥಿಯೇಟರಿನ ಆ ಜೀವನ. ರಾಗ ರಂಗಗಳಿಂದ ತುಂಬಿದ ಆ ರಾತ್ರಿಗಳು..ಜೀವಂತ ರಾತ್ರಿಗಳು..ರಾತ್ರಿಯೆಲ್ಲ ಕುಣಿಯೋದು..ಹಾಡೋದು

ಜಾಗರಣೆ ಮಾಡೋದು... ಹಗಲೆಲ್ಲ ಮಲಗೋದು. ರಾತ್ರಿಯಲ್ಲಿ ರಂಗ ಮಂಟಪದಲ್ಲಿ ಚಕ್ರವರ್ತಿ,ಹಗಲಲ್ಲಿ ಥಿಯೇಟರಿನ ಒಡೆಯನೆದುರಲ್ಲಿ ಭಿಕಾರಿ. ಆದರೆ, ಅಂದು ಕಮಲಾ ಥಿಯೇಟರಿಕಲ್ ಕಂಪನಿಯ ಈ ನಾಯಕ ಭಿಕಾರಿ ಯಾಗಿರಲಿಲ್ಲ...ರಾಜಾಧಿರಾಜನಾಗಿಯೇ ಇದ್ದ. ಕಂಪನಿ ನಾಟಕ ಲೋಕದ ದೊರೆ...ಬಿಲ್ವ ಮಂಗಲನ ಪಾತ್ರದಲ್ಲಿ ನಾನು...ಓ!! ಮತ್ತೆ ಅದೇ ನಾಟಕದ ನೆನಪು...ಈ ಬಿರುಗಾಳಿ ತುಂಬಿದ ರಾತ್ರಿಯೊಂದಿಗೆ ಆ ನಾಟಕದ ಸಂಬಂಧ ವಿರುವುದು ಸರಿಯಾಗಿಯೇ ಇದೆ. ನಾಟಕದ ಆ ದೃಶ್ಯ....ಬಿಲ್ವಮಂಗಲ... ಅದೇ ತಾನೇ ಮೃತಪಟ್ಟ ತಂದೆ...ಬಿಕ್ಕಿ ಬಿಕ್ಕಿ ಅಳುತ್ತಿರುವ ಹೆಂಡತಿ...... ಇದು ಯಾವುದನ್ನೂ ಲೆಕ್ಕಿಸದೆ ಇಂಥದೇ ರಾತ್ರಿ ಜಮುನಾ ನದಿಯನ್ನು ದಾಟಿ ವೇಶ್ಯಾವಾಟಿಕಾದ ಚಕ್ರವರ್ತಿನಿ ಚಿಂತಾಮಣಿಯಲ್ಲಿಗೆ ಹೊರಟು ಹೋಗಿದ್ದ...[ಫ್ಲಾಶ ಬ್ಯಾಕ್ ಥಿಯೇಟರಿಕಲ್ ವಾತಾವರಣ. ಪ್ರೇಕ್ಷಕರ ಹರ್ಷೋದ್ಗಾರ...ಚಪ್ಪಾಳೆ]

ಬಿಲ್ವಮಂಗಲ : ಸಿಡಿಲೊಮ್ಮೆ. ಬಿರುಗಾಳಿಯೊಮ್ಮೆ
ಒಮ್ಮೊಮ್ಮೆ ಧೋ ಧೋ ಎನ್ನುವ ಮಳೆ
ಹಲವು ರೀತಿಯಲಿ ಈ ರಾತ್ರಿ
ಎನ್ನನು ಬರದಂತೆ ತಡೆಯಿತು.
ನಿನ್ನ ಬಯಕೆಯಲಿದ್ದ ನಾನು
ಈ ಯಾವುದಕೂ ತಡೆಯಲಿಲ್ಲ
ನಿನ್ನ ಪ್ರೇಮದ ರೆಕ್ಕೆ ಕಟ್ಟಿಕೊಂಡ ನಾನು
ಗಗನಗಾಮಿಯೊಲು ಹಾರಿ ಬಂದೆ ನಿನ್ನ ಬಳಿ.
ಓ ಏನೆಂಥ ಮಧುರ ಗಾಢ ನಿದ್ರೆಯಲಿಹಳು
ಎನ್ನ ಮನದರಾಣಿ ಚಿಂತಾಮಣಿ, ಏನೆಂಥ ಚೆಲುಮೊಗ
ಚಂದ್ರಮುಖಿ, ಅಲ್ಲಲ್ಲ ಚಂದ್ರನಿಗೆಲ್ಲಿ ನನ್ನವಳ
ಈ ಚೆಲುವು. ಓ ನನ್ನ ಪ್ರಾಣವೇ. ಪ್ರಿಯ ಚಿಂತಾಮಣಿ.

ಚಿಂತಾಮಣಿ : [ಎಚ್ಚರಗೊಂಡ] ಯಾರು ?

ಬಿಲ್ವಮಂಗಲ : ನಾನು ರಮಣಿ, ನಿನ್ನ ದಾಸ, ನಿನ್ನ ಆರಾಧಕ.

ಚಿಂತಾ : ಬಿಲ್ವಮಂಗಲ ?

ಬಿಲ್ವ : ಅಂ...ಅದೆ, ಅವನೇ ನಿನ್ನ ಸೇವಕ, ನಿನ್ನ ದಾಸಾನುದಾಸ.

ಚಿಂತಾ : ನೀನು ಬಂದೆಯಾ ?

ಬಿಲ್ವ : ಹಾಂ, ದೇವಿ

ಚಿಂತಾ : ಇಂಥಾ ಕಾರ್ಗತ್ತಲೆಯ ರಾತ್ರಿಯಲ್ಲಿ ?

ಬಿಲ್ವ : ಹೌದು...

ಚಿಂತಾ : ಇಂಥ ಜಡಿಮಳೆಯಲ್ಲಿ ?

ಬಿಲ್ವ : ಹೌದು ರಾಣಿ, ಇಂಥ ಜಡಿಮಳೆಯಲ್ಲಿಯೇ ಬಂದೆ.

ಚಿಂತಾ : ಆದರೆ ಇಂಥ ಜಡಿಮಳೆ ಹಾಗೂ ಬಿರುಗಾಳಿಯಲ್ಲಿ ನಿನಗೆ ಮನೆಬಿಟ್ಟು ಇಲ್ಲಿ ಬರಲು ಯಾರು ಅಪ್ಪಣೆ ಕೊಟ್ಟರು ?

ಬಿಲ್ವ : ನಿನ್ನನ್ನೇ ಕುರಿತು ಚಿಂತಿಸುವ ಮನ ಹಾಗೂ ನಿನ್ನ ಬಗೆಗೆ ನನ್ನಲ್ಲಿರುವ ಅಸೀಮ ಪ್ರೇಮ.

ಚಿಂತಾ : ಇಂಥ ಕಾರ್ಗತ್ತಲೆಯಲ್ಲಿ ಕಳ್ಳರ, ದರೋಡೆಕಾರರ ಹಾಗೆ ನನ್ನಂಥ ಹೀನ ವೇಶ್ಯೆಯ ಹತ್ತಿರ ಏಕೆ ಬಂದೆ ? ನಿನ್ನ ಧರ್ಮಪತ್ನಿ ನಿನ್ನನ್ನು ಹೇಗೆ ಬಿಟ್ಟಳು? ಅಂಥ ಸಾಧ್ವಿಯನ್ನು ತಿರಸ್ಕರಿಸಿ ಇಲ್ಲಿಗೇಕೆ ಬಂದೆ ಬಿಲ್ವ...?

ಬಿಲ್ವಮಂಗಲ : ನನ್ನ ಪ್ರಿಯೆ ಚಿಂತಾಮಣಿ. ಪ್ರೇಮಿ ಭ್ರಮರ ಕಮಲವನ್ನು ಬಿಟ್ಟು ಮುಳ್ಳನ್ನು ಹೇಗೆ ಪ್ರೀತಿಸಲಾರದೋ ಹಾಗೆಯೇ ನಾನೂ ನಿನ್ನನ್ನು ಬಿಟ್ಟು ಬೇರೆ ಯಾರನ್ನೂ ಪ್ರೀತಿಸಲಾರೆ......

ಈ ಬೆಣ್ಣೆಯಂಥ ಮೈ ಅವಳಿಗೆಲ್ಲಿ
ಈ ರಂಗ ರೂಪು, ಮಳೆಬಿಲ್ಲ ಹೋಲುವ ಹುಬ್ಬು
ಮನಮೆಚ್ಚಲು ಅವಳಲ್ಲಿ ಏನಾದರೂ ಇದ್ದರಲ್ಲವೇ ?
ನಿನ್ನೊಲು ಇರೆ, ನಿನಗಿಂತಲೂ ಹೆಚ್ಚು ಪ್ರೀತಿಯವಳಾಗುತ್ತಿದ್ದಳು.

ಚಿಂತಾ : ಅದೆಲ್ಲ ಹೋಗಲಿ, ನೀನು ಮೇಲೆ ಬರುವಾಗ ಬಾಗಿಲು ತೆರೆದಿತ್ತೋ ಅಥವಾ ಮುಚ್ಚಿತ್ತೋ ?

ಬಿಲ್ವ : ಮುಚ್ಚಿತ್ತು.

ಚಿಂತಾ : ಹಾಗಾದರೆ ನೀನು ನನ್ನ ಕೋಣೆಗೆ ಹೇಗೆ ಬಂದೆ ?

ಬಿಲ್ವ : ನಾನು ಮೇಲೆ ಹತ್ತಿ ಬರಲೆಂದೇ ನೀನು ಇಳಿಬಿಟ್ಟಿದ್ದ ರೇಶ್ಮೆ ಹಗ್ಗದ ಸಹಾಯದಿಂದ.

ಚಿಂತಾ : ಹಗ್ಗ, ರೇಶ್ಮೆ ಹಗ್ಗ.

ಬಿಲ್ವ : ಹೌದು.

ಚಿಂತಾ ; ರೇಶ್ಮೆಯದೇ ?

ಬಿಲ್ವ : ಹೌದು ರಾಣಿ, ರೇಶ್ಮೆ ಹಗ್ಗ.

ಚಿಂತಾ ; ನಾನು ಇಳಿಬಿಟ್ಟಿದ್ದೇನೆ ?

ಬಿಲ್ವ : ಹೌದು...ಹೌದು

ಚಿಂತಾ : ಆ ಹಗ್ಗ ನನಗೆ ನೀನು ತೋರಿಸುವೆಯಾ ?

ಬಿಲ್ವ : ಅವಶ್ಯ, ಅದಕ್ಕೇನಂತೆ.

ಚಿಂತಾ : ಎಲ್ಲಿದೆ ?

ಬಿಲ್ವ : ಇಲ್ಲಿ...ಇಲ್ಲಿದೆ ನೋಡು ಪ್ರಿಯೆ.

ಚಿಂತಾ : ಎಲ್ಲಿ ? ಇದು...ಹಗ್ಗವೇ ?

ಬಿಲ್ವ ಃ ಹೌದು, ಅದೇ.

ಚಿಂತಾ ಃ [ಹೆದರಿ] ಓ! ದೇವರೇ.

ಬಿಲ್ವ ಃ ಏನು ಹೀಗೇಕೆ ಹೆದರಿಕೊಂಡು ಹಿಂದಕ್ಕೆ ಸರಿದೆ ಪ್ರಿಯೆ ? ಏನನ್ನು ಕಂಡೆ?

ಚಿಂತಾ ಃ ಏ ಮೂರ್ಖ, ಕಣ್ಣಿದ್ದು ಕುರುಡನಂತೆ ವರ್ತಿಸುವವನೇ, ಸ್ವಲ್ಪ ಕಣ್ಣು ತೆರೆದು ನೋಡಿದು, ಹಗ್ಗವೇ ಇದು ?

ಬಿಲ್ವ ಃ ಹಗ್ಗ ಆಗದಿದ್ದರೆ ಮತ್ತಿನ್ನೇನು ?

ಚಿಂತಾ ಃ ಸರಿಯಾಗಿ ನೋಡು; ಕಣ್ಣು ತೆರೆದು ನೋಡು, ಉತ್ತರ ಸಿಗುತ್ತದೆ.

ಬಿಲ್ವ ಃ ಇದೇನು ? ಓ ದೇವರೇ ಹಗ್ಗದ ಸ್ಥಳದಲ್ಲಿ ಹಾವು ?

ಚಿಂತಾ ಃ ನೋಡಿದೆಯಾ ?

ಬಿಲ್ವ ಃ ನೋಡಿದೆ. ಆದರೆ ?

ಚಿಂತಾ ಃ ಆದರೆ ಏನು ?

ಬಿಲ್ವ ಃ ನನ್ನ ಕಣ್ಣಿಂದ ಅಲ್ಲ.

ಚಿಂತಾ ಃ ಮತ್ತೆ ?

ಬಿಲ್ವ ಃ ನಿನ್ನ ಕಣ್ಣಿಂದ ನೋಡಿದೆ.

ಚಿಂತಾ ಃ ನಿನ್ನ ಕಣ್ಣಿಂದ ಏಕೆ ನೋಡಲಿಲ್ಲ.

ಬಿಲ್ವ ಃ ಏನನ್ನು ? ಪ್ರಿಯೇ, ಮನವೆಲ್ಲ ನಿನ್ನತ್ತ. ಮನ ಎತ್ತ ಇತ್ತೋ ಕಣ್ಣೂ ಅತ್ತಲೆ ಇದ್ದವು.

ಚಿಂತಾ ಃ ಓ! ದೇವರೇ, ಲೋಕದ ಎಲ್ಲ ಕೊಳೆ ಹಾಗೂ ಸುಳ್ಳಿನ ಹುಟ್ಟೇ ವಾಸವಾಗಿರುವ ಸೂಳೆಯ ಪ್ರೇಮದಲ್ಲಿ ಇಂಥ ಶಕ್ತಿ......ಸರಿ. ಬಿಲ್ವ, ಈ ಜಡಿ ಮಳೆ ಬಿರುಗಾಳಿಯಲ್ಲಿ ನದಿ ದಾಟಿ ಬರಲು ನಿನಗೆ ದೋಣಿ ಎಲ್ಲಿತ್ತು ?

ಬಿಲ್ವ : ಅಲ್ಲಿ ನೋಡು, ನದಿಯ ದಡದಲ್ಲಿಯ ಮರಕ್ಕೆ ಬಿಗಿದಿರುವ ಹಲಿಗೆ. ಆ ಹಲಗೆಯ ಸಹಾಯದಿಂದ ನದಿಯನ್ನು ದಾಟಿ ನಿನ್ನೆಡೆಗೆ ಬಂದು ನಿನ್ನ ದರ್ಶನ ಪಡೆದೆ. ದರ್ಶನದ ಆನಂದ ಪಡೆದೆ.

ಚಿಂತಾ : ಆದರೆ ನನಗಂತೂ ಅಲ್ಲಿ ಹಲಗೆಯ ಬದಲಾಗಿ ಇನ್ನೇನೋ ತೋರುತ್ತಿದೆ ಬಿಲ್ವ……

ಬಿಲ್ವ : ಇನ್ನೇನೋ ಕಾಣಿಸುತ್ತಲಿದೆಯೇ ?

ಚಿಂತಾ : ಹೌದು.

ಬಿಲ್ವ ; ಈ ಕತ್ತಲೆ ನಿನ್ನ ಕಣ್ಣಿಗೆ ಮೋಸ ಮಾಡುತ್ತಲಿದೆ ಚಿಂತಾಮಣಿ.

ಚಿಂತಾ : ಹಾಗಾದರೆ ಹತ್ತಿರದಿಂದಲೇ ನೋಡುವಾ. [ಕೊಂಚ ಸಮಯದ ನಂತರ] [ಹೌಹಾರಿ] ಓ ದೇವರೇ, ದಯೆದೋರು; ಈ ಬ್ರಾಹ್ಮಣ ಪುತ್ರನ ಮೇಲೆ ದಯೆದೋರು, ಮೋಹ ಲೋಭ, ಕಾಮ, ನಿನ್ನ ಕಣ್ಣಲ್ಲಿ ಮಣ್ಣು ತೂರಿದೆ. ಹಿತ-ಅಹಿತ, ಸಾರಾ ಸಾರಾ ಜ್ಞಾನ ನಿನಗಿಲ್ಲ ಈಗ.

ಬಿಲ್ವ : ಪ್ರಿಯ ಚಿಂತಾಮಣಿ ನೀನು. ಅನ್ನುತ್ತಿರುವದೇನು ?

ಚಿಂತಾ : ಕಾಮಲಂಪಟ ಬಿಲ್ವ. ಅಲ್ಲಿ ಹೋಗಿ ಸರಿಯಾಗಿ ನೋಡು, ನೀನು ಕಟ್ಟಿಗೆಯ ಹಲಗೆಯ ಸಹಾಯದಿಂದ ಬಂದೆಯೋ ಅಥವಾ ಇನ್ನೇನನ್ನಾದರೂ ಹಿಡಿದುಕೊಂಡು ಬಂದೆಯೋ ?

ಬಿಲ್ವ : [ಅಚ್ಚರಿಗೊಂಡು] ಅರೇ, ಇದೇನು ಹೆಣ. ಅದೂ ಹೆಣ್ಣಿನದು……

ಚಿಂತಾ : ಇದು ಏನು ?

ಬಿಲ್ವ : ನಾನು ಅಪವಿತ್ರ, ನೀಚ ಎಂಬುದಕ್ಕೆ ಸಾಕ್ಷಿ ಇದು. ಜಗತ್ತಿನಲ್ಲಿಯೇ ಹೆಚ್ಚಿನ ಕುರುಡ ನಾನು.

ಚಿಂತಾ : ಹೌದು, ಕುರುಡನೇ ನಿಜ. ನನ್ನ ಪ್ರೇಮಕ್ಕೆ ಬಲಿಯಾದ ನೀನು ಮನೆಯಿಂದ ಹೊರಡುವಾಗ ಬಿರುಗಾಳಿ, ಜಡಿಮಳೆ ಯಾವುದನ್ನೂ ಲೆಕ್ಕಿಸಲಿಲ್ಲ. ಭೋರ್ಗರೆವ ನದಿಯಲ್ಲಿ ಧುಮುಕಲು ಹಿಂಜರಿಯಲಿಲ್ಲ, ಹಲಿಗೆಯ ತುಂಡು ಹಾಗೂ ಹೆಣಗಳಲ್ಲಿಯ ವ್ಯತ್ಯಾಸ ಕಂಡು ಹಿಡಿಯಲು ನಿನಗೆ ಸಾಧ್ಯವಾಗಲಿಲ್ಲ. ಓ! ನನ್ನ ಬಿಲ್ವ…ಇಂಥ ಅಪಾರವಾದ ಬಯಕೆ ಆ ಭಗವಂತನ ಮೇಲಿರಿಸಿದ್ದರೆ ನಿನ ಸಮಸ್ತ ಬದುಕೇ ಸಾರ್ಥಕವಾಗುತ್ತಲಿತ್ತು. ನೀನು ಉದ್ಧಾರವಾಗು

ತ್ತಿದ್ದೆ. ಮೋಕ್ಷ ಪದವಿ ಸಿಕ್ಕುತ್ತಿತ್ತು. ನನ್ನ ಬಗೆಗಿರಿಸಿರುವ ಮೋಹ. ಪ್ರೇಮುವನ್ನು ಶ್ರೀಕೃಷ್ಣ ಪರಮಾತ್ಮನ ಮೇಲಿರಿಸಿದ್ದರೆ ನೀನು ಸಂಸಾರ ಸಾಗರದಿಂದ ಎಂದೋ ಪಾರುಗಾಣುತ್ತಿದ್ದೆ.

ಬಿಲ್ವ : ಚಿಂತಾಮಣಿ... ನನ್ನ ಪ್ರಿಯೆ ಚಿಂತಾಮಣಿ
ನನ್ನ ಮನ, ನನ್ನ ಕಣ್ಣುಗಳ ಮೇಲೆ
ನಿನ್ನ ಪ್ರೇಮು, ಜಾದೂ ಮಾಡಿದೆ,
ನಾನು ಕುರುಡನಾಗುವಂತೆ
ಮಾಡಿದವರು ಯಾರು ? ನೀನೇ ನೀನೇ ಚಿಂತಾ
ನೀನೇ ಚಿಂತಾಮಣಿ ನೀನೇ!

[ಥಿಯೆಟ್ರಿಕಲ್ ಸಂಗೀತದೊಂದಿಗೆ ಫ್ಲಾಶ್ ಸಮಾಪ್ತಗೊಳ್ಳುತ್ತದೆ. ಹಾಗೂ ಬಿರುಗಾಳಿ, ಜಡಿ ಮಳೆ ಭಯಾನಕ ವಾತಾವರಣ ಸೂಚಿಸುವುದು]

ಬಾಲಮ್ : ನಾಟಕದ ಬಿಲ್ವಮಂಗಲ ಈ ದೃಶ್ಯದ ನಂತರ ಸರ್ವಸಂಗ ಪರಿತ್ಯಾಗಿ ಯೋಗಿ ಸಾಧು ಆಗುತ್ತಾನೆ. ಆದರೆ ಬಿಲ್ವಮಂಗಲನ ಪಾತ್ರಮಾಡಿದ ಈ ಬಾಲಮ್ ಆ ದೃಶ್ಯದ ನಂತರ ಚಿಂತಾಮಣಿ ಪಾತ್ರಧಾರಿಯಾದ ರಾಣಿಗಾಗಿ ಹುಚ್ಚನಾಗುತ್ತಿದ್ದ.

(ಕೊಂಚ ದೂರದಿಂದ ಕಾರುಬರುವ ಸಪ್ಪಳ)

ಆಸ್ಪತ್ರೆಯಿಂದ ಡಾಕ್ಟರರು ಮರಳಿದರೆಂದು ತೋರುತ್ತದೆ. (ಪಾಜ) ಗ್ಯಾರೇಜಿನಲ್ಲಿ ಕಾರು ಬಿಟ್ಟು ಮೇಲೆ ಹೋಗುತ್ತಾರೆ......ಇಲ್ಲ...... ನನ್ನ ಕೋಣೆಯಲ್ಲಿ ಉರಿಯುತ್ತಿರುವ ಲೈಟನೋಡಿದ ಡಾಕ್ಟರರು ಇತ್ತಲೇ ಬರುತ್ತಿದ್ದಾರೆ. ತಾರಾಬಾಯಿ ಆಗ ಹಚ್ಚಿದ ದೀಪಗಳನ್ನು ಆರಿಸದೇ ಹಾಗೆಯೇ ಹೋಗಿದ್ದಾಳೆ. ಈ ದೀಪಗಳನ್ನು ನಾನು ಆರಿಸಿಬಿಡಬೇಕಾಗಿತ್ತು.

[ಬಾಗಿಲು ಬಡಿಯುವ ಸಪ್ಪಳ]

ಡಾಕ್ಟರ : [ದೂರದಿಂದ] ಮಾಸ್ಟರಜಿ......

ಬಾಲಮ್ : ಬನ್ನಿ ಡಾಕ್ಟರ ಸಾಹೇಬ. ಬಾಗಿಲು ತೆರೆದೇ ಇದೆ...
[ಬಾಗಿಲು ತೆರೆಯುವ ಹಾಗೂ ಮುಚ್ಚುವ ಸಪ್ಪಳ]

ಡಾಕ್ಟರ : [ಅಚ್ಚರಿಯಿಂದ] ನೀವಿನ್ನೂ ಮಲಗಿಲ್ಲವೆ ?

ಬಾಲವ್ : ಮಲಗುವ ಪ್ರಯತ್ನ ಮಾಡುತ್ತಿರುವೆ ಡಾಕ್ಟರ... ಆದರೆ...ಆದರೆ ನಿದ್ರೆ ಬರುವುದೇ ಇಲ್ಲ.

ಡಾಕ್ಟರ : ಕಣ್ಣಲ್ಲಿ ನೋವೇನಾದರೂ... ?

ಬಾಲವ್ : ಇಲ್ಲ. ಡಾಕ್ಟರ ಕಣ್ಣಲ್ಲಿ ಯಾವ ನೋವೂ ಇಲ್ಲ.

ಡಾಕ್ಟರ್ : ಪಟ್ಟಿ ಬಹಳ ಬಿಗಿಯಾಗಿಲ್ಲ ತಾನೆ ?

ಬಾಲವ್ : ಇಲ್ಲ.ಪಟ್ಟಿ ಸರಿಯಾಗಿದೆ. ಈ ಬಿರುಗಾಳಿ, ಈ ಜಡಿಮಳೆ ನನಗೆ ನಿದ್ರೆ ಬರದಿರಲು ಕಾರಣವಾಗಿರಬೇಕು.

ಡಾಕ್ಟರ : ಇಂಥ ಬಯಾನಕ ರಾತ್ರಿಯನ್ನು ಮುಂಬಯಿಯವರಾದ ನಾವು ಎಂದೂ ಕಂಡಿರಲಿಲ್ಲ. ಈ ಬಿರುಗಾಳಿ ಮಳೆ ಕಡಿಮೆಯಾದ ನಂತರ ಆಸ್ಪತ್ರೆಯಿಂದ ಮನೆಗೆ ಹೋಗೋಣವೆಂದು ಬಹಳ ಹೊತ್ತು ಕಾದಿದ್ದ. ಆದರೆ ಕಡಿಮೆಯಾಗಲೇ ಇಲ್ಲ. ರಾತ್ರಿ ಹನ್ನೆರಡು ಗಂಟೆ ಆದರೂ ಕಡಿಮೆಯಾಗದೆ ಹೋದಾಗ ಧೈರ್ಯ ಮಾಡಿ ಕಾರಿನಲ್ಲಿ ಕುಳಿತೆ, ಸಮುದ್ರದ ನೀರು ನದಿಯಾಗಿ ಓಣಿ ಓಣಿಗಳಲ್ಲಿ ನುಗ್ಗುತ್ತಲಿದೆ ಎನ್ನಿಸಿತು. ಬರುತ್ತಿರುವಂತೆ ಎಷ್ಟೋ ಕಡೆ ಗಿಡಮರ ಹಾಗೂ ತಂತಿ ಕಂಬಗಳು ಮುರಿದು ಬಿದ್ದಿವೆ. ಆಸ್ಪತ್ರೆಯಿಂದ ಮನೆಗೆ ಬರಲು ಒಂದು ಗಂಟೆ ಹಿಡಿಯಿತು. ಅಂತೂ ಹೇಗೋ ಬಂದು ತಲುಪಿದೆ.

[ದೂರ ಗೋಪುರದ ಗಂಟೆ ರಾತ್ರಿ ಒಂದು ಗಂಟೆ ಬಾರಿಸುವ ಸಪ್ಪಳ]

ಬಾಲವ್ : ಅರೆ ಇದೇನು ? ಒಂದು ಗಂಟೆ...

ಡಾಕ್ಟರ : ಹೌದು.ನೀವಿನ್ನು ಮಲಗಲು ಪ್ರಯತ್ನಿಸಿ. ಬೇಕೆನಿಸಿದರೆ ನಿದ್ರೆಯ ಗುಳಿಗೆ ಕೊಡುವೆ.

ಬಾಲವ್ : ಬೇಡ ಡಾಕ್ಟರ ಸಾಹೇಬ, ನಿದ್ರೆಯ ಗುಳಿಗೆಗಳಿಂದ ಏನೂ ಆಗುವದಿಲ್ಲ. ಈ ವಾತಾವರಣದ ಹಾಗೆಯೇ ನಾನೂ ಅಶಾಂತಿಗೀಡಾಗಿದ್ದೇನೆ. ತುಂಬಾ ಅಶಾಂತಿ...

ಡಾಕ್ಟರ : ಏನಾಯ್ತು ಮಾಸ್ಟರಜಿ ?...

ಬಾಲವ್ : ಇಂದಿನ ಸಮಾರಂಭದಲ್ಲಿ ತಾವು, ನನ್ನ ಕಳೆದ ಜೀವನ ಗ್ರಂಥ ತೆರೆದು ಕೆಲಪುಟಗಳನ್ನು ಹೊರಳಿಸಿದಿರಿ...ನನ್ನ ಜೀವನದ ಸಂಗಾತಿ ರಾಣಿಯ

ಬಗ್ಗೆಯೂ ಹೇಳಿದಿರಿ. ನಾನು ಅವಳ ಪ್ರೇಮದಲ್ಲಿ ಹುಚ್ಚನಾಗಿದ್ದೆ. ಅವಳಿಗಾಗಿಯೇ ನಾನು ಮನೆಮಾರು ತೊರೆದು ನಾಟಕ ಕಂಪನಿ ಸೇರಿದ್ದೆ. ಅವಳ ಪ್ರೇಮವೆ ನನ್ನನ್ನು ಇಷ್ಟುದೊಡ್ಡ ಕಲಾವಿದನನ್ನಾಗಿ ಮಾಡಿತ್ತು. ಸ್ಟೇಜಿನ ಮೇಲೆ ಬಿಲ್ವಮಂಗಲನ ಪಾತ್ರಧಾರಿಯಾಗಿ ನಾನು, ರಾಣಿಯ ಸೌಂದರ್ಯ ದೀಪಶಿಖೆಯಲ್ಲಿ ಪತಂಗವಾಗಿ, ಸುಟ್ಟು ಹೋಗುವ ಸಾಹಸ ಮಾಡುತ್ತಲಿದ್ದೆ. ಆ ದೃಶ್ಯಕ್ಕೆ, ನನ್ನ ಪಾತ್ರದ ಯಶಸ್ಸಿನ ದೊಡ್ಡ ಗುಟ್ಟು ಇದು.

ಡಾಕ್ಟರ : ಹೌದೇನು ? ಮುಂದೇನಾಯ್ತು ಮಾಸ್ಟರಜಿ ?

ಬಾಲಮ್ : ಆಗುವದೇನಿತ್ತು. ಡಾಕ್ಟರ ಸಾಹೇಬ...

ಸತ್ಯವನ್ನು ತೊರೆದು ಅಸತ್ಯದಲಿ
ಹುಡುಕಿ ಸುಖ ಶಾಂತಿಯನು
ಅದು ಸಿಗುವದೆಂತು ?

ರಾಣಿ ನನಗೆ ಮೋಸ ಮಾಡಿದಳು. ಚಿಂತಾಮಣಿಯಂತೂ ತನ್ನ ಪ್ರೇಮಿಗೆ ಭಗವಂತನಲ್ಲಿ ಭಕ್ತಿಯಿರಿಸಲು ಹೇಳಿ ಭಕ್ತಿಯ ದಾರಿ ತೋರಿದ್ದಳು. ಆದರೆ ಈ ವಿಶ್ವಾಸ ಘಾತಕಿ, ನೀಚರಾಣಿ ನನ್ನನ್ನು ನಡುದಾರಿಯಲ್ಲಿಯೇ ಬಿಟ್ಟು ಶ್ರೀಮಂತಿಕೆಯ ಪೇಟೆಯಲ್ಲಿ ತನ್ನನ್ನು ತಾನೇ ಮಾರಿಕೊಂಡಿದ್ದಳು.

ಡಾಕ್ಟರ : ಮತ್ತೆ ನೀವು ?

ಬಾಲಮ್ : ನಾನು [ಬಿಕ್ಕಳಿಸುತ್ತ] ಅವಳ ಪ್ರೇಮದ ಹೆಣವನ್ನು ಹೆಗಲಮೇಲೆ ಹೊತ್ತುಕೊಂಡು ತಿರುಗುತ್ತಲಿದ್ದೆ. ಹೆಜ್ಜೆ ಹೆಜ್ಜೆಗೂ ಯಾತನೆ ಅನುಭವಿಸುತ್ತಲಿದ್ದೆ. ಸಮಾಧಾನಿಯಾಗಿರಲು ಪ್ರಯತ್ನಿಸಿದೆ, ಭಗವಂತನ ಚಿಂತನೆ ಮಾಡಿದೆ. ಆದರೆ ಆ ವಂಚಕಗಳನ್ನು ಮರೆಯಲಾಗಲಿಲ್ಲ. ಇಂದಿಗೂ ಮರೆಯಲಾಗಿಲ್ಲ [ಬಿಕ್ಕಳಿಕೆ, ಅಳು]

ಡಾಕ್ಟರ : [ಹೆದರಿ] ಮಾಸ್ಟರಜಿ, ಅಳಬೇಡಿ, ಇಲ್ಲಿಯವರೆಗೂ ಕಷ್ಟಪಟ್ಟು ಚಿಕಿತ್ಸೆ ನಡೆಸಿರುವ ಕಣ್ಣು ಮತ್ತೆ ಕೆಟ್ಟುಗಿಟ್ಟಾವು.

ಬಾಲಮ್ : [ಸಾವರಿಸಿಕೊಂಡು] ಇಲ್ಲ. ಈ ಕಣ್ಣು ಕೆಡಬಾರದು. ಸಾಯುವದಕ್ಕಿಂತ ಮುಂಚೆ ಮತ್ತೊಮ್ಮೆ ರಾಣಿಯನ್ನು ಕಾಣಲು ಈ ಕಣ್ಣುಗಳ ಅವಶ್ಯಕತೆ ಇದೆ. ಅಳುವುದರಿಂದ ಕಣ್ಣುಗಳು ಕೆಡುವುದಾದರೆ ನಾನು ಅಳುವುದಿಲ್ಲ. ಎಳ್ಳಷ್ಟೂ ಅಳುವದಿಲ್ಲ. ಆದೆಷ್ಟೋ ವರುಷಗಳಿಂದ ತಡೆದ ಈ ಕಣ್ಣೀರು

ಎಲ್ಲೋ ಅಲ್ಪ ನೋವಿನಿಂದಾಗಿ ಇಂದು ಧಾರಾಕಾರವಾಗಿ ಹರಿಯುತ್ತಲಿವೆ. ಅದೇಕೋ? ನಾಕಾಣೆ. ನನ್ನೀ ದೌರ್ಬಲ್ಯಕ್ಕಾಗಿ ಕ್ಷಮೆ ಯಾಚಿಸುತ್ತೇನೆ. ಡಾಕ್ಟರ ಸಾಹೇಬ, ನಿಮಗೆ ಚಿಂತೆ ಬೇಡ. ಈಗಾಗಲೇ ತುಂಬಾ ಹೊತ್ತಾಗಿದೆ ನೀವಿನ್ನು ಹೋಗಿ. ಮೇಲೆ ಹೋಗಿ ಮಲಗಿಕೊಳ್ಳಿ.

ಡಾಕ್ಟರ : (ಆಕಳಿಸುತ್ತ) ಹೌದು. ಈಗ ಹೋಗಿ ಮಲಗಲೇಬೇಕು. ನೀವು ಮಲಗಬೇಕಾದುದು ಬಹಳ ಅವಶ್ಯವಿದೆ. ಮಾಸ್ಟರಜಿ. [ಕೊಂಚ ತಡೆದು] ನಿಮಗೆ ಸರ್ದಿ ಆಗಿದೆಯೆಂದು ತೋರುತ್ತದೆ. ನನ್ನ ಬ್ಯಾಗಿನಲ್ಲಿ ಬ್ರ್ಯಾಂಡಿ ಇದೆ. ಒಂದು ಡೋಜ ತೆಗೆದುಕೊಳ್ಳಿ...

ಬಾಲಮ್ ; ಬೇಡ ಡಾಕ್ಟರರೇ, ನನಗೆ ಬ್ರ್ಯಾಂಡಿಯ ಅವಶ್ಯಕತೆ ಇಲ್ಲ.

ಡಾಕ್ಟರ : ಸರಿ ನಾನಂತೂ ಈ ಬಾಟ್ಲಿಯನ್ನು ಇಲ್ಲಿಯೇ ಇಟ್ಟು ಹೋಗುತ್ತಿರುವೆ. ಕಪಾಟಿನ ತೀರ ಕೆಳಗಿನ ಖಾನೆಯಲ್ಲಿಟ್ಟಿರುವೆ. ಅವಶ್ಯಕವೆನಿಸಿದರೆ ತೆಗೆದ್ಕೊಳ್ಳಿ. ಈ ಲೈಟೂ ಆಪ್ ಮಾಡುತ್ತೇನೆ ಕಣ್ಣಿಗೆ ಕಟ್ಟಿರುವ ಪಟ್ಟಿ ಹೇಗಿದೆ ?

ಬಾಲಮ್ : ಪಟ್ಟಿ ಸರಿಯಾಗಿದೆ ಡಾಕ್ಟರ. ನೀವು ಚಿಂತಿಸಬೇಡಿ.

ಡಾಕ್ಟರ : ಹಾಗಾದರೆ ನಾನಿನ್ನು ಹೋಗುತ್ತೇನೆ. [ಬಾಗಿಲು ತೆಗೆಯುವ ಸಪ್ಪಳ, ಅದರೊಂದಿಗೇನೇ ಬಿರುಗಾಳಿ,ಜಡಿಮಳೆಯ ಮೊರೆತದ ಸಪ್ಪಳ] ಮಳೆ ಇನ್ನೂ ಕಡಿಮೆಯಾಗಿಲ್ಲ, ಒಳಗಿನಿಂದ ಬಾಗಿಲು ಹಾಕಿಕೊಳ್ಳಿ, [ಹೋಗುತ್ತಾನೆ].

ಬಾಲಮ್ : ಹಾಗೆ ಆಗಲಿ ಡಾಕ್ಟರ ಸಾಹೇಬ.

(ಬಾಗಿಲು ಹಾಕಿಕೊಳ್ಳುವ ಸಪ್ಪಳ, ಅದರೊಂದಿಗೇನೇ ಬಿರುಗಾಳಿ–ಮಳೆಯ ಸಪ್ಪಳ ಕಡಿಮೆಯಾಗುತ್ತದೆ. ಕೆಲ ಸಮಯದ ನಂತರ ಬಾಲಮ್ ತನ್ನಲ್ಲಿಯೇ ತಾನು ಮಾತಾಡಿಕೊಳ್ಳುತ್ತಾನೆ.)

ನಾನು ಎಂಥಾ ಮೂರ್ಖ ಅಂತೀನಿ. ಕಂಪನಿ ನಾಟಕಗಳ ಬಗ್ಗೆ, ಕಲೆಯ ಬಗ್ಗೆ ಆಸಕ್ತಿ ಇರಿಸಿಕೊಂಡಿರುವ ಈ ಉದಾತ್ತ ವಿಚಾರದ ಡಾಕ್ಟರರು ನಾನೊಬ್ಬ ಮಹಾತ್ಮನೆಂದು ತಿಳಿದು ತಮ್ಮ ಮನೆಯಲ್ಲಿ ಆಶ್ರಯ ನೀಡಿದರು. ಅಂಥವರ ಎದುರಿನಲ್ಲಿಯೇ ನಾನಿಂದು ನನ್ನ ಪ್ರೇಮದ ಕಂತೆ ಬಿಚ್ಚಿ ಅಳತೊಡಗಿದುದು ನನ್ನ ಮೂರ್ಖತನದ ಪರಮಾವಧಿ. ನನ್ನ ಬಗೆಗೆ ಡಾಕ್ಟರ ಸಾಹೇಬರು ಏನೆಂದು ಭಾವಿಸಿದರೋ ? ಆದದ್ದು ಆಯಿತು. ನಾನಿನ್ನು ಮಗಲಬೇಕು. ಡಾಕ್ಟರ ಹೇಳಿದ ಮಾತು ಕೇಳಬೇಕು. ಮಲಗಬೇಕು ನಾಡದ್ದು ಕಣ್ಣಿನ ಪಟ್ಟಿ

ತೆಗೆಯುತ್ತಾರೆ...ಆಗ...ಆಗ... ಆದರೆ ಈ ಹಾಳಾದ ನಿದ್ರೆ ಬರಲೊಲ್ಲದು... ಗುಡುಗು ಸಿಡಿಲು, ಬಿರುಗಾಳಿ ಜಡಿಮಳೆಯು ಈ ರಾತ್ರಿ ಕೂಡ ನಿದ್ರಿಸುತ್ತಿಲ್ಲ. ...ಹೊರಗೂ ಬಿರುಗಾಳಿ ಒಳಗೂ ಅಶಾಂತಿಯ ಬಿರುಗಾಳಿ ಬೀಸುತ್ತಲಿದೆ... ಇಂದು ಏನು ಆಗಲಿದೆ,ಓ ದೇವರೇ......(ದೂರದಲ್ಲಿ ಸಿಡಿಲು ಬಿದ್ದ ಸಪ್ಪಳ) ಮತ್ತೆ ಸಿಡಿಲು, ಮಿಂಚು ನಿಸರ್ಗದ ಆರ್ಭಟ...ಇದರೊಂದಿಗೆ ತೇಲುತ್ತ ಬಳಕುತ್ತ ಬರುವ ರಾಣಿಯ ಸುಂದರ ಚಿತ್ರ ನನ್ನ ಮಗ ನನ್ನ ಚಿತ್ರವನ್ನು ಆದರಿಸುತ್ತದೆ. ಇಂದು ನಾನೇಕೆ ಹೀಗಾದೆನೋ ತಿಳಿಯದು. ಆ ವಂಚಕಿ ರಾಣಿಯನ್ನು ಸಂಪೂರ್ಣ ಮರೆತು ಬಿಡಬೇಕೆಂದು ತುಂಬ ಆಶಿಸಿದೆ. ಆದರೆ ಅದು ಸಾಧ್ಯವಾಗುತ್ತಿಲ್ಲ. ಓ ರಾಣಿಯ ಚೆಲುವ ಮೊಗ, ಆ ಮೋಹಿನಿ ರೂಪ...

ಕಣ್ಣಲ್ಲಿ ನಿನ್ನದೇ ರೂಪು
ತುಟಿಯಲಿ ನಿನ್ನದೇ ಕಥೆ
ನಾನೋ ನಿನ್ನ ಬಯಕೆಯಲಿ
ಹುಚ್ಚನಾಗಿಹ ರಾಣಿ

(ಇದನ್ನೆ ಮತ್ತೆ ಮತ್ತೆ ಹಾಡುತ್ತಾನೆ. ಮೆಲ್ಲಮೆಲ್ಲನೆ ಧ್ವನಿ ಕಡಿಮೆಯಾಗುತ್ತದೆ. ಸಂಗೀತದ ಅಲೆಯಲ್ಲಿ ಸಮಯ ಕಳೆಯುತ್ತದೆ. ಕೆಲಕಾಲದ ನಂತರ ಗೋಪುರದ ಗಡಿಯಾರದಲ್ಲಿ ಎರಡು ಬಾರಿಸುತ್ತದೆ.)

(ಗಾಬರಿಯಿಂದ) ಅರೇ. ಇದೇನು ಎರಡು ಗಂಟೆ. ಬಿರುಗಾಳಿಯ ಹಾವಳಿ ಕಡಿಮೆಯಾದಂತೆ ತೋರುತ್ತದೆ. ಆದರೆ ಮಳೆ ಮಾತ್ರ ಮೊದಲಿನ ತ್ವರಿತದಲ್ಲಿಯೇ ಸುರಿಯುತ್ತಲಿದೆ. ಈ ಮುದುಕನ ರೆಪ್ಪೆಗಳಲ್ಲಿ ನಿದ್ರೆ ಬರಲಾರದಂಥ ಯಾವ ಯಾತನೆ ಮನೆಮಾಡಿದೆಯೋ ? ಇಂದು ಬರೀ ಕಣ್ಣೀರು...(ದೂರ ಕಾರಿನ ಸಪ್ಪಳ) ಅರೇ. ಈ ಅವೇಳೆಯಲ್ಲಿ ದಾರಿಯಲ್ಲಿ ಕಾರು...
(ದೂರದಲ್ಲಿ ಕಾರು ಅಪಘಾತದ ಸಪ್ಪಳ. ಅದರೊಂದಿಗೆ ಓರ್ವ ಯುವತಿಯ ಚೀರಾಟ) (ಗಾಬರಿಯಿಂದ) ಅರೇ ಎಕ್ಸಿಡೆಂಟ...ಕಾರು ಬಹುಶಃ ಆ ಮೂಲೆಯಲ್ಲಿದ್ದ ಲೈಟಿನಕಂಬಕ್ಕೆ ಡಿಕ್ಕಿ ಹೊಡೆದಿರಬೇಕು. ಚೀರಿಕೊಂಡ ಯುವತಿ ಕಾರಿನಲ್ಲಿಯೇ ಇರಬೇಕು.ಕಾರು ಡಿಕ್ಕಿ ಹೊಡೆದ ಸಪ್ಪಳ...ಯುವತಿಯ ಚೀರಾಟ.. ಆಮೇಲೆ ಎಲ್ಲವೂ ಸ್ತಬ್ಧ. ಇದೇನಾಯ್ತು ? ಏನು ಅಯ್ಯೋ ಆ ಹೆಣ್ಣು ಮಕ್ಕಳಿಗೆ ? ರಾತ್ರಿ ಭಯಾನಕ ರಾತ್ರಿಯಲ್ಲಿ...ಜಡಿಮಳೆಯಲ್ಲಿ ಈ ಹೆಣ್ಣು ಮಗಳ ಸಹಾಯಕ್ಕೆ ಯಾರು ಬರಬೇಕು. ನನ್ನ ನೋಡಿದರೆ ಪಟ್ಟಿ ಕಟ್ಟಿದ್ದಾರೆ.

...ಈ ಕಾರ್ಗತ್ತಲೆಯಲ್ಲಿ ನಾನು ಅವಳ ಸಹಾಯಕ್ಕೆ ಹೋಗಲು ಹೇಗೆ ಸಾಧ್ಯ ?...ಆದರೆ ಯಾರಾದರೂ ಜೀವ ಕಳೆದುಕೊಳ್ಳುತ್ತಿರುವ ಸ್ಥಿತಿಯಲ್ಲಿ ಇರುವಾಗ ಅದನ್ನು ಅರಿತೂ ಅವರ ಸಹಾಯಕ್ಕೆ ಹೋಗುವುದು ಮನುಷ್ಯನಾದ ನನ್ನ ಕರ್ತವ್ಯವಲ್ಲವೇ? ಹೆ ಓ ಈಗ ನಾನೇನು ಮಾಡಲಿ...ಡಾಕ್ಟರರಂತೂ ಗಾಢ ನಿದ್ರೆಯಲ್ಲಿರಬಹುದು...ಯಾರೋ ಸಾಯುತ್ತಿರುವಾಗ, ಅವರಿಗೆ ನನ್ನ ಸಹಾಯ ಅವಶ್ಯವಿರುವಾಗ ನನ್ನ ಕಣ್ಣಿನ ವ್ಯಾಮೋಹದಲ್ಲಿ ಅವರಿಗೆ ಸಹಾಯ ಮಾಡಲು ಹೋಗದೇ ಇರುವುದು ಹೇಯತನವಲ್ಲವೆ ? ಹಾಗಾದರೆ ಈ ಪಟ್ಟಿ ಕಿತ್ತೆಸೆಯಲೇ ? ಇನ್ನು ಈ ಪಟ್ಟಿಯ ಬಗ್ಗೆ ಯೋಚಿಸುವದರಲ್ಲಿ ಅರ್ಥವಿಲ್ಲ. ಇದೋ ಪಟ್ಟಿ ಕಿತ್ತೆಸೆದೆ. ದೀಪ ಹಚ್ಚಲೇ. (ಸ್ವಿಚ್ ಹಾಕಿದ ಸಪ್ಪಳ) ಓ ಬೆಳಕು... (ಸಂತಸದಿಂದ) ನನ್ನ ಕಣ್ಣು ಸರಿಯಾಗಿವೆ. ಮೋತಿಬಿಂದುವಿನ ಪರಿ ಈಗಿಲ್ಲ. ಪ್ರತಿಯೊಂದು ಮೊದಲಿನಂತೆಯೇ ಸರಿಯಾಗಿ ಕಾಣಿಸುತ್ತಲಿವೆ. ಆಪರೇಶನ್ ಯಶಸ್ವಿಯಾಗಿದೆ...ಕಾರಿನ ಅಪಘಾತಕ್ಕೀಡಾದ ಆ ಹೆಣ್ಣುಮಗಳು...ಈಗಲೇ ಹೋಗಿ ನೋಡುತ್ತೇನೆ... (ಫೇಡ ಔಟ-ಬಾಗಿಲು ತೆರೆಯುವ ಸಪ್ಪಳ-ಮಳೆಗಾಳಿಯ ಅರ್ಭಟ. ಕೆಲಸಮಯದ ನಂತರ ಮುದುಕ ಬಾಲಮ್ ಅಪಘಾತಕ್ಕೀಡಾದ ಹೆಣ್ಣುಮಗಳನ್ನು ಹೊತ್ತುಕೊಂಡು ತೇಕುತ್ತ ತನ್ನ ಕೋಣೆಗೆ ಬರುತ್ತಾನೆ. ಕೋಣೆಯಲ್ಲಿ ಹೊಕ್ಕವನೇ ಬಾಗಿಲು ಮುಚ್ಚುತ್ತಾನೆ. ಮಳೆ ಗಾಳಿಯ ಅರ್ಭಟ ಕಡಿಮೆಯಾಗುತ್ತದೆ).

ಓ ಇವಳಂತೂ ಮೂರ್ಛೆಹೋಗಿದ್ದಾಳೆ. ಹಾಸಿಗೆಯ ಮೇಲೆ ಮಲಗಿಸುತ್ತೇನೆ ಕಾರಿನಲ್ಲಿ ಇನ್ನಾರೂ ಇರಲಿಲ್ಲ. ಇವಳೊಬ್ಬಳೇ ಕಾರು ನಡೆಯಿಸಿಕೊಂಡು ಬರುತ್ತಿದ್ದಳೇ ಈ ಅವೇಳೆಯಲ್ಲಿ ? ಭಯಾನಕ ಈ ರಾತ್ರಿಯಲ್ಲಿ ಒಬ್ಬಳೇ ಹೆಣ್ಣು ಮಗಳು-ಕಾರು ನಡೆಯಿಸಿಕೊಂಡು ಬರುವುದನ್ನು ನಾನು ಕಲ್ಪಿಸಲಾರೆ ಕೂಲ. ಮತ್ತೆ ಈ ಅಪಾರ ಚೆಲುವಿನ ಒಡತಿಯಾದ ಈ ಹೆಣ್ಣುಮಗಳು ಒಂಟಿಯಾಗಿ...ಬಳ್ಳಿಯ ಹಾಗಿರುವ ದೇಹದ ಅಪ್ಸರೆಯ ಚಲುವು ಪಡೆದಿರುವ ಈ ಹೆಣ್ಣಿನಲ್ಲಿ ಇಂಥ ಅದಮ್ಯ ಸಾಹಸ. ಬಹಳ ಸುದೈವಿ ಈಕೆ... ಇಷ್ಟು ದೊಡ್ಡ ಅಪಘಾತದಲ್ಲೂ ಈಕೆಯ ದೇಹಕ್ಕೆ ಎಲ್ಲಿಯೂ ಏನೊಂದು ಪೆಟ್ಟೂ ಆಗಿಲ್ಲ...ಕಾರು ಡಿಕ್ಕಿ ಹೊಡೆದುದರಿಂದ ಈಕೆ ಅಪಘಾತಕ್ಕೊಗಾಗಿ ಮೂರ್ಛೆ ಹೋಗಿದ್ದಾಳೆ ಅಷ್ಟೇ...ನಾಡಿಗಳೆಲ್ಲ ಸರಿಯಾಗಿವೆ. ಛಳಿಯಿಂದಾಗಿ ಮಂದಗತಿ ತಳೆದಿವೆ...ಡಾಕ್ಟರರು ಬ್ರ್ಯಾಂಡಿ ಬಾಟ್ಲಿ ಇಲ್ಲೆ ಅಲಮಾರಿನಲ್ಲಿಟ್ಟು ಹೋಗಿದ್ದರು. ಒಂದೆರಡು ಚಮಚ ಇವಳ ಬಾಯಲ್ಲಿ ಹಾಕುತ್ತೇನೆ. ಈಗ ಅಂಗೈ ಅಂಗಾಲು ತಿಕ್ಕಬೇಕು....ಒಂದಿಷ್ಟು ಕಾವು ಉತ್ಪನ್ನವಾದರೆ ಎಲ್ಲವೂ ಸರಿಹೋಗುತ್ತದೆ.

(ಹಳೆಯ ನೆನಪನ್ನು ಮರುಕಳಿಸುವ ಸಂಗೀತ ಕೇಳಿ ಬರುತ್ತದೆ).

ಓ ದೇವನೇ ನಾನು ಇದೇನನ್ನು ನೋಡುತ್ತಿರುವೆ? ಇವಳ ರೂಪ,ದೇಹರಚನೆ ಎಲ್ಲವೂ ರಾಣಿಯನ್ನೇ ಹೋಲುತ್ತಿದೆಯಲ್ಲಾ. ನನ್ನ ಕಣ್ಣು ನನಗೆ ಮೋಸ ಮಾಡುತ್ತಿಲ್ಲ ತಾನೇ ? ರಾಣಿ...ಆದರೆ ಈ ಎಳೆಯ ವಯಸ್ಸು ? ಇದು ಸಾಧ್ಯವೇ ಇಲ್ಲ. ನನ್ನ ಕಣ್ಣು ನನಗೆ ಮೋಸ ಮಾಡುತ್ತಲಿವೆ. ಇವಳು ರಾಣಿ ಯಾಗಿರಲು ಸಾಧ್ಯವೇ ಇಲ್ಲ. ಇನ್ನೂ ಮೂರ್ಛಾವಸ್ಥೆಯಲ್ಲಿಯೇ ಇದ್ದಾಳೆ. ಏನು ಮಾಡಲಿ ? ಡಾಕ್ಟರರನ್ನು ಎಬ್ಬಿಸಿಕೊಂಡು ಬರಲೇ?...ಬೇಡ.. ಬೇಡ ಡಾಕ್ಟರರನ್ನು ಕರೆದು ತರುವುದು...ಬೇಡ···ತುಟಿ ಚಲಿಸುತ್ತವೆ···ಎಚ್ಚರ ಬರುತ್ತಲಿದೆ. ಕಣ್ಣು ತೆರೆಯುತ್ತಿದ್ದಾಳೆ· ಓ ಕಣ್ಣು ತೆರೆದಳು...

ಯುವತಿ : (ಎಚ್ಚರಗೊಂಡು) ನಾನು ನಾನು...ಎಲ್ಲಿದ್ದೇನೆ ?

ಬಾಲಮ್ : (ಸಂತಸದಿಂದ) ದೇವರ ದಯೆ. ನೀವು ಎಚ್ಚತ್ತಿರಿ. ಗಾಬರಿಗೊಳ್ಳ ಬೇಡಿ. ನೀವು ನನ್ನ ಕೋಣೆಯಲ್ಲಿ...ಓರ್ವ ಸಭ್ಯಗೃಹಸ್ಥನ ಕೋಣೆಯಲ್ಲಿರು ವಿರಿ...

ಯುವತಿ : (ಇನ್ನು ಎಚ್ಚರಗೊಂಡು) ಇಲ್ಲಿ ಹೇಗೆ ಬಂದೆ ? ಇಲ್ಲಿಗೆ ನಾನು ಈ ಮೊದಲು ಎಂದೂ ಬಂದಂತಿಲ್ಲ. (ಗಾಬರಿಯಾಗಿ) ನೀನು ಯಾರು ? ನೀನು ನನ್ನನ್ನು ಇಲ್ಲಿಗೆ ?...

ಬಾಲಮ್ : ಏಳಬೇಡಿ, ಈಗತಾನೇ ನಿಮ್ಮ ಕಾರು ತಂತಿಯ ಕಂಬಕ್ಕೆ ಡಿಕ್ಕಿ ಹೊಡೆದುದರಿಂದ ನಿಮಗೆ ಮೂರ್ಛೆ ಬಂದಿತ್ತು.

ಯುವತಿ : ಕಾರು ಡಿಕ್ಕಿ ಹೊಡೆಯಿತೇ ? ಹೌದು, ಈಗ ಎಲ್ಲವೂ ನೆನಪು ಬರತ್ತ ಲಿದೆ. ಈ ಬಿರುಗಾಳಿ ಜಡಿಮಳೆಯ ಸಮಯದಲ್ಲಿಯೇ ನಮ್ಮ ಡಾಯರೆಕ್ಟರ ನಿಗೆ ಶೂಟಿಂಗಿನ ಭೂತ ಹಿಡಿದಿತ್ತು. ಶೂಟಿಂಗ್ ಮುಗಿಸಿಕೊಂಡು ಸ್ಟುಡಿ ಯೋದಿಂದ ಒಬ್ಬಳೇ ಮನೆಗೆ ಹೊರಟಿದ್ದೆ. ನಿರ್ಜನ ದಾರಿ ನದಿಯರೂಪ ತಾಳಿತ್ತು. ಅದೂ ಅಲ್ಲದೆ...

ಬಾಲಮ್ : ಹಾಗಾದರೆ ನೀವು ಫಿಲ್ಮ ಎಕ್ಟ್ರೆಸ್ ?

ಯುವತಿ : ಹೌದು, ನನ್ನ ಹೆಸರು ರೂಪಾ, ನೀನು ನನ್ನ ಹೆಸರು ಕೇಳಿರಬಹುದು.

ಬಾಲಮ್ : ಇಲ್ಲ.

ಯುವತಿ : ಇಲ್ಲ ?

ಬಾಲಮ್ : ನಿಮಗೆ ಆಶ್ಚರಿಯಾಗಬೇಕಿಲ್ಲ. ನಾನು ಈ ಮೊದಲು ನಿಮ್ಮ ಹಸರು ಕೇಳಿರಲಿಲ್ಲ. ಅದೂ ಅಲ್ಲವೆ ನಿಮ್ಮ ಯಾವ ಫಿಲ್ಮನ್ನೂ ನಾನು ಈವರೆಗೂ ನೋಡಿಲ್ಲ...ಅಷ್ಟೇ ಅಲ್ಲ ಫಿಲ್ಮನ್ನೇ ನೋಡುವದಿಲ್ಲ ನಾನು. ನಾನು...ಫಿಲ್ಮ ನೋಡುವುದು...

ಯುವತಿ : (ಒಮ್ಮೆಲೇ) ನೀನು ನನ್ನನ್ನು ಹೀಗೇಕೆ ನೋಡುತ್ತಿರುವೆ ?

ಬಾಲಮ್ : (ಗಾಬರಿಯಿಂದ) ಏನೂ ಇಲ್ಲ ರೂಪಾದೇವಿ. ಅದೆಷ್ಟೋ ವರುಷ ಗಳಿಂದ ಫಿಲ್ಮ ನೋಡಿಲ್ಲ ನಿಜ. ಆದರೆ ನಿಮ್ಮನ್ನು ಮಾತ್ರ ಎಲ್ಲಿಯೋ ಎಂದೋ ನೋಡಿದ ಹಾಗೆನಿಸುತ್ತಿದೆ...ಇಲ್ಲ...ಇಲ್ಲ...ಇದು ಕೂಡ ತಪ್ಪು... ನನ್ನ ಕಣ್ಣು ನನಗೆ ಮೋಸ ಮೋಸ ಮಾಡುತ್ತಲಿವೆ...ಈ ಕಣ್ಣುಗಳು ನನಗೆ ಯಾವಾಗಲೂ ಮೋಸ ಮಾಡಿವೆ (ಮಾತುಬದಲಿಸುತ್ತ) ನಿಮಗೆ ಎಲ್ಲಿ ಯಾದರೂ ಪೆಟ್ಟು ?

ಯುವತಿ : ಪೆಟ್ಟು ? ತಲೆ ಮತ್ತು ನಡ ಕೊಂಚ ನೋಯಿಸುತ್ತದೆ.

ಬಾಲಮ್ : ಹಾಗಾದರೆ ಡಾಕ್ಟರರನ್ನು ಕರೆಯಲೇ ?

ಯುವತಿ : ಬೇಡ ಡಾಕ್ಟರರ ಅವಶ್ಯಕತೆ ಇಲ್ಲ. ನನ್ನ ಕಾರಿನ ಸ್ಥಿತಿ ಏನಾಗಿದೆ ?

ಬಾಲಮ್ : ಹೊರಗೆ ತಂತಿಯ ಕಂಬಕ್ಕೆ ಡಿಕ್ಕಿ ಹೊಡೆದು ನಿಂತಿದೆ. ಮುಂದಿನ ಭಾಗ ಮುರಿದಿದೆ ಮತ್ತು

ಯುವತಿ : ಹಾಗಾದರೆ ನಾನು ಇಲ್ಲಿಂದ ಈಗಲೇ ಹೊರಡಲಾರೆ ಎಂದಾಯಿತು. ಈ ಮಳೆ, ಈ ಬಿರುಗಾಳಿ ಈ ಭಯಾನಕ ರಾತ್ರಿಯಲ್ಲಿ ಟ್ಯಾಕ್ಸಿ ಕೂಡ ಸಿಗಲಾರವು.

ಬಾಲಮ್ : ತರಲೇಬೇಕೆಂದು ಹೇಳಿದರೆ ನಾನು ?

ಯುವತಿ : ಬೇಡ ಬೇಡ ಈ ಮಳೆ ನಿಲ್ಲಲಿ ಆವಾಗ ನೋಡಿದರಾಯಿತು. ಕಾರು ಇಷ್ಟು ಹಾಳಾಗಿರುವಾಗ ನನಗೆ ಏನೊಂದೂ ಆಗದಿರುವುದು ಪರಮಾಶ್ಚರ್ಯ.

ಬಾಲಮ್ : ನಾನು ಆಗಲೇ ಹೇಳಲಿಲ್ಲವೆ. ನೀವು ಭಾಗ್ಯಶಾಲಿಗಳೆಂದು. ಈ ಭಯಾನಕ ರಾತ್ರಿಯಲ್ಲಿ ಘಟಿಸಿದ ಈ ಅಪಘಾತದಲ್ಲಿ ನಿಮ್ಮ ಜೀವಕ್ಕೆ ಸಂಚ ಕಾರ ಉಂಟಾಗಬಹುದಿತ್ತು.

ಯುವತಿ : ನಾನು ಭಾಗ್ಯಶಾಲಿ ಎನ್ನುವಲ್ಲಿ ಯಾವ ಸಂಶಯವೂ ಇಲ್ಲ, ದೇವರು ನಿನ್ನನ್ನು ಅಲ್ಲ ಅಲ್ಲ... ತಮ್ಮನ್ನು ಕಳಿಸಿದ...ಇಲ್ಲದಿದ್ದರೆ ಬೆಳಗಾಗುವ ವರೆಗೂ ಮೂರ್ಛಿತ ಸ್ಥಿತಿಯಲ್ಲಿಯೇ ಇದ್ದಿದ್ದರೆ ಬೆಳಿಗ್ಗೆ ನಾನು ಈ ಲೋಕ ತ್ಯಜಿಸಿ ಪರಲೋಕವಾಸಿಯಾಗುತ್ತಿದ್ದೆ, ದಾರಿಯ ಹೆಣ ... ತಮ್ಮ ಈ ಉಪಕಾರ......

ಬಾಲಮ್ : ನನ್ನನ್ನು ಲಜ್ಜಿತನನ್ನಾಗಿ ಮಾಡಬೇಡಿ ರೂಪಾದೇವಿ, ಮನುಷ್ಯ ನಾದವನು ಮಾಡಬೇಕಾದ ಕರ್ತವ್ಯ ನಾನು ಮಾಡಿದ್ದೇನೆ– ಅಷ್ಟೇ ಇದರಲ್ಲಿ ಉಪಕಾರದ ಪ್ರಶ್ನೆ ಎಲ್ಲಿ ಬಂತು ?

ಯುವತಿ : ತಾವು ತಮ್ಮ ಬಗ್ಗೆ ಏನನ್ನೂ ಹೇಳಲಿಲ್ಲ. ತಾವು ಯಾರು ? ಏನು ಮಾಡುತ್ತಿರುವಿರಿ ? (ಒಮ್ಮೆಲೇ) ಅರೇ, ತಾವು ಒದ್ದೆಯಾಗಿದ್ದೀರಿ. ಈ ಕಂಬಳಿ ಹೊದ್ದುಕೊಳ್ಳಿ. ಶೀತವಾದೀತು.

ಬಾಲಮ್ : ನನ್ನ ಚಿಂತೆ ಬಿಡಿ, ನಾನು ಸ್ವಸ್ಥವಾಗಿದ್ದೇನೆ. ನಿಮಗೆ ಶೀತ ತಟ್ಟ ದಿರಲಿ ಬ್ರ್ಯಾಂಡಿಯ ಇನ್ನೊಂದು ಡೋಜ......

ಯುವತಿ : ಹಾಗಾದರೆ ಇದಕ್ಕೂ ಮೊದಲೊಮ್ಮೆ ನನಗೆ ಬ್ರ್ಯಾಂಡಿ ಕೊಟ್ಟಿದ್ದೀರಾ ?

ಬಾಲಮ್ : ಹೌದು ಕೇವಲ ಒಂದೆರಡು ಚಮಚದಷ್ಟು ಮಾತ್ರ.

ಯುವತಿ : ನನಗೆ ನಿದ್ರೆ ಬಂದಂತೆ ತೋರುತ್ತದೆ.

ಬಾಲಮ್ : ಹಾಗಾದರೆ ನೀವು ಒಂದಿಷ್ಟು ಮಲಗಿಕೊಳ್ಳಿ. ವಿಶ್ರಾಂತಿಯಿಂದ ಎಲ್ಲವೂ ಸರಿಹೋಗುತ್ತದೆ.

ಯುವತಿ : ಸರಿ, ನಾನು ಹೊರಟದ್ದು ಎಲ್ಲಿಗೆ ತಲುಪಿದ್ದು ಎಲ್ಲಿ. ಇದಕ್ಕೆ ಅನ್ನು– ತ್ತಾರೆ ಆಕಸ್ಮಿಕ. ಅಪರಿಚಿತಳಾದ ನಾನು ಅಪರಿಚಿತಳಂತೆ ಭಾಸವಾಗುತ್ತಿಲ್ಲ. ತಾವು ನನ್ನ ಜೀವ ಉಳಿಸಿದುದರಿಂದ ನನಗೆ ಹಾಗೆ ಅನಿಸುತ್ತಿರಬೇಕು...... ತಾವು ನನ್ನನ್ನು ಬದುಕಿಸಿ ಬಹು ದೊಡ್ಡ ಉಪಕಾರ ಮಾಡಿರುವಿರಿ... ತಮ್ಮ ಉಪಕಾರ......

(ಅನ್ನುತ್ತಾ ನಿದ್ರೆ ಹೋಗುತ್ತಾಳೆ)

ಬಾಲಮ್ : (ಕೆಲ ಸಮಯದ ನಂತರ) ಅಂತೂ ನಿದ್ರೆ ಹೋದಳು. ಈಕೆಗಿಲ್ಲಿ ಅಪರಿಚಿತಳೆಂದೂ ಭಾಸವಾಗುವದಿಲ್ಲ. ನಿರಾತಂಕವಾಗಿ ನಿದ್ರೆ ಹೋದಳು.

ವಿಶ್ರಾಂತಿಯಿಂದಾಗಿ ಈಕೆಗೆ ಅಪಘಾತದಿಂದ ಮಾನಸಿಕ ಅಘಾತ ಕಳೆದು ಹೋಗುತ್ತದೆ. ನಾನು ಸಮಯಕ್ಕಿಂತ ಮೊದಲೇ ಕಣ್ಣಿನ ಪಟ್ಟಿ ಬಿಚ್ಚಿಬಿಟ್ಟೆ. ಈಗ ನನ್ನ ತೊಂದರೆ. ಯಾತನೆಯ ಬಗ್ಗೆ ನಾನು ಯೋಚಿಸಬಾರದು. ಈಕೆಯ ಜೀವ ಉಳಿಯಿತು. ಆಪರೇಷನ್ನಿನಿಂದ ನನ್ನ ಕಣ್ಣು ಸರಿ ಹೋಗಿವೆ. ಲೈಟಿನ ಬೆಳಕು ಮಾತ್ರ ಕಣ್ಣಲ್ಲಿ ಚುಚ್ಚಿದಂತಾಗುತ್ತಿದೆ...ಆದರೆ ಈ ಸೌಂದರ್ಯ ರಾಶಿಯನ್ನು ನೋಡುವ ಸುಖ...ನನ್ನ ರಾಣಿಯನ್ನೇ ಹೋಲುವ ಚೆಲು ಮುಖ ಅಲ್ಲ....ಅಲ್ಲ...ನಾನು ಅನಾವಶ್ಯಕ ರಾಣಿ ಮುಖವನ್ನು ಸ್ಮರಿಸುತ್ತ ಲಿದ್ದೇನೆ ..ಛಳಿ ಎನಿಸುತ್ತಲಿದೆ... ಈ ಒದ್ದೆಯಾದ ಬಟ್ಟೆಗಳನ್ನು ಬದಲಿ ಸುತ್ತೇನೆ...

(ಫೇಡ ಔಟ...ಫೇಡ ಇನ-ರೋಮ್ಯಾಂಟಿಕ ಸಂಗೀತ)

ಬಾಲಮ್ : (ಕೆಲಹೊತ್ತಿನ ನಂತರ ಬರುತ್ತ) ಓ ಏನೆಂಥ ಮಧುರ ಹಾಗೂ ಆಳ ವಾದ ನಿದ್ರೆಯಿಂದ ನಿದ್ರಿಸುತ್ತಿಹಳು ..ನಿದ್ರಿಸುತ್ತಿದ್ದಾಳೆ. ರೂಪರಾಣಿ.... ರೂಪಾ ಸೌಂದರ್ಯದ ಅಧಿದೇವತೆ...ಜೀವನದ ತುಂಬ ಇವಳನ್ನು ನೋಡು ತ್ತಲೇ ಇರಬೇಕೆನಿಸುತ್ತಲಿದೆ...(ಸಾವರಿಸಿಕೊಂಡು) ಈ ಮುದುಕ ಬಾಲಮ್ ನಿಗೆ ಏನಾಗುತ್ತಲಿದೆ ? ಓ ಕಣ್ಣು ಹುಚ್ಚು ಮನಸ್ಸಿನ ಕುರುಡು ಆಸೆಗಳು ಏನನ್ನು ನೋಡುತ್ತಿರುವುದು ? ಓ ಮನಸ್ಸೇ, ನಾನು ಹೇಳುತ್ತಿರಲಿಲ್ಲವೆ ? ನನ್ನ ಕಣ್ಣು ಮುಚ್ಚು ಎಂದು ? ಬಾಗಿಲು ತೆರೆದಿದೆಯೆಂದು ಕಳ್ಳ ಒಳಗೇ ನುಗ್ಗಿದ...ಹೌದು ಮನಸ್ಸಿನ ಕಳ್ಳ...ಬಿಲ್ವಮಂಗಲನ ಮನಸ್ಸಿನ ಕಳ್ಳ. ಬಿಲ್ವಮಂಗಲನ ಮನದ ರಾಣಿ. ಸೌಂದರ್ಯದ ಚಕ್ರವರ್ತಿನಿ ರೂಪರಾಣಿ... ಚಿಂತಾಮಣಿ ನನ್ನ ಚಿಂತಾಮಣಿ...

ನಿನ್ನ ದರ್ಶನದ ಅಮೃತದಿ ಬಾಯಾರಿಕೆ
ಆರಿಸಲೆಂದು ನಿನ್ನ ದಾಸ ನಿನ್ನೆಡೆಗೆ ಬರುತ್ತಿದ್ದಾನೆ.

(ರೋಮ್ಯಾಂಟಿಕ್ ಸಂಗೀತ ಮೆಲ್ಲಗೆ ಇಲ್ಲವಾಗುತ್ತದೆ. ಅದರೊಂದಿಗೆ ಒಮ್ಮೆಲೇ ಯುವತಿಯ ಚೀರುವಿಕೆ).

ಯುವತಿ : (ಜೋರಾಗಿ) ಉಳಿಸಿ...ನನ್ನನ್ನು ಉಳಿಸಿ...

ಬಾಲಮ್ : (ಗಾಬರಿಯಾಗಿ) ಇಲ್ಲ...ಇಲ್ಲ ನಾನು ರೂಪಾದೇವಿ.
(ದೂರ ಪಾವಟಿಗೆಗಳ ವೇಗದಿಂದ ಬರುತ್ತಿರುವ ಸಪ್ಪಳ ಬಾಗಿಲು ಬಡಿ ಯುವ ಸಪ್ಪಳ)

ಡಾಕ್ಟರ : (ಬಾಗಿಲು ಬಡಿಯುತ್ತ) ಮಾಸ್ಟರಜಿ ಏನಾಯ್ತು ? ಕೋಣೆಯಲ್ಲಿ ಇನ್ನಾರಿದ್ದಾರೆ ? ಬಾಗಿಲು ತೆರೆಯಿರಿ.

(ಬಾಗಿಲು ತೆರೆಯುವ ಸಪ್ಪಳ ಅದರೊಂದಿಗೆನೇ ಬಿರುಗಾಳಿ ಮಳೆಯ ಸಪ್ಪಳ)

(ಒಮ್ಮೆಲೆ ಬಂದು) ಈ ಹುಡಗಿ ಇಲ್ಲ ? (ತಡೆದು ಚಕಿತನಾಗಿ) ಅರೇ ನೀವು ರೂಪಾದೇವಿ ಇಲ್ಲಿ ಹೇಗೆ ?

ಯುವತಿ : ತಾವು ನನ್ನನ್ನು ಗುರುತಿಸುತ್ತೀರಾ ?

ಡಾಕ್ಟರ : ಮುಂಬಯಿಯ ಸುಪ್ರಸಿದ್ಧ ಸಿನೆಮಾ ತಾರೆಯಾದ ತಮ್ಮನ್ನು ಯಾರು ಗುರುತಿಸುವುದಿಲ್ಲ. ಮೊನ್ನೆ ಮೊನ್ನೆ ತಾನೇ ತಮ್ಮ "ಸಿಂಗಾರ" ಫಿಲ್ಮ ನೋಡಿದೆ. ಆದರೆ ಆದರೆ ಇಲ್ಲಿ ಈ ಕೋಣೆಗೆ ಹೇಗೆ ಬಂದಿರಿ ? ಈಗ ತಾನೇ ಸಹಾಯಕ್ಕಾಗಿ ತಾವೇ ಕೂಗಿದಿರಾ ?

ಯುವತಿ : [ಆಶ್ಚರ್ಯ ಗಾಬರಿಯಿಂದ] ನನಗೆ ತಿಳಿಯದು. ಸ್ವಪ್ನ, ಭಯಾನಕ ಕನಸು ಬಿದ್ದಿತ್ತೆಂದು ತೋರುತ್ತದೆ. ಕಾರಿನ ಅಪಘಾತ... ಹೆದರಿಕೊಂಡ್ಮ ಚೀರಿರಬೇಕು. ನಿಜವಾಗಲೂ ನನ್ನ ಕಾರಿನ ಎಕ್ಸಿಡೆಂಟಾಗಿದೆ.

ಡಾಕ್ಟರ : ಎಕ್ಸಿಡೆಂಟಾ ? ತಮ್ಮ ಕಾರಿನದು ? ಯಾವಾಗ ? ಎಲ್ಲಿ ?

ಯುವತಿ : ಸುಮಾರು ರಾತ್ರಿ ಎರಡು ಗಂಟೆಗೆ ನಾನು ಸ್ಟುಡಿಯೋದಿಂದ ಒಂದು ದೃಶ್ಯದ ಶೂಟಿಂಗ್ ಮುಗಿಸಿಕೊಂಡು ಮನೆಗೆ ಹೊರಟಿದ್ದೆ. ಆಗ ಬರುತ್ತಿರುವಾಗ ದಾರಿಯ ಲೈಟಕಂಬಕ್ಕೆ ಡಿಕ್ಕಿ ಹೊಡೆಯಿತು...

ಡಾಕ್ಟರ : ತಮ್ಮ ಕಾರು ಡಿಕ್ಕಿ ಹೊಡೆಯಿತೇ ?

ಯುವತಿ : ಹೌದು. ಈ ಹಿರಿಯರು ಅಲ್ಲಿಗೆ ಬಂದು ನನಗೆ ಪ್ರಾಣದಾನ ಮಾಡಿದರು

ಡಾಕ್ಟರ : ಮಾಸ್ಟರಜಿಯವರೇ ?

ಯುವತಿ : ಹೌದು. ಇವರು ನಿಜವಾಗಿಯೂ ದೇವತಾಪುರುಷರು. ಇವರ ಉಪಕಾರ

ಡಾಕ್ಟರ : (ಒಮ್ಮೆಲೇ) ಇದೇನು. ನೀವು ಪಟ್ಟಿ ತೆಗೆದುಹಾಕಿದಿರಿ ಮಾಸ್ಟರಜಿ ?

ಬಾಲಮ್ : ಪಟ್ಟಿ ತೆಗೆಯದಿದ್ದರೆ ಇವರನ್ನು ಕಾರಿನಿಂದ ಇಲ್ಲಿಗೆ ಹೇಗೆ ತರುತ್ತಿದ್ದೆ ?

ಡಾಕ್ಟರ : ಓ ಇದೆಂಥ ಸುಖದಾಯಕ ಆಕಸ್ಮಿಕ ಯೋಗಾಯೋಗ. ನನ್ನ ಈ ಕೋಣೆಯಲ್ಲಿ ನಾಟಕ ಕಲೆಯ ಎರಡು ಅಮೂಲ್ಯ ಶಕ್ತಿಗಳು ಸಮಾವೇಶ

ಗೊಂಡಿವೆ. ಒಂದು ಇಂದಿನ ರಜತಪರದೆಯ ಚಕ್ರವರ್ತಿನಿ. ಇನ್ನೊಂದು ಕಳೆದ ದಿನಗಳಲ್ಲಿಯ ಕಂಪನಿ ನಾಟಕಲೋಕದ ಚಕ್ರವರ್ತಿ.

ಯುವತಿ : (ಆಶ್ಚರ್ಯದಿಂದ) ಯಾರು ? ಇವರೇ ?

ಡಾಕ್ಟರ : ಇವರ ನಿಜವಾದ ಹೆಸರು. ಬಾಲಮೋಹನ್ ಬಾಲಮ್ ಇಂದಿನಿಂದ ಇಪ್ಪತ್ತೈದು-ಮೂವತ್ತು ವರುಷಗಳ ಮೊದಲು ಹಿಂದುಸ್ತಾನಿ ಥಿಯೇಟರದ ಕೀರ್ತಿ ಇರುವಾಗ...ಮಾಸ್ಟರ ಬಾಲಮ್...

ಯುವತಿ : (ಚಕಿತಳಾಗಿ ಒಮ್ಮೆಲೇ) ಬಾಲಮ್? ಈ ಹೆಸರನ್ನು ನಾನು ಎಲ್ಲಿಯೋ ಯಾರಿಂದಲೋ ಕೇಳಿದ್ದೇನೆ.

ಡಾಕ್ಟರ : ಅವಶ್ಯ ಕೇಳಿರಬೇಕು. ಇಂದು ನಿಮಗಿರುವ ಕೀರ್ತಿ ಈ ಹಿಂದೆ ಇವರಿಗೂ ಇತ್ತು. ಇವರ ಜೊತೆಯಲ್ಲಿ ರಾಣಿ, ಪಾತ್ರ ಮಾಡುತ್ತಿದ್ದಳು.

ಯುವತಿ : (ಒಮ್ಮೆಲೇ) ಈಗ ನೆನಪಾಯ್ತು. ಇವರ ಹೆಸರನ್ನು ನಾನು ನನ್ನ ತಾಯಿಯಿಂದಲೇ ಕೇಳಿದ್ದೆ.

ಬಾಲಮ್ : (ಗಾಬರಿಯಿಂದ) ಏನಂದೆ ?

ಯುವತಿ : ನಾನು, ಆ ಸ್ಟೇಜ ಎಕ್ಟ್ರೆಸ್ ರಾಣಿಯ ಮಗಳೆಂಬುದನ್ನು ತಿಳಿದು ತಮಗೆ ಸಂತೋಷವಾಗಬಹುದು.

ಬಾಲಮ್ : (ಅಚ್ಚರಿಯಿಂದ) ಏನು ? ನೀವು ರಾಣಿಯ ಮಗಳೇ ? ಮಗಳು ರಾಣಿಯ ಮಗಳು ಓ ದೇವರೇ...

ಡಾಕ್ಟರ : ಸಂತೋಷ ಪಡುವದನ್ನು ಬಿಟ್ಟು ಇದೇನು ಮಾಸ್ಟರಜಿ ? ಇದೇನು ಕಣ್ಣೇಕೆ ಮುಚ್ಚಿಕೊಂಡಿರಿ ? ಪಟ್ಟಿ ಈಗಲೇ ಬಿಚ್ಚಬಾರದಿತ್ತು ಏನು ಕಣ್ಣಲ್ಲಿ ನೋವಾಗುತ್ತಿಲ್ಲವಷ್ಟೇ ?

ಬಾಲಮ್ : (ದುಃಖಿತಪ್ಪನಾಗಿ) ನೋವು ? ನೋವು ಕಣ್ಣಲ್ಲಿಲ್ಲ ಡಾಕ್ಟರರೇ. ನನ್ನ ಒಳಗೆ, ಮನದಲ್ಲಿ, ಚಿತ್ತದಲ್ಲಿ, ಆತ್ಮದಲ್ಲಿ ನೋವಿದೆ. 'ಓ ಬಿಲ್ವಮಂಗಲ'ನ ಆ ದೃಶ್ಯ. ಬಿಲ್ವಮಂಗಲ ಎಲ್ಲವನ್ನೂ ತೊರೆದು ಸನ್ಯಾಸಿಯಾಗಿ ದೇಶಾಂತರ ಹೊರಟು ಹೋಗುತ್ತಾನೆ. ಒಂದು ದಿನ ಸಾಧು ಸಂತರ ಸೇವೆಯನ್ನು ತ್ರಿಕರಣಪೂರ್ವಕ ಭಕ್ತಿಯಿಂದ ಮಾಡುವ ಶ್ರೀಮಂತನೋರ್ವನ ಮನೆಗೆ ಹೋದ. ಅಲ್ಲಿ ಶ್ರೀಮಂತನ ಅಪಾರ ಸುಂದರಿಯಾದ ಹೆಂಡತಿಯನ್ನು ಕಂಡು ಬಿಲ್ವಮಂಗಲ ಮೋಹಿತನಾದ, ಅವಳ ಬಯಕೆ ಹೊತ್ತು ಶ್ರೀಮಂತನ

ಮನೆಯ ಬಾಗಿಲಲ್ಲಿ ಕುಳಿತ. ದೇವರೇ ಈ ವೇಷದಲ್ಲಿ ತನ್ನ ಭಕ್ತಿ ಪರೀಕ್ಷೆಗಾಗಿ ಬಂದಿರಬಹುದೆಂದು ತಿಳಿದ ಶ್ರೀಮಂತ ಅವನ ಬಯಕೆಯನ್ನು ಕೇಳಿ ತಿಳಿದು ತನ್ನ ಧರ್ಮಪತ್ನಿಯನ್ನೂ ಒಪ್ಪಿಸಿದ...ಹಾಗೂ...

(ಥಿಯೆಟರಿಕಲ್ ಸಂಗೀತ - ನಾಟಕದ ಆ ದೃಶ್ಯ)

ಪತ್ನಿ : (ದುಃಖದಿಂದ ಗದ್ಗದಿತಳಾಗಿ) ನನ್ನ ಮರ್ಯಾದೆ ನೀನೇ ರಕ್ಷಿಸು. ಓ ಸ್ವಾಮಿ, ನಾನು ಸಂಕಟದಲ್ಲಿದ್ದೇನೆ, ನೀನೇ ನನ್ನನ್ನು ರಕ್ಷಿಸು.

ಶ್ರೀಮಂತ : ನನ್ನ ಪ್ರಾಣವೇ, ದೇವರ ಮೇಲೆ ನಂಬಿಕೆ ಇರಿಸಿ ಸಾಧುವಿನ ಆದರಾತಿಥ್ಯ ಮಾಡು. ದೇವರು ನಿನ್ನ ಮಾನರಕ್ಷಣೆ ಮಾಡಿಯೇ ಮಾಡುತ್ತಾನೆ... ಸಾಧು ಮಹಾರಾಜ ಈ ಪರ್ಯಂಕದ ಮೇಲೆ ಕುಳಿತುಕೊಳ್ಳಿ, ಇದೋ ತಮ್ಮ ಸೇವೆಗಾಗಿ ಸಿದ್ಧಳಿದ್ದಾಳೆ, ನನ್ನ ಈ ಪತ್ನಿ, ತಮ್ಮ ಸೇವಕಿ, ನಾನು ಹೋಗುತ್ತೇನೆ.

(ಹೋಗುತ್ತಾನೆ)

ಬಿಲ್ವಮಂಗಲ : ಸುಂದರ... ಅತೀ ಸುಂದರ...

ಪತ್ನಿ : ನನ್ನ ಮಾನ ರಕ್ಷಿಸಿ ಸ್ವಾಮಿ, ನಾನು ಸಂಕಟದಲ್ಲಿದ್ದೇನೆ. (ಒಮ್ಮೆಲೇ) ಅರೇ,ಈ ಸಾಧು ಮಹಾರಾಜರಿಗೇನಾಯ್ತು ಏನೋ ಬಡಬಡಿಸುತ್ತಿದ್ದಾರೆ...

ಬಿಲ್ವಮಂಗಲ : (ಸ್ವಗತ) ಓ ನಿರ್ಭಾಗ್ಯ ಬಿಲ್ವಮಂಗಲ. ನಿನ್ನ ಈ ಕಾಲುಗಳು ನಿನ್ನನ್ನು ಬೆಳಕಿನೆಡೆಗೆ ಆನಂದದೆಡೆಗೆ ಕರೆದೊಯ್ಯುತ್ತಿದ್ದವು. ಆದರೆ ನನ್ನ ಈ ಕಣ್ಣುಗಳು ದುಃಖದಿಂದ ತುಂಬಿದ ನರಕದ ದಾರಿಯನ್ನು ಅನುಸರಿಸುತ್ತಿವೆ. ಏನು ಈಗಲೂ ನೀನು ಈ ಕಣ್ಣುಗಳನ್ನು ನಿನ್ನ ಗೆಳೆಯರೆಂದು ತಿಳಿಯುವೆಯಾ ? ಇವು ಯಾವಾಗಲೂ ಗೆಳೆಯನನ್ನು ವೈರಿಯನ್ನಾಗಿ. ವೈರಿಯನ್ನು ಗೆಳೆಯನನ್ನಾಗಿಯೇ ಕಂಡಿವೆ. ಕಿಲ್ಲೆಯ ಈ ಚೌಕೀದಾರ ಯಾವಾಗಲೂ ಮೋಸ ಮಾಡಿದ್ದಾನೆ. ತನ್ನ ಕಿಟಕಿಯಿಂದ ಒಳಗೆ ಕಳ್ಳರನ್ನು ಹೋಗಿಸುತ್ತಾನೆ. ಆತ್ಮ ಸಂಪತ್ತನ್ನು ಕೊಳ್ಳೆ ಹೊಡೆಯಲು ಹಚ್ಚುತ್ತಾನೆ. [ಪ್ರಕಟ] ತಾಯೇ. ಎರಡು ಸೂಜಿಗಳು ಸಿಗಬಹುದೇ ?

ಪತ್ನಿ : ಈಗಲೇ ತಂದೆ ಮಹಾರಾಜ (ಕೆಲಸಮಯದ ನಂತರ) ಇದೋ ತಕ್ಕೊಳ್ಳಿ ಮಹಾರಾಜ ಇವನ್ನು ಏನು ಮಾಡುವಿರಿ ?

ಬಿಲ್ವ : ಆತ್ಮ ಪರಮಾತ್ಮನ ಸಂಬಂಧ ಕಡಿದು ಹೋಗಿದೆ ತಾಯಿ. ದಾಮೋದರ ನಾಮವೆಂಬ ದಾರದಿಂದ ಹೊಲಿದು ಆ ಸಂಬಂಧವನ್ನು ಮತ್ತೆ ಚಿರಗೊಳಿಸ ಬೇಕೆಂದಿರುವೆ.

ಪತ್ನಿ : ನನಗರ್ಥವಾಗಲಿಲ್ಲ ಮಹಾರಾಜ, ಬಿಡಿಸಿ ಹೇಳಿ.

ಬಿಲ್ವ : ನಾನು ನನ್ನ ಕುಕರ್ಮಗಳೊಂದಿಗೆ ಹೋರಾಡಿ ಅವನ್ನು ಗೆಲಿದೆ. ವಿಚಾರ ದೊಂದಿಗೆ ಹೋರಾಡಿ ವಿಜಯಿಯಾದೆ. ಮನಸ್ಸಿನೊಂದಿಗೆ ಹೋರಾಡಿದೆ. ಅಲ್ಲಿಯೂ ನನಗೆ ಜಯಸಿಕ್ಕಿತ್ತು. ಆದರೆ ಕತ್ತಲೆಯಲ್ಲಿ ಮೋಸಮಾಡುವ ಈ ಕಣ್ಣುಗಳನ್ನು ಜಯಿಸುವುದಾಗಲಿಲ್ಲ. ಆದರೆ ನಾನು ಇಂದು ಶಪಥ ತೊಟ್ಟಿ ದ್ದೇನೆ, ಕಣ್ಣುಗಳನ್ನು ಜಯಿಸುವೆನೆಂದು. ಈ ಹೋರಾಟ ಕೊನೆಯದು. ಎಲ್ಲವನ್ನೂ ಮುಗಿಸುವ ಹೋರಾಟ. ಇದೇ ಅಳು, ಇದೇ ನೋವು, ಇದೇ ದುಃಖ ನೀಡುವುದು. ಇದೇ ಇಲ್ಲದಿದ್ದರೆ ಯಾವ ಯಾತನೆಯೂ ಇಲ್ಲ.

(ಕಣ್ಣಲ್ಲಿ ಸೂಜಿ ಚುಚ್ಚಿಕೊಳ್ಳುತ್ತಾನೆ.)

ಪತ್ನಿ : (ಕೂಗುತ್ತ) ಓಡಿಬನ್ನಿ...ಓಡಿಬನ್ನಿ...ಸಾಧು ಮಹಾರಾಜರು ತಮ್ಮ ಕಣ್ಣುಗಳಲ್ಲಿ ಸೂಜಿ ಚುಚ್ಚಿಕೊಂಡು ಗುಡ್ಡೆ ಒಡೆದುಕೊಂಡರು.

ಶ್ರೀಮಂತ : (ಬಂದು) ಸಾಧುಮಹಾರಾಜ ಇದನ್ನೇನು ಮಾಡಿದಿರಿ ?

ಬಿಲ್ವ : ಬಂಧು ಅಂಜಬೇಡ. ಈ ಅಪರಾಧಿ ಕಣ್ಣುಗಳು ಇಂಥ ಶಿಕ್ಷೆಗೇ ಯೋಗ್ಯ ವಾಗಿದ್ದವು. (ನಾಟಕದ ಫ್ಲ್ಯಾಶ್ ಮುಕ್ತಾಯವಾಗುತ್ತದೆ).

ಬಾಲಮ್ : ಡಾಕ್ಟರ ಸಾಹೇಬ ಇಂದು ನನ್ನ ಈ ಕಣ್ಣುಗಳೂ ಅಪರಾಧ ಮಾಡಿವೆ.

ಯುವತಿ : ಇವರಿಗೇನಾಗಿದೆ ?

ಬಾಲಮ್ : ನನ್ನ ಒಳಗಿನ ಕಣ್ಣುಗಳು ತೆರೆದಿವೆ ಮಗಳೇ.

ಡಾಕ್ಟರ : (ಗಾಬರಿಯಿಂದ) ಕೊಂಚ ತಾಳಿ, ನಾನು ನಿಮ್ಮ ಕಣ್ಣುಗಳನ್ನು ಪರೀಕ್ಷೆ ಮಾಡುವೆ.

ಬಾಲಮ್ : ಇನ್ನೇನು ಪರೀಕ್ಷೆ ಮಾಡುವಿರಿ ಡಾಕ್ಟರ ಸಾಹೇಬ, ಕಣ್ಣನಲ್ಲಿಯ ಬೆಳಕು ಮಂದವಾಗುತ್ತಲಿದೆ.

ಡಾಕ್ಟರ : (ಚಿಂತಿತನಾಗಿ) ನೀವು ಎರಡು ದಿನ ಮೊದಲೇ ಪಟ್ಟಿ ಏಕೆ ಬಿಚ್ಚಿದಿರಿ. ಮಾಸ್ಟರಜಿ? ನಾನೀಗಲೇ ಔಷಧ ತರುತ್ತೇನೆ. (ಹೋಗಲು ಏಳುತ್ತಾನೆ.)

ಬಾಲವಮ್ : ನಿಲ್ಲಿ ಡಾಕ್ಟರ ಸಾಹೇಬ ಈ ಕಣ್ಣುಗಳಿಗಿನ್ನು ಔಪಾಧಿಯ ಅವಶ್ಯಕತೆ ಇಲ್ಲ. ಮಗಳ ಮೇಲೆ ಕೆಟ್ಟ ದೃಷ್ಟಿ ಬೀರುವ ಈ ಪಾಪಿ ಕಣ್ಣುಗಳ ಅವಶ್ಯಕತೆ ನನಗಿಲ್ಲ...ಬೇಕಿಲ್ಲ ಡಾಕ್ಟರ... ಈ ಕಣ್ಣುಗಳು ಬೇಕಿಲ್ಲ...

ಡಾಕ್ಟರ :
ಯುವತಿ : } ಮಾಸ್ಟರಜೀ

ಬಾಲವಮ್ : ಯಾವ ಕಣ್ಣುಗಳಿಗೆ ಒಳಿತು ಕೆಡುಕಗಳ ಪರಿವೆ ಇಲ್ಲವೋ ಅವು ಕಣ್ಣುಗಳಲ್ಲ ಅವು ಕೇವಲ ಘಾಯಗಳು…ಛಿದ್ರಗಳು...

[ಸಂಗೀತದೊಂದಿಗೆ ಮುಕ್ತಾಯ]

ಕನ್ನಡ ಅನುನಾಸಿಕಗಳ ಸ್ಪೆಕ್ಟ್ರೋಗ್ರಾಫಿಕ್ ವಿಶ್ಲೇಷಣೆ

● ಡಾ. ಎಚ್. ಎಂ. ಮಹೇಶ್ವರಯ್ಯ

ಅನುನಾಸಿಕತೆ ಕನ್ನಡದಲ್ಲಿ ವ್ಯಂಜನಘಟಕವಾಗಿ ಬರಬಹುದು. ಇಲ್ಲವೆ ಅವಿಭಾಜಕಘಟಕವಾಗಿ ಬರಬಹುದು.[1] ಸ್ವರಗಳೊಡನೆ ಕೂಡಿ ಬರುವ ಅನುನಾಸಿಕತೆ ಭಾಷೆಯ ಅನೇಕ ಸಂದರ್ಭದಲ್ಲಿ ಬರುತ್ತದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಪದಾದಿ ಮತ್ತು ಪದಮಧ್ಯದಲ್ಲಿ ಬರುವ ನ್, ಮ್‌ಗಳನ್ನೂ ಪದ ಮಧ್ಯದಲ್ಲಿ ಬರುವ ಣ್ ವ್ಯಂಜನವನ್ನೂ ಹಾಗೂ ಪದಮಧ್ಯದಲ್ಲಿ ಬರುವ ಸಜಾತೀಯ ಅನುನಾಸಿಕ ದೀರ್ಘ ವ್ಯಂಜನ (ದ್ವಿತ್ವ)ಗಳಾದ ನ್‌ನ್, ಮ್‌ಮ್, ಣ್‌ಣ್‌ಗಳನ್ನೂ ಪದಗಳ ಸಮೇತ ಆಯ್ದುಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ದತ್ತ (Data) :

ಪದಾದಿ ಮತ್ತು ಪದಮಧ್ಯದಲ್ಲಿ ಬರುವ ಅನುನಾಸಿಕ ಧ್ವನಿಗಳನ್ನು ಆಯ್ದುಕೊಂಡು ಅವುಗಳ ಸ್ಪೆಕ್ಟ್ರೋಗ್ರಾಮ್‌ಗಳನ್ನು ತಯಾರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಮ್

ಮ್—		—ಮ್—	
ಮರಿ	(ಮ್–)	ಉಮ	(–ಮ್–)
ಮಾರಿ	(ಮ್–)	ಆಮೆ	(–ಮ್–)
ಮಿರಿ	(ಮ್–)	ಕಾಮಿ	(–ಮ್–)
ಮೆರೆ	(ಮ್–)	ಕಾಮು	(–ಮ್–)

1. Nasality could be either subsegmental, as ni languages which allow pre-and post-nasalize consonants or, supra-segmental, where languages allow nasal 'prosodies' as in Guarani, Terena & Desano- Surabhi Bharati CIEFL, Hyderabad.

ಮ್‌ಮ್

—ಮ್‌ಮ್—

ಅಮ್ಮ (–ಮ್‌ಮ್–)
ಒಮ್ಮೆ (–ಮ್‌ಮ್–)

ನ್

ನ್–

ನರಿ (ನ್–)
ನಾರಿ (ನ್–)
ನೆಲ (ನ್–)
ನೀರು (ನ್–)

–ನ್–

ಕೊನೆ (–ನ್–)
ಕೋನೆ (–ನ್–)

ನ್‌ನ್

—ನ್‌ನ್—

ದೊನ್ನೆ (–ನ್‌ನ್–)

ಣ್

—ಣ್—

ಹಣೆ (–ಣ್–)
ಗಿಣಿ (–ಣ್–)
ಮೊಣ (–ಣ್–)
ಕೋಣೆ (–ಣ್–)

ಣ್‌ಣ್

—ಣ್‌ಣ್—

ಉಣ್ಣೆ (–ಣ್‌ಣ್–)
ಸುಣ್ಣ (–ಣ್‌ಣ್–)
ಗಿ[illegible] (–ಣ್‌ಣ್–)

ವಿವರ :

ಪದದ ಆದಿ ಮತ್ತು ಪದದ ಮಧ್ಯೆ ಬರುವ ‘ಮ್’ ಅನುನಾಸಿಕ ಧ್ವನಿಗಳ ತುಲನೆಯನ್ನು ಪಟ್ಟಿ-೧ರಲ್ಲಿಯೂ ಪದದ ಆದಿ ಮತ್ತು ಪದದ ಮಧ್ಯೆ ಬರುವ ‘ನ್’ ಅನುನಾಸಿಕ ಧ್ವನಿಗಳ ತುಲನೆಯನ್ನು ಪಟ್ಟಿ-೨ರಲ್ಲಿಯೂ ಪದದ ಮಧ್ಯೆ ಬರುವ ಅಘೋಷ ಸ್ಪರ್ಶವ್ಯಂಜನಗಳ ಅವಧಿಯ ತುಲನೆಯನ್ನು ಪಟ್ಟಿ-೪ರಲ್ಲಿಯೂ ಹಾಗೂ ಪದದ ಮಧ್ಯೆ ಬರುವ ದೀರ್ಘ ಅನುನಾಸಿಕ ಮತ್ತು ದೀರ್ಘ ಅಘೋಷ ಸ್ಪರ್ಶ ವ್ಯಂಜನಗಳ ತುಲನೆಯನ್ನು ಪಟ್ಟಿ-೫ರಲ್ಲಿಯೂ ಕೊಡಲಾಗಿದೆ.

ಪದದ ಆದಿ ಹಾಗೂ ಪದಮಧ್ಯ ಬರುವ
‘ಮ್’ ಅನುನಾಸಿಕದ ತುಲನೆ :

ಪಟ್ಟಿ—೧

ಧ್ವನಿಘಟಕ	ಧ್ವನಿಗಳ ಸಂಖ್ಯೆ	ಕನಿಷ್ಠ ಅವಧಿ	ಗರಿಷ್ಠ ಅವಧಿ	ಸರಾಸರಿ	ವ್ಯತ್ಯಾಸ
ಮ್—	೪	೫೦ ಮಿ.ಸೆ.	೭೫ ಮಿ.ಸೆ.	೬೧.೩ ಮಿ.ಸೆ.	೨.೫ ಮಿ. ಸೆ
—ಮ್—	೪	೬೦ ಮಿ.ಸೆ	೭೫ ಮಿ.ಸೆ.	೬೩.೮ ಮಿ.ಸೆ.	

ಪಟ್ಟಿ-೧ರಲ್ಲಿ ಪದಾದಿಯಲ್ಲಿ ಬರುವ ಮ್- ಅನುನಾಸಿಕದ ಸರಾಸರಿ ಅವಧಿ ೬೧.೩ ಮಿ.ಸೆ. ಆಗಿದೆ. ಪದದ ಮಧ್ಯೆ ಬರುವ —ಮ್— ಅನುನಾಸಿಕದ ಸರಾಸರಿ ಅವಧಿ ೬೩.೮ ಮಿ.ಸೆ. ಆಗಿದೆ. ಪದಮಧ್ಯದಲ್ಲಿ ಬರುವ —ಮ್— ಅನುನಾಸಿಕ ಧ್ವನಿ ಪದಾದಿಯಲ್ಲಿ ಬರುವ ಮ್-ಅನುನಾಸಿಕಕ್ಕಿಂತ ೨.೫ ಮಿ. ಸೆ. ದೀರ್ಘವಾಗಿದೆ.

ಮ್— > —ಮ್—

ಪದದ ಆದಿ ಹಾಗೂ ಪದಮಧ್ಯ ಬರುವ
'ನ್' ಅನುನಾಸಿಕ ಧ್ವನಿಗಳ ತುಲನೆ :

ಪಟ್ಟಿ—೨

ಧ್ವನಿಘಟಕ	ಧ್ವನಿಗಳ ಸಂಖ್ಯೆ	ಕನಿಷ್ಠ ಅವಧಿ	ಗರಿಷ್ಠ ಅವಧಿ	ಸರಾಸರಿ	ವ್ಯತ್ಯಾಸ
ನ್—	೪	೫೦ ಮಿ.ಸೆ.	೮೨ ಮಿ.ಸೆ.	೬೩ ಮಿ.ಸೆ.	೦.೫ ಮಿ.ಸೆ.
—ನ್—	೨	೫೫ ಮಿ.ಸೆ.	೭೦ ಮಿ.ಸೆ.	೬೨.೫ ಮಿ.ಸೆ.	

ಪಟ್ಟಿ—೨ರಲ್ಲಿ ಪದಾದಿಯಲ್ಲಿ ಬರುವ ನ್— ಅನುನಾಸಿಕದ ಸರಾಸರಿ ಅವಧಿ ೬೩ ಮಿ.ಸೆ. ಆಗಿದೆ. ಪದದ ಮಧ್ಯೆ ಬರುವ —ನ್— ಅನುನಾಸಿಕದ ಸರಾಸರಿ ಅವಧಿ ೬೨.೫ ಮಿ.ಸೆ. ಆಗಿದೆ. ಪದದ ಮಧ್ಯೆ ದೊರೆಯುವ ಅನುನಾಸಿಕ —ನ್— ಗಿಂತ ಪದಾದಿಯಲ್ಲಿ ದೊರೆಯುವ ಅನುನಾಸಿಕ ನ್–ದ ಅವಧಿ ೦.೫ ಮಿ.ಸೆ.ಅಧಿಕವಾಗಿದೆ.

—ನ್— > ನ್—

ಪದದ ಮಧ್ಯದಲ್ಲಿ ಬರುವ ಅನುನಾಸಿಕ ಮತ್ತು ಅಘೋಷ ಸ್ಪರ್ಶವ್ಯಂಜನಗಳ ಅವಧಿಯ ತುಲನೆ :

ಪಟ್ಟಿ—೪

ಧ್ವನಿಘಟಕ	ಸರಾಸರಿ ಅವಧಿ	ಧ್ವನಿಘಟಕ	ಸರಾಸರಿ ಅವಧಿ	ವ್ಯತ್ಯಾಸ
—ನ್—	೬೨.೫ ಮಿ.ಸೆ.	–ಪ್–	೮೧.೨ ಮಿ.ಸೆ.	
		–ತ್–	೯೯.೦ ಮಿ.ಸೆ.	
		–ಟ್–	೭೦.೦ ಮಿ.ಸೆ.	
		–ಕ್–	೧೦೦.೦ ಮಿ.ಸೆ.	
—ಮ್—	೬೩.೮ ಮಿ.ಸೆ.	–ಪ್–	೮೧.೨ ಮಿ.ಸೆ.	
		–ತ್–	೯೯.೦ ಮಿ.ಸೆ.	
		–ಟ್–	೭೦.೦ ಮಿ.ಸೆ.	
		–ಕ್–	೧೦೦.೦ ಮಿ.ಸೆ.	
—ಣ್—	೩೫ ಮಿ.ಸೆ.	–ಪ್–	೮೧.೨ ಮಿ.ಸೆ.	
		–ತ್–	೯೯.೦ ಮಿ.ಸೆ.	
		–ಟ್–	೭೦.೦ ಮಿ.ಸೆ.	
		–ಕ್–	೧೦೦.೦ ಮಿ.ಸೆ.	

ಪದದ ಮಧ್ಯದಲ್ಲಿ ಬರುವ ದೀರ್ಘ ಅನುನಾಸಿಕ ಮತ್ತು ದೀರ್ಘ ಅಘೋಷ ಸ್ಪರ್ಶವ್ಯಂಜನಗಳ ತುಲನೆ:

ಪಟ್ಟಿ–೫

ಧ್ವನಿಘಟಕ	ಸರಾಸರಿ ಅವಧಿ	ಧ್ವನಿಘಟಕ	ಸರಾಸರಿ ಅವಧಿ	ವ್ಯತ್ಯಾಸ
—ನ್ನ್—		–ಪ್ಪ್–	೧೪೩.೦ ಮಿ.ಸೆ.	
		–ತ್ತ್–	೨೦೮.೦ ಮಿ.ಸೆ.	
		–ಟ್ಟ್–	೧೯೬.೨ ಮಿ.ಸೆ.	
		–ಕ್ಕ್–	೧೮೬.೦ ಮಿ.ಸೆ.	
—ಮ್ಮ್ —	೧೫೦ ಮಿ.ಸೆ.	–ಪ್ಪ್–	೧೪೩.೦ ಮಿ.ಸೆ.	
		–ತ್ತ್–	೨೦೮.೦ ಮಿ.ಸೆ.	
		–ಟ್ಟ್–	೧೯೬.೨ ಮಿ.ಸೆ.	
		–ಕ್ಕ್–	೧೮೬.೦ ಮಿ.ಸೆ.	
—ಣ್ಣ್—	೧೫೦ ಮಿ.ಸೆ.	–ಪ್ಪ್–	೧೪೩.೦ ಮಿ.ಸೆ.	
		–ತ್ತ್–	೨೦೮.೦ ಮಿ.ಸೆ.	
		–ಟ್ಟ್–	೧೯೬.೨ ಮಿ.ಸೆ.	
		–ಕ್ಕ್–	೧೮೬.೦ ಮಿ.ಸೆ.	

ಪದಾದಿಯಲ್ಲಿ ಬರುವ ಅನುನಾಸಿಕ
ಮತ್ತು ಪದಾದಿಯಲ್ಲಿ ಬರುವ ಸ್ವರಗಳ ತುಲನೆ :

ಪಟ್ಟಿ–೬

ಧ್ವನಿಘಟಕ	ಸರಾಸರಿ ಅವಧಿ	ಧ್ವನಿಘಟಕ	ಸರಾಸರಿಅವಧಿ	ವ್ಯತ್ಯಾಸ
ನ್—	೬೩ಮಿ.ಸೆ.	ಇ–	೧೧೧.೩ ಮಿ.ಸೆ	
		ಎ–	೧೦೩.೦ ಮಿ.ಸೆ	
		ಅ–	೮೦.೦ ಮಿ.ಸೆ	
		ಉ–	೧೧೦.೦ ಮಿ.ಸೆ	
		ಒ–	೧೩೦.೦ ಮಿ.ಸೆ	
ಮ್—	೬೧.೩ ಮಿ.ಸೆ.	ಇ–	೧೧೧.೩ ಮಿ.ಸೆ.	
		ಎ–	೧೦೩.೦ ಮಿ.ಸೆ.	
		ಅ–	೮೦.೦ ಮಿ.ಸೆ.	
		ಉ–	೧೧೦.೦ ಮಿ.ಸೆ.	
		ಒ–	೧೩೦.೦ ಮಿ.ಸೆ.	

ಪದಮಧ್ಯದಲ್ಲಿ ಬರುವ ಅನುನಾಸಿಕ ಮತ್ತು ಪದಮಧ್ಯದಲ್ಲಿ ಬರುವ ಸ್ವರಗಳ ತುಲನೆ :

ಪಟ–೭

ಧ್ವನಿಘಟಕ	ಸರಸರಿ ಅವಧಿ	ಧ್ವನಿಘಟಕ	ಸರಾಸರಿ ಅವಧಿ	ವ್ಯತ್ಯಾಸ
—ನ್—	೬೨.೫ ಮಿ.ಸೆ.	–ಇ–	೨೯.೦ ಮಿ.ಸೆ.	
		–ಎ–	೧೦೨.೦ ಮಿ.ಸೆ.	
		–ಅ–	೧೦೦.೨ ಮಿ.ಸೆ.	
		–ಉ–	೮೫ ಮಿ.ಸೆ.	
		–ಒ–	೮೪ ಮಿ.ಸೆ.	
—ವ್—	೬೩.೮ ಮಿ.ಸೆ.	–ಇ–	೭೯.೦ ಮಿ.ಸೆ.	
		–ಎ–	೧೦೨.೦ ಮಿ.ಸೆ.	
		–ಅ–	೧೦೦.೨ ಮಿ.ಸೆ.	
		-ಉ–	೮೫ ಮಿ.ಸೆ.	
		–ಒ–	೮೪ ಮಿ.ಸೆ.	
—ಣ್—	೩೫. ಮಿ.ಸೆ.	–ಇ–	೭೯.೦ ಮಿ.ಸೆ.	
		–ಎ–	೧೦೨.೦ ಮಿ.ಸೆ.	
		–ಅ–	೧೦೦.೨ ಮಿ.ಸೆ.	
		–ಉ–	೮೫ ಮಿ.ಸೆ.	
		–ಒ–	೮೪ ಮಿ.ಸೆ.	

ವಿಶ್ಲೇಷಣೆಯ ಸಾರರೂಪ :

೧. ಪದಾದಿಯಲ್ಲಿ ಬರುವ ಮ್–ದ ಅವಧಿಗಿಂತ ಪದಮಧ್ಯದಲ್ಲಿ ಬರುವ–ಮ್–ದ ಅವಧಿ ಅಧಿಕವಾಗಿರುತ್ತದೆ

೨. ಪದಾದಿಯಲ್ಲಿ ಬರುವ ನ್–ದ ಅವಧಿಗಿಂತ ಪದಮಧ್ಯದಲ್ಲಿ ಬರುವ–ನ್–ದ ಅವಧಿ ಕಡಿಮೆ ಇದೆ.

೩. ಪದಮಧ್ಯದಲ್ಲಿ ಬರುವ ಹ್ರಸ್ವ ಅನುನಾಸಿಕ ವ್ಯಂಜನಗಳಿಗಿಂತ ದೀರ್ಘ ಅನುನಾಸಿಕ ವ್ಯಂಜನಗಳ ಅವಧಿ ಅಧಿಕವಿರುತ್ತದೆ.

ಚೆನ್ನಬಸವಣ್ಣನವರ ಅಪ್ರಕಟಿತ ವಚನಗಳು

● ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನೆಗೆ ನೂರು ವರ್ಷ ತುಂಬಿದವು. ಈ ಅವಧಿಯಲ್ಲಿ ಅನೇಕ ಸಂಸ್ಥೆಗಳು, ವಿದ್ವಾಂಸರು ದುಡಿಯುವುದರ ಮೂಲಕ

೧. ಪ್ರಾರಂಭದ ಪ್ರಯತ್ನಗಳ ಘಟ್ಟ

೨. ವಿಜಾಪುರದ ಶಿವಾನುಭವ ಗ್ರಂಥಮಾಲೆಯ ಘಟ್ಟ

೩. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಘಟ್ಟ

೪. ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯ ಘಟ್ಟ

ಎಂಬ ನಾಲ್ಕು ಘಟ್ಟಗಳಲ್ಲಿ ಈ ಸಾಹಿತ್ಯಪ್ರಕಾರ ಕ್ರಮ ಕ್ರಮವಾಗಿ ಬೆಳಕಿಗೆ ಬಂದಿದೆ. ಇದರಲ್ಲಿ ಚೆನ್ನಬಸವಣ್ಣನವರ ವಚನಗಳ ವಿಷಯವಾಗಿ ಡಾ. ಫ. ಗು. ಹಳಕಟ್ಟಿ, ಡಾ. ಆರ್. ಸಿ. ಹಿರೇಮಠ ಅವರು ಮಾಡಿದ ಕಾರ್ಯ ಶ್ಲಾಘನೀಯವಾದುದು. ಆ ಬಳಿಕ ನಡೆದ ಗಮನಾರ್ಹ ಪ್ರಯತ್ನವೆಂದರೆ ನನ್ನ "ಚೆನ್ನಬಸವಣ್ಣನವರ ಷಟ್ಸ್ಥಲ ವಚನ ಮಹಾಸಂಪುಟ"ದ ಸಂಪಾದನೆ ಮತ್ತು ಪ್ರಕಟನೆ.[೧] ಇದರ ಮೂಲಕ ಸುಮಾರು ೮೦ ಹೊಸವಚನಗಳು ಮೊದಲಸಲ ಬೆಳಕಿಗೆ ಬಂದುದು ವಿಶೇಷ ಸಂಗತಿಯಾಗಿದೆ. ಈಗ ಮತ್ತೆ ನನ್ನ ಗಮನಕ್ಕೆ ಬಂದ ೧೮ ಹೊಸ ವಚನಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇನೆ.

'ಚೆನ್ನದಣ್ಣಾಯಕರ ವಚನ' ಹೆಸರಿನ ತಾಳೆಪ್ರತಿಯೊಂದು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಸಿಗುತ್ತದೆ. ಇದು ಮದ್ರಾಸ ಓರಿಯಂಟಲ್ ರೀಸರ್ಚ ಲೈಬ್ರರಿಯಿಂದ ಬಂದ ಪ್ರತಿ. ತುಂಬ ಖಿಲವಾಗಿರುವ ಇದು ಪ್ರಸಾದಿಸ್ಥಲದ ಪೂರ್ವಾರ್ಧದ ವರೆಗೆ ಮಾತ್ರ ಇದೆ. ಈ ಅಪೂರ್ಣಪ್ರತಿಯ ಸ್ಥಲವ್ಯವಸ್ಥೆಯಲ್ಲಿ ಒಂದು ಕ್ರಮ ಕಂಡುಬರುವುದಿಲ್ಲ. ಅಂದರೆ ಭಕ್ತಸ್ಥಲ, ಮಾಹೇಶ್ವರಸ್ಥಲಗಳಲ್ಲಿ ಕಾಣಸಿಗದ ಅವಾಂತರಸ್ಥಲಗಳು ಪ್ರಸಾದಿಸ್ಥಲದಲ್ಲಿ ಮಾತ್ರ ಕಂಡುಬರುತ್ತವೆ. ಮೇಲೆ ಸೂಚಿಸಿದಂತ ೧೮ ವಚನಗಳಿರುವುದು ಈ ಪ್ರತಿಯಲ್ಲಿ.

---

೧. ಪ್ರಕಾಶಕರು : ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನಮಠ, ಗದಗ

ಕರ್ನಾಟಕ ಕವಿಚರಿತೆಯ ದ್ವಿತೀಯ ಸಂಪುಟದ (೧೯೭೩) ೩೮೫ನೆಯ ಪುಟದಲ್ಲಿ ಚೆನ್ನವೀರಣ್ಣೊಡೆಯನು (೧೬೫೦) "ಮಿಶ್ರಪಟ್ಸ್ಥಲದ ವಚನ" ಹೆಸರಿನ ಕೃತಿಯಲ್ಲಿ ಚೆನ್ನಬಸವಣ್ಣನವರ ೨೫೦ ವಚನಗಳನ್ನು ಸಂಕಲಿಸಿರುವುದಾಗಿ ಹೇಳಲಾಗಿದೆ. ಇದು ಈಗ ಮೇಲೆ ಸೂಚಿಸಿದ ಅಪೂರ್ಣ ಕೃತಿ ಇದರಿಂದ ಭಿನ್ನವೋ ಅಭಿನ್ನವೋ ಸ್ಪಷ್ಟವಾಗುವುದಿಲ್ಲ. ಅದೇನೇ ಇದ್ದರೂ ಈ ಅಪೂರ್ಣಕೃತಿಯಲ್ಲಿ ೧೮ ಹೊಸ ವಚನಗಳಿರುವುದು ವಿಶೇಷ. ಶುದ್ಧ–ಅಶುದ್ಧ, ಪೂರ್ಣ–ಅಪೂರ್ಣ ರೂಪದಲ್ಲಿರುವ ಇವುಗಳನ್ನು ತಕ್ಕವಂಟ್ಟಿಗೆ ಪರಿಷ್ಕರಿಸಿ ಇಲ್ಲಿ ಕೊಡಲಾಗಿದೆ.

೧. ಕರ್ಮಿಗೆ ಹಾವಾಗಿ ತೋಱುವ,
ಕರ್ಮಿಗೆ ಹಲ್ಲಿಯಾಗಿ ತೋಱುವ,
ಕರ್ಮಿಗೆ ಮೀನಾಗಿ ತೋಱುವ.
ಕೂಡಲ ಚೆನ್ನಸಂಗನ ಶರಣಂಗೆ
ಲಿಂಗಜಂಗಮವಾಗಿ ತೋಱುವನಯ್ಯಾ, ಬಸವಣ್ಣ. ॥೭॥

೨. ನಿಂದಾಸ್ತುತಿಗಳ ಮಾಡುವ ದುರ್ವ್ಯಸನಿಗಳ,
ದುರಾಚಾರಗಳಲ್ಲಿ ನುಡಿವವರುಗಳ,
ಭಕ್ತರೆಂದೂ ಲಿಂಗವಂತರೆಂದೂ
ಪತಿಕರಿಸರು ನೋಡಯ್ಯಾ.
ದೂಷಣೆಯೆ ಪಾತಕವೆಂದುದಾಗಿ,
ಭಕ್ತರ ನಿಂದಿಸಿ ಪಾತಕದಲ್ಲಿ ಬೀಳುವ
ಪಾಕುಳರ ನಿಂದಿಸಿ, ಮುಖವ ನೋಡಲಾಗದು.
ಕೂಡಲ [ಚೆನ್ನ] ಸಂಗಮದೇವಾ. ॥೪೨॥

೩. ಲಿಂಗಕಲ್ಲದೆ ಇಂಬುಗೊಡೆನು, ಎನ್ನ ಮನವ.
ಜಂಗಮಕಲ್ಲದೆ ಇಂಬುಗೊಡೆನು, ಎನ್ನ ಧನವ.
ಪ್ರಸಾದಕಲ್ಲದೆ ಇಂಬುಗೊಡೆನು,ಎನ್ನ ಜಿಹ್ವೆಯ.
ಸಕಲ ಇಂದ್ರಿಯಂಗಳನು ತ್ರಿವಿಧದಲ್ಲಿಯೆ
ತಂದು ನಿಲ್ಲಿಸುವೆನು.
ಇದುಕಾರಣ
ಕೂಡಲ ಚೆನ್ನಸಂಗಮದೇವರಪ್ಪಯಿಸಿಪ್ಪ ಕಾರಣದಿಂದ
ಎನ್ನಱಿವ ಅನ್ಯರಿಗೆ ಬೀಯಮಾಡಲಾಱೆನು. ॥೪೯॥

೪. ದೃಷ್ಟಲಿಂಗ ಸಾಕ್ಷಿಯಾಗಿ ಶ್ರೀಗುರು
ಲಿಂಗವ ನಿತ್ಯನೇಮವ ಮಾಡೆಂದು ಹೇಳಿಕೊಟ್ಟನಲ್ಲದೆ
ಕಿತ್ತು ನುಂಗಿ ಎಂದು ಹೇಳಿಕೊಟ್ಟನೆ, ಶ್ರೀಗುರು ಲಿಂಗವನು ?
ನೆಟ್ಟನಾ ದ್ರೋಹಿಗಳ ಕಂಡಡೆ
ಕೂಡಲ ಚೆನ್ನಸಂಗಯ್ಯಾ ... ... ಕರ್ಮಿಗಳನು. ॥೭೧॥

೫. ಕಂಗಳಿಗೆ ತೂ......ಬಾರ
ಅಂಗಜೀವಿಗಳ ಕೂಡಿ ನಡೆವನೆ ಶರಣ ?
ತನ್ನ ಸುಖವನೆ ಸಂತದಲಿ ಅನುಭವವ ಮಾಡುವನಲ್ಲದೆ.
ನುಡಿದಂತೆ ನಡೆಯದಿದ್ದವರ ಕಂಡಡೆ
ತನ್ನೊಳಗೆ ತಾನೆ ನಗುವನಲ್ಲದೆ
ಶರಣ ನುಡಿದಡೆ ಅದನಲ್ಲೆಂಬರು ಸಂಸಾರಜೀವಿಗಳು.
ಶರಣ ನುಡಿದಂತೆ ಅವನಲ್ಲೆಂಬರು ಭವಭಾರಿಜೀವಿಗಳು.
... ಅಲ್ಲೆಂಬುದ ತಾನು ಬಲ್ಲನಾಗಿ ನುಡಿಯ.
ಗುಣಮುಗ್ಧಮೌನಿಯಾಗಿಪ್ಪ ಕೂಡಲ ಚೆನ್ನಸಂಗಾ
ನಿಮ್ಮ ಶರಣ. ॥೭೬॥

೬. ಭಾಜನ ಸಹಿತ ಭೋಜನವ ಮಾಡುವನೇ ಶರಣನು?
ಭಾಜನ ಸಹಿತ ಭೋಜನವ ಮಾಡುವ.
ಭಾಜನವು ಭೋಜನವು ಸಹಭೋಜನದ ಪ್ರಸಾವ ... ನಿಲವ
ಕೂಡಲ ಚನ್ನಸಂಗಾ ನಿಮ್ಮ ಶರಣ ಬಸವಣ್ಣಂಗಲ್ಲದೆ
ಮಿಕ್ಕಿನ ಅಜ್ಞಾನಿಗಳೆತ್ತ ಬಲ್ಲರಯ್ಯಾ. ॥೮೪॥

೭. ಲಿಂಗಕ್ಕೆ ಮನ ಭಾಜನ, ಜಂಗಮಕ್ಕ ಧನಭಾಜನ,
ಪ್ರಸಾದಕ್ಕೆ ತನು ಭಾಜನ.
ತ್ರಿವಿಧ ಭಾಜನದಲ್ಲಿ ಕ್ರಮ ಭೋಜನವ ಮಾಡುವನು
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನು. ॥೮೫॥

೮. ... ... ಭರಿತ ಭೋಜನ ಕ್ರಮ:
ಭರಿತ ಭೋಜನ ಭರಿತ ಭೋಜನವೆಂದೆಂಬಿರಿ.
ಭರಿತ ಭೋಜನವಾವುದು ಬಲ್ಲಡೆ ನೀವು...ರಿರಾ.
ಗುರುವಿನಲ್ಲಿ ತನುಭರಿತ, ಲಿಂಗದಲ್ಲಿ ಮನಭರಿತ,
ಜಂಗಮದಲ್ಲಿ ಧನ ಭರಿತ.

ಇಂತೀ ... ವೆಂಬ ಭಾಜನದಲ್ಲಿ ಗಡಣಿಸಬಲ್ಲಡೆ
ಭರಿತ ಕಾಣಿರೇ ಲಿಂಗವಂತರಿರಾ.
ಗುರುಲಿಂಗ ... ಬುದೇ ಚರಲಿಂಗ,
ಚರಲಿಂಗವೆಂಬುದೇ ಜಂಗಮಲಿಂಗ,
ಗುರುಲಿಂಗದಲ್ಲಿ ಸಂಪದವು, ಶೀತಲಿಂಗದಲ್ಲಿ ...
ಜಂಗಮಲಿಂಗದಲ್ಲಿ ಮಹಾಪದವು.
ಇಂತೆಂದುದಾಗಿ ಷೋಡಶರ ಕೈಯಲ್ಲಿ ಹಿಡಿದು
ಎಡಹಿಗುಳಿ ... ... ಕಾಣಾ
ಕೂಡಲ ಚೆನ್ನಸಂಗಮದೇವರು. ॥೮೮॥

೯. ತ್ರಿವಿಧ ಲಿಂಗದಲ್ಲಿ ಸಮ ... ...
ಶುದ್ಧ ಸಿದ್ಧ ಪ್ರಸಿದ್ಧವೆಂದು, ತ್ರಿವಿಧ ಪ್ರಸಾದವು.
ಶುದ್ಧವು ಗುರುಭಕ್ತಶೇಷ, ಸಿದ್ಧವು ಲಿಂಗಭಕ್ತ ಶೇಷ,
ಪ್ರಸಿದ್ಧವು ಜಂಗಮಭಕ್ತಶೇಷ.
ಇಂತೀ ತ್ರಿವಿಧ ಪ್ರಸಾದ, ಅಂತರಂಗ ಪ್ರಸಿದ್ಧ ಇದಕ್ಕೆ ವಿವರ :
ಅರ್ಪಿತ ಪ್ರಸಾದ ··· ಆರೋಪಿತ ಪ್ರಸಾದ.
ಅಂತರಂಗದಲ್ಲಿ ತ್ರಿವಿಧ ಪ್ರಸಾದ.
ಅರ್ಪಿತ ಪ್ರಸಾದವೆಂದು ಪಾಕ ಪ್ರಯಾ ... ವಾದ
ಪದಾರ್ಥವನರ್ಪಿಸಿಕೊಂ ... ಅರ್ಪಿತ ಪ್ರಸಾದ.
ಆ ... ಧಾರಿತ ಪ್ರಸಾದವೆಂದು
ಪಾಕವಿಲ್ಲದ ಪದಾರ್ಥವನಾಧರಿಸಿಕೊಂಬುದು
ಅವಧಾರಿತ ಪ್ರಸಾದ.
ಆರೋಪಿತ ಪ್ರಸಾದವೆಂದು......
...ಪಂಚೇಂದ್ರಿಯವ ಸಾರೇ ಬಂದುದು ಆರೋಪಿತ ಪ್ರಸಾದ.
ಇಂತಿದು ಪ್ರಸಿದ್ಧಪ್ರಸಾದ.
ಕಂಗಳ ಪೂಜೆ ಲಿಂಗ ಮನ ಮುಟ್ಟದಾರೋಗಣೆಯೆಂಬುದೇನೊ,
ನಿಸ್ಸೀಮ ಶರಣಂಗೆ ಸೀಮೆಯೆಂಬುದೇನೋ,
ಆತನ ನೆನಹೆ ಲಿಂಗಾರ್ಪಿತ.
ಕೂಡಲ ಚೆನ್ನಸಂಗಮದೇವಾ. ॥೯೧॥

೧೦. ಶ್ರೀಗುರು ಶಿಷ್ಯನ ಭವಿಪೂರ್ವಾಶ್ರಯವಂ ಕಳೆದು
ಅಂಗದ ಮೇಲೆ ಲಿಂಗಸಾಹಿತ್ಯವಂ ಮಾಡಿದ ಬಳಿಕ

ಅಂಗವೇ ಲಿಂಗವೆಂದು ಅರ್ಚನೆ ಪೂಜನೆಯಂ ಮಾಡಿಕೊಂಡಿಹರು,
ಅದು ಲಿಂಗವಲ್ಲ, ಅದೇಕೆ ಅಲ್ಲವೆಂದಡೆ:
ಅಂಗದ ಮೇಲೆ ಅಱತು ಮುಂದೆ
ಜಂಗಮಲಿಂಗವ ತೋಱಿತ್ತಾಗಿ.
ಆ ಜಂಗಮವೇ ಲಿಂಗವೆಂದು
ಅರ್ಚನೆ ಪೂಜನೆಯಂ ಮಾಡಿಕೊಂಡಿಹರು.
ಅದು ಜಂಗಮಲಿಂಗವಲ್ಲ, ಅದೇಕೆ ಅಲ್ಲವೆಂದಡೆ :
ಅದು ಆಸೆ ಆಮಿಶೆ...ಇತ್ತಾಗಿ,
ಮುಂದೆ ಪ್ರಸಾದ ಲಿಂಗವೆಂದು ತೋಱಿತ್ತಾಗಿ,
ಅದು ಪ್ರಸಾದಲಿಂಗವಲ್ಲ, ಅದೇಕೆ ಅಲ್ಲವೆಂದಡೆ :
ಅದು.........ಹೋಯಿತ್ತಾಗಿ.
ಇಂತೀ ತ್ರಿವಿಧದ ಮೇಲೆ ಅಂಕುರವಾದ
ಮಹಾಪ್ರಸಾದಿಗಳ ಕೂಡಿ ಬದುಕಿಸಯ್ಯಾ,
ಕೂಡಲ ಚೆನ್ನಸಂಗಯ್ಯಾ, ನಿಮ್ಮ ಧರ್ಮ. ॥೧೦೦॥

೧೧. ನೋಡದ ಮುನ್ನವೆ ನೋಡಿದ ಬಳಿಕ ಅರ್ಪಿತವೇ ?
ಕೇಳದ ಮುನ್ನವೆ ಕೇಳಿದ ಬಳಿಕ ಅರ್ಪಿತವೇ ?
ಘ್ರಾಣಿಸದ ಮುನ್ನವೆ ಘ್ರಾಣಿಸಿದ ಬಳಿಕ ಅರ್ಪಿತವೇ ?
ರುಚಿ ನಿಶ್ಚಯಿಸದ ಮುನ್ನವೆ ರುಚಿ ನಿಶ್ಚಯಿಸಿದರೆ ಅರ್ಪಿತವೇ ?
ಸಕಲ ಸುಖಂಗಳಪ್ಪದ ಮುನ್ನವೆ
ಸಕಲಸುಖಗಳಪ್ಪಿದ ಬಳಿಕ ಅರ್ಪಿತವೇ ?
ಶಿವಶಿವಾ, ಅರ್ಪಿಸುವ ಪರಿಯಿನ್ನೆಂತು ಹೇಳಾ,
ಕಾಯದ ಕೈಮುಟ್ಟಿ ಬಂದುದು ಲಿಂಗಾರ್ಪಿತವಲ್ಲ,
ಜೀವದ ಕೈಮುಟ್ಟಿ ಬಂದುದು ಲಿಂಗಾರ್ಪಿತವಲ್ಲ,
ಭಾವದ ಕೈಮುಟ್ಟಿ ಬಂದುದು ಲಿಂಗಾರ್ಪಿತವಲ್ಲ,
ಅವಧಾನ ಕೈಮುಟ್ಟಿ ಬಂದುದು ಲಿಂಗಾರ್ಪಿತವಲ್ಲ,
ಆ ಭಾವದ ಕೈಮುಟ್ಟಿ ಬಂದುದು ಲಿಂಗಾರ್ಪಿತವಲ್ಲ,
ಸಾವಧಾನ ಕೈಮುಟ್ಟಿ ಬಂದುದು ಲಿಂಗಾರ್ಪಿತವಲ್ಲ,
ಸಕಲದ ಕೈಮುಟ್ಟಿ ಬಂದುದು ಲಿಂಗಾರ್ಪಿತವಲ್ಲ,
ಅದೇನು ಕಾರಣವೆಂದಡೆ :
ಕಾಯ ಮುಟ್ಟಿ ಬಂದುದು ಕಾಯಮುಖದಲ್ಲಿ ನಿಂ[ದುದು],
ಭಾವದ ಮುಟ್ಟಿ ಬಂದುದು ಭಾವದ ಮುಖದಲ್ಲಿ ನಿಂ[ದುದು],

ಆ ಭಾವದ ಕೈಮು[ಟ್ಟಿಬಂದುದು ಆ]ಭಾವದ ಮುಖದಲ್ಲಿ ನಿಂ[ದುದು],
ಅವಧಾನದ ಮುಖದಲ್ಲಿ ಬಂದುದು
ಅವಧಾನದಮುಖದಲ್ಲಿ ನಿಂ[ದುದು],
ಸಾವಧಾನದ [ಕೈ ಮುಟ್ಟಿ ಬಂದುದು]
ಸಾವಧಾನಮುಖದಲ್ಲಿ ನಿಂ[ದುದು],
ಸಕಲದ ಕೈಮುಟ್ಟಿ ಬಂದುದು ಸಕಲದ ಮುಖದಲ್ಲಿ ನಿಂ[ದುದು],
[ಪದಾ]ರ್ಥದ ಪೂರ್ವಾಶ್ರಯವ ಕಳೆದು ಲಿಂಗಕ್ಕೆ ಕೊಟ್ಟು
ಪ್ರಸಾದವ ಮಾಡುವ ಪರಿಯಿನ್ನೆಂತು ?
ಲಿಂಗ ಮುಟ್ಟದ ಮುನ್ನವೆ...ವನಲ್ಲಿ ಲಿಂಗಪ್ರಸಾದಿಯಾಗಿ
ಶ್ರುತಿ : "ಸರ್ಪದಷ್ಟಸ್ಯ ಯದ್ದೇಹಂ ವಿಷದೇಹವತ್ ।
ಲಿಂಗದಷ್ಟಸ್ಯ ತದ್ದೇಹಂ ಲಿಂಗದೇಹವತ್ ॥"
ಇಂತೆಂದುದಾಗಿ ಲಿಂಗಕ್ಕೆ ತನಗೆ ತೆರೆಯಿಲ್ಲದಿಪ್ಪ.
ಲಿಂಗಸಹಿತಾಗಿಯೇ ನೋಡುವ [ಲಿಂಗ ನೇತ್ರದಲ್ಲಿ],
ಲಿಂಗಸಹಿತಾಗಿಯೇ ಕೇಳುವ ಲಿಂಗಶ್ರೋತ್ರದಲ್ಲಿ,
ಲಿಂಗಸಹಿತಾಗಿಯೇ ಘ್ರಾಣಿಸುವ ಲಿಂಗ ಘ್ರಾಣದಲ್ಲಿ,
ಲಿಂಗಸಹಿತಾಗಿಯೇ ರುಚಿಸುವ ಲಿಂಗಜಿಹ್ವೆಯಲ್ಲಿ,
ಲಿಂಗಸಹಿತಾಗಿಯೇ ಸಕಲಸುಖಂಗಳನಪ್ಪುವ ಲಿಂಗಾಂಗದಲ್ಲಿ,
ಶ್ರುತಿ : "ದೃಷ್ಟಾದೃಷ್ಟ ಶ್ರುತಾಶ್ರುತ್ವ ಘ್ರಾಣಾಘ್ರಾಣಮೇವ ಚ ।
ಸ್ಪರ್ಶನಾ ಸ್ಪರ್ಶನಂ ವಿದ್ಯಾಗ್ರಾಹ್ಯಾಗ್ರಾಹ್ಯಮೇವ ಚ ।
ಭೂತ್ವ ತದ್ಭೂತ್ವಮಾಖ್ಯತೇ......... ಕಂ ॥
ಪ್ರಾಣಮಾಖ್ಯಾತಂ ಇತ್ಯೇತಿ ಸಹವರ್ತತೇ ।
ಎಂದುದಾಗಿ, ತನ್ನೊಳಗೆ ಲಿಂಗ, ಲಿಂಗದೊಳಗೆ ತಾನು.
ಆ......ತ್ಮಕ
ಅದೇ ನಿರಂತರ ಕೂಡಲಚೆನ್ನಸಂಗಯ್ಯಾನಿಮ್ಮ ಪ್ರಸಾದಿಗಳು. ॥೧೧೩॥

೧೨. ಬಂದವಸರ[ದಲ್ಲಿ ಲಿಂಗವ ನೇತ್ರದಲ್ಲಿ ಇರಿಸ]ಬೇಕು,
ಬಂದವಸರದಲ್ಲಿ ಲಿಂಗವ ಶ್ರೋತ್ರದಲ್ಲಿ ಇರಿಸಬೇಕು,
ಬಂದವಸರದಲ್ಲಿ ಲಿಂಗವ ಘ್ರಾಣದಲ್ಲಿ ಇರಿಸಬೇಕು,
ಬಂದವಸರದಲ್ಲಿ ಲಿಂಗವ ಜಿಹ್ವೆಯಲ್ಲಿ ಇರಿಸಬೇಕು,
ಬಂದವಸರದಲ್ಲಿ ಲಿಂಗವ ಸರ್ವಾಂಗದಲ್ಲಿ ಇರಿಸಬೇಕು,
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಸಾದಿಯಾಡೆ. ॥೧೧೪॥

೧೩. ಪ್ರಸಾದ ಪ್ರಸಾದವೆಂದು ಹೆಸರಿಟ್ಟುಕೊಂಡು ಮಾತನಾಡುವರು
ನೀವೆಲ್ಲ ಕೇಳಿರೇ,
ಗುರುಮುಖದಲರ್ಪಿತ ಮಾಡಲಱಿಯರು,
ಲಿಂಗಮುಖದಲರ್ಪಿತ ಮಾಡಲಱಿಯರು,
ತಾವೇ ಗುರುವೆಂದು ಪ್ರಸಾದವನಿಕ್ಕುವರಯ್ಯಾ.
ತಾವೇ ಲಿಂಗವೆಂದು ಪ್ರಸಾದವನಿಕ್ಕುವರಯ್ಯಾ.
ಜಂಗಮಮುಖದಲರ್ಪಿತಮಾಡಲಱಿಯರು,
ತಾವೇ ಜಂಗಮವೆಂದು ಪ್ರಸಾದವನಿಕ್ಕುವರಯ್ಯಾ.
ಸರ್ವಮುಖದಲಿ ಲಿಂಗಾರ್ಪಿತವ ಮಾಡಲಱಿಯರು,
ತಾವೇ ಲಿಂಗವೆಂದು ಪ್ರಸಾದವನಿಕ್ಕುವರಯ್ಯಾ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
......ಲೋಗರಿಗಿಕ್ಕುವ ಭಂಡರನೇನೆಂಬೆನಯ್ಯಾ ? ॥೧೧೬॥

೧೪. ಪ್ರಸಾದ ಪ್ರಸಾದವೆಂ[ದೆಂಬ]ರಿ, ಪ್ರಸಾದವೆಲ್ಲರಿಗೆಲ್ಲಿಯದೊ ?
......ಇಡಿ ಪ್ರಸಾದವನಿಕ್ಕುವಾತ ಗುರುವಲ್ಲ.
ಆತ ಉದರಪೋಷಕನು,
ಪ್ರತಿಯ ಕೊಂಡು ಪ್ರಸಾದ...ಕೈ...
......ವೇಶಿಯ ಪುತ್ರನು.
ಇದುಕಾರಣ ಆತಂಗೆ ಲಿಂಗವಿಲ್ಲ,
ಲಿಂಗವ ಕೊಟ್ಟಾತನೇ ಗುರು
ಆ ಗುರುವ ಲಿಂಗವೆಂದು ಕಂಡಾತನೆ ಶಿಷ್ಯ.
ಇದು ಕಾರಣ, ಕೂಡಲಚೆನ್ನಸಂಗಯ್ಯಾ
ನಿಮ್ಮಲ್ಲಿ ಪ್ರಸಾದಿಸ್ಥಳ ಅಪೂರ್ವ. ॥೧೧೭॥

೧೫. ಕಾಯಾ[ರ್ಪಿತವೆಂಬೆನೆ] ಅಳಿವಿನೊಳಗಾಯಿತ್ತು,
[ಜೀವಾರ್ಪಿತ] ವೆಂಬೆನೆ ಭ್ರಮೆಯೊಳಗಾಯಿತ್ತು,
ಜಿಹ್ವಾರ್ಪಿತವೆಂಬೆನೆ ಹಂಸಿಯೊಳಗಾಯಿತ್ತು,
......ರ್ಪಿತವೆಂಬೆನೆ...ಕೊಳಗಾಯಿತ್ತು,
ಇಂತಿವ ಕಳೆದು ಅರ್ಪಿಸಬೇಕು.
ಅರ್ಪಿಸಿದಲ್ಲದೆ ಪ್ರಸಾದವಾಗದು.
...ವ ಶರೀರಕ್ಕೆ ಅದೆ ವರ್ಮವು
ಕೂಡಲ ಚೆನ್ನಸಂಗನ ಪ್ರಸಾದಿಯೇ ಬಲ್ಲ. ॥೧೨೮॥

೧೬. ಲಿಂಗವ ಪೂಜಿಪ್ಪ ಪೂಜೆಯಂ...ಮಾಡಿದಲ್ಲಿ
ಜಂಗಮಮಾಟವ ಮಾಡಿದೆನೆಂಬುದು
ಮನದಲ್ಲಿ ನೆನೆಯಂದ...ಪ್ರಸಾದಿಕ...
ವಿರೋಧಭಾವದಲ್ಲಿ ತನುರಹಿತನಾದ ಪ್ರಸಾದಿ.
ಇದುಂ ಕಾರಣ ಕೂಡಲ ಚೆನ್ನಸಂಗ...ಪ್ರಸಾದಿ. ॥೧೬೪॥

೧೭. ಲಿಂಗಾರ್ಪಿತವನರ್ಪಿಸಿ ಭೋಗವೆಂ...ಲಿಂಗ
...ರ್ಪಿತವ ತ ...ಸಭೋಗವಂ ಮಾಡಿ ಅರ್ಪಿಸಿ ಭುಂಜಿಸೆ
ಅನರ್ಪಿತ ಕಿಲ್ಬಿಷ.
ಲಿಂಗಾರ್ಪಿತ ಬಂಕ್ತಿ...ನರನು.
ಕೂಡಲ ಚೆನ್ನಸಂಗಯ್ಯನ ಪ್ರಸಾದಿಯು
ಅನಂಭಾವವಿಂತು···ವನ್ನಂಗೆ ಶರಣೆಂಬೆನು··· ॥೧೬೬॥

೧೮. ಲಿಂಗಕ್ಕೆ ಬಾರದ ರುಚಿಯು ಜಂಗಮಕ್ಕೆ ಸ...ತಯ್ಯ
ನೀಡಿ ಪ್ರಸಾದವನಿಕ್ಕೆಂಬಿರಿ. ಅದು ಪ್ರಸಾದವಲ್ಲ
ಸಿಂಗಿ...
ಕೇಳಿರಣ್ಣಾ, ಪ್ರಸಾದ ಪ್ರಸಾದವೆಂಬಿರಿ
ಆ ಪ್ರಸಾದ[ವನೇ]ನೆಂಬೆ ಕೂಡಲಚೆನ್ನಸಂಗಮದೇವಾ. ॥೧೭೩॥

ಈ ವರೆಗೆ ಪ್ರಕಟವಾದ ಚೆನ್ನಬಸವಣ್ಣನವರ ವಚನಸಂಪುಟಗಳಲ್ಲಿ ಎಚ್ಚರಿಕೆಯಿಂದ ಹುಡುಕಿದರೂ ಸಿಗದ ವಚನಗಳಿವು. ಇನ್ನೂ ಎಚ್ಚರಿಕೆಯಿಂದ ಹುಡುಕಿದರೆ ಒಂದೆರಡು ವಚನ ಸಿಕ್ಕರೂ ಉಳಿಯುವ ಹಲವಾರು ವಚನಗಳು ಹೊಚ್ಚ ಹೊಸವೆನಿಸುತ್ತವೆ; ಚೆನ್ನಬಸವಣ್ಣನವರ ವಚನ ಭಂಡಾರಕ್ಕೆ ಹೊಸ ಕಾಣಿಕೆಯೆನಿಸುತ್ತವೆ.

ಶಾಸನಗಳಲ್ಲಿ ಕೆರೆ ಕಾಲುವೆಗಳು

● ಡಾ. ಶಾಂತಿನಾಥ ದಿಬ್ಬದ

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬದ
ರ್ಗೆರೆವಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ಯೆಱಿದಳ್ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ[೧]

ಪ್ರಾಚೀನ ಕರ್ನಾಟಕದ ದೊರೆಯೊಬ್ಬ ಪಾಲಿಸಬೇಕಾದ ಆಚರಣೆಗಳ ಪಟ್ಟಿ ಇದು. ಇತರ ಕೆಲವು ಸಾಮಾಜಿಕ ಆಚರಣೆಗಳ ಜೊತೆಗೆ ಕೆರೆ ಬಾವಿಗಳ ನಿರ್ಮಾಣವನ್ನು ಇಲ್ಲಿ ಸೇರಿಸಿರುವುದಲ್ಲದೆ ಅವುಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟಿರುವುದನ್ನು ನಾವು ನೋಡುತ್ತೇವೆ. ಇದು ಅಂದಿನ ಪರಿಸ್ಥಿತಿಯಲ್ಲಿಯ ಕೆರೆ ಬಾವಿಗಳ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಅಂದು ದಾನಗಳಲ್ಲಿ ಕೆರೆ ಕಟ್ಟಿಸಿಕೊಡುವ ಕ್ರಿಯೆಯನ್ನು ಒಂದೆಂದು ಭಾವಿಸಲಾಗಿತ್ತು. ೧೦೬೭ ರ ಶಿಗ್ಗಾವಿ ತಾಲೂಕಿನ ಹೊಟ್ಟೂರು ಶಾಸನವು ಕೇಶಿಗಾವುಂಡನೆಂಬಾತ ಉದಕ, ಅನ್ನ, ಗೋವು, ಭೂಮಿ, ವಿದ್ಯಾ, ಕನ್ಯಾ ಮೊದಲಾದ ದಾನಗಳನ್ನು ಮಾಡಿದ ಬಗ್ಗೆ ತಿಳಿಸುತ್ತಿದ್ದು ಅದರಲ್ಲಿ ಪ್ರಸ್ತಾಪಿತವಾದ 'ಉದಕ'ವು ಕೆರೆ ಕಾಲುವೆ ಬಾವಿಗಳ ನಿರ್ಮಾಣವೇ ಆಗಿರಬೇಕು.[೨]

"ಸತ್ತವನ ಪ್ರೇತವು ಬಹಳ ಬಾಯಾರಿಕೆಯಿಂದ ಬಳಲುವುದೆಂದೂ ತಟಾಕ ನಿರ್ಮಾಣ ಮುಂತಾದ ಧರ್ಮಕಾರ್ಯಗಳಿಂದ ಅದರ ಬಾಯಾರಿಕೆ ಹಿಂಗುವುದೆಂದೂ ಅಂದಿನ ಜನರು ನಂಬಿರುವುದರ"[೩] ಹಿಂದೆ ಕೆರೆ ಕಾಲುವೆಗಳ ಕುರಿತು ವ್ಯಕ್ತವಾಗಿರುವ ಅಲೌಕಿಕ ಮಹತ್ವ ವ್ಯಕ್ತವಾಗಿದೆ, "ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು ಕುಡಿದು ತೃಪ್ತರಾಗು- ವರೋ ಅವರು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾರೆ"[೪] ಎಂಬುದು ಮಹಾಭಾರತದ ನಂಬಿಕೆ.

ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ ಮೊದಲಾದ ಅನೇಕ ರಾಜಮನೆತನಗಳ ಆಳ್ವಿಕೆಯನ್ನು ಕಂಡ ಕರ್ನಾಟಕ ಪ್ರಾಕೃತಿಕ ಸಂಪತ್ತು ಮತ್ತು

ಸೊಗಸುಗಳಿಗೆ ಹೆಸರಾದ ನಾಡು. ನೈಸರ್ಗಿಕವಾಗಿ ಹುಟ್ಟಿದ ನದಿ ತೊರೆಗಳಲ್ಲದೆ ವ್ಯಕ್ತಿನಿರ್ಮಿತವಾದ ಕೆರೆ ಕಾಲುವೆ ಬಾವಿಗಳು ಇಲ್ಲಿದ್ದವೆಂಬುದು ಶಾಸನಗಳಿಂದ ತಿಳಿಯುತ್ತದೆ. ಕೆರೆ, ಕಾಲುವೆ, ಬಾವಿ, ಅನ್ನಸತ್ರ, ಅರವಟ್ಟಿಗೆಗಳ ನಿರ್ಮಾಣವು ಅಂದಿನ ದೊರೆಗಳ ಆವಶ್ಯಕ ಕರ್ತವ್ಯವಾಗಿರುವುದರ ಜೊತೆಗೆ ಪ್ರತಿಷ್ಠಿತ ಸಾಧನೆಯೂ ಆಗಿತ್ತು. "ಆಗಿ ತಾವಾದಿಗರ್ಭೇಶ್ವರರಪ್ಪುದರಿಂ ತಳರ್ದೆಡೆಯೆಡೆಯ ಮರಂಗಳ ತೊರೆಗಳ ಬಾಡಂಗಳ ಪೆಸರ್ಗಳಂ ಬೆಸಗೊಳುತ್ತಂ ಮಹಾಗ್ರಹಾರಂಗಳ ಮಹಾಜನಂಗಳ ಕೊಟ್ಟ ಪೊನ್ನ ಜನ್ನವಿರಂಗಳುಮನವರ ಪರಕೆಯುಮಂ ಕೈಕೊಳ್ಳುತ್ತ-ವರ್ಗೆ ಬಾಧೆಯಾಗದಂತು ಕಾಪಂ ನಿಯಮಿಸುತ್ತುಂ......ಅಲ್ಲಿಗಲ್ಲಿಗೊಡೆದ ಕೆರೆಗಮ ಳಿದಾಯತನಕ್ಕುಂ ಧನಮನಿತ್ತು ಜೀರ್ಣೋದ್ಧಾರಂಗಳಂ ಮಾಡಿಸುತ್ತಂ ಬಂದು"[*] ಎಂಬಲ್ಲಿಯ ಪಾಂಡವರ ರಾಜೋಚಿತ ಪ್ರಯಾಣದ ವರ್ಣನೆಯಲ್ಲಿ, ಪಂಪ ಅಂದಿನ ಸಾಮಾಜಿಕ ಜೀವನದಲ್ಲಿ ದೊರೆಗಳು ವಹಿಸಬೇಕಾದ ಜವಾಬ್ದಾರಿಗಳನ್ನು ವಿವರಿಸಿದ್ದು, ಆ ಜವಾಬ್ದಾರಿಗಳಲ್ಲಿ ಕೆರೆ ಕಾಲುವೆಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದ ವಿಷಯವೂ ಪ್ರಸ್ತಾಪವಾಗಿರುವುದು ಗಮನಾರ್ಹ. ಕೇವಲ ರಾಜರು ಮಾತ್ರವಲ್ಲದೆ ಮಂತ್ರಿ, ಪೆರ್ಗ್ಗಡೆ, ಅಧಿಕಾರಿಗಳು, ಪ್ರತಿಷ್ಠಿತರು, ಸನ್ಯಾಸಿಗಳು ಕೆರೆ ಕಾಲುವೆಗಳನ್ನು ನಿರ್ಮಿಸಿದ ಉದಾಹರಣೆಗಳು ಶಾಸನಗಳಲ್ಲಿವೆ.

ಕರ್ನಾಟಕದ ಕೆರೆಗಳ ಇತಿಹಾಸ ಕದಂಬರ ಕಾಲದಷ್ಟು ಪ್ರಾಚೀನ. ಕ್ರಿ. ಶ. ೩ನೇ ಶತಮಾನದ ಬನವಾಸಿ ನಾಗರಕಲ್ಲಿನ ಪ್ರಾಕೃತ ಶಾಸನವು 'ಸಿವಖಡನಾಗರಿ' ಎಂಬವಳು ನಾಗಪ್ರತಿಮೆ, ಕೆರೆ ಹಾಗೂ ವಿಹಾರಗಳನ್ನು ಧರ್ಮಾರ್ಥವಾಗಿ ದಾನ ಮಾಡಿದುದನ್ನು ತಿಳಿಸುತ್ತದೆ.[೬] ಇದಕ್ಕಿಂತ ಮೊದಲು ನಮ್ಮಲ್ಲಿ ಕೆರೆಗಳಿದ್ದಿಲ್ಲವೆಂದಲ್ಲ ಮಹಾಭಾರತದ ಕಾಲ ಅಥವಾ ಅದಕ್ಕಿಂತ ಇನ್ನೂ ಹಿಂದಿನ ಕಾಲದಲ್ಲಿ ಕೆರೆಗಳಿದ್ದು-ದನ್ನು ನಮ್ಮ ಪುರಾಣ ಕಾವ್ಯಗಳು ತಿಳಿಸುತ್ತವೆ. ಆದರೆ ಅವೆಲ್ಲ ಐತಿಹಾಸಿಕವೆಂದು ಸಾಧಿಸಲಾಗದ ಕಾರಣ ಶಾಸನಗಳಲ್ಲಿ ದಾಖಲಾಗಿರುವ ಕೆಲವು ಅಧಿಕೃತ ಕೆರೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಪ್ರಾಚೀನ ಕರ್ನಾಟಕದ ವ್ಯವಸಾಯ ಮತ್ತು ಅರ್ಥವ್ಯವಸ್ಥೆಯಲ್ಲಿ ಈ ಕೆರೆ ಕಾಲುವೆಗಳ ಪಾತ್ರ ತುಂಬ ಮಹತ್ವದ್ದಾಗಿತ್ತು. ನಮ್ಮ ಜನ ನೀರಿನ ಸೌಕರ್ಯವನ್ನಾಧರಿಸಿ ಹೊಲಗದ್ದೆಗಳನ್ನು ಎರಡು ರೀತಿಗಳಲ್ಲಿ ವಿಂಗಡಿಸುತ್ತಿದ್ದರು. ಕೇವಲ ಮಳೆಯ ನೀರನ್ನು ಆಶ್ರಯಿಸಿ ಬೆಳೆಯುವ ಹೊಲಗಳು, ದೇವಮಾತೃಕಗಳು.[೭] ನದಿ, ಕೆರೆ ಮುಂತಾದವುಗಳನ್ನು ಆಶ್ರಯಿಸಿ ಬೆಳೆಯುವ ಹೊಲಗಳು ನದೀಮಾತೃಕಗಳು. ಇವುಗಳನ್ನು ಶಾಸನಗಳು 'ಬೆಟ್ದಲೆ' ಮತ್ತು 'ಗದ್ದೆ' ಎಂದು ಕರೆದಿವೆ. ಕಟ್ಟೆಯಿದ್ದರೆ

ಅವು ಗದ್ದೆಗಳು. ಕಟ್ಟೆಯೊಡೆದರೆ ಬೆದ್ದಲು ಭೂಮಿಗಳು.[೮] ಎಂಥ ಭೂಮಿಯಲ್ಲಿ ಯಾವ ಬೆಳೆಗಳನ್ನು ಬೆಳೆಯಬೇಕೆಂಬ ನಿಶ್ಚಿತ ಜ್ಞಾನವೂ ಪ್ರಾಚೀನರಿಗಿತ್ತು.

ಕೆರೆಗಳನ್ನು ಕಟ್ಟಿಸಲು ಬೇಕಾಗುವ ದ್ರವ್ಯ ಮತ್ತು ಶ್ರಮ ಅಷ್ಟಿಷ್ಟಲ್ಲ. ಅಂತೆಯೇ ಕಟ್ಟಿಸಿದ ಕೆರೆಬಾವಿಗಳನ್ನು ಕೆಡಿಸುವುದು ಘೋರವಾದ ಪಾಪ ಎಂಬ ನಂಬಿಕೆ ಅವರಲ್ಲಿತ್ತು.[೯] ಹಾಗೆಯೇ ಕೆರೆ ಕಾಲುವೆಗಳ ವ್ಯವಸ್ಥೆ, ಮೇಲ್ವಿಚಾರಣೆ, ಜೀರ್ಣೋದ್ಧಾರ ಮತ್ತು ಬಳಕೆಗಳ ಬಗ್ಗೆ ಅವರದೇ ಆದ ನೀತಿನಿಯಮಗಳಿರುತ್ತಿದ್ದವು.

ಕೆರೆಯನ್ನು ಯಾರೇ ಕಟ್ಟಿಸಲಿ ಅದರ ಯೋಗಕ್ಷೇಮದ ಹೊಣೆ ಇಡೀ ಊರಿನದು. "ಚಾವುಂಡಯ್ಯನೆಂಬಾತ ಮಾಡಿಸಿದ ಕೆರೆ.ಗೆ ಬಿಟ್ಟ ಭೂಮಿಯನ್ನು ಆ ಊರಿನ ಮಹಾರಾಜರು ಪಾಲಿಸುವರು"[೧೦] ಎಂಬ ಶಾಸನದ ಮಾತು ಇದಕ್ಕೆ ಸಾಕ್ಷಿ. ಒಂದು ಊರಿನ ಕೆರೆಯ ನೀರನ್ನು ಇನ್ನೊಂದು ಊರಿನವರು ಬಳಸಬೇಕಾದರೆ ನಾಡಿನ ಎಲ್ಲ ಪ್ರಭುಗಾವುಂಡಗಳ ಅನುಮತಿ ಪಡೆಯಬೇಕಾಗುತ್ತಿತ್ತು.[೧೧]

ಮೇಲಿಂದ ಮೇಲೆ ಕೆರೆಗಳನ್ನು ದುರಸ್ತಿ ಮಾಡಿಸಬೇಕಾಗುತ್ತಿತ್ತು. ಇಂಥ ಕೆಲಸದ ವೆಚ್ಚಕ್ಕಾಗಿ ಭೂಮಿಯನ್ನು ಬಿಡಲಾಗುತ್ತಿದ್ದು ಅದನ್ನು 'ಬಿತ್ತುದಾಟ' ಎಂದು ಕರೆಯುತ್ತಿದ್ದರು. ಈ ದುರಸ್ತಿಯ ಕೆಲಸವನ್ನು ಶಾಸನಗಳು 'ಪಡಿಸಲಿಸು' ಎಂದು ಕರೆದಿವೆ.[೧೨] ಈ ಪಡಿಸಲಿಸುವ ಕ್ರಿಯೆಯನ್ನೇ ಪಂಪ 'ಅಳಿದಾಯತನ'ವೆಂದು ಕರೆದಿರುವಂತಿದೆ.[೧೩] ನೀರಾವರಿ ಒಣಬೇಸಾಯಗಳನ್ನಾಧರಿಸಿ ಆಯಾ ಭೂಮಿಯ ಮೇಲೆ ಸುಂಕವನ್ನು ವಿಧಿಸಲಾಗುತ್ತಿತ್ತು. ಬಾವಿಗಳ ಮೇಲೆ ತೆರಿಗೆಯಿದ್ದು ಅದನ್ನು 'ಕುಳಿಯ ಸುಂಕ'[೧೪] ಎಂದು ಕರೆಯುತ್ತಿದ್ದರು. ಊರಿನ ಜನತೆಯ ಉಪನಯನ ಮದುವೆ ಮೊದಲಾದ ಶುಭಕಾರ್ಯಗಳಿಂದ ಬರುವ ಹಣವನ್ನು ಪ್ರಾಯಶ್ಚಿತ್ತ ರೂಪ(ದಂಡ)ವಾಗಿ ಬರುವ ಹಣವನ್ನು ಕೆರೆಗೆ ಬಿಟ್ಟುಕೊಡುತ್ತಿದ್ದರು.[೧೫] ಮಲಘಾಣದ ಮಹಾಜನರು "ಕೆರೆಯ ಕೆಯ್" ದ್ರವ್ಯವನ್ನು ಬಿಟ್ಟು ಉಳಿದ ಹಣವನ್ನು ಬೇರೆ ಕಡೆಗೆ ಬಳಸಬಹುದು ಎಂದಿರುವ ಮಾತು[೧೬] ಕೆರೆಯ ಉಸ್ತುವಾರಿಯ ಜವಾಬ್ದಾರಿಯನ್ನು ತಿಳಿಸುತ್ತದೆ.

ಶಾಸನಗಳಲ್ಲಿ ನಿರೂಪಿತವಾದ ಅಂಶಗಳನ್ನು ನೋಡಿದರೆ ಕೆರೆಗಳನ್ನು ನಿರ್ಮಿಸುವ ಕೆಲಸಕ್ಕಿಂತ ಹೆಚ್ಚಿನ ಮಹತ್ವ ಅವುಗಳ ದುರಸ್ತಿ ಮತ್ತು ಮೇಲ್ವಿಚಾರಣೆಗೆ ಇತ್ತೆಂಬುದು ತಿಳಿಯುತ್ತದೆ. ಕೆರೆಗಳ ಸಂರಕ್ಷಣೆಗಾಗಿ ಅನೇಕ ಜನ ಆಗಿಂದಾಗ್ಗೆ ಬಿಟ್ಟ ಭೂ-ದಾನ ದತ್ತಿಗಳ ಉಲ್ಲೇಖಗಳೇ ಈ ಮಾತಿಗೆ ಸಾಕ್ಷಿ.

ರಟ್ಟರ ಸಾಮಂತ ಎಜಿ^ಯಮ್ಮನ ಹೆಸರಿನಲ್ಲಿ ನಿರ್ಮಾಣವಾದ 'ರಟ್ಟಸಮುದ್ರವೆಂಬ ಕೆರೆ,[೧೭] ಪಟ್ಟಣಸ್ವಾಮಿ ನೊಕ್ಕಯ್ಯ ಎಂಬವನು ನಿರ್ಮಿಸಿದ ಪಟ್ಟಣಸ್ವಾಮಿಗೆರೆ,[೧೮] ಚಿಲ್ಲುಕಭಟಾರ ಎಂಬ ಸನ್ಯಾಸಿಗಳು ಕಟ್ಟಿಸಿದ ಐದು ಕೆರೆಗಳು[೧೯] ಇವೆಲ್ಲ ವ್ಯಕ್ತಿ ನಿರ್ಮಿತ ಕೆರೆಗಳ ಉದಾಹರಣೆಗಳು. ಮಹಾಕವಿ ಪಂಪನ ನೆನಪಿಗಾಗಿ ಅವನ ತಮ್ಮ ಜಿನವಲ್ಲಭನು 'ಕವಿತಾಗುಣಾರ್ಣವ' ಎಂಬ ಕೆರೆಯನ್ನು ಕಟ್ಟಿಸಿದ ಸಂಗತಿಯು ಗಂಗಾಧರಂ ಶಾಸನದಿಂದ ತಿಳಿಯುತ್ತದೆ.

ದ್ವಾರಸಮುದ್ರದ ಪಟ್ಟಣಶೆಟ್ಟಿಯಾದ ಹೊಯ್ಸಳ ಸೆಟ್ಟಿಯ ಹೆಂಡತಿ ದೇಮಿಯಕ್ಕ ಕತ್ತರಿಘಟ್ಟದಲ್ಲಿ ಒಂದು ಜಿನಾಲಯ ಮಾಡಿಸಿದಾಗ ನೊಳಂಬ ಸೆಟ್ಟಿಯು ಅದಕ್ಕೆ ಅರ್ಹನ ಹಳ್ಳಿಯನ್ನು, ದಾನಶಾಲೆಯನ್ನು, ಎರಡು ಗಾಣಗಳನ್ನು ಕೆರೆಯನ್ನು ದತ್ತಿ ಬಿಟ್ಟನಂತೆ[೨೦]

ಕೃಷ್ಣದೇವರಾಯನ ಪಾದಪದ್ಮೋಪಜೀವಿ ಗಂಗಾನ್ವಯಕುಳತಿಳಕ ಭೂತಯ್ಯನು ಗಂಗವಾಡಿ ೯೬೦೦೦ ನಾಡನ್ನು ಆಳುತ್ತಿರುವಾಗ ಅವನ ಸತಿ ಪದ್ಮಬ್ಬರಸಿ ತನ್ನ ಬಸದಿಗೆ ದಾನಶಾಲೆ ಮಾಡಿಸುತ್ತಾಳೆ. ಅದೇ ಸಂದರ್ಭದಲ್ಲಿ ಮಾರಸಿಂಗಮಯ್ಯನೆಂಬಾತ ಆ ದೇವಾಲಯಕ್ಕಾಗಿ ಒಂದು ಕೆರೆ ನಿರ್ಮಿಸಿ ದತ್ತಿಬಿಟ್ಟುದುದು ಬೇರೊಂದು ಶಾಸನದಿಂದ ತಿಳಿಯುತ್ತದೆ.[೨೧]

"ಕೆರೆಬಾವಿ, ಬಸದಿ, ದೇಗುಲಮರವಟ್ಟಿಗೆ ಸತ್ರವೆಂಬ ಧರ್ಮಮನಿನಿತಂ ನೆರೆದುವು ಮುಗುಂದ ಮೂವತ್ತರ ವಿಭು ಚಾವುಂಡರಾಯನಿಂದಂ ಜಗದೊಳ್"[೨೨] ಎಂಬ ಶಾಸನಪಾಠವು ಮುಗುಂದ ಮೂವತ್ತರ ಪ್ರದೇಶದಲ್ಲಿ ಅಲ್ಲಿಯ ದೊರೆ ಚಾವುಂಡರಾಯನೆಂಬಾತ ಮಾಡಿಸಿದ ಅನೇಕ ಲೋಕೋಪಕಾರದ ಸಾಧನಗಳನ್ನು ಪರಿಚಯಿಸುತ್ತದೆ.

ಕೆರೆ ಕಾಲುವೆ ಅನ್ನಸತ್ರ ಅರವಟ್ಟಿಗೆ ಅಗ್ಗಿಷ್ಟಿಕೆ ಆರಾಮಗಳ ನಿರ್ಮಾಣದಲ್ಲಿ ಪ್ರಾಚೀನ ಕರ್ನಾಟಕದ ಮಹಿಳೆಯರೂ ಹಿಂದೆ ಬಿದ್ದಿಲ್ಲವೆಂಬುದನ್ನು ಶಾಸನಗಳು ತಿಳಿಸುತ್ತವೆ. ಈ ಮಹಿಳೆಯರು ವಿಶೇಷವಾಗಿ ರಾಣಿಯರು, ಅಧಿಕಾರಿಣಿಯರು. ಶ್ರೀಮಂತ ಮನೆತನದ ಗೃಹಿಣಿಯರು ಅಥವಾ ಸನ್ಯಾಸಿನಿಯರಾಗಿದ್ದರೆಂಬುದು ಸ್ಪಷ್ಟ. ಮಹಿಳೆಯರಿಂದ ನಿರ್ಮಾಣಗೊಂಡ ಕೆರೆಗಳನ್ನು ಕುರಿತ ಶಾಸನಗಳ ಒಂದೆರಡು ದಾಖಲೆಗಳನ್ನು ಇಲ್ಲಿ ನೋಡಬಹುದು.

ಬಲದೇವನೆಂಬಾತನ ತಾಯಿ ನಾಗಿಯಕ್ಕ ಶ್ರವಣಬೆಳಗೊಳದಲ್ಲಿ ಕೆರೆಯೊಂದನ್ನು ಕಟ್ಟಿಸಿದ ವಿಷಯ ಒಂದು ಶಾಸನದಿಂದ ತಿಳಿದುಬಂದರೆ[೨೩] ಮಾಚಿಕಬ್ಬೆ

ತಾನು ಜಿನಾಲಯ ನಿರ್ಮಿಸಿದುದರ ಜೊತೆಗೆ ಪದ್ಮಾವತಿ ಎಂಬ ಹೆಸರಿನ ಕೆರೆಯನ್ನು ನಿರ್ಮಿಸಿದ ಅಂಶ ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ.[೨೪]

ಹೊಯ್ಸಳನ ರಾಣಿ ಶಾಂತಲೆ ಶ್ರವಣಬೆಳಗೊಳದಲ್ಲಿ "ಸವತಿಗಂಧವಾರಣ" ಎಂಬ ಹೆಸರಿನ ಬಸದಿಯ ಜೊತೆಗೆ ಒಂದು ಕೆರೆಯನ್ನು ಕಟ್ಟಿಸಿ, ಆ ದೇವಾಲಯಕ್ಕೆ ದತ್ತಿ ಬಿಟ್ಟ ಪ್ರಸಂಗವನ್ನು ಇಲ್ಲಿ ಉದಾಹರಿಸಬಹುದು.[೨೫]

ಲಕ್ಕುಂಡಿಯಲ್ಲಿರುವ ಕೆರೆ ಈಗ ಸುಸ್ಥಿತಿಯಲ್ಲಿಲ್ಲವಾದರೂ ಅದು ಸಾಕಷ್ಟು ಪ್ರಾಚೀನವಾದುದೆನ್ನಿಸುತ್ತದೆ. ಅದು ಅತ್ತಿಮಬ್ಬೆಯಿಂದ ನಿರ್ಮಾಣಗೊಂಡಿರುವ ಸಾಧ್ಯತೆಯೂ ಇದೆ.[೨೬]

ಎಲ್ಲೋ ಹರಿಯುತ್ತಿದ್ದ ನೈಸರ್ಗಿಕ ಕಾಲುವೆಯನ್ನೇ ತಿರುವಿ ಕೆರೆಯನ್ನು ನಿರ್ಮಿಸಿದ ವ್ಯಕ್ತಿ ಹಂಚಿ ಧರ್ಮಶೆಟ್ಟಿಯ ಸಾಧನೆಯನ್ನು ಒಂದು ಶಾಸನವು ಕೊಂಡಾಡಿದೆ[೨೭]. ೧೫೭೭ರ ಕಾಜೋ೯ಳ ಶಾಸನವು ತಿಳಿಸಿದ ಸಂಬಯ್ಯನ ಕೆರೆಯೂ ಇಂಥದೇ ಒಂದು ವ್ಯಕ್ತಿನಿರ್ಮಿತ ಕೆರೆಯಾಗಿದ್ದು ತರ್ದವಾಡಿ ನಾಡಿನ ಮೊದಲ ಕೆರೆಯಾಗಿದೆ.[೨೮] ಯರಗಲ್ಲದ ಸಾತಿಸೆಟ್ಟಿಯ ಕೆರೆ, ನಿದೋಣಿಯ ಗೊರವಿಯ ಕೆರೆಗಳೂ ಇಂಥ ಉದಾಹರಣೆಗಳೇ. ಸಾಂತರ ಮನೆತನದ ಚಟ್ಟಲದೇವಿಯೆಂಬವಳೂ ಕೆರೆ ಕಾಲುವೆಗಳನ್ನು ಕಟ್ಟಿಸಿದ್ದಳಂತೆ.[೨೯] ಊರಿನ ಸಾರ್ವಜನಿಕರೆಲ್ಲ ಸೇರಿ ಕೆರೆ ನಿರ್ಮಿಸಿಕೊಂಡಿರುವ ದಾಖಲೆಗಳೂ ಇವೆ. ಧಾರವಾಡ ಜಿಲ್ಲೆಯ ನರಗುಂದದಲ್ಲಿ ಸಾರ್ವಜನಿಕರಿಂದ ಒಂದು ಕೆರೆ ನಿರ್ಮಾಣಗೊಂಡಿದೆ.[೩೦] ಧಾರವಾಡ ಜಿಲ್ಲೆಯ ಹಾನಗಲ್ ತಾಲೂಕಿನ ಬಾಳೂರಿನಲ್ಲಿ ಕೆರೆಯ ತೂಬಿನ ಮೇಲೆ ದೇವತೆಯಾಕಾರದ ಒಂದು ಮೂರ್ತಿ ಹಾಗೂ ಶಾಸನಗಳಿಂದ ಕೂಡಿದ ಒಂದು ಕಲ್ಲನ್ನು ನೆಡಲಾಗಿದ್ದು, ಅದು ಆ ಊರಿನ ಬರ್ಮಗಾವುಂಡನು ಪ್ರತಿಷ್ಠಾಪಿಸಿದ ಬಾದುಂಬೆಯ ಅಪರೂಪದ ಮೂರ್ತಿಯಾಗಿದೆ.[೩೧] ಕೆರೆಯ ದಡದಲ್ಲಿ ನೆಡಲಾದ ಬಾದುಬ್ಬೆಯ ಪ್ರತಿಮೆಯನ್ನು ನೋಡಿದರೆ ಇದು ಬಾದುಬ್ಬೆ ದೇವತೆಯ ಹೆಸರಿನಲ್ಲಿ ನಿರ್ಮಿಸಲಾದ ಕೆರೆಯಾಗಿರುವುದು ವೇದ್ಯವಾಗುತ್ತದೆ.[೩೨]

ಕೆರೆಯ ನಿರ್ಮಾಣದ ನಿದರ್ಶನಗಳಂತೆಯೇ ಅವುಗಳ ಜೀರ್ಣೋದ್ಧಾರದ ನಿದರ್ಶನಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ತಮ್ಮ ತಾಯಿಯಾದ ಸೋರಿ–ಗಾವುಂಡಿಯ ಅಪೇಕ್ಷೆಯಂತೆ ಒಡೆದು ಹೋದ ಕೆರೆಯನ್ನು ಜೀರ್ಣೋದ್ಧಾರ ಮಾಡಿ ಪುಣ್ಯಪಡೆದ ಮೂವರು ಸಹೋದರರನ್ನು ಒಂದು ಶಾಸನ ಬಹುವಾಗಿ ವರ್ಣಿಸಿದೆ.[೩೩] ತಾವು ಮಾಡಿದ ಉದಕದಾನದ ಫಲ ತಮ್ಮ ತಾಯಿಗೆ ಲಭಿಸುತ್ತದೆಯೆಂಬ ನಂಬಿಕೆ ಅವರದಾಗಿತ್ತು. ಅಯ್ಯಪದೇವ ಎಂಬಾತನು ಆಳುತ್ತಿರುವಾಗ ಚೋರಯ್ಯ

ಮುಂತಾದವರು ಸೇರಿ ಅಯ್ಯಪದೇವನಿಂದ ಕೆರೆಗೆ 'ಬಿತ್ತುವಾಟ'ವನ್ನು ಪಡೆದ ವಿಷಯ ಮತ್ತೊಂದು ಶಾಸನದಲ್ಲಿದೆ.[೩೪] ನಾಣಿಮಯ್ಯನೆಂಬಾತ ಕೆರೆಗಳನ್ನು ಕಟ್ಟಿಸಿದ್ದಲ್ಲದೆ ಒಂದು ಹೊಕ್ಕರಣೆಯನ್ನು ಮಾಡಿಸಿದುದು ಇನ್ನೊಂದು ಶಾಸನದಿಂದ ತಿಳಿಯುತ್ತದೆ.[೩೫]

ತರ್ದವಾಡಿ ನಾಡನ್ನಾಳುತ್ತಿದ್ದ ತೈಲಪನು ಕಾಜೊರ್ೀಳದ ಸಂಬಯ್ಯನ ಕೆರೆಗೆ; ಪೆರ್ಗ್ಗಡೆ ವೈಜನಾಥಯ್ಯ, ತಡವಲಗೆಯ ಪ್ರಭು, ದಂಡನಾಯಕ ಕಲಿದೇವಯ್ಯಗಳು ಅಥರ್ಗಾದ ಕೆರೆಗೆ; ಮಹಾಮಂಡಳೇಶ್ವರ ಸೋಯಿದೇವರಸ ಯರಗಲ್ಲದ ಪ್ರಭು ಅಪ್ಪರಸ, ನಂದಿಮರಸ ಮತ್ತು ಮೇಲಾಳ್ಕೆ ಪೆರ್ಗ್ಗಡೆ ನಾಕರಸರು ಸಾಂತಿಶೆಟ್ಟಿ ಕೆರೆ-ಗಳ ಸಂರಕ್ಷಣೆಗೆ ಭೂಮಿದಾನ ಮಾಡಿದ ಉಲ್ಲೇಖಗಳು ಶಾಸನಗಳಲ್ಲಿವೆ.[೩೬]

ಸಿಗಣೂರಿನ ಎಪ್ಪತ್ತಣ್ಬರು ಆ ಊರಿನ ದಕ್ಷಿಣದಲ್ಲಿದ್ದ ತಾವರೆಗೆಯ ಏರಿಯ ಮೇಲೆ ಸೇರಿ ಕೆರೆಯ ಕೆಳಗಿದ್ದ ಗದ್ದೆಯಲ್ಲಾದ ಬಿತ್ತುವಾಟವನ್ನು ಆಚಂದ್ರಾರ್ಕವಾಗಿ ಕೆರೆಗೆ ಕೊಟ್ಟ ಸಂಗತಿ ಒಂದು ಶಾಸನದಿಂದ ತಿಳಿಯುತ್ತದೆ.[೩೭] ಮಹಾ-ಸಾಮಂತ ಮಾರ್ತಂಡಯ್ಯನೆಂಬವನು ಕೆರೆಗೆ ಭೂಮಿಯನ್ನು ದಾನ ಕೊಟ್ಟಿದ್ದಲ್ಲದೆ ಆ ಭೂಮಿಯ ಬಗ್ಗೆ ಜಗಳ ಬಾರದಂತೆ ಒಂದು ಶಾಸನವನ್ನು ಬರೆಯಿಸಿದ್ದನಂತೆ.[೩೮] ಬನ್ನಿಯೂರ ಅಗ್ರಹಾರದ ಕೆರೆಯನ್ನು ಸಾರ್ವಜನಿಕರು ದುರಸ್ತಿಮಾಡಲು ವಿಫಲ-ರಾದಾಗ ಆ ಊರಿನ ದೊರೆಯೇ ಮುಂದಾಗಿ ಅದನ್ನು ಪುನಃ ಕಟ್ಟಿಸಿ ಅದಕ್ಕೆ 'ತುಂಬಸಮುದ್ರ' ಎಂಬ ಹೆಸರಿಟ್ಟ ಪ್ರಸಂಗವೂ ಕೆರೆಯ ಜೀರ್ಣೋದ್ಧಾರದ ಉತ್ತಮ ನಿದರ್ಶನವಾಗಿದೆ.[೩೯] ಹೀಗೆ ಕೆರೆಗೆ ಬಿಡಲಾದ ಭೂಮಿದ್ರವ್ಯಗಳನ್ನು ಕೆರೆ-ಗಲ್ಲದೆ ಬೇರೆ ಉದ್ದೇಶಗಳಿಗಾಗಿ ಬೇರೆ ಯಾರೂ ಬಳಸುವಂತಿರಲಿಲ್ಲ. ಹಾಗೆ ತಪ್ಪು ಮಾಡಿದವನು ಲಿಂಗವನ್ನು ಒಡೆದ ಪಾಪಕ್ಕೆ ಹಾಗೂ ಗೋವುಗಳನ್ನು ಕೊಂದ ಪಾಪಕ್ಕೆ ಗುರಿಯಾಗುತ್ತಾನೆಂಬುದನ್ನು ಮೇಲಿನ ಶಾಸನವೇ ತಿಳಿಸುತ್ತದೆ.

ಇವಲ್ಲದೆ ಗತ್ತುರಗಿಯ ಸೀಮೆಯ ಕೆರೆ, ಮುತ್ತಗಿಯ ಗಾವುಂಡಗೆರೆ, ಚಿಕ್ಕಕೆರೆ ತಂಬದ ಹಣತಗೆರೆ ಸರೂರಿನ ಅರಳಿಗೆರೆ ಇವು ತರ್ದವಾಡಿ ನಾಡಿನ ಪ್ರಮುಖ ಕೆರೆ-ಗಳಾಗಿದ್ದವು. ಮಲಘಾಣ, ಅಥರ್ಗಾ, ದೇವರನಾರದಗಿ ನಾಲತವಾಡ ಶಾಸನಗಳೂ ಕೆರೆಗಳಿಗೆ ಸಂಬಂಧಿಸಿದ ವಿವರಗಳನ್ನೊಳಗೊಂಡಿವೆ.[೪೦]

ಕೆರೆಗಳಂತೆಯೆ ಅರವಟ್ಟಿಗೆಗಳ ನಿರ್ಮಾಣದ ಬಗ್ಗೆ ಕೆಲವು ಶಾಸನಗಳು ಹೇಳುತ್ತವೆ.[೪೧] ಕೆರೆ ಕಾಲುವೆಗಳ ಜೊತೆಗೆ ಶಾಸನಗಳು ಭೀಮಾ, ಕೃಷ್ಣಾ ಮೊದಲಾದ ನದಿಗಳನ್ನು ಹೆಸರಿಸಿವೆಯಾದರೂ ಅವುಗಳ ನೀರಿನ ಬಳಕೆಯ ಬಗ್ಗೆ ಏನನ್ನೂ ಹೇಳಿಲ್ಲ.

ಶಾಸನ ಮತ್ತು ಕಾವ್ಯಗಳಲ್ಲಿ ಕೆರೆ ಕಾಲುವೆಗಳ ವರ್ಣನಾ ಪ್ರಸಂಗಗಳು ಸಾಕಷ್ಟು ಸಿಗುತ್ತವೆ. ಲಕ್ಷ್ಮೇಶ್ವರದ ಪಶ್ಚಿಮಕ್ಕೆ ಆರು ಮೈಲುಗಳ ಅಂತರದಲ್ಲಿರುವ ಕಳಸದಲ್ಲಿದ್ದ ಕೆಂಡಲಿಗೆಱೆಯನ್ನು ಒಂದು ಶಾಸನ ಹೀಗೆ ವರ್ಣಿಸಿದೆ: [೪೨]

> "ಕುಲಗಿರಿ ಭೀತಿಯಿಂದೆ ಮಱೆವೊಕ್ಕಡೆ ಕೊಂಡ ಸರೋರುಹಾಧರಂ
> ನೆಲಸಿದ ಬ್ಜವಾಹನನೆನಲ್ದಿನ ರಾಜ ನಿವಾಸಮಾದ ಭೂ
> ತಳಸತಿಗೊಳ್ಪನಾಳ್ದ ನವ ಮೇಖಳೆಯೆಂಬ ಸಮುದ್ರದನ್ತೆ ಕೊ
> ಣ್ಡಲಿಗೆಱೆಯೊಪ್ಪಿ ತೋರ್ಪುದೆನೆ ಬಿಣ್ಪನೊಳಾವರಿ ಸಿದ್ಧ-
> ಗಪೆಂಪಿನೊಳ್"

ಪಂಪಾದಿ ಕವಿಗಳ ಕಾವ್ಯಗಳಲ್ಲೂ ಕೆರೆಕಾಲುವೆಗಳ ಪ್ರಸ್ತಾಪ ಬರುತ್ತದೆ. ಪಂಪಭಾರತದ ಹಸ್ತಿನಾಪುರ ವರ್ಣನೆಯಲ್ಲಿ 'ಗಗನತಳಮೆ ಪರಿದುಬಿದ್ದುದೆನಿಪ ಬಹು ತಟಾಕದಿಂ' ಎಂಬ ಮಾತು ಬಂದಿದೆ.[೪೩] ಅದೇ ಕೃತಿಯಲ್ಲಿ ಕಾಲುವೆಗಳ ವರ್ಣನೆ,[೪೪] ಕೆಯ್ವೊಲದ[೪೫] ಪ್ರಸ್ತಾಪವೂ ಬಂದಿದೆ. ಆದಿ ಪುರಾಣದಲ್ಲಿಯ 'ಜಲಾಶಯಂಗಳುಮಂ ನಿಮ್ನಗಾತಟ ನಿಕಟವರ್ತಿಗಳಪ್ಪ ದ್ರೋಣಾಮುಖಂಗಳುಮಂ'[೪೬] ಎಂಬ ಮಾತಿನಲ್ಲಿಯೂ ಅಂದಿನ ಕೆರೆ ಕಾಲುವೆ ಜಲಾಶಯಗಳನ್ನೇ ತಿಳಿಸಲಾಗಿದೆ. ಅಜಿತಪುರಾಣವು ಅರಘಟ್ಟೀಯಂತ್ರದ ಸುಂದರ ವರ್ಣನೆಯನ್ನು ನೀಡುತ್ತದೆ.[೪೭] ಹೀಗೆಯೇ ಉಳಿದ ಕೆಲ ಕಾವ್ಯಗಳಲ್ಲಿ ಬಂದಿರುವ ಪುರವರ್ಣನೆಯ ಪ್ರಸಂಗಗಳಲ್ಲಿ ಆಯಾ ಊರಿನ ಕೆರೆಕಾಲುವೆಗಳ ವರ್ಣನೆ ತಪ್ಪದೇ ಬಂದಿರುವುದನ್ನು ನೋಡಬಹುದು. ಆದರೆ ಕಾವ್ಯಗಳಲ್ಲಿ ವರ್ಣಿತವಾಗಿರುವ ಕೆರೆಗಳು ನೈಸರ್ಗಿಕ ಕೆರೆ ಕಾಲುವೆಗಳ ವರ್ಣನೆಗಳಾಗಿದ್ದು ಕೆಲವೊಮ್ಮೆ ಅವು ಕಾಲ್ಪನಿಕವಾಗಿರುವ ಸಾಧ್ಯತೆಯೂ ಇದೆ.

ಹೀಗೆ ಕದಂಬರಿಂದ ಮೊದಲುಗೊಂಡು ವಿಜಯನಗರದ ಅರಸರವರೆಗೂ ಕರ್ನಾಟಕದಲ್ಲಿ ನೂರಾರು ಕೆರೆಕಾಲುವೆಗಳು ನಿರ್ಮಾಣಗೊಂಡುದಕ್ಕೆ ಶಾಸನಗಳು ಸಾಕ್ಷಿಯಾಗಿವೆ. "ವಿಜಯನಗರದ ಒಂದನೆಯ ದೇವರಾಯನ ಆಳ್ವಿಕೆಯಲ್ಲಿ ಹರಿಹರದ ಹತ್ತಿರ ಹರಿದ್ರಾನದಿಗೆ ಹಾಕಿದ ಆಣೆಕಟ್ಟಿನಿಂದ ಒಕ್ಕಲುತನಕ್ಕೆ ಬಹಳ ಸಹಾಯವಾಯಿತು. ಕೃಷ್ಣದೇವರಾಯ ಮತ್ತು ಚಿಕ್ಕದೇವರಾಜರು ಹೊಸಪೇಟೆ ಕೋಲಾರ ಮೊದಲಾದ ಕಡೆಗಳಲ್ಲಿ ಕೆರೆಕಾಲುವೆಗಳನ್ನು ಮಾಡಿಸಿ ಕೃಷಿಗೆ ಬಹಳ ಅನುಕೂಲ ಮಾಡಿದರು.[೪೮]

ಒಟ್ಟಾರೆ ಕೆರೆ ಕಾಲುವೆಗಳು ಪ್ರಾಚೀನ ಕರ್ನಾಟಕದ ಪ್ರಮುಖ ನೀರಾವರಿ ಸಾಧನಗಳಾಗಿದ್ದು ನಾಡಿನ ಆರ್ಥಿಕ ವ್ಯವಸ್ಥೆಯ ಮೇಲೆ ನೇರ ಪರಿಣಾಮ ಬೀರುತ್ತಿ-

ದ್ದವು. ಒಂದೆಡೆ ಕೃಷಿಗೆ ಹಾಗೂ ಇನ್ನೊಂದೆಡೆ ಸಾಮಾಜಿಕ ಬಳಕೆಗೆ ಸಾಧನಗಳಾಗಿದ್ದ ಈ ಕೆರೆಕಾಲುವೆಗಳಿವೆ ದ್ವಿಮುಖ ಮಹತ್ವವಿತ್ತು. ಇದೇ ಕಾರಣಕ್ಕಾಗಿ ಅಂದಿನ ಜನ ಕೆರೆ ಕಾಲುವೆಗಳ ನಿರ್ಮಾಣಕ್ಕೇ ಹೆಚ್ಚಾಗಿ ಹಾತೊರೆಯುತ್ತಿದ್ದರೆಂದು ತೋರುತ್ತದೆ. 'ಕನ್ನಡಿಗರ ಔದಾರ್ಯ ಮುಖ್ಯವಾಗಿ ಪ್ರಕಟವಾಗಿರುವುದು ಎರಡು ಕಡೆ—ಒಂದು ದೇವಸ್ಥಾನ ನಿರ್ಮಾಣದಲ್ಲಿ ಮತ್ತೊಂದು ತಟಾಕ ನಿರ್ಮಾಣದಲ್ಲಿ'[೪] ಎಂಬ ಮಾತಿನಲ್ಲಿಯೂ ಇದೇ ಅರ್ಥವಿದೆ. ಕೆರೆ ಕಾಲುವೆಗಳ ನಿರ್ಮಾಣದ ಹಿಂದೆ ನಮ್ಮ ಪ್ರಾಚೀನರು ಇರಿಸಿಕೊಂಡಿದ್ದ ಬಹುಮುಖ ಧ್ಯೇಯ–ಧೋರಣೆಗಳನ್ನು ನಾವಿಲ್ಲಿ ಗುರುತಿಸಬೇಕು. ವ್ಯವಸಾಯ ಪ್ರಜ್ಞೆ, ಆರ್ಥಿಕ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಹಾಗೂ ಪರಿಸರ ಪ್ರಜ್ಞೆಗಳೆಲ್ಲವೂ ಅವರಲ್ಲಿ ಇದ್ದಿರಬೇಕು. ಇವೆಲ್ಲಕ್ಕಿಂತ ಮಿಗಿಲಾಗಿ ಪ್ರಾಚೀನರಿಂದ ನಾವು ಕಲಿಯಬೇಕಾದ ಪಾಠವೆಂದರೆ ಸಹಕಾರತತ್ವ. ನಿರ್ದಯರಾಗಿ ಕಾಡನ್ನು ನಾಶಗೊಳಿಸುತ್ತಿರುವ ನಾವು ಮಳೆಯನ್ನು ಕಡಿಮೆಗೊಳಿಸುತ್ತಿದ್ದೇವೆ. ಕಡಿಮೆ ಮಳೆಯಿಂದಾಗಿ ಕೆರೆ ಜಲಾಶಯಗಳಲ್ಲಿ ನೀರಿನ ಶೇಖರಣೆ ಮಾಡುವಲ್ಲಿ ವಿಫಲರಾಗುತ್ತಿದ್ದೇವೆ. ಹೀಗಾಗಿ ನೀರಿನ ತೀವ್ರ ಬವಣೆಯನ್ನನುಭವಿಸುತ್ತಿರುವ ನಾವು ಹನಿನೀರಿಗಾಗಿ ಪಾತಾಳಕ್ಕಿಳಿಯುವ ಭಗೀರಥ ಪ್ರಯತ್ನದಲ್ಲಿ ತೊಡಗಿದ್ದೇವೆ. ಇಷ್ಟಾದರೂ ಇನ್ನೂ ಕಾಲ ಮಿಂಚಿಲ್ಲ; ಕಾಡನ್ನು ಬೆಳೆಸಿ ಮಳೆಯನ್ನು ಉಳಿಸಿ, ಕೆರೆ ಕಾಲುವೆ ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸಿ ಸದುಪಯೋಗ ಪಡೆದಲ್ಲಿ ನಮ್ಮ ನಾಡೂ ಖಂಡಿತವಾಗಿ ಸುಭಿಕ್ಷವಾಗಬಲ್ಲುದು.

ಅಡಿಟಿಪ್ಪಣಿಗಳು

೧) SII-Vol-IV-No-267
೨) E.I-Vol-16 P-83
೩) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು-೪೫೨
೪) —ಅದೇ— ಪು-೪೫೨
೫) ಪಂಪಭಾರತ-೨೯೭ ವ.
೬) E-I XXXIV 1763 No-38 P-239
೭) ಪಂಪಭಾರತ I-೫೪; ಅಜಿತಪುರಾಣ I-೨೨
೮) ಕ.ಶಾ.ಸಾರಿ. ಅ. ಪು-೩೬೪
೯) Epigraphia Carnatica III Sr 134-C-910 AD.
೧೦) Bombay Karnatika Inscriptions I-ii 151- 1102 A.D.
೧೧) E.C. VIII Sb-359. 1129 A.D.
೧೨) KI-I 24-1148 A.D.

೧೩) ಪಂ.ಭಾ. ೨-೯೭ ವ.
೧೪) BKI-I-ii 150-1102 A.D.
೧೫) Indian Antiquary–XII P-222 929 A.D.
೧೬) SII-XX-93
೧೭) BKI I-i-74-1041 A.D.
೧೮) E.C VIII Nr-58–1062 A.D.
೧೯) E.C XII Si-9 1072-A.D.
೨೦) E.C VI-3
೨೧) SII XI-38
೨೨) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು-೪೪೬

ಈ ಮುಗುಂದ ಮೂವತ್ತರ ಪ್ರದೇಶವು ಇಂದಿನ ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿದ್ದು 'ಮುಗುಂದ'ವನ್ನು 'ಮುಗದ' ಎಂದು ಕರೆಯಲಾಗುತ್ತದೆ. ಮುಗದ ಗ್ರಾಮದಲ್ಲಿ ಇಂದಿಗೂ ಒಂದು ವಿಶಾಲವಾದ ಕೆರೆಯು ಬಳಕೆಯಲ್ಲಿದೆ. ಅಲ್ಲದೆ ಅಂದಿನ ಮುಗುಂದದ ವ್ಯಾಪ್ತಿಯಲ್ಲಿದ್ದಿರಬಹುದಾದ ಇಂದಿನ ಕೆಲಗೇರಿ ನಿಗದಿ, ಮನಗುಂಡಿ ಮೊದಲಾದ ಅನೇಕ ಊರುಗಳಲ್ಲಿ ಕೆರೆಗಳಿದ್ದು ಇವುಗಳನ್ನು ಚಾವುಂಡರಾಯನೇ ಮಾಡಿಸಿರುವ ಸಾಧ್ಯತೆಯಿದೆ. ಇಲ್ಲಿ ಪ್ರಸ್ತಾಪಿಸಲಾದ ಕೆಲಗೇರಿಯಂತೂ ಕೆರೆಯಿಂದಾಗಿಯೇ ರೂಪುಗೊಂಡಿರುವ ಹೆಸರಾಗಿದೆ. ಹಿಂದೊಮ್ಮೆ ಬಹುಶಃ ವ್ಯಕ್ತಿಯಿಂದ ನಿರ್ಮಾಣಗೊಂಡ ಕೆರೆಯ ಹೆಸರಿನಿಂದ ಕರೆಯಲಾಗುತ್ತಿದ್ದ ಊರಿನ ಹೆಸರುಗಳು ಇಂದು ಸ್ವಲ್ಪ ಬದಲಾವಣೆಗೊಂಡಿವೆ. 'ಗಂಗಸಮುದ್ರ' ಇಂದು 'ಗಂಗಸಂದ್ರ'ವಾಗಿದೆ. (BKI-I: 74-1071 AD) ಶಿವನಸಮುದ್ರ, ಮಾಯಸಮುದ್ರಗಳು ಇಂಥದೇ ಊರುಗಳಾಗಿದ್ದು ಹಿಂದೆ ತಾವು ಹೊಂದಿದ ಕೆರೆಗಳನ್ನು ಇವು ಸೂಚಿಸುತ್ತವೆ.

೨೩) SII XI-38
೨೪) E-C XV P-32
೨೫) E-C II 162
೨೬) ಜೈನ ಮಂದಿರಗಳನ್ನು ಕಟ್ಟಿಸಿ ಅದಕ್ಕಾಗಿ ಒಂದು ಕೆರೆಯನ್ನು ಕಟ್ಟಿಸಿರುವ ಅನೇಕ ದಾಖಲೆಗಳು ನಮಗೆ ಸಿಗುತ್ತವೆ. ಹಾಗೆಯೇ ಲಕ್ಕುಂಡಿಯಲ್ಲಿ ದೇವಾಲಯದ ಜೊತೆಗೇ ಅತ್ತಿಮಬ್ಬೆ ಈ ಕೆರೆಯನ್ನು ಕಟ್ಟಿಸಿರಬಹುದು.
೨೭) E-C I No-5-1000 A.D.
೨೮) ತರ್ದವಾಡಿ ನಾಡು ಒಂದು ಅಧ್ಯಯನ ಪು-೨೦೫
೨೯) E-C VIII Nr-35
೩೦) IA-XII P-222
೩೧) ಕರ್ನಾಟಕ ಭಾರತಿ ಸಂ-೬, ಸಂ-೩, ಪು-೮೧
೩೨) ಬಾದುಬ್ಬೆಗೆ ದತ್ತಿ ಬಿಡಲಾದ ಭೂಮಿ ಮತ್ತು ಹಳ್ಳಗಳನ್ನು ಶಾಸನಗಳು 'ಬಾದುಬ್ಬೆಯ ಪಾಳು' 'ಬಾದುಬ್ಬೆಯ ಕಟ್ಟೆ' 'ಬಾದುಬ್ಬೆಯ ಹಳ್ಳ' ಎಂದೆಲ್ಲ ಕರೆದಿರುವುದನ್ನು ನೋಡಬಹುದು.

೩೩) KI I-24 1148 A.D.
೩೪) SII IX-i 20-C-850 A.D.
೩೫) B.K.I-I-ii 196-1121 A.D.
೩೬) ತರ್ದವಾಡಿ ನಾಡು ಒಂದು ಅಧ್ಯಯನ ಪು-೨೦೬
೩೭) E-C XV P-331-1028 A.D.
೩೮) BKI-I ii-177-1125 A.D.
೩೯) MAR-(1130) P-235 1080 A.D.
೪೦) ತರ್ದವಾಡಿ ನಾಡು ಒಂದು ಅಧ್ಯಯನ ಪು-೨೦೬
೪೧) BKI-I-ii 196-1121 AD, ಶಾಸನ ಸಾಹಿತ್ಯ ಸಂಚಯ-೧೦೮
೪೨) SII Vol-9 Part-I P-93
೪೩) ಪಂ. ಭಾ ೧-೫೮
೪೪) —ಅದೇ— ೧-೫೨
೪೫) —ಅದೇ ೧-೫೩
೪೬) ಆದಿಪುರಾಣ ೮-೬೩ ಪ.
೪೭) ಅಜಿತನಾಥ ಪುರಾಣ ೧-೨೨; ೪-೫೫
೪೮) ಕನ್ನಡ ನಾಡಿನ ಚರಿತ್ರೆ ಭಾಗ-೧ ಪು-೧೨೩
೪೯) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು-೪೫೨

ಗೃಹಕಾರ್ಮಿಕರ ಸಮಸ್ಯೆಗಳು : ವೈಜ್ಞಾನಿಕ ವಿಶ್ಲೇಷಣೆ

● ಶ್ರೀಮತಿ ವಿನೀತಾ ಪೈ

ಈ ಶೀರ್ಷಿಕೆಯನ್ನು ಓದಿದಾಕ್ಷಣ ಓದುಗರಲ್ಲಿ ಹಲವಾರು ವಿಚಾರಗಳು ಉದ್ಭವಿಸಬಹುದು. ಬಹಳಷ್ಟು ಜನರಿಗೆ ಅದರಲ್ಲೂ ಗೃಹಿಣಿಯರಿಗೆ, "ಅಯ್ಯೋ ಅವರಿಗೇನಪ್ಪಾ ಸಮಸ್ಯೆ ? ಸಮಸ್ಯೆಗಳೆಲ್ಲಾ ದಿನ ಬೆಳಗಾದರೆ ಅವರೊಂದಿಗೆ ಏಗುವ ನಮಗೇನೇ"—ಎಂದೆನಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಸಂಜೆ ಮನೆಯ ಮುಂದಿನ ಕಟ್ಟೆಯ ಮೇಲೆಯೋ, ಯಾವುದೇ ಸಾಮಾಜಿಕ-ಧಾರ್ಮಿಕ ಕಾರ್ಯಕ್ರಮದಲ್ಲಿಯೋ ಒಂದೆಡೆ ಸೇರಿದಾಗ ಈ ಗೃಹಕಾರ್ಮಿಕರ ವಿಷಯ ಚರ್ಚೆಗೆ ಬರದಿದ್ದರೆಯೇ ಆಶ್ಚರ್ಯ. ಯಾಕೆಂದರೆ, ನಮ್ಮ ನಿತ್ಯ ಜೀವನದ ಒಂದು ಅವಿಭಾಜ್ಯ ಅಂಗವೆನ್ನುವಷ್ಟು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವ ಮಹಿಳಾ ಕಾರ್ಮಿಕರ(ಬೂಬುಗಳ) ಪ್ರಶ್ನೆ ಬಹಳ ಸೂಕ್ಷ್ಮವಾದದ್ದು. ಅವರಿಲ್ಲದೇ ಕೆಲಸ ಸಾಗುವುದಿಲ್ಲವಾದರೂ ಅವರ ಬಗೆಗೆ ಆಳವಾಗಿ, ವೈಜ್ಞಾನಿಕವಾಗಿ ಯೋಚಿಸಿದ್ದು ನನ್ನ ಗಮನಕ್ಕೆ ಬಂದಿಲ್ಲ. ಅವರ ವಿಷಯ ಬಂದಾಗ ಒಂದು ತರಹದ ಸಿಟ್ಟು, ಉದಾಸೀನತೆ, ತಾತ್ಸಾರದಿಂದ ಜನರು ಮಾತನಾಡುವುದುಂಟು. ಎಲ್ಲರೂ ಹೇಳುವುದೊಂದೇ : 'ಈಗ ಮೊದಲಿನಂತೆ ಯಾರ್ರೀ ಮನೆಕೆಲಸಕ್ಕೆ ಸಿಗುತ್ತಾರೆ ? ಸಿಕ್ಕರೂ ಎಲ್ಲಿ ಸರಿಯಾಗಿ ಕೆಲಸಕ್ಕೆ ಬರುತ್ತಾರೆ ? ಬಂದರೂ ಮಾಡುವ ಕೆಲಸವಂತೂ ಹೇಳಬಾರದು: ಅವರು ಮಾಡುವುದಕ್ಕಿಂತ ನಾವೇ ಮಾಡಿಕೊಂಡರೆಷ್ಟೋ ಒಳಿತು. ನಮಗೆ ಹೆಚ್ಚು ಕೆಲಸಗಳಿದ್ದಾಗಲೇ ಇವರು ಹೇಳದೇ ಕೇಳದೇ ಕೆಲಸಕ್ಕೆ ಗೈರು ಹಾಜರು. ಮತ್ತೆ ಇವರು ಮಾಡುವ ಕೆಲಸಕ್ಕೆ ಎಷ್ಟು ದುಡ್ಡು ಕೊಟ್ಟರೂ ಕಡಿಮೆಯೇ. ದುಡ್ಡು ಸುರಿದರೂ ನಂಬಿಕೆ, ವಿಶ್ವಾಸಗಳಿಂದ ಕೆಲಸವನ್ನಾದರೂ ಮಾಡುತ್ತಾರೆಯೇ ? ಅದೂ ಇಲ್ಲ. ಕೆಲಸಕ್ಕೆ ಬಂದಾಗ ಅವರನ್ನು ಕಾಯುವುದೇ ನಮಗೊಂದು ದೊಡ್ಡ ಕೆಲಸವಾಗುತ್ತದೆ. ಜೊತೆಗೆ ಚಿಕ್ಕ ಚಿಕ್ಕ ಮಕ್ಕಳು ಬೇರೆ. ಅವರ ಗಲಾಟೆ ಒಂದೆಡೆಗೆ......' ಎಂಬಿತ್ಯಾದಿ ದೂರುಗಳ ಸರಮಾಲೆಯನ್ನೇ ಮುಂದಿಡುತ್ತಾರೆ.

ಈ ಎಲ್ಲ ದೂರುಗಳು ಅಪ್ರತ್ಯಕ್ಷವಾಗಿ ಗೃಹಕಾರ್ಮಿಕರ ಸಮಸ್ಯೆಗಳನ್ನು ಕೂಗಿ ಹೇಳುತ್ತಿದ್ದರೂ ಜನರು ಆ ಕೂಗಿಗೆ ಕಿವುಡರಾಗಿ, ಈ ಮಹಿಳೆಯರನ್ನು ಟೀಕಿಸುವುದನ್ನು ಮಾತ್ರ ಕಾಣುತ್ತೇವೆಯೇ ಹೊರತು ಅವರ ಬಗೆಗೆ ಕರುಣೆ, ಕಳಕಳಿ ಇಲ್ಲವೇ ಇಲ್ಲ. ತಿಳಿದುಕೊಳ್ಳಬಯಸುವವರೂ ತುಂಬ ಕಡಿಮೆ.

ಗೃಹಕಾರ್ಮಿಕರ ಮೇಲೆ ಜನರು ಅವಲಂಬಿಸಿರುವುದು ಇಂದು ನಿನ್ನೆಯ ಮಾತೇನಲ್ಲ. ನಮ್ಮ ಇತಿಹಾಸದ ಪುಟಗಳನ್ನು ತಿರುವಿದಾಗ ನಮ್ಮ ಸಮಾಜದ ಎಲ್ಲ ಹಂತಗಳಲ್ಲಿ ಈ ಗೃಹಕಾರ್ಮಿಕರು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ನಾವು ತಿಳಿಯುತ್ತೇವೆ. ಆದರೂ ವಿವಿಧ ಹಂತಗಳಲ್ಲಿ ಈ ಕಾರ್ಮಿಕರಿಗೂ ಅವರ ಮಾಲಿಕರಿಗೂ ಬೆಳೆದುಬಂದಿರುವ ಸಂಬಂಧಗಳು ಒಂದೇ ರೀತಿಯಲ್ಲಿ ಬೆಳೆದು ಬಂದಿಲ್ಲ. ಉದಾಹರಣೆಗೆ, ಜಮೀನ್ದಾರೀ ಸಮಾಜದಲ್ಲಿ (Feudal Society) ಜಮೀನುದಾರ ಮತ್ತವನ ಕುಟುಂಬ ತಮ್ಮ ಹೊಲ–ಮನೆಗಳಲ್ಲಿಯ ಕೆಲಸಕ್ಕಾಗಿ ಬೇರೆ ರೈತಾಪಿ ಕುಟುಂಬಗಳ ಮೇಲೆ ಅವಲಂಬಿಸಿದ್ದು ಕಂಡುಬರುತ್ತದೆ. ಅಲ್ಲಿ ರೈತಾಪಿ ಕುಟುಂಬದ ಪುರುಷ ಸದಸ್ಯರು ಮನೆಯ ಹೊರಗಿನ ಕೃಷಿಗೆ ಸಂಬಂಧಿಸಿದ ಎಲ್ಲ ಕೆಲಸಗಳನ್ನು ನಿರ್ವಹಿಸಿದರೆ, ಮಹಿಳಾ ಸದಸ್ಯರು ಹೆಚ್ಚಾಗಿ ತಮ್ಮ ಪುರುಷರಿಗೆ ಸಹಾಯ ಸಲ್ಲಿಸುವುದರೊಂದಿಗೆ, ಮನೆಯ ಒಳಗಿನ ಕೆಲಸಗಳನ್ನು ನಿಭಾಯಿಸುತ್ತಿದ್ದರು. ಇಂತಹ ಒಂದು ಸಮಾಜದಲ್ಲಿ ರೈತರ ಸಂಪೂರ್ಣ ಕುಟುಂಬ ಈ ಜಮೀನುದಾರರಲ್ಲಿ ಕೆಲಸ ಮಾಡುತ್ತಿತ್ತಲ್ಲದೆ ಅವರ ಮಧ್ಯದಲ್ಲಿ ಒಂದು ರೀತಿಯ ಆತ್ಮೀಯ ಬಾಂಧವ್ಯ ಬೆಳೆಯುತ್ತಿತ್ತು. ಹೆಚ್ಚಾಗಿ ಈ ಒಂದು ಸಂಬಂಧ ತಂದೆ–ಮಕ್ಕಳ ಮಧ್ಯದ ಸಂಬಂಧ (Patriarchal relationship)ದಂತೆ ಇರುತ್ತಿತ್ತು. ಈ ಕಾರ್ಮಿಕರು ತಮ್ಮ ಧಣಿಗಳ ಕುಟುಂಬವೆಂದರೆ ತುಂಬ ಗೌರವದಿಂದ ವಿಶ್ವಾಸದಿಂದ ಕಾಣುತ್ತಿದ್ದರಲ್ಲದೆ ತಮ್ಮ ಜೀವನವನ್ನೇ ಅವರಿಗಾಗಿ ತೇಯುತ್ತಿದ್ದರು. ಧಣಿಗಳು ಸಹ ಈ ಕಾರ್ಮಿಕರನ್ನು ಬಹಳ ವಿಶ್ವಾಸಪೂರ್ವಕವಾಗಿ ನೋಡಿಕೊಳ್ಳುತ್ತಿದ್ದರು. ಆದರೆ ಸಮಯ ಸರಿದಂತೆ ಸಮಾಜದಲ್ಲಾದ ಹಲವಾರು ಬದಲಾವಣೆಗಳೊಂದಿಗೆ ಈ ಸಾಮಾಜಿಕ ವ್ಯವಸ್ಥೆ ಸಹ ವಿಘಟಣೆಗೊಂಡು, ಈಗಿನ ವರ್ಗಮೂಲವಾದ ವ್ಯವಸ್ಥೆ ನಿರ್ಮಾಣಗೊಂಡಿತು. ಈ ವ್ಯವಸ್ಥೆಯಲ್ಲಿ ಈ ಗೃಹಕಾರ್ಮಿಕರ ಹಾಗೂ ಅವರ ಮಾಲಿಕರ ನಡುವಿನ ಸಂಬಂಧದಲ್ಲಿ ಅಗಾಧವಾದ ಬದಲಾವಣೆಯಾಗಿದೆ. ಮೊದಲಿನ ಆತ್ಮೀಯ ಬಾಂಧವ್ಯ ಈಗ ನಶಿಸಿಹೋಗಿ ವಸ್ತು ಪ್ರಧಾನವಾದ (Materilistic) ಸಂಬಂಧ ಕಾರ್ಮಿಕ ಮತ್ತು ಮಾಲಿಕರ ನಡುವೆ ಬೆಳೆದು ಬಂದಿದೆ. ಇದರಿಂದಾಗಿ, ಈ ಕಾರ್ಮಿಕರ ಸಮಸ್ಯೆಗಳು ಹೆಚ್ಚಿಚ್ಚು ಸಂಕೀರ್ಣಗೊಂಡಿವೆ. ಇವರ ಪರಿಸ್ಥಿತಿಯನ್ನು ಹತ್ತಿರದಿಂದ ಪರಿಶೀಲಿಸಿದಾಗ, ಅದು ಅತ್ಯಂತ ಶೋಷಿತ ಗುಲಾಮರ ಸ್ಥಿತಿಯಂತೆ ನಿಸಿದರೆ ಆಶ್ಚರ್ಯವಿಲ್ಲ.

ಗೃಹ ಕಾರ್ಮಿಕರ ಸಮಸ್ಯೆಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು— ಅವರ ವ್ಯಕ್ತಿಗತ ಸಮಸ್ಯೆಗಳು ಎಂದರೆ, ಈ ಮಹಿಳೆಯರ ವ್ಯಕ್ತಿತ್ವ, ಅವರ ಮನೋಭಾವ, ವಿಚಾರ, ಅನಿಸಿಕೆಗಳು, ಅವರ ಇರುವು ಮುಂತಾದವು. ಅವರ ಕೆಲಸಕ್ಕೆ ಸಂಬಂಧಪಟ್ಟಂತಹ ಸಮಸ್ಯೆಗಳಲ್ಲಿ ಅವರ ಕೆಲಸ ಮಾಡುವ ಸ್ಥಳ ಅಲ್ಲಿಯ ಸ್ಥಿತಿ ಗತಿ, ಅವರ ಸಂಬಳ, ಸಿಗುವ ಮತ್ತಿತರ ಸೌಲಭ್ಯಗಳೇ ಮುಂತಾದವುಗಳನ್ನು ಸೇರಿಸಬಹುದು. ಅವರ ಈ ಸಮಸ್ಯೆಗಳಿಗೆ, ನಮ್ಮ ಸಾಮಾಜಿಕ ವ್ಯವಸ್ಥೆಯ ಪತನ ಅಥವಾ ಅವರ ಮಾಲಿಕರೊಂದಿಗಿನ ಸಂಬಂಧಗಳಷ್ಟೇ ಅಲ್ಲದೆ ಹಲವಾರು ಕ್ಲಿಷ್ಟವಾದ ಕಾರಣಗಳಿವೆ ಎನಿಸುತ್ತದೆ. ಮೊಟ್ಟಮೊದಲನೆಯದಾಗಿ ಇವರು ಮಹಿಳೆಯರು, ಅದರಲ್ಲೂ ಬಡ ಕುಟುಂಬಗಳಿಂದ ಬರುವಂತಹ, ಕೆಳಜಾತಿಗಳಿಗೆ, ಕೆಳವರ್ಗಕ್ಕೆ ಸೇರಿದಂತಹ, ಅತ್ಯಂತ ಅನ್ಯಥಾಭಾವದಿಂದ(alienated) ನೋಡಿಕೊಳ್ಳಲಾಗುವ ಹಾಗೂ ಶೋಷಿತವರ್ಗಗಳಿಗೆ ಸೇರಿದಂತಹ ಕಾರ್ಮಿಕರು. ಅಷ್ಟೇಅಲ್ಲದೇ, ಇವರು ಮಾಡುವ ಕೆಲಸ ಮನೆವಾಳ್ತಿಗೆ ಸಂಬಂಧಪಟ್ಟಂತಹದು. ಇದರಿಂದಾಗಿ ಇವರನ್ನು ಯಾರೂ ಅಷ್ಟು ಗಮನಕೊಟ್ಟು ಗಹನವಾಗಿ ಪರಿಗಣಿಸುವದಿಲ್ಲ ಎಂದೆನಿಸುತ್ತದೆ. ಇದಕ್ಕೆ ಮುಖ್ಯ ಕಾರಣ, ನಮ್ಮ ಸಮಾಜ ಹಾಗೂ ಸಾಮಾಜಿಕ ವ್ಯವಸ್ಥೆಗಳೇ ಎಂದು ಹೇಳಬಹುದು.

ಸ್ತ್ರೀ–ಪುರುಷರ ಸಂಖ್ಯೆ ನಮ್ಮ ಸಮಾಜದಲ್ಲಿ ಹೆಚ್ಚು ಕಡಿಮೆ ಸರಿಸಮನಾಗಿದ್ದರೂ ಆರ್ಥಿಕ ಕಾರ್ಯಕ್ಷೇತ್ರದಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿ ಭಾಗವಹಿಸುತ್ತಿದ್ದರೂ ಅವರು ಮನೆಯ ನಾಲ್ಕು ಗೋಡೆಗಳ ಮಧ್ಯೆ ಅವಿರತವಾಗಿ ಯಾವುದೇ ಔದ್ಯಮಿಕ ರಂಗದಲ್ಲಿ ದುಡಿಯುತ್ತಿರುವ ಕಾರ್ಮಿಕನಿಗೆ ಕಡಿಮೆಯಿಲ್ಲದೆಯೇ ಮಾಡುವ ಮನೆವಾಳ್ತಿಗೆ ಸಂಬಂಧಪಟ್ಟಂತಹ ಕೆಲಸಕ್ಕೆ ಯಾವ ರೀತಿಯ ಮಹತ್ವವೂ ಇಲ್ಲ; ಇಂಥ ಕುಟುಂಬ, ಪರಿವಾರಕ್ಕೆ ಸಂಬಂಧಪಟ್ಟ ಗೃಹಕೃತ್ಯವನ್ನು ಆರ್ಥಿಕಕಾರ್ಯ(Economi activity) ಎಂತಲೂ ಪರಿಗಣಿಸಿಲ್ಲ. ಹೀಗಾಗಿ ಮಹಿಳೆಯರು ಪುರುಷರ ಮೇಲೆ ಅವಲಂಬಿತರೆಂದೂ, ದ್ವಿತೀಯ ದರ್ಜೆಯ ಪ್ರಜೆಗಳೆಂದೂ ಪರಿಗಣಿಸಲಾಗಿದ್ದಾರೆ. ಪುರುಷಪ್ರಧಾನವಾದ ನಮ್ಮ ಸಮಾಜದಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಭಾಗವಹಿಸುವ ಕ್ರಿಯೆಯ ಮೇಲೆ ಅವಲಂಬಿಸಿ ವಿಂಗಡಿಸಲಾದಂತಹ ನಮ್ಮ ಸಾಮಾಜಿಕ ಪಾತ್ರಗಳೂ ಸಹ ಕಾರಣವಾಗುತ್ತವೆ. ಸ್ತ್ರೀಯರ ದೈಹಿಕ ರಚನೆಯ ಅನುಗುಣವಾಗಿ ಅವರ ಎರಡು ಮುಖ್ಯರೂಪಗಳನ್ನು ಗುರುತಿಸಿ, ಅವುಗಳಿಗೆ ಅನುಗುಣವಾಗಿ ಅವರ ಕಾರ್ಯಕ್ಷೇತ್ರಗಳನ್ನು ನಿರ್ಧರಿಸಲ್ಪಟ್ಟಿರುವುದು ಸರ್ವವಿದಿತ. ಮಕ್ಕಳನ್ನು ಹೊರುವ ಹೆರುವ ಅವರ ನೈಸರ್ಗಿಕಶಕ್ತಿಯ ಅನುಗುಣವಾಗಿ ಮಾತೃತ್ವದ ಮುಕುಟವನ್ನು ಅವರಿಗೆ ತೊಡಿಸಿ, ಮಕ್ಕಳ ಲಾಲನೆ

ಪಾಲನೆಯ ಎಲ್ಲ ಕಾರ್ಯಗಳನ್ನು ಅವರ ಗಾಲಿಗೆ ಸೇರಿಸಿ, ಮನೆಗೆಲಸದ ಇತರ ಜವಾಬ್ದಾರಿಯನ್ನೂ ಅವರ ಮೇಲೆಯೇ ಹೊರಿಸಿ, ಅವರನ್ನು ಆರ್ಥಿಕ ಕ್ಷೇತ್ರದಿಂದ ಹೊರಗಿರಿಸಿದ್ದಾರೆ. ಗೃಹಲಕ್ಷ್ಮಿ, ಮನೆಯ ಅಧಿದೇವತೆ ಎಂದು ಹೊಗಳಿ ತುಂಬ ಜಾಣ್ಮೆಯಿಂದ ಅವರನ್ನು ಮನೆಯ ನಾಲ್ಕು ಗೋಡೆಗಳ ಮಧ್ಯೆ ಒತ್ತರಿಸಿ ಇಟ್ಟು, ಅವರಿಗೂ ತಮ್ಮದೇ ಆದ ವ್ಯಕ್ತಿತ್ವ, ಸ್ವಂತಿಕೆ, ಆತ್ಮಗೌರವ, ಭಾವನೆಗಳು, ವೈಚಾರಿಕ ದೃಷ್ಟಿ, ಆಶೆ-ಆಕಾಂಕ್ಷೆಗಳು ಇರುವುದನ್ನು ಮರೆತಂತಿರುವುದು ನೈಜಸಂಗತಿ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಮುಂತಾದ ಹಕ್ಕುಗಳಿಲ್ಲದೆ ಅವರು ಹೆಚ್ಚೆಚ್ಚು ಪುರುಷಾವಲಂಬಿತರಾಗಿ ಬಾಳಬೇಕಾದುದರಲ್ಲಿ ಆಶ್ಚರ್ಯವಿಲ್ಲ.

ಆದರೆ ಬದಲಾದ ನಮ್ಮ ಸಮಾಜದಲ್ಲಿ ಆರ್ಥಿಕ ಒತ್ತಡದಿಂದಾಗಿ ಮನೆ ಹಾಗೂ ಮಕ್ಕಳ ಜವಾಬ್ದಾರಿಯನ್ನು ಹೊತ್ತಿರುವ ಮಹಿಳೆ ಇಂದು ನೌಕರಿಗೂ ಹೋಗಬೇಕಾಗಿರುವುದು ಅನಿವಾರ್ಯವಾಗಿದೆ. ಆದರೆ, ಹೆಚ್ಚಿನ ಶಿಕ್ಷಣ ಅಥವಾ ಪರಿಣತಿ ಇಲ್ಲದೆ ಇರುವ ಪರಿಸ್ಥಿತಿಯಲ್ಲಿ ಮಹಿಳೆಯರು ಇವು ಬೇಕಿಲ್ಲದ ಅಸಂಘಟಿತ ಕ್ಷೇತ್ರದಲ್ಲಿ ಅದರಲ್ಲಿಯೂ ಮನೆವಾಳ್ತೆಗೆ ಸಂಬಂಧಪಟ್ಟಂತಹ ಕೆಲಸಗಳನ್ನೇ ಆರಿಸಿಕೊಳ್ಳಬೇಕಾಗಿ ಬಂದದ್ದು ಆಶ್ಚರ್ಯವೆನಿಲ್ಲ. ಆದರೆ, ೨೦ ನೇ ಶತಮಾನ ಕೊನೆಗೊಳ್ಳುತ್ತ ಬಂದಿದ್ದರೂ ಜನರು ಈ ಗೃಹ ಕಾರ್ಮಿಕರನ್ನು ಇನ್ನಿತರ ಕಾರ್ಮಿಕರಂತೆ ಕಾಣಲು, ಅವರ ಕೆಲಸವನ್ನು ಆರ್ಥಿಕ ಕ್ರಿಯೆಯೆಂದು ಪರಿಗಣಿಸುವಲ್ಲಿ ಅಸಮರ್ಥರಾಗಿದ್ದಾರೆ. ಸರಕಾರ ಸಹ ಎಲ್ಲ ಇತರ ಕಾರ್ಮಿಕರನ್ನು ಕಾರ್ಮಿಕರೆಂದೂ, ಅವರ ಕೆಲಸವನ್ನು ಆರ್ಥಿಕವಾಗಿ ಉಪಯುಕ್ತ ಕ್ರಿಯೆಯೆಂದು ಗುರುತಿಸಿದ್ದರೂ. ಈ ಗೃಹ ಕಾರ್ಮಿಕರನ್ನು ಸನ್ ೧೯೩೧ ರ ವರೆಗೆ ಕಾರ್ಮಿಕರೆಂದೂ, ಅವರ ದುಡಿಮೆಯನ್ನು ಆರ್ಥಿಕವಾಗಿ ಲಾಭಯುಕ್ತ ದುಡಿಮೆ (Econmically Productive activity) ಎಂದೂ ಪರಿಗಣಿಸಿರಲಿಲ್ಲ. ಸನ್ ೧೯೬೧ ರ ಜನಗಣತಿಯಲ್ಲಿ ಮೊಟ್ಟಮೊದಲಿಗೆ ಈ ಗೃಹ ಕಾರ್ಮಿಕರನ್ನು ಕಾರ್ಮಿಕರೆಂದು ಪರಿಗಣಿಸಿ, ಕಾರ್ಮಿಕರ ಪಟ್ಟಿಯಲ್ಲಿ ಸೇರಿಸಲಾಯಿತು. ಆದರೂ ಅವರಿಗೆ ಈ ಸೇರಿಕೆಯಿಂದ ಎಳ್ಳಷ್ಟೂ ಉಪಯೋಗವಾಗಲಿಲ್ಲ. ಏಕೆಂದರೆ ವೈಜ್ಞಾನಿಕ ಸಮೀಕ್ಷೆಯ ಪ್ರಕಾರ ಸಮಾಜ ಅವರ ದುಡಿಮೆಯನ್ನು ಅತ್ಯಂತ ಕೀಳಾಗಿ ಪರಿಗಣಿಸುತ್ತದೆ. ಆದುದರಿಂದ ಮಹಿಳೆಯರು ತಮ್ಮ ಬದುಕಿನಲ್ಲಿ ಎಲ್ಲ ದಾರಿಗಳು ಮುಚ್ಚಲ್ಪಟ್ಟಾಗ ಮಾತ್ರ ಹೀನವೆನಿಸಿಕೊಂಡಿರುವ ಈ ಕೆಲಸವನ್ನು ಕೈಗೊಳ್ಳುತ್ತಾರೆ. ಇಂತಹ ಅವರ ಅಸಹಾಯಕ ಪರಿಸ್ಥಿತಿಯಿಂದಾಗಿ ಅವರು ಧ್ವನಿ ಎತ್ತಲಾರದ ಮೂಕ, ದುರ್ಬಲ, ಅನಾಮಧೇಯ ಹಾಗೂ ಅಸಂಘಟಿತ ಕಾರ್ಮಿಕರಾಗಿರಲು ಕಾರಣವಾಗಿದೆ. ಇದರಿಂದಾಗಿ ಅವರು ಒಟ್ಟಾಗಿ

ಕಾನೂನಿನಡಿಯಲ್ಲಿ ತಮ್ಮ ಸ್ಥಿತಿಗತಿಗಳನ್ನು ಸುಧಾರಿಸುವುದರಲ್ಲಿ ವಿಫಲರಾಗಿದ್ದಾರೆ. ಅಲ್ಲದೇ, ಸಮಾಜದ ಎಲ್ಲ ವರ್ಗಗಳಿಂದಲೂ ಶೋಷಣೆಗೆ ಒಳಪಟ್ಟಿದ್ದಾರೆ.

ಬೆಳೆಯುತ್ತಿರುವ ಮಧ್ಯಮವರ್ಗ ಹಾಗೂ ಅವರ ಅವಶ್ಯಕತೆಗನುಗುಣವಾಗಿ ಈ ಗೃಹ ಕಾರ್ಮಿಕರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಇದಕ್ಕೆ ಹೆಚ್ಚುತ್ತಿರುವ ಮಧ್ಯಮವರ್ಗದ ದುಡಿಯುತ್ತಿರುವ ಮಹಿಳೆಯರ ಸಂಖ್ಯೆಯೂ ಒಂದು ಕಾರಣ ವಾಗಿದೆ. ಈ ದುಡಿಯುವ ಮಧ್ಯಮವರ್ಗದ ಮಹಿಳೆಯರಿಗೆ ಗೃಹಕಾರ್ಮಿಕರ ಅವಶ್ಯಕತೆ ತುಂಬಾ ಇದ್ದರೂ, ಅವರು ಈ ಕಾರ್ಮಿಕರನ್ನು ತಾಳ್ಮೆಯಿಂದ, ಗೌರವದಿಂದ ನಡೆಯಿಸಿಕೊಳ್ಳಲು ಅಸಮರ್ಥರಾಗಿದ್ದಾರೆ. ಈ ಕಾರಣಗಳಿಂದ ಗೃಹ ಕಾರ್ಮಿಕರಿಗೆ ದೊರೆಯುವುದು ಕೇವಲ ತಾತ್ಸಾರವೇ ವಿನಃ ಆತ್ಮೀಯತೆ, ಅನುಕಂಪಗಳಿಲ್ಲ. ಇದಲ್ಲದೆ ಈ ಮಾಲಿಕರಿಗೆ ಅವರ ಅವಶ್ಯಕತೆ ತುಂಬಾ ಇದ್ದರೂ, ಈ ಕೆಲಸಗಾರರಲ್ಲಿ ಅವರಿಗೆ ಎಳ್ಳಷ್ಟೂ ನಂಬಿಕೆ ವಿಶ್ವಾಸಗಳಿಲ್ಲ. ಮನೆಯ ಒಳಗಡೆ ಕೆಲಸ ಮಾಡುವಾಗ ಒಂದು ರೀತಿಯ ಸಂಶಯದಿಂದಲೇ ಅವರನ್ನು ನೋಡಲಾಗು ವದು. ಮನೆಯಲ್ಲಿ ಏನಾದರೂ ಕಳೆದುಹೋದಲ್ಲಿ ಮೊಟ್ಟಮೊದಲು ಈ ಕಾರ್ಮಿಕರ ಮೇಲೆ ಸಂಶಯ; ಆ ವಸ್ತು ಸಿಕ್ಕ ಮೇಲೂ ಸಹ ಈ ಸಂಶಯ ಅಳಿಯದು; ಈ ಪ್ರವೃತ್ತಿಯಿಂದಾಗಿ ಗೃಹ ಕಾರ್ಮಿಕರ ಹಾಗೂ ಅವರ ಮಾಲಿಕರ ಮಧ್ಯ ಮಧುರ ಬಾಂಧವ್ಯ ಬೆಳೆಯುವದು ಸಾಧ್ಯವಾಗುವದಿಲ್ಲ.

ನೌಕರಿ ಮಾಡುತ್ತಿರುವ ಗೃಹಿಣಿ ವಾರಕ್ಕೊಂದು ದಿನ ರಜೆ ಪಡೆದು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರೂ ತನ್ನ ಮನೆಗೆಲಸದವಳು ಮಾತ್ರ ರಜೆ ಪಡೆಯುವಂತಿಲ್ಲ. ಏನೋ ತೊಂದರೆಗಳಿಂದ ಕೆಲಸದವಳು ಕೆಲಸಕ್ಕೆ ಬಾರದಿದ್ದಲ್ಲಿ, ಅವಳು ಬೇಕೆಂದೇ ಆ ರೀತಿ ಮಾಡುತ್ತಾಳೆಂದೂ, ಕೆಲಸಕ್ಕೆ ಬಂದ ನಂತರ ಸುಳ್ಳು ಹೇಳುತ್ತಾಳೆಂದೂ ಆರೋಪ ಬೇರೆ. ಈ ರೀತಿ ಹೆಜ್ಜೆ ಹೆಜ್ಜೆಗೂ ಗೃಹಿಣಿಯರ ನಡತೆಯಲ್ಲಿ ಈ ಕೆಲಸದವರ ಬಗೆಗೆ ಇರುವ ತಾತ್ಸಾರ ಉದಾಸೀನತೆಗಳು ಪ್ರಕಟಗೊಳ್ಳುತ್ತಲೇ ಇರುತ್ತವೆ. ಪರಿಸ್ಥಿತಿ ಹೀಗಿರುವಾಗ ಈ ಕಾರ್ಮಿಕರಿಂದ ಒಳ್ಳೆಯ ನಡತೆ, ಒಳ್ಳೆಯ ಕಲಸಗಳನ್ನು ಅಪೇಕ್ಷಿಸುವದು ತಪ್ಪೇ ಎಂದೆನಿಸುತ್ತದೆ.

ಇನ್ನು ಅವಳ ಕುಟುಂಬದಲ್ಲಿಯೇ ಗೃಹಕಾರ್ಮಿಕಳಿಗೆ ಏನಾದರೂ ಗೌರವ ವಿದೆಯೇ ? ಅವಳ ದುಡಿಮೆಗೆ ಬೆಲೆ ಇದೆಯೇ ? ಎಂದು ನೋಡಿದಾಗ, ಅಲ್ಲಿಯೂ ಅವಳಿಗೆ ನಿರಾಶೆಯೇ ಎನ್ನಬಹುದು. ಹೊರಗೆ ದುಡಿಯುವವಳೆಂಬ ಕಾರಣಕ್ಕೆ ಮನೆಯಲ್ಲಿಯ ಕೆಲಸಗಳಲ್ಲಿ ಅವಳಿಗೇನೂ ರಿಯಾಯತಿ ಇಲ್ಲ. ಕೆಲಸಕ್ಕೆ ಹೊರಡುವ ಮೊದಲು ಮನೆಯ ಇತರ ಸದಸ್ಯರಿಗಾಗಿ ಅವಳು ಊಟ ತಿಂಡಿಗಳನ್ನು ತಯಾರಿಸಿ.

ತನ್ನ ಮನೆಯ ಕಸ ಮುಸುರೆಯನ್ನು ತೆಗೆದು ಮತ್ತೆ ಅದೇ ಕೆಲಸವನ್ನು ಅಲ್ಪ ಸ್ವಲ್ಪ ಹಣಕ್ಕಾಗಿ ಮಾಡಲು ಬೇರೆಯವರ ಬಾಗಿಲಿಗೆ ಹೋಗಬೇಕು. ಅವರೇನೆಂದರೂ ಅನಿಸಿಕೊಳ್ಳಬೇಕು. ಮನೆಯಲ್ಲಿ ಗಂಡ, ಅತ್ತೆ, ಮಾವಂದಿರಿದ್ದರೆ ಅವರಿಂದಲೂ ಹೀನಾಯಿಸಿಕೊಳ್ಳಬೇಕು. ಇಷ್ಟಕ್ಕೂ ಅವಳು ದುಡಿದು ತಂದುದನ್ನು ತನ್ನ ಸುಖಕ್ಕಾಗಿ ಅಥವಾ ತನ್ನ ಇಷ್ಟದಂತೆ ಖರ್ಚು ಮಾಡುವಂತಿಲ್ಲ; ಕುಡುಕ, ಕೆಟ್ಟ ಅಭ್ಯಾಸಗಳಿರುವ ಗಂಡನಿಗೆ ತನ್ನ ದುಡಿಮೆಯಿಂದಲೇ ದುಡ್ಡು ಒದಗಿಸಬೇಕು. ತನ್ನ ಮಕ್ಕಳ ಹಾಗೂ ಕುಟುಂಬದ ಮತ್ತಿತರ ಸದಸ್ಯರ ಹೊಟ್ಟೆ ತುಂಬಬೇಕು. ಕುಟುಂಬದ ಇತರ ಅವಶ್ಯಕತೆಗಳನ್ನೂ ಪೂರೈಸಬೇಕು. ಇಷ್ಟಾಗಿಯೂ ಕುಟುಂಬದ ಸದಸ್ಯರ ಹೀಯಾಳಿಕೆಗೆ, ಸಂಶಯಕ್ಕೆ ಗುರಿಯಾಗಬೇಕು. ಹೀಗೆ ಈ ಮಹಿಳೆಯರು ಅತಿ ಶೋಷಿತರೂ ದಬ್ಬಾಳಿಕೆಗೆ ಒಳಪಟ್ಟವರೂ ಆಗಿರುತ್ತಾರೆ. ಇವರಲ್ಲಿ ಹೆಚ್ಚಿನವರು ಕಡುಬಡವರು, ಅಶಿಕ್ಷಿತರು. ಅಜ್ಞಾನವೂ ಅವರ ಶೋಷಣೆಗೆ ಬಲವಾದ ಕಾರಣವಾಗಿರುತ್ತದೆ.

ಈ ಗೃಹ ಕಾರ್ಮಿಕರಲ್ಲಿ ಹೆಚ್ಚಿನವರು ಕಡುಬಡತನದಿಂದ ಬಂದವರಾದ್ದರಿಂದ, ತಮ್ಮ ಎಳೆಯ ವಯಸ್ಸಿನಲ್ಲಿಯೇ ಈ ದುಡಿಮೆಗೆ ಬಂದಿರುತ್ತಾರೆ. ಒಮ್ಮೆ ಗೃಹ ಕಾರ್ಮಿಕರಾದರೆ, ಸಮಾಜದಲ್ಲಿ ಅವರ ಸ್ಥಾನ ತುಂಬ ಕೆಳಮಟ್ಟಕ್ಕೆ ಇಳಿಯುವುದು ಕಂಡುಬರುತ್ತದೆ. ಅವರು ಕೆಲಸ ಮಾಡುವ ಮನೆಗಳಲ್ಲಿಯ ಪುರುಷರಿಗೂ ಈ ಮಹಿಳೆಯರಿಗೂ ಲೈಂಗಿಕ ಸಂಬಂಧ ಕಲ್ಪಿಸುತ್ತಾ ಅವರನ್ನು ಸಂಶಯದಿಂದ ನೋಡುವ ಜನ, ಅವರನ್ನು ಮಾನಸಿಕವಾಗಿ ಮತ್ತೂ ದೂರೀಕರಿಸುತ್ತಾರೆ. ಈ ರೀತಿಯ ಸಂಶಯ ದೃಷ್ಟಿಯಿಂದ ಹಾಗೂ ಅವರ ದುಡಿಮೆಗೆ ಗೌರವವನ್ನು ಕೊಡದೆ ಇರುವುದರಿಂದ ಅವಿವಾಹಿತ ಕಾರ್ಮಿಕರ ಮದುವೆ ದುಃಸಾಧ್ಯವಾಗುತ್ತದೆ. ಮದುವೆಯಾದರೂ, ಅದರಿಂದ ಅವರ ಭವಿಷ್ಯ ಉಜ್ವಲವಾಗುವುದು ಸಂಶಯವೇ. ಹೀಗಾಗಿ ಅವರ ದುಃಖಮಯ ಬಾಳಿನಲ್ಲಿ ಅವರ ಕನಸುಗಳೆಲ್ಲಾ ಕನಸುಗಳಾಗಿ ಉಳಿಯುವುದೇ ಹೆಚ್ಚು.

ವಿವಾಹಿತ ಮಹಿಳೆಯರಾದರೆ, ಅವರ ಬದುಕಷ್ಟೇ ಅಲ್ಲ. ಅವರ ಮಕ್ಕಳ, ಅದರಲ್ಲೂ ಅವರ ಹೆಣ್ಣುಮಕ್ಕಳ ಬದುಕು ಹೆಚ್ಚು ಕಡಿಮೆ ದುಃಖಮಯವಾಗುತ್ತದೆ. ಬಡತನದಿಂದಾಗಿ ಮಕ್ಕಳನ್ನು ಓದಿಸುವ ಸಾಮರ್ಥ್ಯವಿಲ್ಲದಾಗ, ಹೇಗಾದರೂ ಮಾಡಿ ತಮ್ಮ ಗಂಡುಮಕ್ಕಳನ್ನು ಓದಿಸುವಲ್ಲಿ ಹೆಚ್ಚಿನ ಉತ್ಸುಕತೆಯನ್ನು ತೋರುತ್ತಾರೆಯೇ,ಹೊರತು ಹೆಣ್ಣು ಮಕ್ಕಳನ್ನು ಓದಿಸುವಲ್ಲಿ ಅಲ್ಲ. ಪುರುಷಪ್ರಧಾನವಾದ ನಮ್ಮ ಸಮಾಜದಲ್ಲಿ ಪುರುಷರಿಗೂ, ಗಂಡುಮಕ್ಕಳಿಗೂ ಇರುವ ಮಹತ್ವ ಆರ್ಥಿಕ ಸ್ಥಿತಿಯ ಮೇಲೆ ಅವಲಂಬಿಸಿಲ್ಲವೆನಿಸುತ್ತದೆ. ಯಾವುದೇ ವರ್ಗವಿರಲಿ ಜನರು ಹೆಣ್ಣು ಮಕ್ಕಳ ಕಡೆ, ತಮ್ಮ ಗಂಡುಮಕ್ಕಳಿಗಿಂತ ಹೆಚ್ಚು ನಿರಾಸಕ್ತಿ ತೋರುವುದನ್ನು

ನಾವು ಕಾಣುತ್ತೇವೆ. ಹೀಗಾಗಿ, ತಾಯಿಯೊಂದಿಗೆ ಕೆಲಸಕ್ಕೆ ಹೋಗಿ ತಾಯಿಗೆ ನೆರವಾಗುವ, ತಾಯಿ ಮನೆಗೆಲಸಕ್ಕೆ ಹೋದಾಗ ತಮ್ಮ ಮನೆಯಲ್ಲಿ ತಾಯಿ ಮಾಡದೇ ಬಿಟ್ಟು ಹೋಗಿರುವ ಕೆಲಸವನ್ನು ಪೂರ್ತಿಗೊಳಿಸುವ, ತಮ್ಮ ಚಿಕ್ಕ ವಯಸ್ಸಿನ ಒಡಹುಟ್ಟಿದವರನ್ನು ನೋಡಿಕೊಳ್ಳುವ ಜವಾಬ್ದಾರಿ ಹುಡುಗಿಯರ ಮೇಲೆ ಬೀಳುತ್ತದೆ. ಆದ್ದರಿಂದ ಅವರನ್ನು ಶಾಲೆಗೆ ಕಳುಹಿಸದೆಯೇ ಕಳುಹಿಸಿದರೂ, ಪ್ರಾಥಮಿಕ ಹಂತದಲ್ಲಿಯೇ ಶಾಲೆ ಬಿಡಿಸಿ, ಮನೆಯ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ಇಟ್ಟುಕೊಳ್ಳುವುದನ್ನು ಕಾಣುತ್ತೇವೆ. ಅಷ್ಟಕ್ಕೂ ಕೆಲವು ಹುಡುಗಿಯರು ತಮ್ಮ ತಾಯಿಗೆ ನೆರವಾಗುವುದು, ಮನೆಗೆಲಸಗಳಿಗೆ ಹೋಗುವುದರ ಜೊತೆಗೆ ಓದನ್ನೂ ಮುಂದುವರಿಸಿದ್ದನ್ನು ನನ್ನ ವೈಜ್ಞಾನಿಕ ಸಮೀಕ್ಷೆಯಲ್ಲಿ ಗಮನಿಸಿದ್ದೇನೆ. ತಮ್ಮ ಜೊತೆಯ ವಯಸ್ಸಿನ ಮಕ್ಕಳು ಆಟವಾಡಿಕೊಂಡು, ಯಾವುದೇ ತರಹದ ಮನೆಯ ಜವಾಬ್ದಾರಿಯನ್ನು ಹೊರದೇ, ತಮ್ಮ ಶಿಕ್ಷಣದಲ್ಲಿ ಮಗ್ನರಾಗಿರುವಾಗ, ಈ ಮಕ್ಕಳು ತಮ್ಮ ಶಿಕ್ಷಣದ ಮುಂದುವರಿಕೆಯ ಜೊತೆಗೆ, ಇಷ್ಟೊಂದು ಜವಾಬ್ದಾರಿಯನ್ನು ತಮ್ಮ ಮೇಲೆ ಹೊತ್ತುಕೊಳ್ಳಬೇಕಾದ ಪರಿಸ್ಥಿತಿ ಶೋಚನೀಯ. ಇಂತಹವರಲ್ಲಿ ಅವರಿಗೆ ಪಾಠದಲ್ಲಿ ಆಸಕ್ತಿ ಹುಟ್ಟಿ ಅವರು ಸರಿಯಾಗಿ ತೇರ್ಗಡೆ ಹೊಂದುತ್ತಾ ಹೋದರೆ, ಅದೇ ಬಹಳ ದೊಡ್ಡ ಸಾಧನೆ ಎನ್ನಬಹುದು. ಇವರಿಗಾಗಿ ಯಾವುದೇ ತರಹದ ರಿಯಾಯತಿ, ಉತ್ತೇಜನಗಳಿಲ್ಲ ಶಾಲೆಗಳಲ್ಲಿ. ಸಾಮಾನ್ಯವಾಗಿರುವ ಮೀಸಲಾತಿ ಬಿಟ್ಟರೆ ಈ ಗೃಹಕಾರ್ಮಿಕರು ಅಥವಾ ಅವರ ಮಕ್ಕಳಿಗೆಂದೇ ಬೇರೆಯ ಮೀಸಲಾತಿಯೂ ಇಲ್ಲ. ಹೀಗಾಗಿ ಗೃಹಕಾರ್ಮಿಕರ ಮಕ್ಕಳಿಗೆ ಅದರಲ್ಲೂ ಹುಡುಗಿಯರಿಗೆ ತಾವಿಷ್ಟಪಟ್ಟೋ ಅಥವಾ ಪಡದೆಯೋ ತಮ್ಮ ತಾಯಂದಿರ ಹೆಜ್ಜೆಯಲ್ಲಿಯೇ ನಡೆಯಬೇಕಾದ ಪರಿಸ್ಥಿತಿ ನಿರ್ಮಾಣಗೊಳ್ಳುತ್ತದೆ. ಇನ್ನು ಗಂಡು ಹುಡುಗರ ಸ್ಥಿತಿಯೇ ಬೇರೆ. ಅವರು ಮನೆಯಲ್ಲಿ ಸರಿಯಾದ ಶಿಸ್ತು ಇಲ್ಲದೆ, ತಂದೆ ತಾಯಿಗಳ ಮಾರ್ಗದರ್ಶನವಿಲ್ಲದೆ ಹಲವಾರು ಸಂದರ್ಭಗಳಲ್ಲಿ ಕೆಟ್ಟ ಸಹವಾಸದಿಂದಾಗಿ ಪೋಲಿಗಳಾಗುವುದನ್ನು ಕಾಣಬಹುದು. ಇಂತಹ ಹುಡುಗರ ಮೇಲೆ ಹೆಚ್ಚಿನ ಭರವಸೆ, ಆಸೆ ಇಟ್ಟುಕೊಳ್ಳುವಂತಿಲ್ಲ. ಇವರೇ ಮುಂದೆ ಕುಡುಕರೋ, ಜೂಜುಕೋರರೋ ಆಗಿ, ತಮ್ಮ ಕುಟುಂಬದವರ ದುಃಖಕ್ಕೆ ಕಾರಣರಾಗುತ್ತಾರೆ. ಈ ಪರಿಸ್ಥಿತಿಯನ್ನು ನೋಡಿದಾಗ, ಈ ಗೃಹ ಕಾರ್ಮಿಕರ ಜೀವನ ಒಂದು ರೀತಿಯಲ್ಲಿ ವಿಷವೃತ್ತವೇ ಸರಿ.

ಮನೆಯಲ್ಲಿ, ಕುಟುಂಬದಲ್ಲಿ ಸಿಗುವ ನೆಮ್ಮದಿ ಈ ಗೃಹಕಾರ್ಮಿಕರಿಗೆ, ತಮ್ಮ ದುಡಿಯುವ ಸ್ಥಳದಲ್ಲಾದರೂ ಸಿಗುತ್ತದೆಯೇ ಎಂದು ನೋಡಿದಾಗ, ಅಲ್ಲಿಯೂ ಅವರಿಗೆ ನಿರಾಶೆಯೇ. ಇವರಿಗೆ, ಮಿಕ್ಕ ಸಂಘಟಿತ ಅಥವಾ ಅಸಂಘಟಿತ ಕಾರ್ಮಿಕರಿಗಿರುವಂತಹ ಯಾವ ಸೌಲಭ್ಯಗಳೂ ಇಲ್ಲ. ಇವರ ಕಲ್ಯಾಣಕ್ಕಾಗಿ, ಅಭ್ಯುದಯ

ಕ್ಕಾಗಿ ಹೋಗಲಿ ಅವರ ಕೆಲಸವನ್ನು 'ನೌಕರಿ' ಎಂದು ಕರೆಯಬಹುದಾದರೆ, ಆ ನೌಕರಿಯ ಲಕ್ಷಣೆಗಾಗಿಯೂ ಸಹ ಯಾವುದೇ ಕಾನೂನಾಗಲಿ, ಯೋಜನೆಯಾಗಲಿ ಇಲ್ಲ. ಹೀಗಾಗಿ ಇವರ ದುಡಿಮೆಗೆ ಸಂಬಂಧಿಸಿದ ವೇಳೆ, ವೇತನ ಇತ್ಯಾದಿಗಳನ್ನು ಕುರಿತಾದ ಯಾವುದೇ ಷರತ್ತುಗಳಾಗಲೀ, ನಿರ್ಬಂಧಗಳಾಗಲಿ ಇಲ್ಲ. ಕನಿಷ್ಟ ವೇತನ, ದುಡಿಮೆಯ ವೇಳೆಯನ್ನು ನಿರ್ಧರಿಸಿದ ಪರಿಸ್ಥಿತಿಯಲ್ಲಿ ಇವರು ದಿನಕ್ಕೆ ೧೨ ರಿಂದ ೧೬ ತಾಸುಗಳವರೆಗೆ ದುಡಿದರೂ ಗಳಿಸುವ ಮೊತ್ತ ತುಂಬ ಕಡಿಮೆ. ದಿನವೊಂದಕ್ಕೆ ರೂ. ೧–೫೦ ರಿಂದ ರೂ. ೨೦-೦೦ ರ ವರೆಗೆ ದುಡಿಯುವ ಗೃಹಕಾರ್ಮಿಕರು ಕಾಣಸಿಗುತ್ತಾರೆ. ನಿಯಮಿತ ವೇಳೆಯಲ್ಲಿ ಕೆಲಸ ಮಾಡುವ ಗೃಹಕಾರ್ಮಿಕರಿಗಿಂತಲೂ ಕನಿಷ್ಠ ಒಂದು ಮನೆಯಿಂದ ಹಿಡಿದು ಹತ್ತು ಮನೆಗಳವರೆಗೂ ಕೆಲಸ ಮಾಡುತ್ತಾರೆ. ಮನೆಗಳ ಸಂಖ್ಯೆ ಹೆಚ್ಚಾದಂತೆ ತಮ್ಮ ಎಳೆಯ ವಯಸ್ಸಿನ ಮಕ್ಕಳನ್ನು ಈ ದುಡಿಮೆಗೆ ದೂಡುವುದು ಹೆಚ್ಚಾಗುತ್ತದೆ. ಹೀಗಾಗಿ ಈ ಕ್ಷೇತ್ರದಲ್ಲಿ ಐದು ವರುಷದ ಮಗುವಿನಿಂದ ಹಿಡಿದು ಇಳಿ ವಯಸ್ಸಿನ ಮುದುಕಿಯರೂ ದುಡಿಯುವದನ್ನು ಕಾಣುತ್ತೇವೆ. ಇದು ಬಾಲ ಕಾರ್ಮಿಕರಷ್ಟೇ ಅಲ್ಲ,ಮುದಿ ಕಾರ್ಮಿಕರ ಸಮಸ್ಯೆಯನ್ನೂ,ಒತ್ತಾಯದ ದುಡಿಮೆಯ ಸಮಸ್ಯೆಯನ್ನೂ, ತಮ್ಮ ವಯಸ್ಸು, ಆರೋಗ್ಯಗಳಿಗೆ ವ್ಯತಿರಿಕ್ತವಾಗಿರುವ ದುಡಿಮೆ ಮುಂತಾದ ಸಮಸ್ಯೆಗಳನ್ನೂ ತಂದಿರಿಸುತ್ತದೆ. ನಮ್ಮ ಸಂವಿಧಾನವು ತನ್ನ ೩೯ನೇ ಅಧಿನಿಯಮದ ಮುಖಾಂತರ ಈ ಸಮಸ್ಯೆಗಳ ವಿರುದ್ಧ ಸಮರ ಹೂಡಿದ್ದರೂ ಈ ಕ್ಷೇತ್ರದಲ್ಲಿ ಗೃಹ ಕಾರ್ಮಿಕರು ತಮ್ಮ ಹಕ್ಕು, ತಮಗೆ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಅಜ್ಞಾನಿಗಳಾಗಿದ್ದಾರೆ. ಯಾವುದೇ ತರಹದ ವಿಶ್ರಾಂತಿಯಾಗಲಿ, ವಿಶ್ರಾಂತಿ ವೇತನವಾಗಲಿ ಇರದ ಪರಿಸ್ಥಿತಿಯಲ್ಲಿ ಇವರು ಬಡತನದಿಂದಾಗಿ, ತಮ್ಮ ಇಳಿ ವಯಸ್ಸಿನಲ್ಲೂ ದುಡಿಯಬೇಕಾದ್ದು ಆಶ್ಚರ್ಯವೇನಲ್ಲ. ದಿನವೂ ತಪ್ಪದೇ ದುಡಿಯಬೇಕಾದ ಇವರಿಗೆ ರಜೆಯಂತೂ ಇಲ್ಲವೇ ಇಲ್ಲ. ಹೆರಿಗೆಗೆ ಹೋಗುವಾಗಲೂ ಇವರು ತಮ್ಮ ಕೆಲಸವನ್ನು ಕಾಯ್ದುಕೊಳ್ಳಲು ತಮ್ಮ ಬದಲು ಬೇರೆ ಕಾರ್ಮಿಕರನ್ನು ತಾವೇ ವ್ಯವಸ್ಥೆ ಮಾಡಿಕೊಳ್ಳಬೇಕಲ್ಲದೇ, ಅಂತಹ ಬದಲಿ ಗೃಹಕಾರ್ಮಿಕರಿಗೆ ತಮ್ಮ ಸಂಬಳವನ್ನೀಯಬೇಕಾದ್ದು ನನ್ನ ವೈಜ್ಞಾನಿಕ ಸಮೀಕ್ಷೆಯಲ್ಲಿ ಕಂಡುಬಂದ ಅಂಶ. ಹೀಗಾಗಿ ಹೆರಿಗೆ ಮತ್ತು ಬಾಣಂತಿತನದ ಸಮಯದಲ್ಲಿಯೂ ಅವರಿಗೆ ಯಾವುದೇ ತಹರದ ಆರ್ಥಿಕ ಸಹಾಯ ಸಿಗುವುದಿಲ್ಲ. ಇದಕ್ಕಾಗಿಯೇ ಬಹಳಷ್ಟು ಗೃಹ ಕಾರ್ಮಿಕರು ಸರಿಯಾಗಿ ಆರೈಕೆ ಮಾಡಿಸಿಕೊಳ್ಳದೆ, ವಿಶ್ರಾಂತಿ ತೆಗೆದುಕೊಳ್ಳದೆ ಮತ್ತೆ ಕೆಲಸಕ್ಕೆ ಬರುವುದನ್ನು ಕಾಣುತ್ತೇವೆ. ನಮ್ಮಲ್ಲಿ ಇನ್ನೂ ಶಿಶುವಿಹಾರಗಳಾಗಲಿ, ಕ್ರೆಚ್‌ಗಳಾಗಲಿ ಅಷ್ಟೊಂದು ವ್ಯಾಪಕವಾಗಿ ಸ್ಥಾಪಿತಗೊಂಡಿಲ್ಲವಾದ್ದರಿಂದ, ಅಲ್ಲದೇ ಇರುವ ಈ ಸಂಸ್ಥೆಗಳಲ್ಲಿ ಎಳೆಯ ಮಕ್ಕಳನ್ನು ನೋಡಿಕೊಳ್ಳಲು ಸರಿಯಾದ ವ್ಯವಸ್ಥೆ

ಇರದ್ದರಿಂದ ಈ ಗೃಹಕಾರ್ಮಿಕರು ಮಗುವನ್ನು ಮಳೆ, ಬಿಸಿಲು, ಗಾಳಿ ಎನ್ನದೇ, ತಮ್ಮ ಜೊತೆಯಲ್ಲಿಯೇ ಕರೆದುಕೊಂಡು ಬರುವುದಲ್ಲದೆ ತಾವು ಕೆಲಸ ಮಾಡುವೆಡೆಯಲ್ಲಿಯೇ ಹಸಿ ತೇವವಿರುವಲ್ಲಿ ಮಲಗಿಸಿರುವುದನ್ನು ಕಾಣುತ್ತೇವೆ. ಮಗು ಹಸಿವೆಯಿಂದಲೋ ಮತ್ತೆ ಯಾವುದೋ ಕಾರಣಕ್ಕಾಗಿ ರಚ್ಚೆ ಹಿಡಿದು ಅಳುತ್ತಿದ್ದರೂ ಕೆಲಸ ಬಿಟ್ಟು ಮಗುವನ್ನು ಆಡಿಸುತ್ತಾ ಕುಳಿತು ಕೊಳ್ಳುವಷ್ಟು ಸಹ ಸಮಯ ಈ ಗೃಹಕಾರ್ಮಿಕರಿಗೆ ಇರದ್ದನ್ನು ನೋಡಲು ಕೆಡುಕೆನಿಸುತ್ತದೆ. ಈ ಕಾರಣಗಳಿಗಾಗಿ ಗೃಹಕಾರ್ಮಿಕರಿಗೇ ಆಗಲಿ, ಮಗುವಿಗೆ ಆಗಲಿ ದೇಹಾಲಸ್ಯ, ಅನಾರೋಗ್ಯವಾದರೂ ರಜೆ ಸಿಗುವುದು ಕಡಿಮೆ. ರಜೆ ಮಂಜೂರ ಮಾಡಿದರೂ ಆ ದಿನಗಳಿಗೆ ಸಂಬಳವನ್ನು ಮುರಿದುಕೊಳ್ಳುವವರಿದ್ದಾರೆ. ರಜೆ ಕೊಡದಾದಾಗ ಪರವಾನಿಗೆ ಇಲ್ಲದೆ ಕೆಲಸಕ್ಕೆ ಗೈರು ಹಾಜರಾದರೆ, ಸಹಸ್ರನಾಮಾವಳಿ ತಪ್ಪಿದ್ದಲ್ಲ. ಇಂತಹ ಪರಿಸ್ಥಿತಿಯನ್ನು ಎದುರಿಸುವ ಗೃಹಕಾರ್ಮಿಕರಿಂದ ನಾವು ಮೊದಲಿನ ಸೇವಾಭಾವನೆ, ಆತ್ಮೀಯತೆ ಪ್ರಾಮಾಣಿಕತೆಗಳನ್ನು ಅಪೇಕ್ಷಿಸುವುದು ನಮ್ಮದೇ ತಪ್ಪೇನೋ ಎನಿಸುತ್ತದೆ.

ತಮ್ಮ ಸ್ವಂತದ ಮಕ್ಕಳನ್ನು ಲಾಲಿಸಲು, ಪಾಲಿಸಲು ಸಮಯವಿರದ ಇವರು ತಮ್ಮ ಮಾಲಿಕರ ಮಕ್ಕಳನ್ನು ಲಾಲಿಸಿ, ಪಾಲಿಸಿ ಆಡಿಸಬೇಕಾದುದು ಒಂದು ರೀತಿಯ ವಿಪರ್ಯಾಸ. ತಮ್ಮ ಮಕ್ಕಳ ಎದುರಿಗೆಯೇ ಮಾಲಿಕರ ಮಕ್ಕಳನ್ನು ಆಡಿಸುತ್ತಿದ್ದರೆ ಆ ಗೃಹಕಾರ್ಮಿಕರ ಮಕ್ಕಳು ಆಸೆಯಿಂದ ಅದನ್ನು ನೋಡುತ್ತಾ ನಿಲ್ಲುವುದು ಒಂದು ಕರುಣಾಜನಕ ದೃಶ್ಯ. ಇಂತಹ ಪರಿಸ್ಥಿತಿಯಲ್ಲಿ ಆ ಮಕ್ಕಳ ಮನಸ್ಸಿನ ಮೇಲೆ ಹಾಗೂ ಅವರ ವ್ಯಕ್ತಿತ್ವದ ಮೇಲಾಗುವ ಪರಿಣಾಮಗಳನ್ನು ಯೋಚಿಸಿದರೆ, ಅವರಿಗೆ ತಮ್ಮ ಜೀವನವನ್ನು ಆರೋಗ್ಯಕರವಾದ ರೀತಿಯಲ್ಲಿ ರೂಪಿಸುವುದು ಅಸಾಧ್ಯವೆಂಬುದು ತಿಳಿಯುತ್ತದೆ.

ಈ ಪರಿಸ್ಥಿತಿಗೆ ಸರಿಯಾಗಿ ಗೃಹ ಕಾರ್ಮಿಕರ ವಾಸಸ್ಥಾನ ಹಾಗೂ ಜೀವಿಸುವ ರೀತಿಗಳೂ ಸಹ ಅವರ ಹೀನ ಸ್ಥಿತಿಯನ್ನು ಎತ್ತಿತೋರಿಸುತ್ತವೆ. ಹೆಚ್ಚಿನ ಗೃಹ ಕಾರ್ಮಿಕರು ತಾವು ಕೆಲಸ ಮಾಡುವ ಸ್ಥಳದ ಹತ್ತಿರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವಂತವರು. ಅವರ ಮನೆಗಳು ಒಂದೇ ಕೋಣೆಯವು. ಈ ಒಂದು ಕೋಣೆಯೇ ಸಂದರ್ಭಕ್ಕನುಸಾರವಾಗಿ ಮಲಗುವ, ಅಡುಗೆಯ ಊಟದ ಮನೆಯಾಗಿ ಮಾರ್ಪಡುತ್ತದೆ. ಈ ಒಂಟಿ ಕೋಣೆಯಲ್ಲಿಯ ಚಿಕ್ಕ ಕೈಬಚ್ಚಲೇ ಅವರ ಸ್ನಾನಗೃಹ. ಬಯಲೇ ಅವರ ಕಕ್ಕಸು. ಹೆಚ್ಚಿನ ಮನೆಗಳಲ್ಲಿ ವಿದ್ಯುದ್ದೀಪ ಇರುವುದಿಲ್ಲ. ಗಾಳಿ ಬೆಳಕಿಗೆ ಸರಿಯಾದ ವ್ಯವಸ್ಥೆಯೂ ಇಲ್ಲ. ಕಲ್ಲೆಣ್ಣೆಯ ಸ್ಟೋವಿನ ಇಲ್ಲವೇ ಕಟ್ಟಿಗೆಯ ಒಲೆಗಳ ಮೇಲೆ ಅಡುಗೆ ಮಾಡುವುದರಿಂದ ಗೋಡೆಗಳೆಲ್ಲಾ ಹೊಗೆಯಿಂದಾವೃತ. ಇವರ ಜೀವನದ ಕತ್ತಲನ್ನು ಎತ್ತಿ ತೋರಿಸುವಂತೆ ಈ ಮಸಿ

ಹಿಡಿದ ಗೋಡೆಗಳು ಮನೆಯಲ್ಲಿ ಇನ್ನಷ್ಟು ಕತ್ತಲು ಮಾಡಿರುತ್ತವೆ. ಮಳೆಗಾಲದಲ್ಲಿ ಯಂತೂ ಇವರ ಪರಿಸ್ಥಿತಿ ಮತ್ತೂ ದಾರುಣ.

ಕೊಳಚೆ ಪ್ರದೇಶಗಳಾದ್ದರಿಂದ, ಮನೆಯ ಹೊರಗೂ ಸ್ವಚ್ಛತೆ ಇಲ್ಲ. ಹರಿಯುವ ನೀರು, ಕೊಚ್ಚೆಗಳಿಂದಾವೃತ. ಇಂತಹ ಪರಿಸರಗಳಲ್ಲೂ ಎಳೆಯ ಮಕ್ಕಳು ಯಾವ ಚಿಂತೆ ಬೇಸರಗಳಿಲ್ಲದೆಯೇ, ಭವಿಷತ್ತಿನ ಯೋಚನೆ ಇಲ್ಲದೆಯೇ ಆಟ ಆಡುತ್ತಿರುವುದನ್ನು ನೋಡಿದರೆ ಅವರಷ್ಟು ಸುಖಿಗಳು ಮತ್ತಾರೂ ಇರಲಾರರು ಎನಿಸಿದರೆ ಆಶ್ಚರ್ಯವಿಲ್ಲ. ಆದರೆ ಈ ಮಕ್ಕಳ ಭವಿಷ್ಯವನ್ನು ಕುರಿತು ಯೋಚಿಸಿದಾಗ ಕರಳು ಕಿವಿಚಿದಂತಾಗುತ್ತದೆ. ಈ ಅಮಾಯಕ ಹಸುಗಳೇ ಮುಂದೆ ಎಷ್ಟೋ ಕಷ್ಟಕಾರ್ಪಣ್ಯಗಳನ್ನು ಎದುರಿಸಬೇಕಾಗುತ್ತದೆ. ತಾಯಿಯ ಸರಿಯಾದ ಆರೈಕೆ ಇಲ್ಲದೆ, ಮಾರ್ಗದರ್ಶನವಿಲ್ಲದೆ ಈ ಮಕ್ಕಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ. ತಾಯಿ ತಿರುಗಿ ಬರುವವರೆಗೆ ಇವರು ಎಲ್ಲೆಂದರಲ್ಲಿ ಇರುವಂತಹ ಪರಿಸ್ಥಿತಿ, ಹೀಗಾಗಿ ಜೀವನದಲ್ಲಿ ಹಲವಾರು ದೈಹಿಕ ಮಾನಸಿಕ ಅಪಾಯಗಳಿಗೆ ಅವರು ಬಲಿಯಾಗುವ ಸಂಭವವಿದೆ. ಹೆಣ್ಣು ಹುಡುಗಿಯರಿಗಂತೂ ತಮ್ಮ ಬಾಲ್ಯ ಜೀವನದ ಸುಖ ಕೇವಲ ಕನಸು.

ಗೃಹಕಾರ್ಮಿಕರ ಇಂತಹ ಪರಿಸ್ಥಿತಿಯ ಬಗೆಗೆ ಮಾಲಿಕರು ತಮ್ಮ ತಲೆ ಕೆಡಿಸಿಕೊಂಡಿದ್ದನ್ನು ನೋಡಲು ಸಿಗುವುದು ಕ್ವಚಿತ್ತು. ಎಷ್ಟೋ ಮಾಲಿಕರಿಗೆ ತಮ್ಮ ಮನೆಗೆಲಸದವಳ ಮನೆ ಎಲ್ಲಿದೆ ಎಂಬುದೂ ಗೊತ್ತಿರುವುದಿಲ್ಲ. ಅವರ ಮನೆಗಳಿಗೆ ಭೇಟಿ ಕೊಡುವುದಂತೂ ದೂರದ ಮಾತು. ಭೇಟಿಕೊಟ್ಟರೂ ಅವರ ಹಿತಚಿಂತಕರಾಗಿ ಅಥವಾ ಪ್ರೀತಿ ವಿಶ್ವಾಸಗಳಿಂದ ಹೋಗುವುದಂತೂ ತುಂಬ ಕಡಿಮೆ. "ಯಾಕಿವಳು ಕೆಲಸಕ್ಕೆ ಬಂದಿಲ್ಲ ? ಸುಮ್ಮ ಸುಮ್ಮನೇ ಕೆಲಸ ತಪ್ಪಿಸುತ್ತಾಳೆ; ನೋಡಿಯಾದರೂ ಬರೋಣ" ಎಂದು ತಮಗಾದ ತೊಂದರೆಯನ್ನು ನಿವಾರಿಸಿಕೊಳ್ಳುವ ಸ್ವಾರ್ಥಭಾವದಿಂದ ಹೋಗುವವರೇ ಹೆಚ್ಚು.

ಇಷ್ಟೆಲ್ಲಾ ಸಮಸ್ಯೆಗಳಿರುವ ಇವರು ಸಂಘಟಿತರಾಗಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಾರದೇಕೆ ಎಂದು ಕೆಲವರು ಕೇಳಬಹುದು. ಇವರ ಸಂಘಟನೆ ಕಷ್ಟ. ಏಕೆಂದರೆ ಇವರು ಒಬ್ಬ ಮಾಲಿಕರಲ್ಲಿ, ಒಂದೇ ಕಡೆಗೆ ಒಟ್ಟಿಗೆ ಕೆಲಸ ಮಾಡುವವರಲ್ಲ. ಇವರಿಗೆ ಹಲವಾರು ಜನ ಮಾಲಿಕರು. ಅಲ್ಲದೆ ಇವರ ಕೆಲಸಗಳೂ ಹಲವಾರು ರೀತಿಯವು. ಇಷ್ಟಲ್ಲದೆ ಇಂತಹ ಸಂಘಟನೆ ಇವರ ಕೊರಳಿಗೆ ಉರುಲಾಗುವ ಸಂಭವವೂ ಇದೆ. ಮುಂಬಯಿಯ ಮಾಹಿಮ ಎಂಬಲ್ಲಿ ಒಂದು ಬಾರಿ ಗೃಹ ಕಾರ್ಮಿಕರು ಸಂಘಟಿತರಾಗುವ ಪ್ರಯತ್ನವನ್ನು ಮಾಡಿದಾಗ ಮಾಲಿಕರೆಲ್ಲರೂ ಸೇರಿ

ಇವನ್ನು ಒಗ್ಗಟ್ಟಿನಿಂದ ವಿರೋಧಿಸಿ ಎಲ್ಲ ಕಾರ್ಮಿಕರನ್ನೂ ಕೆಲಸದಿಂದ ವಜಾ ಮಾಡಿದರಂತೆ. ಇರುವ ಕೆಲಸವನ್ನು ಕಳೆದುಕೊಳ್ಳಲಾರದೆ, ಹೊಟ್ಟೆಗೆ ಆಹಾರವಿಲ್ಲದೆ ಇವರು ತಮ್ಮ ಬೇಡಿಕೆಗಳನ್ನು ಮರೆತು ಮತ್ತೆ ಮಾಲಿಕರಲ್ಲಿ ಅಂಗಲಾಚಿ ಕೆಲಸಕ್ಕೆ ಸೇರಿಕೊಳ್ಳಬೇಕಾಯಿತಂತೆ. ಈ ಘಟನೆ ಗೃಹಕಾರ್ಮಿಕರ ಶೋಚನೀಯ ಪರಿಸ್ಥಿತಿಯನ್ನು ಎತ್ತಿ ತೋರಿಸುತ್ತದೆ.

ಹೀಗಿದ್ದರೂ, ಹಲವಾರು ದೊಡ್ಡ ಪಟ್ಟಣಗಳಲ್ಲಿ ಕೆಲವು ಸಮಾಜಕಾರ್ಯ ಸಂಸ್ಥೆಗಳು, ಮಹಿಳಾ ಸಂಘಟನೆಗಳು ಸೇರಿ ಈ ಕಾರ್ಮಿಕರನ್ನು ಒಟ್ಟುಗೂಡಿಸಿ ಅವರಿಗೆ ಅವರ ಹಕ್ಕುಗಳನ್ನು ತಿಳಿಯಪಡಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿವೆ. ಆದರೂ ಮಾಲಿಕರಲ್ಲಿ ಇರಬೇಕಾದ ಜಾಗೃತಿಯನ್ನು ಮೂಡಿಸಲು ಅಸಮರ್ಥರಾಗಿವೆ ಅಲ್ಲದೆ, ಕಾನೂನು ರೀತ್ಯಾ ಈ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಿಕೊಡುವಲ್ಲಿ ಸಹ ಅವರು ಇನ್ನೂ ಅಯಶಸ್ವಿಯಾಗಿದ್ದಾರೆ. ಗೃಹಿಣಿಯರ ವಿರೋಧವಿದ್ದಾಗಲೂ ಈ ಕಾರ್ಮಿಕರು ವೈಯಕ್ತಿಕವಾಗಿ ತಮ್ಮ ಕೆಲಸದ ವೇಳೆ, ಸಂಬಳ ಮುಂತಾದವುಗಳ ಕುರಿತಾದ ನಿರ್ಬಂಧಗಳನ್ನು ನಿಗದಿಪಡಿಸಿಕೊಳ್ಳುವುದನ್ನು ನಾವು ಕಾಣುತ್ತೇವೆ. ಈ ಬೆಳವಣಿಗೆ, ಇಂದಿನ ಸಾಮಾಜಿಕ ಬದಲಾವಣೆ, ಅವರ ಸುತ್ತಮುತ್ತಲಿನ ಪರಿಸರ, ಅವರ ಹಕ್ಕು-ಬಾಧ್ಯತೆಗಳ ಬಗೆಗೆ ಮೂಡಿರುವ ಅರಿವಿನ ಫಲವಾಗಿದೆ ಎನಿಸುತ್ತದೆ. ಇದೊಂದು ಸಮಾಧಾನಕರವಾದ ಬದಲಾವಣೆ ಎಂದು ಹೇಳಲಾಗದಿದ್ದರೂ, ಮುಂದಿನ ದಿನಮಾನಗಳಲ್ಲಿ ಈ ಜಾಗೃತಿ ಇನ್ನೂ ಹೆಚ್ಚಿನ ಸಂಘಟನೆಗೆ ಬುನಾದಿಯಾಗಬಹುದು ಎಂಬುದೊಂದಾಶೆ.

ಕೊನೆಯಲ್ಲಿ, ಈ ಕಾರ್ಮಿಕರ ಸಮಸ್ಯೆಗಳು ಬಹಳ ಸಂಕೀರ್ಣ; ಕ್ಲಿಷ್ಟವಾದುವು. ಇವುಗಳಿಗೆ ಅಂತ್ಯವಿಲ್ಲ ಎನಿಸಿದರೂ, ಎಲ್ಲ ಮಾಲಿಕರು ಕೆಟ್ಟವರೆಂದಾಗಲಿ, ಎಲ್ಲ ಕಾರ್ಮಿಕರು ಒಳ್ಳೆಯವರೆಂದಾಗಲಿ ಹೇಳಲಾಗುವುದಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆಯೇ ಈ ಗೃಹಕಾರ್ಮಿಕರನ್ನು ಅತ್ಯಂತ ಹೀನ ಮಟ್ಟದಲ್ಲಿ ಇಡುವಲ್ಲಿ ಯಶಸ್ವಿಯಾಗಿದೆ. ಈ ಮಹಿಳೆಯರ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ಶೋಷಣೆಯಾಗುತ್ತಲಿದೆ. ಇದನ್ನು ಪರಿಹರಿಸುವುದು ಅವಶ್ಯವಾಗಿದೆ. ಇವರನ್ನು ಕಾರ್ಮಿಕರೆಂಬೊಂದೇ ದೃಷ್ಟಿಯಿಂದ ನೋಡದೇ ಇವರು ಮಾನವರು, ಮೇಲಾಗಿ ಮಹಿಳೆಯರು ಎಂದು ಮನಗಂಡು, ನಮ್ಮ ಸಮಾಜದಲ್ಲಿ ಮಹಿಳೆಯರಿಗಿರುವ ಸ್ಥಾನಮಾನ, ಅವರ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಗೃಹಕಾರ್ಮಿಕರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದೂ ಸಹ ತುಂಬ ಅವಶ್ಯಕ.

ಒರೆಗಲ್ಲು

ಸೋದೆಯ ಸದಾಶಿವರಾಯನ ಹೊಸಕೃತಿಗಳು :

ಕರ್ನಾಟಕದ ಸುಪ್ರಸಿದ್ಧ ಅರಸುಮನೆತನಗಳಲ್ಲಿ ಸ್ವಾದಿಯೂ ಒಂದು. ಸದಾಶಿವರಾಯ(ಕ್ರಿ. ಶ. ೧೬೭೪–೧೬೯೭) ಈ ಅರಸುಮನೆತನದ ಪ್ರಖ್ಯಾತ ಅರಸು. ಮಧುಲಿಂಗ ನಾಯಕ ಈತನ ತಂದೆ. ಮಳೆಯ ಗುರು ನಂದಯ್ಯ ಅಥವಾ ನಂದೀಶ ಈತನ ಕುಲಗುರು, ರಾಜಗುರು. ಧರ್ಮಗುರುವಾಗಿದ್ದ. ಈ ಸದಾಶಿವ ರಾಯ ಶಿವಭಕ್ತನೂ ದಕ್ಷ ಆಡಳಿತಗಾರನೂ ಆಗಿದ್ದಂತೆ ಕವಿಯೂ ಎನಿಸಿದ್ದನು. ಸ್ವತಃ ಕವಿಯಾಗಿದ್ದ ಈತನು ವಿಪುಲವೂ ವೈವಿಧ್ಯಮಯವೂ ಆದ ಸಾಹಿತ್ಯವನ್ನು ಸೃಷ್ಟಿಸಿದ್ದಾನೆ. 'ಸದಾಶಿವನೀತಿ'ಯೊಂದೇ ಸದಾಶಿವರಾಯನ ಸಾಹಿತ್ಯಕೃತಿಯೆಂದು ವಿದ್ವಾಂಸರು, ಸಂಶೋಧಕರು ಇಲ್ಲಿಯವರೆಗೂ ಭಾವಿಸುತ್ತ ಬಂದಿದ್ದಾರೆ. ಈತನ ಉಳಿದ ಸಾಹಿತ್ಯಕೃತಿಗಳ ಸಂಖ್ಯೆಯಾಗಲೀ ಪ್ರಕಾರವಾಗಲೀ ಸ್ವರೂಪವಾಗಲೀ ಇಲ್ಲಿಯವರೆಗೆ ಯಾರಿಗೂ ಗೊತ್ತಿರಲಿಲ್ಲ. ಆದರೆ ಇತ್ತೀಚೆ ಲಭಿಸಿದ ತಾಳೆಯಗರಿ ಪ್ರತಿ ಈತನ ಹೊಸಕೃತಿಗಳ ಮೇಲೆ ಅಪೂರ್ವ ಬೆಳಕು ಚೆಲ್ಲುತ್ತದೆ. ಇದರಿಂದ ಸದಾಶಿವ ನಾಯಕನ ಹೊಸಸಾಹಿತ್ಯರಾಶಿಯ ಪರಿಚಯ ನಮಗಾಗುತ್ತದೆ. ಅಜ್ಞಾತವಾಗಿ ಉಳಿದಿರುವ ಈ ಅರಸುಮನೆತನದ ಅರಸನ ಹೆಸರಿನಲ್ಲಿ ಅಧಿಕ ಸಂಖ್ಯೆಯ ಹೊಸಕೃತಿಗಳು ಒಂದೇ ಹಸ್ತಪ್ರತಿಯಲ್ಲಿ ಸಿಗುತ್ತಿರುವುದು ಪುಣ್ಯವಿಶೇಷವೆಂದೇ ಹೇಳಬೇಕಾಗುತ್ತದೆ. ಇದು ಇತ್ತೀಚಿನ ಗಮನಾರ್ಹ ಹಾಗೂ ಮೌಲಿಕ ಶೋಧವೆನಿಸಿದೆ. ಸೋದೆಯ ಸದಾಶಿವರಾಯನು ರಚಿಸಿದ ಈ ಹೊಸಕೃತಿಗಳು ಹೀಗಿರುತ್ತವೆ :

೧. ಸ್ವರವಚನಗಳು ೨. ಸಮಸ್ಯಾಪೂರ್ಣ ವೃತ್ತ–ಕಂದ, ೩. ರಾಗಮಾಲಿಕೆ ೪. ಪಂಚವಿಂಶತಿಲೀಲೆಯ ರಗಳೆ ೫. ತ್ರಿವಿದಿ ೬. ಉಳುವೆಯ ಮಹಾತ್ಮೆ ೭. ಜೋಗುಳಪದ ೮. ನವರಸ ಜಕ್ಕಿಣಿ ೯. ಪಂಚವಿಂಶತಿ ಲೀಲೆಯ ಮೂಲಪದ್ಯ ೧೦. ಜಾವಡಿ ೧೧. ಭಿಕ್ಷಾಟನ ಲೀಲೆಯ ಕಂದ ೧೨. ಖಡ್ಗಪ್ರಬಂಧ ೧೩. ಮಂಗಲಾಷ್ಟಕಗಳು ೧೪. ಪ್ರಭುಲಿಂಗಲೀಲೆಯ

ಜಾವಡಿ ೧೫. ಮಹಾಚದುರಂಗ ಲಕ್ಷಣ ೧೬. ಕಲಪಕೇತಯ್ಯಗಳ ಲಕ್ಷಣ

ಅಪ್ರಕಟಿತವಾಗಿರುವ ಈ ಹದಿನೇಳೂ ಕೃತಿಗಳು ಈ ಮೂಲಕ ಪ್ರಥಮ ಬಾರಿಗೆ ಉಲ್ಲೇಖಗೊಳ್ಳುತ್ತಿವೆ. ಈ ಹೊಸ ಕೃತಿಗಳ ಸ್ವರೂಪವನ್ನು ಹೀಗೆ ಪರಿಶೀಲಿಸಬಹುದು :

ಸ್ವರವಚನಗಳು : ಸದಾಶಿವರಾಯನು "ಮಳೆಯ ಗುರು ನಂದೀಶ". "ಗುರು ನಂದಯ್ಯ" ಅಂಕಿತದಲ್ಲಿ ಬರೆದ ೧೬೦ ಸ್ವರವಚನಗಳು ಇಲ್ಲಿರುತ್ತವೆ. ಈ ಸ್ವರವಚನಗಳ ಗಾತ್ರ ೨ ನುಡಿಯಿಂದ ೧೧ ನುಡಿಯವರೆಗೂ ಇದ್ದು, ಪ್ರತಿಯೊಂದು ನುಡಿ ೨ ರಿಂದ ೧೦ ಸಾಲಿನ ವರೆಗೂ ಹರವನ್ನು ಹೊಂದಿರುತ್ತವೆ. ಇವು ಛಂದೋ ವೈವಿಧ್ಯ, ವಿಷಯ ವೈವಿಧ್ಯ ಹಾಗೂ ಸಂಗೀತ ವೈವಿಧ್ಯಗಳಿಂದ ಕೂಡಿದವುಗಳಾಗಿವೆ.

ಸಮಸ್ಯಾಪೂರ್ಣ ವೃತ್ತ–ಕಂದ : ಇದು ಶ್ಲೋಕ, ವೃತ್ತ, ಕಂದ, ಮಣಿ ಪ್ರವಾಳ ಹಾಗೂ ಷಟ್ಪದಿಗಳಿಂದ ಕೂಡಿದ ವಿಶಿಷ್ಟಕೃತಿಯಾಗಿದೆ. ಈ ಕೃತಿಯಲ್ಲಿಯ ಒಟ್ಟು ಪದ್ಯಗಳ ಸಂಖ್ಯೆ ೩೪. ಶಿವಸ್ವರೂಪಿ ಗುರುನಂದಯ್ಯ ಮತ್ತು ಶಿವಶರಣರ ಸ್ತುತಿಯೇ ಇಲ್ಲಿ ಪ್ರಮುಖವಾಗಿರುತ್ತದೆ.

ರಾಗಮಾಲಿಕೆ : ಕೇವಲ ಮೂರು ನುಡಿಗಳಿರುವ ಈ ಲಘುಕೃತಿಯಲ್ಲಿ ಸದಾಶಿವರಾಯನ ಸಂಗೀತಜ್ಞಾನ ಪ್ರಕಟವಾಗಿದೆ. ಇಲ್ಲಿಯ ಮೂರೂ ನುಡಿಗಳು ಹೆಚ್ಚು ದೀರ್ಘವಾಗಿರುತ್ತವೆ. ಗೌಳ, ವರಾಳಿ, ಗುಮ್ಮಕಾಂಬೋದಿ, ಶಂಕರಾಭರಣ, ಕಲ್ಯಾಣಿ, ಕಾಂಬೋದಿ, ಸಾರಂಗ, ಭೈರವಿ, ಮೋಹನ, ಮಧುಮಾಧವಿ, ನಾಟ ರಾಮಕ್ರೀ, ಪಂತುವರಾಳಿ, ವಸಂತ, ಬಿಲಹರಿ, ಘಂಟಾರ, ಸಾವೇರಿ, ಕೌಶಿಕ, ವಸಂತ ಭೈರವಿ, ವಸಂತ, ಕನ್ನಡ ಗೌಳ, ಕಾಪಿ, ಸೌರಾಷ್ಟ್ರ, ತೋಡಿ, ಕೇತಾರ, ಲಲಿತ ರಾಗಗಳನ್ನು ಕುರಿತು ವಿವರಿಸಲಾಗಿದೆ.

ಪಂಚವಿಂಶತಿಲೀಲೆಯ ರಗಳೆ : ಆರಂಭದಲ್ಲಿ ೨ ಕಂದಪದ್ಯ, ಅಂತ್ಯದಲ್ಲಿ ೩ ಕಂದಪದ್ಯಗಳಿರುವ ಈ ರಗಳೆಯು ಪ್ರತಿಯೊಂದು ಸಾಲಿನಲ್ಲಿ ೪ ಮಾತ್ರೆಯ ೩ ಗಣಗಳಿರುತ್ತವೆ. ಪ್ರತಿ ನಾಲ್ಕು ಸಾಲಿನ ಕೊನೆಯಲ್ಲಿ 'ಸುಲೀಲನೆ' ಅಥವಾ 'ಲೀಲ' ಎಂಬ ಪದ ತಪ್ಪದೆ ಬರುತ್ತದೆ. ಶಿವನ ಇಪ್ಪತ್ತೈದು ಲೀಲೆಗಳನ್ನು ವಿವರಿಸುವುದು ಈ ರಗಳೆಯ ಪ್ರಧಾನ ಉದ್ದೇಶವಾಗಿದೆ.

ತ್ರಿವಿದಿ : ಶಿವಭಕ್ತಿಯನ್ನು ಪ್ರಚುರಪಡಿಸುವ ಈ ಕೃತಿಯಲ್ಲಿ ಒಟ್ಟು ೨೭ ಪದ್ಯಗಳಿರುತ್ತವೆ. ಆರಂಭ ಹಾಗೂ ಅಂತ್ಯಗಳಲ್ಲಿ ಒಂದೊಂದು ಕಂದಪದ್ಯವಿದ್ದು, ಉಳಿದ ೨೫ ಪದ್ಯ ತ್ರಿವಿದಿಗಳಾಗಿರುತ್ತವೆ. ಇಲ್ಲಿಯ ತ್ರಿವಿದಿಗಳು 'ದಯಮಾಡು' ಪದದಿಂದ ಅಂತ್ಯಗೊಳ್ಳುತ್ತವೆ.

ಉಳುವೆಯ ಮಹಾತ್ಮೆ : ಈ ಕೃತಿಯಲ್ಲಿ ಒಟ್ಟು ೭೩ ಪದ್ಯಗಳಿದ್ದು, ಇವುಗಳಲ್ಲಿ ೬೦ ಕಂದಪದ್ಯ, ೫ ಶ್ಲೋಕ, ೨ ವಾರ್ಧಕ ಷಟ್ಪದಿ, ೫ ಮಲ್ಲಿಕಾಮಾಲಾ ವೃತ್ತ, ೧ ತ್ರೋಟಕ ವೃತ್ತಗಳಾಗಿರುತ್ತವೆ. ಇದು ಶುದ್ಧ ಚಾರಿತ್ರಿಕ ಕಾವ್ಯ, ಕಲ್ಯಾಣ ಕ್ರಾಂತಿಯ ನಂತರದ ಶಿವಶರಣರ ದಂಡಿನ ದಾರಿಯನ್ನೂ ಮಹಾಮನೆ ಉಳುವೆ ಯಲ್ಲಿಯ ಚಾರಿತ್ರಿಕ ಕುರುಹುಗಳನ್ನೂ ವಿವರವಾಗಿ ಬಿಡಿಸಿ ಹೇಳುವ ಅತ್ಯಂತ ಮಹತ್ವದ ಕೃತಿಯಾಗಿದೆ. ಇಲ್ಲಿಯವರೆಗೆ ಅಜ್ಞಾತವಾಗಿದ್ದ ಪೂರ್ವಾರ್ಧದ ಶಿವ ಶರಣರ ದಂಡಿನದಾರಿ ಈ ಕೃತಿಯ ಮೂಲಕ ಮೊದಲಸಲ ಪ್ರಕಟಗೊಳ್ಳುತ್ತದೆ. ಉತ್ತರಾರ್ಧದ ದಾರಿಯನ್ನು ವೀರಶೈವದ ಇತರ ಕೃತಿಗಳಿಗಿಂತ ತೀರ ಭಿನ್ನವಾಗಿ ಇಲ್ಲಿ ದಾಖಲಿಸಲಾಗಿದೆ.

ಜೋಗುಳಪದ : ಗಂಡು ಜೋಗುಳಪದ ಹಾಗೂ ಹೆಣ್ಣು ಜೋಗುಳ ಪದ- ಹೀಗೆ ಎರಡು ಜೋಗುಳ ಪದಗಳು ಇಲ್ಲಿರುತ್ತವೆ. ಗಂಡು ಜೋಗುಳಪದದಲ್ಲಿ ೨೫ ನುಡಿಗಳಿದ್ದು, ಅಂತ್ಯದಲ್ಲಿ ಒಂದು ಮಲ್ಲಿಕಾಮಾಲಾ ವೃತ್ತವಿದೆ. ಇಲ್ಲಿಯ ಪ್ರತಿ ಯೊಂದು ನುಡಿ, ನಾಲ್ಕು ಸಾಲುಗಳಿಂದ ಕೂಡಿದ್ದು, ನಾಲ್ಕನೆಯ ಸಾಲಿನ ಕೊನೆ ಯಲ್ಲಿ 'ಜೋ ಜೋ' ಎಂಬ ಪಲ್ಲವಿ ಪುನರಾವರ್ತನೆಗೊಳ್ಳುತ್ತದೆ. ಹೆಣ್ಣು ಜೋಗುಳ ಪದದ ಆರಂಭದಲ್ಲಿ ಶಾರ್ದೂಲ ವಿಕ್ರೀಡಿತ ವೃತ್ತ, ಅಂತ್ಯದಲ್ಲಿ ಸ್ರಗ್ಧರೆ, ಶಾರ್ದೂಲ ವಿಕ್ರೀಡಿತ ವೃತ್ತ, ಕಂದಪದ್ಯಗಳಿರುತ್ತವೆ. ಇವುಗಳ ನಡುವೆ ನಾಲ್ಕು ಸಾಲಿನ ೩೫ ನುಡಿಗಳಿರುತ್ತವೆ. ನಾಲ್ಕು ಸಾಲಿನ ಈ ನುಡಿಯಲ್ಲಿ ಪ್ರತಿ ಎರಡು ಸಾಲಿನ ಕೊನೆಗೆ 'ಜೋ ಜೋ' ಎಂಬ ಪಲ್ಲವಿ ಬರುತ್ತದೆ.

ನವರಸ ಜಕ್ಕಿಣಿ : ಸಂಗೀತ ಪ್ರಧಾನವಾದ ಈ ಕೃತಿಯ ಆರಂಭ ಹಾಗೂ ಅಂತ್ಯದಲ್ಲಿ ಒಂದೊಂದು ಕಂದಪದ್ಯಗಳಿರುತ್ತವೆ. ಇಲ್ಲಿ ಒಂಬತ್ತು ಹಾಡುಗಳಿದ್ದು, ರಾಗ-ತಾಳಗಳ ಪ್ರಸ್ತಾರಗಳ ಮೂಲಕ ನವರಸಗಳನ್ನು ವಿವರಿಸಿ ಹೇಳಲಾಗಿದೆ.

ಪಂಚವಿಂಶತಿಲೀಲೆಯ ಮೂಲಪದ್ಯ : ಇದರಲ್ಲಿ ೩೦ ಪದ್ಯಗಳಿದ್ದು, ಇವುಗಳಲ್ಲಿ ೨೨ ಕಂದಪದ್ಯ, ೮ ವೃತ್ತ (ಮತ್ತೇಭ ವಿಕ್ರೀಡಿತ-೩, ಸ್ರಗ್ಧರೆ-೨, ಶಾರ್ದೂಲ ವಿಕ್ರೀಡಿತ-೨, ಉಪಜಾತಿ-೧)ಗಳಿರುತ್ತವೆ. ಎಂಟು ವೃತ್ತಗಳಲ್ಲಿ ೩ ಸಂಸ್ಕೃತ (ಸ್ರಗ್ಧರೆ-೨, ಶಾರ್ದೂಲ ವಿಕ್ರೀಡಿತ-೧), ೫ ಕನ್ನಡ (ಮತ್ತೇಭ

ವಿಕ್ರೀಡಿತ-೩, ಶಾರ್ದೂಲ ವಿಕ್ರೀಡಿತ-೧, ಉಪಜಾತಿ-೧) ವೃತ್ತಗಳಾಗಿರುತ್ತವೆ. ಶಿವನ ೨೫ ಲೀಲೆಗಳ ವಿವರಣೆ ಈ ಕೃತಿಯ ವಸ್ತುವಾಗಿದೆ.

ಜಾವಡಿ : ಶಿವಭಕ್ತಿಯ ಪ್ರಕಟನೆ, ಈ ಕೃತಿಯ ಉದ್ದೇಶ. ಇದು ಜಾವಳಿಯೆಂದೂ ಪ್ರಸಿದ್ಧಿ ಪಡೆದಿದೆ. ಶಿವನ ೨೫ ಲೀಲೆಗಳ ವರ್ಣನೆ ಇಲ್ಲದೆ. ಪಲ್ಲವಿರಹಿತ, ಆದಿಪ್ರಾಸಯುಕ್ತ ಎರಡು ಸಾಲಿನ ಹಾಡಾದ ಈ ಜಾವಡಿಯು ಪ್ರತಿ ಎರಡು ಸಾಲಿಗೂ ಪ್ರತ್ಯೇಕವಾದ ರಾಗ, ತಾಳಗಳನ್ನು ಹೇಳಲಾಗಿದೆ.

ಭಿಕ್ಷಾಟನಲೀಲೆಯ ಕಂದ : ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ಭಿಕ್ಷಾಟನ ಲೀಲೆಯನ್ನು ೧೯ ಕಂದಪದ್ಯ, ೨ ಶ್ಲೋಕಗಳಲ್ಲಿ ವಿವರಿಸಿ ಹೇಳಲಾಗಿದೆ.

ಖಡ್ಗಪ್ರಬಂಧ : ಇದು ಸದಾಶಿವರಾಯನ ವಿಶಿಷ್ಟಕೃತಿ. ಸಂಗೀತ, ಅಭಿನಯ ಪ್ರಧಾನವಾದ ಈ ಕೃತಿಯಲ್ಲಿ ೩೮ ಪದ್ಯಗಳಿದ್ದು, ಇವು ಸ್ವರಗೀತ, ಶ್ಲೋಕ, ಕಂದ, ವೃತ್ತ, ದ್ವಿಪದಿ, ಹಾಡು, ಪ್ರಬಂಧ, ಷಟ್ಪದಿಗಳಾಗಿರುತ್ತವೆ.

ಮಂಗಲಾಷ್ಟಕ : ಸದಾಶಿವರಾಯ ರಚಿಸಿದ ಮೂರು ಮಂಗಲಾಷ್ಟಕಗಳು ಮಾತ್ರ ಸದ್ಯ ಸಿಗುತ್ತಿವೆ. ಇವುಗಳಲ್ಲಿ ಶಿವನ ಸ್ತುತಿಯಿರುವ 'ಮಂಗಲಾಷ್ಟಕ'ದಲ್ಲಿ ೯ ಶಾರ್ದೂಲ ವಿಕ್ರೀಡಿತ ವೃತ್ತಗಳಿರುತ್ತವೆ. ಶಿವನ ಪಂಚವಿಂಶತಿ ಲೀಲೆಗಳನ್ನು ಹೇಳುವ ಪಂಚವಿಂಶತಿ ಲೀಲೆಯ ಮಂಗಲಾಷ್ಟಕ'ದಲ್ಲಿ ೯ ಮತ್ತೇಭ ವಿಕ್ರೀಡಿತ ವೃತ್ತ ಮತ್ತು ೧ ಉಪೇಂದ್ರ ವೃತ್ತ -ಹೀಗೆ ೧೦ ವೃತ್ತಗಳಿವೆ. ಗಣಪತಿಯ ಸ್ತೋತ್ರವನ್ನು ಕುರಿತ 'ವಿನಾಯಕ ಮಂಗಲಾಷ್ಟಕ'ದಲ್ಲಿ ೧ ಮಾಲಿನಿವೃತ್ತ, ೯ ಮತ್ತೇಭ ವಿಕ್ರೀಡಿತ ವೃತ್ತ -ಹೀಗೆ ೧೦ ವೃತ್ತಗಳಿರುತ್ತವೆ. ಈ ಮಂಗಲಾಷ್ಟಕಗಳ ಪ್ರತಿಯೊಂದು ವೃತ್ತ "ಕಾದಲರ್ಗೆ ಶುಭಮನೀಯಯ್ಯ ನಂದೀಶ್ವರ", "ವಧುವರರಿಗೆ/ಮದುಮಕ್ಕಳಿಗೆ ಶುಭಮನೀಯಯ್ಯ ನಂದೀಶ್ವರ", "ಕಾದಲರ್ಗೆ ಶುಭಮಂ ನಂದೀಶ ಮಾಡು" ಎಂದು ಅಂತ್ಯಗೊಳ್ಳುತ್ತದೆ.

ಪ್ರಭುಲಿಂಗಲೀಲೆಯ ಜಾವಡಿ: ಇದು ಸೂತ್ರದ ಗೊಂಬೆಯಾಟದ ಕೃತಿ. ರಾಗ, ತಾಳ, ಸಂಗೀತ, ಹಾಡು, ಗದ್ಯಗಳೊಂದಿಗೆ ಸಾಗುವ ಈ ಕೃತಿಯಲ್ಲಿ ಮಾಯೆಯನ್ನು ಗೆಲಿದ ಮಾಯಾಕೋಲಾಹಲನೂ ಮದ್ದಳಿಗನೂ ಆದ ಅಲ್ಲಮನ ವೃತ್ತಾಂತವಿದೆ.

ಮಹಾಚದುರಂಗ ಲಕ್ಷಣ : ಸೋದೆಯ ಅರಸರು ಆಡುತ್ತಿದ್ದ ಚದುರಂಗ ಆಟದ ಸ್ವರೂಪ ಹಾಗೂ ಆಟದ ಕ್ರಮಗಳನ್ನು ಮೊದಲು ಗದ್ಯದಲ್ಲಿ ವಿವರಿಸ

ಲಾಗಿದ್ದು, ಆಮೇಲೆ ಈ ವಿವರಗಳನ್ನೇ ೯ ವಾರ್ಧಕ ಷಟ್ಪದಿಗಳಲ್ಲಿಯೂ ಹೇಳ-ಲಾಗಿದೆ.

ಕಲಹಕೇತಯ್ಯಗಳ ಲಕ್ಷಣ : ಗದ್ಯಕೃತಿಯಾದ ಇದರ ಅಂತ್ಯದಲ್ಲಿ ಮಾತ್ರ ಒಂದು ಕಂದಪದ್ಯವಿದೆ. ಸಾಮಾನ್ಯಮಟ್ಟದ ಈ ಕೃತಿಯಲ್ಲಿ ಕಲಹ ಕೇತಯ್ಯನು ಬ್ರಹ್ಮಯ್ಯನಿಗೆ ಒಲಿದ ಕಥೆಯಿದೆ.

ಸೋದೆಯ ಅರಸು ಸದಾಶಿವರಾಯನ ಈ ಹೊಸಕೃತಿಗಳ ಮೂಲಕ ಸ್ವಾದಿಯ ಅರಸು ಮನೆತನ ಹಾಗೂ ಸಾಹಿತ್ಯಗಳ ಅಧ್ಯಯನಕ್ಕೆ ವಿಶೇಷ ಹಾಗೂ ವಿನೂತನ ಪ್ರಯೋಜನವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದುದರಿಂದ ಈ ಕೃತಿಗಳ ಪ್ರಕಟನೆ, ಅಧ್ಯಯನ ಕಾರ್ಯ ಬೇಗ ನಡೆಯುವಂತಾಗಬೇಕಾಗಿದೆ.

—ಡಾ. ಬಿ. ಆರ್. ಹಿರೇಮಠ

ಗ್ರಂಥಾವಲೋಕನ

ನಿನ್ನ ಬದುಕಿಗೆ ಅರ್ಥ ನೀಡುತ್ತೇನೆ (ಕಥಾಸಂಕಲನ) : ಗುಂಡಣ್ಣ ಕಲಬುರ್ಗಿ, ಸೌಜನ್ಯ ಪ್ರಕಾಶನ, ಮೂಡಲಗಿ, ೧೯೯೧

ಪುಟ : XI+೧೩೪ ಬೆಲೆ : ರೂ. ೨೦=೦೦

ಕನ್ನಡ ಸಾಹಿತ್ಯಪ್ರಪಂಚದಲ್ಲಿ 'ಕಥಾಸಾಹಿತ್ಯ'ಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಇದಕ್ಕೆ ಕಾರಣ, ಕನ್ನಡ ಸಾಹಿತ್ಯದಲ್ಲಿ ಅತ್ಯುತ್ತಮ ಸಣ್ಣಕಥೆಗಳು ಸಾಕಷ್ಟು ಸೃಷ್ಟಿಯಾಗಿರುವದು, ಹಾಗೂ ಕಾವ್ಯದ ಜೊತೆಜೊತೆಗೇನೆ-ಬದಲಾವಣೆಯನ್ನು ತಾಳುತ್ತ ಜನಪ್ರಿಯತೆಯನ್ನು ಉಳಿಸಿಕೊಂಡಿದ್ದು. ಯಾವುದೇ ಭಾಷೆಯ ಸಾಹಿತ್ಯ ಪ್ರಕಾರಗಳನ್ನು ತೆಗೆದುಕೊಂಡರೂ 'ಸಣ್ಣಕಥೆ'ಗಳು ಒಂದು ಪ್ರಮುಖ ಆಕರ್ಷಕ ಸ್ಥಾನವನ್ನು ಹೊಂದಿರುತ್ತವೆ. ಏಕೆಂದರೆ ಬಹುಸಂಖ್ಯಾತ ಓದುಗರನ್ನು ಕಥೆಗಳೇ ಹೊಂದಿರುತ್ತವೆ. ಇದಕ್ಕೆ ಕಥೆಯ ವಸ್ತು, ಹರವು ಮತ್ತು ಪರಿಣಾಮ ಮುಖ್ಯವಾಗಿವೆ. ಸಾಮಾನ್ಯವಾಗಿ ಕಥೆಗಳು ಜನಸಾಮಾನ್ಯರಿಂದ ಹಿಡಿದು ವಿಮರ್ಶಕರ ವರೆಗೆ ಎಲ್ಲರನ್ನೂ ಸುಲಭವಾಗಿ ಮುಟ್ಟುತ್ತವೆ. ಕಥೆಗಳ ಜನಪ್ರಿಯತೆಗೆ ಇದೇ ಮುಖ್ಯ ಕಾರಣವೆನಿಸುತ್ತದೆ.

ಕನ್ನಡದ ಮೊಟ್ಟಮೊದಲ ಸಣ್ಣಕತೆಗಾರರೆಂದು ಗುರುತಿಸಲ್ಪಡುವ ಶ್ರೀ ಕೆರೂರ ವಾಸುದೇವಾಚಾರ್ಯ, ಶ್ರೀ ಪಂಜೆ ಮಂಗೇಶರಾಯ, ಶ್ರೀ ಎಂ. ಎನ್. ಕಾಮತ ಹಾಗೂ 'ಸಣ್ಣ ಕತೆಯ ಜನಕ' ಎಂದು ಖ್ಯಾತರಾಗಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರರಿಂದ ಹಿಡಿದು ಇಲ್ಲಿಯ ವರೆಗೆ ಕನ್ನಡದಲ್ಲಿ ಹುಲುಸಾಗಿ ಕಥಾಸಾಹಿತ್ಯ ಬೆಳೆದಿದೆ; ಬದಲಾವಣೆಯ ದಾರಿಯನ್ನು ಕ್ರಮಿಸಿದೆ. ಜೊತೆಗೆ ಕನ್ನಡದಲ್ಲಿ ಹೇರಳ ಜನಪದ ಕಥಾಸಾಹಿತ್ಯವಿದೆ. ಪ್ರಗತಿಶೀಲ, ನವ್ಯ, ಬಂಡಾಯ ಮುಂತಾದ ಸಾಹಿತ್ಯಕ ಸಂದರ್ಭಗಳು ಕಥಾಸಾಹಿತ್ಯವನ್ನು ಆವರಿಸದೇ ಬಿಟ್ಟಿಲ್ಲ. ಎಲ್ಲ ಹಣೆಪಟ್ಟಿಗಳ ಮಧ್ಯೆಯೂ ಕಥೆಗಳು ಜನಾನುರಾಗಿಯಾಗಿಯೇ ಉಳಿದಿವೆ, ಬೆಳೆದಿವೆ ಎಂಬುದು ಮಾತ್ರ ಗಮನಾರ್ಹವಾಗಿದೆ. ಸಾಹಿತ್ಯದ ಇತರ ಪ್ರಕಾರಗಳು ಹೀಗೆ ಯಾವಾಗಲೂ ಜನಪ್ರಿಯವಾಗಿಯೇ ಉಳಿಯದೆ ದೂರ-ಸಮೀಪ ಸರಿದಾಡಿದ್ದುಂಟು.

ಕಥೆಯು ರೂಪಗೊಳ್ಳಲು ಬೇಕಾಗುವ ಆಯಾಮಗಳಲ್ಲಿ ಶೈಲಿ ಮತ್ತು ತಂತ್ರಗಳು ಅತ್ಯಂತ ಪ್ರಮುಖವಾದವು. ಇತ್ತೀಚಿನ ಕಥೆಗಳು ತಂತ್ರ ಮತ್ತು ಶೈಲಿಗಳ ದೃಷ್ಟಿಯಿಂದ ಪ್ರಖರವಾಗಿರುವದು ಕಥಾ ಸಾಹಿತ್ಯದ ಬೆಳವಣಿಗೆಯಲ್ಲಿ ಮೈಲುಗಲ್ಲಾಗಿದೆ. ಇದೇ ಹಿನ್ನೆಲೆಯಲ್ಲಿ ತರುಣರಾದ ಶ್ರೀ ಗುಂಡಣ್ಣ ಕಲಬುರ್ಗಿ ಯವರ ಚೊಚ್ಚಿಲ ಕಥಾಸಂಕಲನ 'ನಿನ್ನ ಬದುಕಿಗೆ ಅರ್ಥನೀಡುತ್ತೇನೆ' ಗಮನ ಸೆಳೆಯುತ್ತದೆ. ಹತ್ತು ಕಥೆಗಳ ಈ ಸಂಕಲನದಲ್ಲಿ ನಮ್ಮನ್ನು ಆಕರ್ಷಿಸುವ ಅಂಶ ವೆಂದರೆ ಕಥೆಯಿಂದ ಕಥೆಗೆ ಭಿನ್ನವಾಗುತ್ತ ಹೋಗುವ ತಂತ್ರ. ಸಮಾಜದಲ್ಲಿ ತಮ್ಮ ಅನುಭವ ಪರಿಧಿಗೆ ಬಂದ ವಿವಿಧ ಅಂಶಗಳನ್ನೇ ಕಥಾವಸ್ತುವನ್ನಾಗಿಸಿಕೊಂಡು ಬರೆ ಯುವ ಕಲಬುರ್ಗಿಯವರು ಪ್ರಸ್ತುತ ಸಂಕಲನದಲ್ಲಿ ಹೆಣ್ಣಿನ ಶೋಷಣೆ, ಗಂಡು ಹೆಣ್ಣಿನ ಸಂಬಂಧಗಳಿಗೆ ಸಂಬಂಧಿಸಿದ ಕಥೆಗಳನ್ನೇ ಹೆಚ್ಚಾಗಿ ಬರೆದಿದ್ದಾರೆ. ಕಥೆಗಾರನ ಪ್ರಮುಖ ವೈಶಿಷ್ಟ್ಯವೆಂದರೆ ಕಥೆಯ ಹಂದರದೊಳಗೆ ಪರಕಾಯಪ್ರವೇಶದಂತೆ ಪ್ರವೇಶಿಸಿ ಪ್ರಾಮಾಣಿಕತೆ, ಅನುಭವ ಹಾಗೂ ವಿಚಾರಗಳನ್ನು ಅಲ್ಲಲ್ಲಿ ಸಾಂದರ್ಭಿಕ ವಾಗಿ ದಾಖಲಿಸಿರುವದು. 'ಅಜ್ಜನೂ ನನ್ನ ಒಡನಾಟವೂ, ಹೀಗೆ ಎರಡು ಸಂದ ರ್ಶನಗಳು, ಈ ಕಥೆಗಳು ಈ ದಿಶೆಯಲ್ಲಿ ಮಹತ್ವಪೂರ್ಣವಾದ ರಚನೆಗಳಾಗಿವೆ.

ಹೆಣ್ಣಿನ ಶೋಷಣೆಯ ವಿವಿಧ ಮುಖವಾಡಗಳನ್ನು ಪಾರು ಮತ್ತು ಪರಮೇಶಿ ಮಾಸ್ತರ, ಶಬ್ದಗಳ ಬಸಿರಲ್ಲಿ ಬೀಜವಾದಳು ಜಾನಿ, ಶೋಷಣೆ ಮತ್ತು ಬಂಡಾಯ, ಸಂಶೋಧನೆ ಹಾಗೂ ನಿನ್ನ ಬದುಕಿಗೆ ಅರ್ಥ ನೀಡುತ್ತೇನೆ ಕಥೆಗಳು ಚಿತ್ರಿಸಿವೆ. ಈ ಎಲ್ಲ ಕಥೆಗಳು ಹೆಣ್ಣಿನ ಮೇಲೆ ಇರುವ ಅಪಾರ ಕ್ರೌರ್ಯವನ್ನು ವಿವರಿಸಿವೆ, ಉದಾಹರಣೆಗೆ ಪಾರು ಮತ್ತು ಪರಮೇಶಿ ಮಾಸ್ತರ ಕಥೆಯಲ್ಲಿ–ಪಾರೂ ಎಂಬ ಹೆಣ್ಣು ವೇಶ್ಯಾವಾಟಿಕೆಯ ವಿಷಯ ವರ್ತುಲದಲ್ಲಿ ಸಿಕ್ಕು, ಪಾರಾಗದೇ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಂತಹ ಸಾಮಾಜಿಕ ದುರಂತಗಳನ್ನು ಓದುಗರ ಕಳಕಳಿಗೆ ಒಳಪಡಿಸುವಲ್ಲಿ ಇಲ್ಲಿನ ಪಾತ್ರಗಳು ತುಂಬಾ ಯಶಸ್ವಿಯಾಗಿವೆ.

ಗ್ರಾಮೀಣ ಭಾಷೆಯನ್ನು ಮೈದುಂಬಿಸಿಕೊಂಡಿರುವ ಎರಡು ಕಥೆಗಳೆಂದರೆ ಮಲ್ಲವ್ವ, ಮಗ ಮತ್ತು ಗೌರಿ ಹಾಗೂ ಅಜ್ಜನೂ ನನ್ನ ಒಡನಾಟವೂ ಇವುಗಳಲ್ಲಿ ಮೊದಲನೆಯದು ಸಂಕೀರ್ಣ ವಸ್ತುವಿನಿಂದ ಸರಳತೆಗೆ ಸಾಗಿರುವದು. ಎರಡನೆಯದು ಸರಳ ವಸ್ತುವಿನಿಂದ ಸಂಕೀರ್ಣತೆಗೆ ಸಾಗಿರುವದು ಕಂಡುಬರುತ್ತದೆ. ಅಜ್ಜನ ಜೊತೆಗಿನ ಸಂಬಂಧಗಳು ಕುತೂಹಲ ಕೆರಳಿಸುತ್ತಾ ಹೋಗುತ್ತವೆ, ಆದರೆ ಕಲಾತ್ಮಕ ದೃಷ್ಟಿಯಿಂದ ಸಂಕಲನದ ಇತರ ಕತೆಗಳಿಗಿಂತ ಭಿನ್ನವಾಗಿದ್ದು ಕೊರತೆಯನ್ನು ಅನುಭವಿಸಿದೆ.

ಕಲಬುರ್ಗಿಯವರ ಪ್ರಯೋಗಶೀಲತೆ ಮೆಚ್ಚುವಂಥದ್ದು. ಅವರ ಅತ್ಯಂತ ನವೀನ ಪ್ರಯೋಗವಾಗಿ 'ಆದರ್ಶಗಳ ಬೆನ್ನೇರಿದಾಗ' ಹಾಗೂ 'ಬುದ್ಧನ ಮಾತು ಗಳು'–ಕಥೆಗಳು ಹೊರಹೊಮ್ಮಿವೆ. ಸ್ವಗತ ರೂಪದಲ್ಲಿ ಇಡೀ ಕಥಾ ಸಮುಚ್ಚಯ ಕಣ್ಮುಂದೆ ನಿಲ್ಲುತ್ತದೆ. ಗಂಡು ಹೆಣ್ಣಿನ ಸಂಬಂಧಗಳ ಸೂಕ್ಷ್ಮತೆಗಳನ್ನು ಚಿತ್ರಿಸುವ ಈ ಕತೆಗಳಲ್ಲಿ 'ಆದರ್ಶಗಳ ಬೆನ್ನೇರಿದಾಗ' ಓದುಗರಿಗೆ ಸತ್ಯದ ಹುಡುಕಾಟ ಹಚ್ಚುತ್ತದೆ. ಸಂಕಲನದ ಇನ್ನೊಂದು ವಿಶಿಷ್ಟವಾದ ಕಥೆಯೆಂದರೆ'ಹೀಗೆ ಎರಡು ಸಂದರ್ಶನಗಳು'. ಕಾರಾಗೃಹದಲ್ಲಿಯ ಎರಡು ಮುಗ್ಧ ಮಕ್ಕಳ ಜೊತೆಗಿನ ಸಾಮಾನ್ಯ ಭೇಟಿಯೇ ಕಥಾವಸ್ತುವಾಗಿ ಗಟ್ಟಿಗೊಂಡಿದೆ. ವಸ್ತುವಿನ ವಿವರಣೆ ಹಾಗೂ ವಿಸ್ತರಣೆಗಾಗಿ ಬಳಸಿದ ತಂತ್ರ ಹೊಚ್ಚಹೊಸದಾಗಿದೆ.

ಕಥಾ ರಚನೆಗೆ ಅವಶ್ಯವಿರುವ ಆಕರ-ಪರಿಕರಗಳನ್ನು ಸಮರ್ಥವಾಗಿ ಕಲಬುರ್ಗಿ ಯವರು ಆಯ್ದುಕೊಳ್ಳುತ್ತಾರೆ. ಕಥಾಶಿಲ್ಪವನ್ನು ಕಟ್ಟುವದರಲ್ಲಿ ಅನುಭವವನ್ನು ದಟ್ಟವಾಗಿ ಬಳಸಿಕೊಳ್ಳುತ್ತಾರೆ. ಅನುಭವಗಳನ್ನು, ಮಿಡಿತಗಳನ್ನು ಕಥಾರೂಪಕ್ಕೆ ಇಳಿಸುವಾಗ ತೀವ್ರ ಹಂಬಲ ಕೆಲಸ ಮಾಡಿದ್ದನ್ನು ಕಾಣುತ್ತೇವೆ. ತುಂಬ ಎಚ್ಚರ ವಾಗಿಯೇ ನಿರೂಪಣೆಗಿಳಿಯುವ ಕಲಬುರ್ಗಿಯವರು ಕಥಾಸೌಂದರ್ಯಕ್ಕೆ ಕೊಂಚವೂ ಚ್ಯುತಿ ಬಾರದಂತೆ ರಚಿಸುವಲ್ಲಿ ಹಲವೆಡೆ ಮಾತ್ರ ಯಶಸ್ವಿಯಾಗಿದ್ದಾರೆ. ಆದರೆ ಈ ದೃಷ್ಟಿಯಲ್ಲಿ ತುಂಬ ಭರವಸೆಯನ್ನು ಮೂಡಿಸುವ ಕಥೆಗಾರರಾಗಿದ್ದಾರೆ. ಸಂಕಲನದ ಬಹಳಷ್ಟು ಕಥೆಗಳು ಮನಸ್ಸನ್ನು ಗೆಲ್ಲುತ್ತವೆ. ಲೇಖಕನಾಗಿ ಪ್ರತಿಸ್ಪಂದಿಸುವಾಗ ಅತ್ಯಂತ ಜವಾಬ್ದಾರಿಯುತವಾಗಿ, ನೈಜವಾಗಿ ಅಭಿವ್ಯಕ್ತಿಸುವದರಿಂದ ಕಲಬುರ್ಗಿ ಯವರ ಬರಹ ಹೃದಯಸ್ಪರ್ಶಿಯಾಗಿರುತ್ತದೆ.

—ಸಂಗಮೇಶ ಗುಜಗೊಂಡ

ಮ್ಯಾನಿಫೆಸ್ಟೋ (ಕವನ ಸಂಕಲನ) : ಸರಜೂ ಕಾಟಕರ

ಪ್ಯಾಂಥರ್ ಪ್ರಕಾಶನ ಹುಬ್ಬಳ್ಳಿ ದ್ವಿತೀಯ ಮುದ್ರಣ (೧೯೯೧)

ಹಸಿದ ನೆಲ (೧೯೭೬) ಮತ್ತು ಸೂರ್ಯ (೧೯೮೨) ಸಂಕಲನಗಳ ನಂತರ ತಂದಿರುವ ತಮ್ಮ ಕವನ ಸಂಕಲನ 'ಮ್ಯಾನಿಫೆಸ್ಟೋ' ದಲ್ಲಿ ಸರಜೂ ಕಾಟಕರ ಓರ್ವ ಕವಿಯಾಗಿ ತಮ್ಮ ಸ್ವಂತಿಕೆಯನ್ನು ಗಟ್ಟಿಯಾಗಿ ನೆಲೆಗೊಳಿಸಿದ್ದಾರೆ. ಕಟು ವಾಸ್ತವದ ಗ್ರಹಿಕೆಯಿಂದ ಯುಟೋಪಿಯನ್ ಆಶಯಗಳವರೆಗೆ ಪಸರಿಸಿರುವ ಕಾವ್ಯಭಿತ್ತಿಯಲ್ಲಿ ರಂಜಕ ಗುಣಗಳನ್ನುಳಿಸಿಕೊಂಡೇ ಸಮಾಜಾಭಿಮುಖವಾದ ನೋವು –ಅಳಲುಗಳ ಚಿತ್ರ ಸರಣಿಯನ್ನು ಕಾಣಬಹುದು.

'ಸುಖವೇರಿ ಘನವ ತೂರಿ
ಹೊರಟು ಹೋದ ಪ್ರೇಯಸಿ'......

ಎಂದು ಹಾಡಿ ಭಾವನಾತ್ಮಕ ತೇವವೆಲ್ಲ ಎಲ್ಲೆಲ್ಲೋ ಸೋರಿ ಹೋದ ಅನುಭವದ ಚಿತ್ರವೊಂದನ್ನು ಒಂದೆಡೆ ಕಾಟಕರ ವೈಯಕ್ತಿಕ ನೆಲೆಯಲ್ಲೇ ದಾಖಲಿಸಿದರೆ, ಗಂಡು ಹೆಣ್ಣಿನಂಥ ಪ್ರಾಥಮಿಕ ಮಾನವಸಂಬಂಧಗಳ ವಿಘಟನೆಯ ಹಿಂದೆಯೂ ಹುಟ್ಟು, ಜಾತಿಯನ್ನನುಸರಿಸುವ ಶ್ರೇಣೀಕೃತ ಸಮಾಜದ ಎಳೆಗಳಿರುವುದನ್ನು ಇನ್ನೊಂದು ಕವಿತೆಯಲ್ಲಿ ಕಟುವಾಗಿ ಶೋಧಿಸುತ್ತಾರೆ.

"ನಿನ್ನ ತುಟಿಗೆ ತುಟಿ ಬೆಸೆದಾಗ
ಫಕ್ಕನೆ ನೆನಪಾಯಿತು ನನ್ನ ಜಾತಿ
ಆಗ ನಿನ್ನ ತುಟಿಯಲ್ಲಿಂದ
ಓತಪ್ರೋತವಾಗಿ ಆಸಿಡ್ ಹರಿಯಲಾರಂಭಿಸಿತು..."
—(ಗೆ)

ಆದರೆ ಈ ಗ್ರಹಿಕೆ ಕವಿತೆಯಲ್ಲಿ ತಾರ್ಕಿಕವಾಗಿ ಮುಂದುವರಿಯದೇ ಮತ್ತೆ ವೈಯಕ್ತಿಕ ಅಸಹಾಯಕತೆಯ ಊರುಗೋಲನ್ನೇ ಆಶ್ರಯಿಸುವುದನ್ನು ಈ ಮುಂದಿನ ಸಾಲುಗಳಲ್ಲಿ ಕಾಣುತ್ತೇವೆ:

'...ರಾಜ ರಸ್ತೆಗುಂಟ ಸಖಿ ನೀನು
ಗಂಡನ ಜೊತೆ ಹೊರಟಾಗ
ಉಚ್ಚ ಜಾತಿಯ ಪ್ರೇಯಸಿ ನನಗೊಬ್ಬಳಿದ್ದಳೆಂದು
ನಿನ್ನ ಹೆಸರನ್ನು ಹೃದಯದ ಮೇಲೆ ಕೊರೆದುಕೊಳ್ಳುವೆ.'

ಇಂಥದೇ ಸೋಲನ್ನು ತೀರಾ ಗಂಭೀರವಾದ ವಸ್ತುಗಳನ್ನು ಕಾವ್ಯಾಭಿವ್ಯಕ್ತಿಗೆ ಇವರು ಎತ್ತಿಕೊಳ್ಳುವಲ್ಲಿಯೂ ಕಾಣಬಹುದು. ಉದಾ :

'ಮನುಸ್ಮೃತಿಯ ಬೂದಿಯಿಂದ ಹುಟ್ಟಿದ್ದೇನೆ :
ವೇದಗಳ ಗೋರಿಗಳ
ಎದುರಿಗೆ ನಿಂತು
ಪುರಾಣಗಳಿಗೆ ಬೆಂಕಿ ಹಚ್ಚುತ್ತ
ಹಚ್ಚುತ್ತ ದೊಡ್ಡವನಾಗಿದ್ದೇನೆ.'

ಎಂದು ಜನವರ್ಗವೊಂದರ ಸಾಂಘಿಕ ಅನುಭವದ ಚಾರಿತ್ರಿಕ ಹಿನ್ನೋಟವೊದಗಿಸುತ್ತ ಪ್ರಾರಂಭವಾಗುವ ಕವಿತೆ 'ಅಶ್ವಮೇಧ'

'ನೀವು ಗೀತೆ ಹೇಳಿದಿರಿ : ನಾನು ಕೇಳಲಿಲ್ಲ
ನೀವು ಯಜ್ಞ ಹೂಡಿದಿರಿ : ನಾನು ನೋಡಲಿಲ್ಲ'

ಎನ್ನುವಲ್ಲಿ, ಸಾಮಾಜಿಕ ಬದುಕಿನ ಸನ್ನಿವೇಶಗಳಿಗೆ ಪರಕೀಯವಾದ ಸ್ಥಿತಿಯಲ್ಲಿ ಡಲ್ಪಟ್ಟ ಜನವರ್ಗಗಳ ನಿರಾಶೆಯನ್ನೊಂದೆಡೆ, ತಿರಸ್ಕಾರವನ್ನಿನ್ನೊಂದೆಡೆ ಧ್ವನಿಸುತ್ತಾ ಪರಿಣಾಮಕಾರಿಯಾಗಿ ಮುಂದುವರೆಯಬಹುದಾದ ಘಟ್ಟದಲ್ಲೇ

'ಇಲ್ಲದಿದ್ದರೆ
ನಿಮ್ಮ ಅಶ್ವಮೇಧ ಯಜ್ಞದ ಕುದುರೆಗಳನ್ನು
ಊರ ಹೊರಗೆ ತಡೆದು ನಿಲ್ಲಿಸುತ್ತಿದ್ದೆ
ಅವನ್ನು ಟಾಂಗಾಗೆ ಕಟ್ಟಿ ಬಾಡಿಗೆ ಹೊಡೆಯಲು
ಕೊತ್ವಾಲಗಲ್ಲಿಯ ಪೀರಸಾಬನಿಗೆ
ಕೊಟ್ಟು ಬಿಡುತ್ತಿದ್ದೆ.'

ಎನ್ನುವಲ್ಲಿ ಯಥಾರ್ಥತೆಯ ಆದರ್ಶೀಕರಣವೂ ಆಗದ, ಯಥಾರ್ಥ ಚಾರಿತ್ರಿಕ ಗೃಹಿಕೆಯೂ ಆಗದ ಒಂದು ವಾಚಾಳಿತನದ ನೆಲೆಯಲ್ಲಿ ನಿಂತು, ಅಳ್ಳಕವಾಗುತ್ತದೆ.

ಈ ಸಂಕಲನದ ಕವಿತೆಗಳಲ್ಲಿ ಕಾಣಬರುವಂತೆ ಈ ಕವಿಯ ಒಂದು ಕೊರತೆ ವ್ಯಕ್ತಿಶಃ ದಟ್ಟ ಅನುಭವಗಳದ್ದು. ಎರಡನೆಯದು ಕಾವ್ಯಾತ್ಮಕ ಸೃಜನೆಯ ಪರಿಶ್ರಮದ್ದು. ಮೊದಲನೆಯದನ್ನು ಈ ಕವಿ ವೈಯಕ್ತಿಕತೆಗೆ ಮೀರಿದ ಸಾಮಾಜಿಕ ಸನ್ನಿವೇಶದ ವಿಪರ್ಯಾಸಗಳನ್ನು ಬಿಂಬಿಸುವ ಮೂಲಕ ತುಂಬಿಕೊಂಡರೆ,ಎರಡನೆಯದನ್ನು ಅಂಥ ವಿಪರ್ಯಾಸಗಳನ್ನು ಚಾಕಚಕ್ಯತೆಯಿಂದ ಕೂಡಿದ ವಿವರಗಳಲ್ಲಿ–ಸರಳವಾದಾಗ್ಯೂ ಸುಲಭ ಅನುಭವವೇದ್ಯವಾದ ಸಾಮಾನ್ಯ ಸತ್ಯಗಳ ಕುರಿತು–ಹೇಳುವದರಿಂದಲೇ ಆಕರ್ಷಿಸಿ ಬಿಡುವ ಮಾತುಗಾರಿಕೆಯಿಂದ ತುಂಬಿಕೊಳ್ಳುತ್ತಾನೆ. ಆದರೆ ಇಲ್ಲಿಯ ಬಹಳಷ್ಟು ಕವಿತೆಗಳಲ್ಲಿ ಕಾವ್ಯಕ್ಕಿಂತ ಮಾತುಗಾರಿಕೆ ಹೆಚ್ಚಾಗಿದ್ದೂ ಒಂದು ಕಾವ್ಯ ಉಂಟು ಮಾಡಬೇಕಾದ ಅನುಭೂತಿ ಸಾಧ್ಯವಾಗುತ್ತದೆ.

ಉದಾಹರಣೆಗೆ 'ದಿಲ್ಲಿ ಮೂವತ್ತೈದು ಸಾಲುಗಳು' ಎನ್ನುವ ಕವಿತೆ—

"ದಿಲ್ಲಿಯ ಧರ್ಮ ಯಾವುದೆಂದು
ನನಗಿನ್ನೂ ಗೊತ್ತಾಗುತ್ತಿಲ್ಲ
ಇಲ್ಲಿ ಧರ್ಮವನ್ನು ಪ್ರತಿನಿತ್ಯ ಹರಾಜಿಗೆ ಹಾಕುತ್ತಾರೆ.
....
ಇಲ್ಲಿ

ದಲಿತ ಕವಿತೆ ಬರೆದರೆ ಸನ್ಮಾನಿಸುತ್ತಾರೆ
ಅದೇ ಅವ ಮೋರ್ಚಾ ನಡೆಸಿದರೆ ಗುಂಡು ಹಾಕುತ್ತಾರೆ.

ಇಂಥ ವಾಸ್ತವದ ಗ್ರಹಿಕೆ ಥಟ್ಟನೆ ಮತ್ತೊಂದು ಪಾತಳಿಗೆ ಏರಿ ಕೆಳಗಿನ ಸಾಲುಗಳಲ್ಲಿ ಕಾವ್ಯಾತ್ಮಕ ಕಲ್ಪನಾ ಶ್ರೀಮಂತಿಕೆ ಪಡೆಯುತ್ತದೆ.

'ದಿಲ್ಲಿಯ ಸೂರ್ಯ
ರಾತ್ರಿಯೂ ಉರಿಯುತ್ತಾನೆ
ಆದರೆ ಬೆಳಕು ಮಾತ್ರ ಕೆಲವರಿಗೆ ನೀಡುತ್ತಾನೆ
ಸಿರಿವಂತರೆಲ್ಲ ಈ ಬೆಳಕನ್ನು
ತಮ್ಮ ತಿಜೋರಿಗಳಲ್ಲಿ ಹಾಕಿಟ್ಟು ಬೀಗ ಜಡಿದಿದ್ದಾರೆ...'

ಇಂಥದೇ ಇನ್ನೊಂದು ಕವಿತೆ 'ಲಾಲಬಾಗ್' :

ಅಂತರಾಷ್ಟ್ರೀಯ ಖ್ಯಾತಿಯ
ಲಾಲಬಾಗವೇ
ನಿನ್ನ ಗರ್ಭದಲ್ಲೆಲ್ಲಾ ಹುಡುಕಿದರೂ
ಒಂದಾದರೂ ಹೂ ಸಿಗುವುದಿಲ್ಲ
....
ಯಾವ ವಸಂತನೂ ನಿನ್ನಲ್ಲಿ
ಚಿಗರನ್ನು ಚಿಮ್ಮಿಸಲಾರ

ಇಲ್ಲಿ ಹೂವು, ವಸಂತ ಸದ್ದಿಲ್ಲದೇ ಮಾನವ ಆರ್ದ್ರತೆ, ಮೃದುತ್ವಗಳಿಗೆ ಸಂಕೇತವಾಗಿ ಬಿಡುತ್ತದೆ. ಇವುಗಳಿಗೆರವಾದ ಲಾಲಬಾಗ್ ಗಾಂಡ್ರೂ ಆಗುತ್ತದೆ. ಮಾನವ ವೇದನೆಗಳ ಜೊತೆ ಈ ಉದ್ಯಾನ ಎಷ್ಟರ ಮಟ್ಟಿಗೆ ಸ್ಪಂದಿಸುತ್ತದೆನ್ನುವ ಪ್ರಶ್ನೆಯೇ ಮುಖ್ಯವಾಗಿ ಎಂದೂ ಅಳದ ಎಂದೂ ಸಿಟ್ಟಿಗೇಳದ ಲಾಲ್‌ಬಾಗ್, ತನ್ನ ಬೆಂಚುಗಳಿಗೊರಗಿದ ಒಣಮುಖಗಳನ್ನು ನೋಡಿ ಸಂಕಟಪಡದ, ತನ್ನಲ್ಲಿ ಚಂದ ಹಡಪು ಹತ್ತಿದ ನಾಯಿಗಳಿಗೆ ಜಾಗ ನೀಡದ ಲಾಲ್‌ಬಾಗ್ ಕವಿಗೆ ಹೂವು–ಎಲೆಗಳ ತಾಣವಾಗಿ ಕಾಣುವದಿಲ್ಲ.

'ಕಾಡು', 'ಇಲ್ಲ, ನಾನು ಆತ್ಮಕಥೆ ಬರೆಯಲಾರೆ', 'ಕೆಲ ಕವಿತೆಗಳು ಕಾಗೆಗಳ ಮೇಲೆ', 'ಮುಡುಕಿ ಯಮುನಿ', 'ಗಾಂಧಿ ಸಿಕ್ಕ' ಮೊದಲಾದ ಕವಿತೆಗಳು ಸಾಮಾಜಿಕ ಸತ್ಯದ ವಿಪರ್ಯಾಸಗಳನ್ನು ಚಿತ್ರಿಸಿಯೂ ಕವಿತೆಗಳಾಗಿ ನಮ್ಮನ್ನು ಅಷ್ಟಾಗಿ ಸೆಳೆಯುವದಿಲ್ಲ. 'ಮಾತು', 'ಉಸಿರು', 'ಶಬ್ದಗಳು' ಮೊದಲಾದ ಕವಿತೆಗಳಲ್ಲಿನ ಶಾಬ್ದಿ

ಕತೆಯೂ ಅಷ್ಟೆ. ಇದಕ್ಕೆ ವ್ಯತಿರಿಕ್ತವಾಗಿ 'ಕೋಗಿಲೆ ಕಾಗೆಗೆ ಹೇಳಿದ್ದು' ಈ ಸಂಕಲನದ ಶ್ರೇಷ್ಠ ಕವಿತೆಗಳಲ್ಲೊಂದಾಗಿದೆ. ಕಾರಣ ಇಲ್ಲಿ ಕಾಗೆ ಒಂದು ಪಕ್ಷಿ ಮಾತ್ರವಾಗುಳಿಯದೆ ಸಾಮಾಜಿಕ ಕಟ್ಟುಪಾಡುಗಳಿಂದಾಗಿ ತಮ್ಮ ಗುರುತನ್ನೇ ಕಳೆದುಕೊಂಡಿರುವ ಮಾನವ ಜೀವಿಗಳ ಅಳಲಿಗೊಂದು ಪ್ರತಿಮೆಯಾಗಿ ನಿಲ್ಲುತ್ತದೆ.

ಈ ಸಂಕಲನದ ಶ್ರೇಷ್ಠ ಕವಿತೆಗಳಲ್ಲಿ ನಿರರ್ಥಕತೆಯಲ್ಲಿ ಅರ್ಥಕಾಣುವ ಅಸಹಾಯಕತೆಯೇ ತುಂಬಿಕೊಂಡಂತಿರುವ ಅಸ್ತಿತ್ವದಲ್ಲಿ ಆಶಾವಾದಿತ್ವ ಕಾಣುವ ಛಲವಿದೆ. ಹೋರಾಟದ ಪ್ರಜ್ಞೆ ಇಲ್ಲಿಯ ಕವಿತೆಗಳಲ್ಲಿ ತಾನೇ ತಾನಾಗಿದೆ. ಆದರೆ ಹೋರಾಟದ ಚೇತನಕ್ಕೆ ಸ್ಫೂರ್ತಿಯಾದ ಮಾರ್ಕ್ಸ್–ಗಾಂಧಿಯಂಥ ವ್ಯಕ್ತಿತ್ವಗಳಿಗೊದಗಿದ ದುರ್ದೆಶೆಯಲ್ಲಿನ ವಿಷಮ ಸಾಮಾಜಿಕತೆ ಕವಿಯಲ್ಲಿ ನೋವು ತುಂಬುತ್ತದೆ. ಉದಾಹರಣೆಗೆ 'ಮಾರ್ಕ್ಸ್' ಎಂಬ ಕವಿತೆ

'ಮಹಲಿನಲಿ ಹುಟ್ಟಿದ ಮಾರ್ಕ್ಸ್
ಗಾದಿಗಳಡಿಯಲ್ಲಿ ಸತ್ತು ಹೋದ
......
ಹುಟ್ಟಬಹುದೇ ಮಾರ್ಕ್ಸ್ ಇಲ್ಲಿ
ಅರಳಬಹುದೇ ಅವನ ಶಬ್ದಗಳಿಲ್ಲಿ.'

ಈ ಸಂದೇಹದ ಹಿಂದೆ ಭಾರತದ ವಾಸ್ತವವಿದೆ. ಇಲ್ಲಿ ಮಾರ್ಕ್ಸ್, ಮಾರ್ಕ್ಸ್‌ವಾದ, ಮಾರ್ಕ್ಸ್‌ವಾದಿಗಳು ಕೂಡ ಶ್ರೇಣೀಕೃತ ಸಂಗತಿಗಳಾಗುವ ಕುರಿತ ನೋವಿದೆ : 'ಇವ ಪ್ರೊಫೆಸರ್ ಮಾರ್ಕ್ಸ್. ಇವ ಹಮಾಲಿ ಮಾರ್ಕ್ಸ್ ಇವ ಬ್ರಾಹ್ಮಣ ಮಾರ್ಕ್ಸ್ ಇವ ಹೊಲೆಯ ಮಾರ್ಕ್ಸ್...'

'ಇದ ಕಂಡು ನಿಜವಾದ ಮಾರ್ಕ್ಸ್ ಗೋರಿಯಲ್ಲಿ ಚಡಪಡಿಸುತ್ತಿರುವ'ಂಥ ಚಡಪಡಿಕೆ ಇದೆ. ಈ ಚಡಪಡಿಕೆಯ ಅಸಹನೆ 'ರಾಜಕಾರಣಿಗಳು ಬಂದಾಗ ನಟಿಯಂತೆ ಸಿಂಗಾರಗೊಂಡು ಮಂದಸ್ಮಿತ ನಗುವ ಗಾಂಡೂ ಲಾಲ್‌ಬಾಗನ್ನು ಕಂಡಾಗ, ಲಾಲ್‌ಬಾಗ ಕವಿತೆಯಲ್ಲಾಗುವಂತೆ, ಶಾಪದ ರೂಪ ತಳೆಯುತ್ತದೆ ('ನಿನ್ನಲ್ಲಿರುವ ಗಾಜಿನ ಮನೆಯನ್ನು ಪುಡಿ ಪುಡಿ ಮಾಡಿ ಹಾಲಿಗೆ ಬೆರೆಸಿ ನಿನಗೇ ಕುಡಿಸಿದರೆ ಒಂದು ದಿನ ಹಾಳಾಗಿ ಹೋಗುವಿ') ಅಥವ 'ಉದ್ವಸ್ತ' ಕವಿತೆಯಲ್ಲಿನಂತೆ 'ಎಲ್ಲ ಉದ್ವಸ್ತವಾಗಬೇಕು. ಈ ಮನೆ, ಈ ಕೇರಿ, ಊರು ಜಿಲ್ಲೆ ರಾಜ್ಯ ದೇಶ, ಶಾಸಕ–ಮಂತ್ರಿ ಅಧಿಕಾರಿ–ಚಪರಾಸಿ, ದೇವರು–ಪೂಜಾರಿ, ಸ್ವಾಮಿ-ಜಗದ್ಗುರು, ನಾನು-ನೀನು ಎಲ್ಲ' ಎಂಬ ತಹತಹಿಕೆಯಾಗುತ್ತದೆ.

"ಯಾರೂ ಯಾರನ್ನು ಗುರುತಿಸಬಾರದು ಜಾತಿಯಿಂದ
ಯಾರ ಬಣ್ಣವೂ ಇನ್ನೊಬ್ಬನಿಗಿಂತ ಶ್ರೇಷ್ಠವಾಗಿರಬಾರದು
ಕೇವಲ ಮನುಷ್ಯರಷ್ಟೇ ಹುಟ್ಟಬೇಕು
ಹುಟ್ಟಿದ ಪ್ರತಿಯೊಬ್ಬರೂ
ಒಬ್ಬರಿಗೊಬ್ಬರು ಸಂಬಂಧಿಕರಾಗಿರಬೇಕು
ಇಲ್ಲಿಯ ಪ್ರತಿ ಶಬ್ದಗಳಿಗೆ ಹೊಸ ಅರ್ಥ ಬರಬೇಕು
ಪ್ರತಿ ಗಿಡಗಳಲ್ಲೂ ಹೂವು ಅರಳಬೇಕು..."

ಕವಿಗೆ ಅಸಾಧ್ಯವಾದುದನ್ನು ಬಯಸುತ್ತಿದ್ದೇನೆನ್ನಿಸುವದಿಲ್ಲ. ಏಕೆಂದರೆ ಕವಿಪ್ರಜ್ಞೆ ಇತಿಹಾಸದ ಗಲ್ಲಿಗಳನ್ನು ಹೊಕ್ಕು ಬಂದಿದೆ. ಅಲ್ಲಿ ಭೇಟಿಯಾಗಿದ್ದಾರೆ ಅಲೆಕ್ಸಾಂಡರ್...

ಚಿಂದಿ ಚಿಂದಿ ಅರಿವೆ ಬರಿಗಾಲು
ಕೈಯಲ್ಲಿ ಭಿಕ್ಷಾಪಾತ್ರೆ
ನರಳುವ ನೆಪೊಲಿಯನ್
ಚಿಂತಾಕ್ರಾಂತ ಔರಂಗಜೇಬ್
ಎಲ್ಲೂ ಒಂದಡಿಯಷ್ಟು ಜಾಗ ಸಿಗದ
ಹಿಟ್ಲರ್, ಮಾರ್ಕೋಸ್...

(ಇತಿಹಾಸದ ಗಲ್ಲಿ)

ಈ ಸಂಕಲನದಲ್ಲಿ ಸೃಜನಕ್ರಿಯೆಯ ಸಂಕೀರ್ಣ ರೂಪಧಾರಣ ಮಾಡಿದ ಕವಿತೆಗಳಿವೆ. 'ಪಕ್ಷೋಭ', 'ಸತ್ಯ', 'ಕನ್ಯೆ', 'ಡಾ. ಬಾಬಾಸಾಹೇಬ ಅಂಬೇಡಕರ್', 'ಕಫನ್' ಮೊದಲಾದ ಕವಿತೆಗಳು ನೇರ ಮಾತುಗಾರಿಕೆಯಿಂದ ಬಿಡಿಸಿಕೊಂಡು, ವಾಚ್ಯತೆಯಿಂದ ಮುಕ್ತವಾದ ಅಭಿವ್ಯಕ್ತಿ ಕ್ರಮದಿಂದಾಗಿ, ಸೂಚ್ಯ. ಕಾವ್ಯ ಸಹಜ ಸೂಕ್ಷ್ಮತೆಯಿಂದಾಗಿ ಚಿಂತಿಸಹಚ್ಚುತ್ತವೆ. ಓದುಗನ ಕಲ್ಪನೆಗೆ ಸಾಕಷ್ಟು ಅವಕಾಶ ನೀಡುತ್ತವೆ. ಈ ಕಾರಣಕ್ಕೆ ಬಂಡಾಯದ ಪ್ರಜ್ಞೆ, ಕಲಾತ್ಮಕ ಕಾಳಜಗಳೆರಡೂ ಸಂಗಮಿಸುವ ನಿರೀಕ್ಷೆಯ ದಾರಿಯಲ್ಲಿ ಸರಜೂ ಕಾಟಕರ್ ಅವರ 'ಮ್ಯಾನಿಫೆಸ್ಟೋ' ಒಂದು ಮೈಲಿಗಲ್ಲಾಗಬಲ್ಲದು.

—ಶ್ರೀ ಅಶೋಕ ಶೆಟ್ಟರ

ಪ್ರಸ್ತುತ

ಇದು ಕರ್ನಾಟಕ ಭಾರತಿಯ ಸಂಯುಕ್ತ ಸಂಚಿಕೆ (ಜನೆವರಿ ೧೯೯೧ ರಿಂದ ಮೇ ೧೯೯೧). ಈ ಅವಧಿಯಲ್ಲಿ ನಡೆದ ಕೆಲವು ಪ್ರಮುಖ ಘಟನೆಗಳು ಹೀಗಿವೆ:

ಅಖಿಲಕರ್ನಾಟಕ ಜಾನಪದ ಸಮ್ಮೇಳನ :

ಕನ್ನಡ ಅಧ್ಯಯನಪೀಠದ ಪ್ರತಿಷ್ಠಿತ ಕಾರ್ಯಕ್ರಮವೆನಿಸಿದ 'ಹದಿನೆಂಟನೆಯ ಅಖಿಲಕರ್ನಾಟಕ ಜಾನಪದ ಸಮ್ಮೇಳನ, ೨೭, ೨೮ ಜನೆವರಿ ೧೯೯೧ ಎರಡು ದಿವಸ ಶ್ರೀ ಆದಿಚುಂಚನಗಿರಿ ಸಂಸ್ಥಾನಮಠದ ಆಶ್ರಯದಲ್ಲಿ ಜರುಗಿತು. ಉಡುಪಿಯ ಪ್ರಾದೇಶಿಕ ರಂಗಪ್ರದರ್ಶನ ಕಲೆಗಳ ಕೇಂದ್ರದ ನಿರ್ದೇಶಕರಾದ ಪ್ರೊ. ಕು. ಶಿ. ಹರಿದಾಸ ಭಟ್ಟ ಅವರು ಸರ್ವಾಧ್ಯಕ್ಷರಾಗಿದ್ದ ಈ ಸಮ್ಮೇಳನದಲ್ಲಿ 'ಸಸ್ಯಜಾನಪದ-ಪ್ರಾಣಿಜಾನಪದ_ಖನಿಜಜಾನಪದ, ಎಂಬ ವಿಷಯುಗಳ ಮೇಲೆ ಮೂರು ಗೋಷ್ಠಿಗಳು ನಡೆದವು. ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ ಎಸ್. ಲಠ್ಠೆ ಮತ್ತು ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಈ ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದರು. ಡಾ. ಸಿ. ಎಸ್. ಶಿವಕುಮಾರಸ್ವಾಮಿ (ಸಸ್ಯ-ಪೌರಾಣಿಕಪರಿಕಲ್ಪನೆ), ಡಾ. ಕೆ. ಚಿನ್ನಪ್ಪಗೌಡ (ಸಸ್ಯ-ಜನಪದಧರ್ಮ), ಡಾ. ಬಿ. ವಿ. ಯಕ್ಕುಂಡಿಮಠ (ಸಸ್ಯ-ಆಹಾರ), ಡಾ. ಶ್ರೀಮತಿ ಲಲಿತಾ (ಸಸ್ಯ-ಜನಪದ ವೈದ್ಯ), ಡಾ. ಪದ್ಮಾಶೇಖರ (ಪ್ರಾಣಿ-ಪೌರಾಣಿಕ ಪರಿಕಲ್ಪನೆ), ಡಾ. ಅರವಿಂದ ಮಾಲಗತ್ತಿ, (ಪ್ರಾಣಿ-ಜನಪದ ಧರ್ಮ), ಡಾ, ಕೆ. ಆರ್. ದುರ್ಗಾದಾಸ (ಪ್ರಾಣಿ-ಆಹಾರ), ಡಾ. ಅಂಬಳಿಕೆ ಹಿರಿಯಣ್ಣ (ಪ್ರಾಣಿ-ಜನಪದ ವೈದ್ಯ).ಡಾ. ಎಂ. ಜಿ. ಈಶ್ವರಪ್ಪ(ಮಾನವ-ಮತ್ತು ಕಬ್ಬಿಣ), ಡಾ. ಜಯಲಕ್ಷ್ಮಿ ಸೀತಾಪುರ (ಮಾನವ ಮತ್ತು ಬಂಗಾರ ಬೆಳ್ಳಿ), ಡಾ. ಪಿ. ಕೆ. ಖಂಡೋಬ (ಮಾನವ ಮತ್ತು ತಾಮ್ರ, ಹಿತ್ತಾಳೆ, ಕಂಚು), ಶ್ರೀ ವಿ. ಎನ್. ಶಿವರಾಮು (ಮಾನವ ಮತ್ತು ಮುತ್ತು, ಹವಳ, ರತ್ನ, ವಜ್ರ, ವೈಢೂರ್ಯ) ಅವರು ಪ್ರಬಂಧ ಮಂಡಿಸಿದರು. ಪ್ರತಿದಿನ ಸಂಜೆ ನಡೆದ ಜಾನಪದ ರಂಗದರ್ಶನದಲ್ಲಿ ಯಕ್ಷಗಾನ, ಭಾಗವಂತಿಕೆಮೇಳ, ಸೋಮನಕುಣಿತ, ಪಂಜಿನ ಕುಣಿತ, ಬೀಸುಕಂಸಾಳೆ, ಸೂತ್ರದಗೊಂಬೆಯಾಟ ಮೊದಲಾದ ೨೦ ಕ್ಕೂ ಹೆಚ್ಚು ಜಾನಪದ ಕಲೆಗಳು ಪ್ರದರ್ಶನಗೊಂಡವು. ಸಮ್ಮೇಳನದ ಉದ್ಘಾಟನೆಯನ್ನು ಖ್ಯಾತ ಸಾಹಿತಿಗಳಾದ ಡಾ, ದೇ. ಜವರೇಗೌಡ ಅವರು ಜರುಗಿಸಿದರು. ಶ್ರೀ ಎಚ್. ಸಿ. ಶ್ರೀಕಂಠಯ್ಯ, ಶ್ರೀ ಜಿ. ಮಾದೇಗೌಡ ಡಾ. ಜಿ. ಶಂ, ಪರಮಶಿವಯ್ಯ

ಅತಿಥಿಗಳಾಗಿ ಆಗಮಿಸಿದ್ದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ಎಚ್. ಆರ್. ದಾಸೇಗೌಡ ಅವರು ವಹಿಸಿದ್ದರೆ, ಎಸ್. ರುದ್ರಪ್ಪ ಮತ್ತು ಡಾ. ಸಿ. ಪಿ. ಕೆ. ಅವರು ಅತಿಥಿಗಳಾಗಿದ್ದರು.

ಮೃತ್ಯುಂಜಯ ವ್ಯಾಖ್ಯಾನಮಾಲೆ :

೬-೨-೯೧ ರಿಂದ ೮-೨-೯೧ ರ ವರೆಗೆ ಕನ್ನಡ ಅಧ್ಯಯನಪೀಠದ ಮೃತ್ಯುಂಜಯ ವ್ಯಾಖ್ಯಾನ ಮಾಲೆಯ ಅಡಿಯಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು 'ಶರಣರ ಲೋಕಾಯತ ಮತ್ತು ಅನುಭಾವ' ವಿಷಯವನ್ನು ಕುರಿತು ಮೂರು ವಿಶೇಷ ಉಪನ್ಯಾಸಗಳನ್ನು ನೀಡಿದರು.

ವಿಚಾರ ಸಂಕಿರಣ :

೩೦-೩-೯೧ ರಂದು ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ 'ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು' ಎಂಬ ವಿಷಯವನ್ನು ಕುರಿತ ವಿಚಾರ ಸಂಕಿರಣವೊಂದು ನೆರವೇರಿತು. ಎರಡು ಗೋಷ್ಠಿಗಳಲ್ಲಿ ನಡೆದ ಇದರಲ್ಲಿ ಕಾವ್ಯ (ಡಾ. ಗುರುಲಿಂಗ ಕಾಪ್ಸೆ), ನಾಟಕ (ಡಾ. ಜಿ. ಎಂ, ಹೆಗಡೆ), ಸಣ್ಣಕತೆ (ಟಿ. ಪಿ. ಅಶೋಕ). ಕಾದಂಬರಿ(ಡಾ.ನಾರಾಯಣ), ಬಂಡಾಯ ಸಾಹಿತ್ಯ (ಡಾ. ಬಸವರಾಜ ಸಬರದ), ಅಸಂಗತ ನಾಟಕ ಪ್ರೊ. ಚಂಪಾ,) ವಿಷಯದ ಮೇಲೆ ಒಟ್ಟು ಆರು ಪ್ರಬಂಧಗಳು ಮಂಡಿತವಾದವು. (ಡಾ. ಗಿರಡ್ಡಿ) ಗೋವಿಂದರಾಜ ಮತ್ತು ಪ್ರೊ, ಕೀರ್ತಿನಾಥ ಕುರ್ತಕೋಟಿ ಅವರು ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದರು.

ಶ್ರದ್ಧಾಂಜಲಿ :

ಈ ಅವಧಿಯಲ್ಲಿ ನಾವು ಮೂವರು ಮಹತ್ವದ ವ್ಯಕ್ತಿಗಳನ್ನು ಕಳೆದುಕೊಂಡಿದ್ದೇವೆ, ಭಾರತದ ಪ್ರಧಾನಿ ಶ್ರೀ ರಾಜೀವಗಾಂಧಿ ಕನ್ನಡದ ಖ್ಯಾತ ಬರಹಗಾರರಾದ ಡಾ. ರಾ. ಯ. ಧಾರವಾಡಕರ ಮತ್ತು ಡಾ. ಅನುಪಮಾ ನಿರಂಜನ, ಇವರ ಅಗಲಿಕೆಯಿಂದ ದೇಶ ಮತ್ತು ಕನ್ನಡ ಸಾರಸ್ವತ ಪ್ರಪಂಚಗಳಿಗೆ ತುಂಬಿಬಾರದ ಹಾನಿಯಾಗಿದೆ. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, 'ಭಾರತಿ' ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಪ್ರಸ್ತುತ ಸಂಚಿಕೆಯಲ್ಲಿ ಸಾಹಿತ್ಯ ಸಂಶೋಧನೆ ಸಂಪಾದನೆ ಮನೋವಿಜ್ಞಾನ ಸಮಾಜಕಾರ್ಯ-ಭಾಷಾವಿಜ್ಞಾನಗಳಿಗೆ ಸಂಬಂಧಿಸಿದ ೧೩ ಲೇಖನಗಳು ಅಳವಟ್ಟಿವೆ. ಇವುಗಳ ಲೇಖಕರಿಗೆ 'ಭಾರತಿ' ಅಭಿನಂದನೆ ಸಲ್ಲಿಸುತ್ತ, ಉಳಿದ ಸಾಹಿತಿ-ಸಂಶೋಧಕರಿಂದ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಬಯಸುತ್ತದೆ.

—ಸಂಪಾದಕರು

ಲೇಖಕರ ವಿಳಾಸ

ಡಾ. ಮಲ್ಲಿಕಾರ್ಜುನ ಪರಡ್ಡಿ
ಪ್ರವಾಚಕರು, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಶ್ರೀನಿವಾಸ ಪಾಡಿಗಾರ
ಹಿರಿಯ ಉಪನ್ಯಾಸಕರು
ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಗಣಪತಿಗೌಡ
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಡಾ. ಎ. ಎಸ್. ಧರಣೇಂದ್ರಯ್ಯ
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಮನೋವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಶ್ರೀ ಸಿ. ಕೆ. ನಾವಲಗಿ
ಕನ್ನಡ ಅಧ್ಯಾಪಕರು
ಜೆ. ಎಸ್. ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜು
ಗೋಕಾಕ

ಡಾ. ವೀರಣ್ಣ ರಾಜೂರ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಡಾ. ಪಂಚಾಕ್ಷರಿ ಹಿರೇಮಠ
ಹಿರಿಯ ಅಧ್ಯಾಪಕರು
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಡಾ. ಎಚ್. ಎಂ. ಮಹೇಶ್ವರಯ್ಯ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಡಾ. ಶಾಂತಿನಾಥ ದಿಬ್ಬದ
ಅಧ್ಯಾಪಕರು, ಕನ್ನಡ ವಿಭಾಗ
ಸ್ನಾತಕೋತ್ತರ ಕೇಂದ್ರ, ಕೃಷ್ಣದೇವರಾಯ ನಗರ
ಸೊಂಡೂರ, ಬಳ್ಳಾರಿ ಜಿಲ್ಲೆ

ಶ್ರೀಮತಿ ವಿನೀತಾ ಪೈ
ಅಧ್ಯಾಪಕರು, ಸಮಾಜಕಾರ್ಯ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಡಾ. ಬಿ. ಆರ್. ಹಿರೇಮಠ
ಪ್ರವಾಚಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಶ್ರೀ ಸಂಗಮೇಶ ಗುಜಗೊಂಡ
ಉಪನ್ಯಾಸಕರು,
ಪ್ರಥಮ ದರ್ಜೆ ಪದವಿ ಕಾಲೇಜು
ಮೂಡಲಗಿ, ಬೆಳಗಾವಿ ಜಿಲ್ಲೆ

ಶ್ರೀ ಅಶೋಕ ಶೆಟ್ಟರ
ಅಧ್ಯಾಪಕರು,
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ